ಮಂಗಳವಾರ, ಮಾರ್ಚ್ 30, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 89 | ಪುಟ 14
• www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ಬೊಜ್ಜುತನ ಇತ್ತೀಚೆಗೆ ಮಕ್ಕಳಲ್ಲಿಯೂ ಹೆಚ್ಚಾಗಿ ಕಂಡುಬರುತ್ತಿದೆ. ಪಾಲಕರು ಮನೆಯಲ್ಲಿ ಕೆಲವೊಂದು ಎಚ್ಚರಿಕೆಗಳನ್ನು ತೆಗೆದುಕೊಂಡರೆ ಇದನ್ನು ತಡೆಗಟ್ಟಬಹುದು

ಏ.2ರಿಂದ ‘ಓದು- -ಬರಹ’ ಅಭಿಯಾನ 4
ಮೆರವಣಿಗೆ ಇಲ್ಲ: ಡಿ.ಕೆ. ಶಿವಕುಮಾರ್, ಸಿದ್ದರಾಮಯ್ಯ ಸಾಥ್ 7
ಅನುಭವ ಮಂಟಪ ‘ಜಲವಿವಾದ: ಕಾನೂನು ನದಿಕಣಿವೆಯ ಕೆಳಭಾಗದ ರಾಜ್ಯಗಳ ಪರ’
ಸುಯೆಜ್ ಕಾಲುವೆ: ಹಡಗು ತೆರವು 10
ಸತೀಶ ಜಾರಕಿಹೊಳಿ ನಾಮಪತ್ರ ಸಲ್ಲಿಕೆ 7

ಧರಣಿ, ಪ್ರತಿಭಟನೆಗೆ ಇಲ್ಲ ಅವಕಾಶ • ಕೆಲವು ಜಿಲ್ಲೆಗಳಲ್ಲಿ ತೀವ್ರ ನಿಗಾ

ಕೋವಿಡ್: 15 ದಿನ ಕಟ್ಟೆಚ್ಚರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಪ್ರಕರಣಗಳ ಹರಡುವಿಕೆ ತಡೆಯಲು ಮುಂದಾಗಿರುವ ರಾಜ್ಯ ಸರ್ಕಾರ ರಾಜ್ಯದಾದ್ಯಂತ 15 ದಿನಗಳ ಕಾಲ ಕಟ್ಟೆಚ್ಚರ ವಹಿಸುವ ನಿರ್ಧಾರವನ್ನು ಸೋಮವಾರ ಕೈಗೊಂಡಿದೆ.

ಈ ಅವಧಿಯಲ್ಲಿ ಯಾವುದೇ ರೀತಿಯ ಧರಣಿ, ಪ್ರತಿಭಟನೆಗಳಿಗೆ ಅವಕಾಶ ನೀಡದಿರಲು ನಿರ್ಧರಿಸಲಾಗಿದೆ.

ಕೋವಿಡ್ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಸಚಿವರು ಹಾಗೂ ಹಿರಿಯ ಅಧಿಕಾರಿಗಳ ಜತೆ ಸೋಮವಾರ ಸಂಜೆ ಪರಿಶೀಲನಾ ಸಭೆ ನಡೆಸಿದ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಈ ನಿರ್ಧಾರ ಪ್ರಕಟಿಸಿದರು.

15 ದಿನಗಳ ಕಾಲ ಯಾವುದೇ ಪ್ರತಿಭಟನೆ, ಧರಣಿಗಳಿಗೆ ಅವಕಾಶವಿಲ್ಲ. ಮದುವೆ ಸೇರಿದಂತೆ ಯಾವುದೇ ಸಮಾರಂಭಗಳಲ್ಲಿ 500ಕ್ಕಿಂತ ಹೆಚ್ಚಿನ ಜನ ಸೇರಲು ಅವಕಾಶ ನೀಡುವುದಿಲ್ಲ. ಮಾಸ್ಕ್ ಹಾಕಿಕೊಳ್ಳುವುದು ಕಡ್ಡಾಯ. ಈ ಎಲ್ಲ ವಿಚಾರಗಳಲ್ಲಿ ನಿಯಮ ಉಲ್ಲಂಘಿಸುವವರ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಸಿದರು.

ವಿಧಾನಸಭೆ ಮತ್ತು ಲೋಕಸಭೆ ಕ್ಷೇತ್ರಗಳ ಉಪ ಚುನಾವಣೆ ಪ್ರಚಾರ ಸಭೆಗಳಲ್ಲಿ ಹೆಚ್ಚು ಜನರು ಒಂದೆಡೆ ಸೇರದಂತೆ ನಿಯಂತ್ರಿಸಲಾಗುವುದು. ಈ ಸಂಬಂಧ ಮಂಗಳವಾರವೇ ಹೊಸದಾಗಿ ಮಾರ್ಗಸೂಚಿ ಪ್ರಕಟಿಸಲಾಗುವುದು ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಲಾಕ್‌ಡೌನ್, ಕರ್ಫ್ಯೂ ಇಲ್ಲ: ರಾಜ್ಯದಲ್ಲಿ ಮುಂದೆ ಯಾವುದೇ ರೀತಿಯ ಲಾಕ್‌ಡೌನ್, ರಾತ್ರಿ ಕರ್ಫ್ಯೂ ಜಾರಿಗೊಳಿಸುವುದಿಲ್ಲ. ಪಬ್, ಚಿತ್ರಮಂದಿರಗಳಲ್ಲಿ ನಿರ್ಬಂಧ ಜಾರಿಗೊಳಿಸುವ ಪ್ರಸ್ತಾವವೂ ಸದ್ಯಕ್ಕೆ ಇಲ್ಲ ಎಂದರು.



ಸೋಂಕಿತರ ಸಂಪರ್ಕಿತರನ್ನು ಪತ್ತೆ ಹಚ್ಚುವ ಕೆಲಸವನ್ನು ಮತ್ತಷ್ಟು ಚುರುಕುಗೊಳಿಸಲಾಗುವುದು. ಪ್ರತಿ ಸೋಂಕಿತರಿಗೆ 25ಕ್ಕೆ ಬದಲಾಗಿ 30 ಜನ ಸಂಪರ್ಕಿತರನ್ನು ಪತ್ತೆಹಚ್ಚುವಂತೆ ಗುರಿ ನಿಗದಿಪಡಿಸಲಾಗಿದೆ. ಸಂಪರ್ಕಿತರ ಪತ್ತೆಗೆ ಶಿಕ್ಷಣ ಮತ್ತು ಕಂದಾಯ ಇಲಾಖೆ ಸಿಬ್ಬಂದಿಯನ್ನು ನಿಯೋಜಿಸಲಾಗುವುದು ಎಂದು ಹೇಳಿದರು.

6ನೇ ಪುಟ ನೋಡಿ

ಶಿಕ್ಷಕರಿಗೂ ಲಸಿಕೆ: ಕೇಂದ್ರಕ್ಕೆ ಪತ್ರ

‘ಎಲ್ಲ ಶಿಕ್ಷಕರಿಗೂ ಕೋವಿಡ್ ಲಸಿಕೆ ಹಾಕಿಸಲು ಅನುಮತಿ ನೀಡುವಂತೆ ಕೋರಿ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗುವುದು’ ಎಂದು ಯಡಿಯೂರಪ್ಪ ತಿಳಿಸಿದರು.

ಮುಖ್ಯಮಂತ್ರಿ ನೀಡಿದ ವಿವರ:

- ಬೆಂಗಳೂರಿನಲ್ಲಿ ಪಾಸಿಟಿವಿಟಿ ದರ ಶೇ 0.94ರಿಂದ ಶೇ 1.94ಕ್ಕೆ ಏರಿಕೆ
- ಬೆಂಗಳೂರು ನಗರ, ಗ್ರಾಮಾಂತರ ಜಿಲ್ಲೆಗಳಲ್ಲಿ 1,166 ಹಾಸಿಗೆಗಳು ಮೀಸಲು
- ಕೋವಿಡ್ ನಿಯಂತ್ರಣ, ನಿರ್ವಹಣೆಗೆ ₹ 150 ಕೋಟಿ ಬಿಡುಗಡೆ
- ಪ್ರಕರಣಗಳು ಹೆಚ್ಚುತ್ತಿರುವ ಜಿಲ್ಲೆಗಳಲ್ಲಿ ಪರೀಕ್ಷೆಗಳ ಹೆಚ್ಚಳಕ್ಕೆ ಸೂಚನೆ
- ಮಾಸ್ಕ್ ಧರಿಸದವರಿಗೆ ದಂಡ ವಿಧಿಸುವ ಪ್ರಕ್ರಿಯೆ ಮತ್ತಷ್ಟು ಬಿಗಿ
- ಆರೋಗ್ಯ ಸಚಿವರಿಂದ ಉಡುಪಿ ಜಿಲ್ಲೆಯಲ್ಲಿ ಪರಿಶೀಲನೆಗೆ ನಿರ್ಧಾರ

ಶಾಲೆ, ಕಾಲೇಜು ಬಂದ್ ಇಲ್ಲ

ಶಾಲೆ, ಕಾಲೇಜುಗಳನ್ನು ಬಂದ್ ಮಾಡುವ ಪ್ರಸ್ತಾವವೇ ಇಲ್ಲ. 15 ದಿನಗಳಲ್ಲಿ ಪರೀಕ್ಷೆಗಳು ಪೂರ್ಣಗೊಳ್ಳಲಿದ್ದು, ಆ ಬಳಿಕ ಈ ಕುರಿತು ಯೋಚಿಸಲಾಗುವುದು ಎಂದು ಯಡಿಯೂರಪ್ಪ ತಿಳಿಸಿದರು. ಮಕ್ಕಳು ಶಾಲೆ, ಕಾಲೇಜುಗಳಿಗೆ ಬಂದರೆ ಶಿಸ್ತಿನಿಂದ ಇರುತ್ತಾರೆ. ಅಪಾರ್ಟ್‌ಮೆಂಟ್ ಮತ್ತು ಮನೆಗಳಲ್ಲಿ ಗುಂಪುಗೂಡಿ ಇರುತ್ತಾರೆ ಎಂದರು. ಒಂದರಿಂದ ಒಂಬತ್ತನೇ ತರಗತಿವರೆಗಿನ ವಿದ್ಯಾರ್ಥಿಗಳನ್ನು ಪರೀಕ್ಷೆಯೇ ಇಲ್ಲದೆ ಮುಂದಿನ ತರಗತಿಗೆ ಉತ್ತೀರ್ಣಗೊಳಿಸುವ ಕುರಿತು ಸಭೆಯಲ್ಲಿ ಯಾವುದೇ ಚರ್ಚೆ ನಡೆದಿಲ್ಲ ಎಂದರು.

ಇನ್ನಷ್ಟು ಸುದ್ದಿಗಳು 3

ಪ್ರತ್ಯೇಕ ಆದೇಶ ಹೊರಡಿಸುವಂತಿಲ್ಲ

ಬೆಂಗಳೂರು: ಕೋವಿಡ್ ನಿಯಂತ್ರಣ, ನಿರ್ವಹಣೆಗೆ ಸಂಬಂಧಿಸಿದಂತೆ ಮುಖ್ಯ ಕಾರ್ಯದರ್ಶಿ ಮಾತ್ರ ಆದೇಶ, ಸುತ್ತೋಲೆಗಳನ್ನು ಹೊರಡಿಸಬೇಕು. ಯಾವುದೇ ಸಚಿವರು ಅಥವಾ ಅಧಿಕಾರಿಗಳು ಪ್ರತ್ಯೇಕವಾಗಿ ಆದೇಶ, ಸುತ್ತೋಲೆ ಹೊರಡಿಸಬಾರದು ಎಂದು ಮುಖ್ಯಮಂತ್ರಿ ತಾಕೀತು ಮಾಡಿದ್ದಾರೆ.

‘ಕೇಂದ್ರ ಸರ್ಕಾರದಲ್ಲಿ ಒಂದೇ ಇಲಾಖೆಯ ಮೂಲಕ ಆದೇಶ, ಸುತ್ತೋಲೆ, ಮಾರ್ಗಸೂಚಿಗಳನ್ನು ನೀಡಲಾಗುತ್ತಿದೆ. ರಾಜ್ಯದಲ್ಲಿ ವಿವಿಧ ಇಲಾಖೆಗಳು ಈ ಕ್ರಮ ಕೈಗೊಳ್ಳುತ್ತಿರುವುದರಿಂದ ಗೊಂದಲ ಸೃಷ್ಟಿಯಾಗುತ್ತಿದೆ. ಆದ್ದರಿಂದ ಮುಖ್ಯ ಕಾರ್ಯದರ್ಶಿ ಮಾತ್ರ ನನ್ನ ಅನುಮೋದನೆ ಪಡೆದ ಬಳಿಕ ಆದೇಶ, ಸುತ್ತೋಲೆ ಹೊರಡಿಸಬೇಕು’ ಎಂದು ಟಿಪ್ಪಣಿಯ ಮೂಲಕ ನಿರ್ದೇಶನ ನೀಡಿದ್ದಾರೆ.

₹17.5 ಲಕ್ಷ ಪಡೆದು ವಂಚನೆ: ರಾಮಸೇನೆ ಮುಖಂಡನ ಬಂಧನ

ಮಂಗಳೂರು: ರಾಯಚೂರು ವಿಶ್ವವಿದ್ಯಾಲಯದ ಕುಲಪತಿ ಮಾಡಿಸುವುದಾಗಿ ನಂಬಿಸಿ ಮಂಗಳೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕರೊಬ್ಬರಿಂದ ₹17.5 ಲಕ್ಷ ಪಡೆದು ವಂಚಿಸಿದ ಆರೋಪದ ಮೇಲೆ ರಾಮಸೇನೆ ಮುಖಂಡ ಪ್ರಸಾದ್ ಅತ್ತಾವರ ಅವರನ್ನು ಪೊಲೀಸರು ಸೋಮವಾರ ಬಂಧಿಸಿದ್ದಾರೆ. 4

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಪ್ರಿಯ ವಿದ್ಯಾರ್ಥಿಗಳೇ, ಕೋವಿಡ್‌ನಿಂದಾಗಿ ಈ ವರ್ಷ ತರಗತಿಗಳಿಗೆ ಖುದ್ದಾಗಿ ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ..

ಪುಟ-5

ಇಂದಿನ ಪಾಡ್‌ಕಾಸ್ಟ್ ವಿಶೇಷ
ಪ್ರಜಾವಾಣಿ ಕನ್ನಡ ಧ್ವನಿ
ಸುದ್ದಿ ಸ್ವಾರಸ್ಯ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

ಒಳ ಪುಟ
ಪ್ರಾಣಿಗಳೇ ಕೋವಿಡ್‌ನ ಮೂಲ ಸಾಧ್ಯತೆ 10

ಚಿನಕುರಳಿ
ಪ್ರಕಾಶ್ ಶೆಟ್ಟಿ

ನ್ಯಾಯಾಧೀಶರ ಎದುರು ಯುವತಿ ಇಂದು ಹಾಜರು ಸಾಧ್ಯತೆ

ಸಿ.ಡಿ: ಮತ್ತಷ್ಟು ಕಗ್ಗಂಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಶಾಸಕ ರಮೇಶ ಜಾರಕಿಹೊಳಿಗೆ ಸಂಬಂಧಿಸಿದ್ದು ಎನ್ನಲಾಗುತ್ತಿರುವ ಸಿ.ಡಿ. ಪ್ರಕರಣ ಸೋಮವಾರ ಮತ್ತಷ್ಟು ತಿರುವುಗಳನ್ನು ಪಡೆದಿದ್ದು, ಸಂತ್ರಸ್ತೆ ಎನ್ನಲಾಗುತ್ತಿರುವ ಯುವತಿ ನ್ಯಾಯಾಧೀಶರ ಎದುರು ಮಂಗಳವಾರ ಹಾಜರಾಗುವ ಸಾಧ್ಯತೆ ಇದೆ.

ರಮೇಶ ಜಾರಕಿಹೊಳಿ

ಯುವತಿ ತನ್ನ ವಕೀಲರ ಮೂಲಕ ನೀಡಿರುವ ದೂರು ಆಧರಿಸಿ ಎಫ್ಐಆರ್ ದಾಖಲಿಸಿಕೊಂಡಿರುವ ಕಬ್ಬನ್‌ಪಾರ್ಕ್ ಠಾಣೆ ಪೊಲೀಸರು ರಮೇಶ ಜಾರಕಿಹೊಳಿ ಅವರನ್ನು ನಾಲ್ಕು ಗಂಟೆ ವಿಚಾರಣೆಗೆ ಗುರಿಪಡಿಸಿದ್ದಾರೆ. ‘ಯುವತಿ ಯಾರೆಂಬುದೇ ನನಗೆ ಗೊತ್ತಿಲ್ಲ. ನಿಮ್ಮ ಪ್ರಶ್ನೆಗಳಿಗೆಲ್ಲಾ ವಕೀಲರನ್ನು ಕೇಳಿ ಉತ್ತರಿಸುವೆ, ಸ್ವಲ್ಪ ಕಾಲಾವಕಾಶ ಬೇಕು’ ಎಂದು ತನಿಖಾಧಿಕಾರಿ ಮುಂದೆ ರಮೇಶ ಹೇಳಿದ್ದಾರೆ ಎನ್ನಲಾಗಿದೆ. ಹೀಗಾಗಿ, ಏಪ್ರಿಲ್ 2ರಂದು ವಿಚಾರಣೆಗೆ ಹಾಜರಾಗುವಂತೆ ಸೂಚಿಸಿದ ಪೊಲೀಸರು ಅವರನ್ನು ವಾಪಸ್ ಕಳಿಸಿದ್ದಾರೆ.

ಅನುಮತಿ ಕೊಟ್ಟರೆ ನ್ಯಾಯಾಧೀಶರ ಮುಂದೆ ಸೋಮವಾರ ಹಾಜರಾಗಿ ಹೇಳಿಕೆ ನೀಡುವೆ ಎಂಬ ಸಂದೇಶ ಕಳುಹಿಸಿದ್ದ ಯುವತಿ, ‘ವಿಚಾರಣೆ ಮೇಲುಸ್ತುವಾರಿ ವಹಿಸಬೇಕು ಹಾಗೂ ರಕ್ಷಣೆ ಕೊಡಲು ಸರ್ಕಾರಕ್ಕೆ ಸೂಚಿಸಬೇಕು ಎಂದು ಕೋರಿ ಸುಪ್ರೀಂಕೋರ್ಟ್ ಹಾಗೂ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳಿಗೆ ಇ-ಮೇಲ್ ಮೂಲಕ ಪತ್ರ ಕಳುಹಿಸಿರುವುದಾಗಿ ಮತ್ತೊಂದು ವಿಡಿಯೊದಲ್ಲಿ ಹೇಳಿಕೊಂಡಿದ್ದಾರೆ.

ಏತನ್ಮಧ್ಯೆ, ಬೆಂಗಳೂರಿನ 24ನೇ ಎಸಿಎಂಎಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿರುವ ಯುವತಿ ಪರ ವಕೀಲ ಕೆ.ಎನ್. ಜಗದೀಶ್ ಕುಮಾರ್, ನ್ಯಾಯ ಮತ್ತು ರಕ್ಷಣೆ ಕೋರಿ ಹೇಳಿಕೆ ನೀಡಲು ಅನುಮತಿ ನೀಡುವಂತೆ ಕೋರಿದ್ದಾರೆ. ಈ ಅರ್ಜಿ ಸ್ವೀಕೃತವಾಗಿದ್ದು, ಹಾಜರಾಗಲು ಅವಕಾಶ ಸಿಗಲಿದೆಯೇ ಎಂಬುದು ಮಂಗಳವಾರವಷ್ಟೇ ಗೊತ್ತಾಗಲಿದೆ.

ಇನ್ನಷ್ಟು ಸುದ್ದಿಗಳು 6

‘ಡಿಕೆಶಿ ಹಿಡಿದು ಒಳಗೆ ಹಾಕಲಿ’

ಬೆಳಗಾವಿ: ‘ಡಿ.ಕೆ. ಶಿವಕುಮಾರ್ ಹಿಡಿದು ಒಳಗೆ ಹಾಕಿದರೆ ಎಲ್ಲವೂ ಗೊತ್ತಾಗುತ್ತದೆ. ಎಲ್ಲ ಗೇಮ್ ಆಡುತ್ತಿರುವವರು ಅವರೇ’ ಎಂದು ಸಂತ್ರಸ್ತೆ ಎನ್ನಲಾಗುತ್ತಿರುವ ಯುವತಿಯ ತಮ್ಮ ಹೇಳಿದ್ದಾರೆ.

ತನ್ನ ತಂದೆ, ತಾಯಿ ಜತೆ ಸುದ್ದಿಗಾರರೊಂದಿಗೆ ಮಾತನಾಡಿದ ಆತ, ‘ವಿಜಾಪುರದವರು ಬೆಳಗಾವಿಗೆ ಬಂದು ಕೇಸ್ ಕೊಟ್ಟರೇಕೆ ಎಂದು ಪುಣ್ಯಾತ್ಮ ಡಿ.ಕೆ. ಶಿವಕುಮಾರ್ ಕೇಳಿದ್ದಾರೆ. 12 ವರ್ಷ ಇಲ್ಲಿದ್ದೇವೆ. ಇಲ್ಲಿ ಅಲ್ಲದೇ ಮತ್ತೇನ್ ಹೋಗಿ ಕನಕಪುರದಲ್ಲಿ ಕೊಡಬೇಕಿತ್ತಾ?ನಮ್ಮನ್ನೂ ಅಪಹರಿಸಿ ನಮ್ಮಿಂದಲೂ ಹೇಳಿಕೆ ಕೊಡಿಸಬೇಕು ಎಂದುಕೊಂಡಿರಬೇಕು’ ಎಂದು ಹೇಳಿದರು.

ಶಿವಕುಮಾರ್ ಭೇಟಿಯಾಗೇ ಇಲ್ಲವೆಂದರೂ ನಮ್ಮಕ್ಕ ಅವರ ಹೆಸರನ್ನು ಹೇಗೆ ಹೇಳಿದರು? ಹಣ ಕೊಟ್ಟು ಗೋವಾಕ್ಕೆ ಕಳುಹಿಸಿರೋದೆ ಅವರು. ಈಗೇಕೆ ಸುಳ್ಳು ಹೇಳುತ್ತಿದ್ದಾರೆ. ಈ ರೀತಿ ಮಾಡುವುದರಿಂದ ಶಿವಕುಮಾರ್‌ಗೆ ಏನು ಸಿಗುತ್ತಿದೆಯೋ ಗೊತ್ತಿಲ್ಲ. ಆದರೆ, ನಮ್ಮಕ್ಕ ತುಂಬಾ ನೋವಲ್ಲಿದ್ದಾಳೆ’ ಎಂದರು.

‘ಮಗಳು ಇಲ್ಲಿಗೆ ಬಂದು ನನ್ನೊಂದಿಗೆ ಎಲ್ಲವನ್ನೂ ಹೇಳಿಕೊಳ್ಳಲಿ. ನಾನು ಆಕೆಯ ಜೊತೆ ನಿಲ್ಲುತ್ತೇನೆ’ ಎಂದು ಯುವತಿಯ ತಂದೆ ಹೇಳಿದರು.

‘ಸಾರಿಗೆ: ವೇತನ ಪರಿಷ್ಕರಣೆ ಶೀಘ್ರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರಿಗೆ ನೌಕರರ ವೇತನ ಪರಿಷ್ಕರಣೆ ಕುರಿತು ಈ ವಾರವೇ ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು ಎಂದು ಉಪಮುಖ್ಯಮಂತ್ರಿ ಲಕ್ಷ್ಮಣ ಸವದಿ ತಿಳಿಸಿದ್ದಾರೆ.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಅಧ್ಯಕ್ಷತೆಯಲ್ಲಿ ಸೋಮವಾರ ನಡೆದ ವೇತನ ಪರಿಷ್ಕರಣೆ ಕುರಿತ ಸಭೆಯ ಬಳಿಕ ಅವರು ಸುದ್ದಿಗಾರರಿಗೆ ವಿವರ ನೀಡಿದರು.

ವೇತನ ಪರಿಷ್ಕರಣೆಯ ಸ್ವರೂಪದ ಬಗ್ಗೆ ಸಾರಿಗೆ ನಿಗಮಗಳು ಮತ್ತು ಸಂಬಂಧಪಟ್ಟ ಇಲಾಖೆಗಳ ಹಿರಿಯ ಅಧಿಕಾರಿಗಳು ಹಲವು ಸುತ್ತಿನ ಸಭೆಗಳನ್ನು ನಡೆಸಿ ಚರ್ಚಿಸಿದ್ದಾರೆ. ಈ ವಿಚಾರದಲ್ಲಿ ಆರ್ಥಿಕ ಹೊರೆಯ ಬಗ್ಗೆ ಕೂಲಂಕಶವಾಗಿ ಪರಿಶೀಲಿಸಿ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು ಎಂದರು.

ಒಟ್ಟು 9 ಬೇಡಿಕೆಗಳಲ್ಲಿ 8 ಬೇಡಿಕೆಗಳನ್ನು ಈಡೇರಿಸಲಾಗಿದೆ. ವೇತನ ಪರಿಷ್ಕರಣೆ ಬೇಡಿಕೆ ಈಡೇರಿಕೆ ಮಾತ್ರ ಬಾಕಿ ಉಳಿದಿದೆ. ಈಗ ಅದಕ್ಕೂ ಕಾಲ ಕೂಡಿ ಬಂದಿದೆ. ಆ ಪ್ರಕ್ರಿಯೆ ನಡೆಯುತ್ತಿದೆ. ಆದ್ದರಿಂದ ನೌಕರರು ಏ. 7 ರಂದು ನಡೆಸಲು ಉದ್ದೇಶಿಸಿರುವ ಮುಷ್ಕರ ಕೈಬಿಡಬೇಕು ಎಂದು ಮನವಿ ಮಾಡಿದ್ದಾರೆ.

ಕೋವಿಡ್‌ನಿಂದ ವಿದ್ಯಾರ್ಥಿಗಳು, ಬಡ ಮತ್ತು ಮಧ್ಯಮ ವರ್ಗದ ಜನ ತೊಂದರೆಗೆ ಒಳಗಾಗಿದ್ದಾರೆ. ಪದೇ ಪದೇ ಮುಷ್ಕರ ಮಾಡುವುದರಿಂದ ತೊಂದರೆಗೆ ಸಿಲುಕುತ್ತಾರೆ. ಸಂಕಷ್ಟದ ಪರಿಸ್ಥಿತಿಯಲ್ಲೂ ನೌಕರರ ಹಿತರಕ್ಷಣೆಗೆ ಸ್ಪಂದಿಸಿ ವೇತನ, ಸೌಲಭ್ಯಗಳನ್ನು ನೀಡಿದೆ ಎಂದು ಸವದಿ ಹೇಳಿದ್ದಾರೆ.

ಸುರಕ್ಷತಾ ಪರವಾನಗಿ ಪಡೆಯದ ಗಣಿಗಳ ಸಂಖ್ಯೆ 2,500

ಗಣಿ ಪುನರಾರಂಭಕ್ಕೆ ಅನುಮತಿ: ನಿರಾಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಸ್ಥಗಿತಗೊಂಡಿರುವ ಕಲ್ಲು ಗಣಿಗಾರಿಕೆ ಮತ್ತು ಕ್ರಷರ್‌ಗಳನ್ನು ಷರತ್ತು ಬದ್ಧವಾಗಿ ಪುನರಾರಂಭಿಸಲು ಅನುಮತಿ ನೀಡಲಾಗುವುದು ಎಂದು ಗಣಿ ಮತ್ತು ಭೂವಿಜ್ಞಾನ ಸಚಿವ ಮುರುಗೇಶ ನಿರಾಣಿ ತಿಳಿಸಿದರು.

ಕಲ್ಲು ಗಣಿಗಳನ್ನು ಪುನರಾರಂಭಿಸುವವರು ಗಣಿ ಮತ್ತು ಸುರಕ್ಷತಾ ಮಹಾನಿರ್ದೇಶಕರಿಂದ (ಡಿಜಿಎಂಎಸ್) 90 ದಿನಗಳ ಒಳಗೆ ಪರವಾನಗಿ ಪಡೆಯುವುದು ಕಡ್ಡಾಯ ಎಂದು ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ರಾಜ್ಯದಲ್ಲಿ ಡಿಜಿಎಂಎಸ್ ಪರವಾನಗಿ ಪಡೆದು ಗಣಿಗಾರಿಕೆ ನಡೆಸುತ್ತಿರುವ ಗಣಿಗಳ ಸಂಖ್ಯೆ ಶೇ 10 ಇದ್ದು, ಉಳಿದ ಶೇ 90 ರಷ್ಟು ಮಂದಿ ಡಿಜಿಎಂಎಸ್ ಪರವಾನಗಿ ಪಡೆದಿಲ್ಲ. ಇಂತಹ ಗಣಿಗಳ ಸಂಖ್ಯೆ 2,500 ಕ್ಕೂ ಹೆಚ್ಚು ಇದೆ. ಪರವಾನಗಿ ಪಡೆಯದೇ ಗಣಿ ಪುನರಾರಂಭಿಸಲು ಸಾಧ್ಯವಿಲ್ಲ. ಇವರಿಂದ ಮುಚ್ಚಳಿಕೆ ಬರೆಸಿಕೊಂಡು ಗಣಿಗಾರಿಕೆ ನಡೆಸಲು ಅನುಮತಿ ನೀಡಲಾಗುವುದು ಎಂದು ಹೇಳಿದರು.

ಶಿವಮೊಗ್ಗ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ನಡೆದ ಸ್ಫೋಟದ ಬಳಿಕ ಡಿಜಿಎಂಎಸ್ ಪರವಾನಗಿ ಹೊಂದಿಲ್ಲದ ಎಲ್ಲ ಗಣಿಗಳು ಮುಚ್ಚಿವೆ. ಗಣಿಗಳ ಚಟುವಟಿಕೆ ನಿಂತು ಹೋದ ಕಾರಣ ₹300 ಕೋಟಿಗಳಷ್ಟು ಆದಾಯ ನಷ್ಟವಾಗಿದೆ. ಹಲವು ಗಣಿಗಳಲ್ಲಿ ಕಾರ್ಮಿಕರನ್ನು ತೆಗೆದುಹಾಕಲಾಗಿದೆ. ಕೆಲವರು ಸಾಲ ಮಾಡಿ ಕ್ರಷರ್‌ಗಳನ್ನು ನಡೆಸುತ್ತಿದ್ದಾರೆ. ಸಾಲ ಮರುಪಾವತಿ ಮಾಡದೇ ಸಂಕಷ್ಟಕ್ಕೆ ಸಿಲುಕಿದ್ದಾರೆ. ಕ್ರಷರ್‌ಗಳು ನಿಂತಿರುವುದರಿಂದ ಕಚ್ಚಾ ಸಾಮಗ್ರಿಗಳ ಬೆಲೆ ಮಾರುಕಟ್ಟೆಯಲ್ಲೂ ಏರಿಕೆಯಾಗಿದೆ ಎಂದು ನಿರಾಣಿ ಹೇಳಿದರು.

ಡಿಜಿಎಂಎಸ್ ಪರವಾನಗಿ ಇಲ್ಲದೆ ಸ್ಫೋಟಕಗಳನ್ನು ಖರೀದಿಸಲು ಸಾಧ್ಯವಿಲ್ಲ. ಅದಕ್ಕಾಗಿ ಮಾರ್ಗಸೂಚಿ ಬದಲಿಸಲು ತೀರ್ಮಾನಿಸಲಾಯಿತು ಎಂದು ಅವರು ತಿಳಿಸಿದರು.

ಎರಡು ಕೆ.ಜಿಯಷ್ಟು ಸ್ಫೋಟಕಗಳನ್ನು ಗಣಿಯಲ್ಲಿ ಬಳಸಲು ಅವಕಾಶ ಇದೆ. ಇದಕ್ಕೆ ಡಿಜಿಎಂಎಸ್‌ನ ಅನುಮತಿ ಬೇಕಿಲ್ಲ. 5 ಎಕರೆ ಮತ್ತು ಅದಕ್ಕಿಂತ ಕಡಿಮೆ ಭೂಮಿಯಲ್ಲಿ ಗಣಿಗಾರಿಕೆ ನಡೆಸಲು ಡಿಜಿಎಂಎಸ್ ಅನುಮತಿ ಪಡೆಯುವುದರಿಂದ ವಿನಾಯ್ತಿ ನೀಡಬೇಕು ಎಂಬ ಮನವಿ ಬಂದಿದೆ ಎಂದು ಹೇಳಿದರು.

ಗಣಿ ಇಲಾಖೆ ಸಿಬ್ಬಂದಿಗೂ ಸಮವಸ್ತ್ರ



ತನಿಖೆಗಾಗಿ ಗಣಿ ಪ್ರದೇಶಕ್ಕೆ ಹೋಗುವ ಸಿಬ್ಬಂದಿಗೆ ಸಮವಸ್ತ್ರ ನೀಡಲು ತೀರ್ಮಾನಿಸಲಾಗಿದೆ. ಇದನ್ನು ಜಾರಿಗೆ ತರುವುದರಿಂದ ಗಣಿ ಪ್ರದೇಶದಲ್ಲಿ ಅಧಿಕಾರಿಗಳ ಬಗ್ಗೆ ಭಯವೂ ಬರುತ್ತದೆ ಎಂದು ನಿರಾಣಿ ತಿಳಿಸಿದರು.

ಗಣಿ ಇಲಾಖೆ ಸಿಬ್ಬಂದಿಗೆ ವಾಕಿ-ಟಾಕಿ ನೀಡಲಾಗುವುದು, ಬಳ್ಳಾರಿಯಂತಹ ಜಿಲ್ಲೆಯಲ್ಲಿ ಭದ್ರತಾ ಕಾರ್ಯಕ್ಕೆ ನಿವೃತ್ತ ಸೇನಾಧಿಕಾರಿಗಳನ್ನು ಬಳಸಿಕೊಳ್ಳಲು ಚಿಂತನೆ ನಡೆಸಲಾಗಿದೆ. ಗಣಿ ಕಾರ್ಮಿಕರಿಗೆ ಸುರಕ್ಷತಾ ಕಿಟ್ ನೀಡಲು ತೀರ್ಮಾನಿಸಲಾಗಿದೆ ಎಂದರು.



ಏ.2ರಿಂದ ವಿದ್ಯುತ್ ವ್ಯತ್ಯಯ

ಬೆಂಗಳೂರು: ನಿರ್ವಹಣಾ ಕಾರ್ಯ ಕೈಗೆತ್ತಿಕೊಳ್ಳುತ್ತಿರುವುದರಿಂದ ನಗರದ ವಿವಿಧ ಪ್ರದೇಶಗಳಲ್ಲಿ ಏ.2 ಮತ್ತು 3ರಂದು ಬೆಳಿಗ್ಗೆ 10ರಿಂದ ಸಂಜೆ 5.30ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ಎಲ್ಲೆಲ್ಲಿ ವಿದ್ಯುತ್ ವ್ಯತ್ಯಯ: ಚುಂಚನಘಟ್ಟ ಮುಖ್ಯರಸ್ತೆ, ಬಿಸಿಎಂಸಿ ಬಡಾವಣೆ, ತಿಪ್ಪಸಂದ್ರ, ಚನ್ನಮ್ಮ ಉದ್ಯಾನ, ರಘುವನಹಳ್ಳಿ, ಮದೀನಾ ನಗರ, ಬಿಟಿಎಂ ಬಡಾವಣೆ ಎರಡನೇ ಹಂತ, ಅಪೊಲೊ ಆಸ್ಪತ್ರೆ, ಬನ್ನೇರುಘಟ್ಟ ರಸ್ತೆ, ಪಾಂಡುರಂಗ ನಗರ, ಸಹ್ಯಾದ್ರಿ ಬಡಾವಣೆ, ಡೆಲ್ಟಾ ಫಾರೆಸ್ಟ್ ಅಪಾರ್ಟ್‌ಮೆಂಟ್ ಸಮುಚ್ಚಯ, ಜೆ.ಪಿ. ನಗರ, ಮತ್ತು ಸುತ್ತ-ಮುತ್ತಲಿನ ಪ್ರದೇಶಗಳು.

ಸಿಎಸ್ಐಆರ್ – ಕೇಂದ್ರೀಯ ಆಹಾರ ತಂತ್ರಜ್ಞಾನ ಸಂಶೋಧನಾಲಯ, ಮೈಸೂರು – 570 020, ಭಾರತ
सीएसआईआर - केंद्रीय खाद्य प्रौद्योगिक अनुसंधान संस्थान, मैसूरु - 570 020, भारत
CSIR-CENTRAL FOOD TECHNOLOGICAL RESEARCH INSTITUTE
(Council of Scientific & Industrial Research, Govt. of India, New Delhi)
MYSURU - 570 020, INDIA
cftri Giving Food a Future

Advt. No. PAT.:01/2021 Dt. 30.03.2021

PROJECT POSITIONS

Applications are invited from eligible candidates for **Training Co-ordinators (2 Nos.)** on temporary basis under PMFME Programme.

For more details visit: ***www.cftri.res.in***

ಎರಡನೇ ಹಂತದ ಯೋಜನೆ: ರೈಲು ಹಳಿ – ಪ್ಲಾಟ್‌ಫಾರಂಗಳ ನಡುವೆ 'ಸ್ಕ್ರೀನ್ ಡೋರ್'

318 ಬೋಗಿಗಳ ಖರೀದಿ, ಸಮಾಲೋಚಕ ಸಂಸ್ಥೆ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಮೆಟ್ರೊ' ಎರಡನೇ ಹಂತದ ಯೋಜನೆ ಅನುಷ್ಠಾನಕ್ಕೆ ಜಪಾನ್ ಅಂತರರಾಷ್ಟ್ರೀಯ ಸಹಕಾರ ಏಜೆನ್ಸಿಯಿಂದ (ಜೈಕಾ) ₹3,717 ಕೋಟಿ ಸಾಲ ಪಡೆಯುವ ಒಪ್ಪಂದಕ್ಕೆ ಕೇಂದ್ರ ಸರ್ಕಾರ ಸಹಿ ಹಾಕಿದ ಮರುದಿನವೇ ಬೆಂಗಳೂರು ಮೆಟ್ರೊ ರೈಲು ನಿಗಮವು (ಬಿಎಂಆರ್‌ಸಿಎಲ್) ಸಮಾಲೋಚಕ ಸಂಸ್ಥೆ (ಜನರಲ್ ಕನ್ಸಲ್ಟಂಟ್) ನೇಮಕಕ್ಕೆ ಮುಂದಾಗಿದೆ.

ಆಯ್ಕೆಯಾದ ಸಮಾಲೋಚಕ ಸಂಸ್ಥೆಯು ಗುಲಾಬಿ ಮತ್ತು ನೀಲಿ ಮಾರ್ಗಗಳಲ್ಲಿ ಬಳಸುವ 318 ಬೋಗಿಗಳು, ಸಿಬಿಟಿಸಿ ಸಿಗ್ನಲಿಂಗ್ ಮತ್ತು ಪ್ಲಾಟ್‌ಫಾರಂ ಸ್ಕ್ರೀನ್ ಡೋರ್ ವ್ಯವಸ್ಥೆ ಕಲ್ಪಿಸುವ ಕುರಿತ ಖರೀದಿ ಪ್ರಕ್ರಿಯೆ ಮತ್ತಿತರ ಅಂಶಗಳ ಬಗ್ಗೆ ನಿಗಮಕ್ಕೆ ಸಲಹೆಗಳನ್ನು ನೀಡಲಿದೆ.

ಎರಡನೇ ಹಂತದಲ್ಲಿ ನಮ್ಮ ಮೆಟ್ರೊ ಗುಲಾಬಿ ಮಾರ್ಗದ (ನಾಗವಾರದಿಂದ ಗೊಟ್ಟಿಗೆರೆವರೆಗಿನ 22 ಕಿ.ಮೀ ಮಾರ್ಗ), ತೆಳು ನೀಲಿ ಮಾರ್ಗ (ಸಿಲ್ಕ್ ಬೋರ್ಡ್‌ನಿಂದ ಕೆ.ಆರ್. ಪುರದವರೆಗಿನ 20 ಕಿ.ಮೀ. ಮಾರ್ಗ) ಮತ್ತು ಕೆ.ಆರ್. ಪುರದಿಂದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ 38 ಕಿ.ಮೀ ಉದ್ದದ ಮಾರ್ಗ ನಿರ್ಮಾಣಕ್ಕೆ ಜೈಕಾ ಸಾಲ ನೀಡಲಿದೆ.

ಮೇ ತಿಂಗಳ ಕೊನೆಯಲ್ಲಿ ಸಮಾಲೋಚಕ ಸಂಸ್ಥೆಯ ನೇಮಕ ಪ್ರಕ್ರಿಯೆಯನ್ನು ನಿಗಮ ಅಂತಿಮಗೊಳಿಸುವ ನಿರೀಕ್ಷೆ ಇದೆ. ಕಾಳೇನ ಅಗ್ರಹಾರ-ಗೊಟ್ಟಿಗೆರೆ ಮಾರ್ಗದಲ್ಲಿ ಸಂಚರಿಸುವ ಆರು ಬೋಗಿಗಳ 16 ರೈಲುಗಳು (ಒಟ್ಟು 96 ಬೋಗಿಗಳು) ಹಾಗೂ ಸಿಲ್ಕ್ ಬೋರ್ಡ್-ಕೆ.ಆರ್. ಪುರ-ವಿಮಾನ ನಿಲ್ದಾಣದಲ್ಲಿ ಮಾರ್ಗಗಳ ಆರು ಬೋಗಿಗಳ 21 ರೈಲು (126 ಬೋಗಿ) ಗಳನ್ನು ಖರೀದಿಸಲಾಗುತ್ತಿದೆ.

ಸಿಬಿಟಿಸಿ: ಚಾಲಕ ರಹಿತ ಮೆಟ್ರೊ ರೈಲುಗಳ ಸಂಚಾರಕ್ಕೆ ವ್ಯವಸ್ಥೆ ರೂಪಿಸಲು ನಿಗಮ ಸಿದ್ಧತೆ ನಡೆಸಿದೆ. ಈ ಸಲುವಾಗಿ ಸಂವಹನ ಆಧಾರಿತ ರೈಲು ನಿಯಂತ್ರಣ ವ್ಯವಸ್ಥೆ (ಸಿಬಿಟಿಸಿ) ಅಳವಡಿಸಲಾಗುತ್ತದೆ. ಈ ವ್ಯವಸ್ಥೆಯ ಅನುಷ್ಠಾನಕ್ಕೂ ಸಮಾಲೋಚಕ ಸಂಸ್ಥೆ ನೇಮಕ ನಡೆಯಲಿದೆ ಎಂದು ನಿಗಮದ ಮೂಲಗಳು ಹೇಳಿವೆ.

ಸ್ಕ್ರೀನ್ ಡೋರ್

ಈ ಕಾರಿಡಾರ್‌ಗಳಲ್ಲಿ ನೆಲದಡಿ ನಿಲ್ದಾಣಗಳ ಪ್ಲಾಟ್‌ಫಾರಂಗಳಿಗೆ ಸ್ಕ್ರೀನ್ ಡೋರ್‌ಗಳನ್ನು (ಪಿಎಸ್‌ಡಿ) ಅಳವಡಿಸಲಾಗುತ್ತದೆ. ಡೇರಿ ವೃತ್ತದಿಂದ ನಾಗವಾರದವರೆಗಿನ 12 ನೆಲದಡಿಯ ನಿಲ್ದಾಣಗಳು ಕೆ.ಆರ್. ಪುರ-ವಿಮಾನ ನಿಲ್ದಾಣ ಮಾರ್ಗದಲ್ಲಿನ ಎರಡು ನೆಲದಡಿಯ ನಿಲ್ದಾಣಗಳಲ್ಲಿ ಈ ಪಿಎಸ್‌ಡಿಗಳನ್ನು ಅಳವಡಿಸಲಾಗುವುದು ಎಂದು ನಿಗಮದ ಮೂಲಗಳು ತಿಳಿಸಿವೆ.

ರೈಲು ಹಳಿ ಮತ್ತು ಪ್ಲಾಟ್‌ಫಾರಂ ನಡುವೆ ಈ ಪಿಎಸ್‌ಡಿಗಳನ್ನು ಅಳವಡಿಸಲಾಗುತ್ತದೆ. ಪ್ರಯಾಣಿಕರು ಹಳಿಗೆ ಬಿದ್ದು ಸಂಭವಿಸುವ ಅಹಿತಕರ ಘಟನೆಗಳನ್ನು ತಡೆಯಲು ಈ ಸ್ಕ್ರೀನ್ ಡೋರ್‌ಗಳು ನೆರವಾಗಲಿವೆ. ರೈಲು ನಿಂತ ನಂತರವೇ ಈ ಬಾಗಿಲುಗಳು ತೆರೆದುಕೊಳ್ಳಲಿವೆ. ದೆಹಲಿ ಮತ್ತು ಚೆನ್ನೈನ ಮೆಟ್ರೊ ನಿಲ್ದಾಣಗಳಲ್ಲಿ ಪಿಎಸ್‌ಡಿಗಳನ್ನು ಈಗಾಗಲೇ ಅಳವಡಿಸಲಾಗಿದೆ.

CONNECT ಕ್ಲಾಸಿಫೈಡ್ಸ್

ಹೊರಗೆ ಹೋಗುವಾಗ ಮುಖಗವಸು ಧರಿಸಿ

V-WATER: UNIQUE PHYSICAL WATER SOFTNER

UNIVERSALLY FIRST PHYSICAL WATER SOFTNER WITH CDLPT TECHNOLOGY Patent applied for

MAKE IN INDIA

• FIT AND FORGET. • DE- SCALING SEEN AFTER 60 MINUTES OF INSTALLATION. • NO MAINTENANCE. • NO WATER WASTAGE. • NO POWER CONSUMPTION. • SUITABLE FOR SOFTENING OF HARD WATER UPTO 20000ppm TDS. • INSTANTANEOUS FEEL OF SPRING WATER AFTER PASSING THROUGH OUR DEVICE. • ONE TIME INVESTEMENT. • APPLICABLE FOR AGRICULTURE, DOMESTIC, COMMERCIAL AND INDUSTRIAL PURPOSES WITH PROVEN AND LONG LASTING RESULTS

IN THE MARKET SINCE 4 YEARS WITH OVER 3000+ SUCCESSFUL INSTALATIONS AND STILL GOING STRONG.WE ARE EXPANDING OUR REACH AND BUSINESS...LOOKING FOR DEALERS AND SUPER STOCKISTS ACROSS KARNATAKA.

FOR MORE DETAILS CONTACT- 9110441765, 8105605596

EXCLUSIVE WEDDING SILK SAREES

KANCHIPURAM

A.G.BABU SAH

SILK CLOTH MERCHANT

Ugadi Sale

Date : 01.04.2021 to 05.04.2021

Timings 11.00 a.m. to 7.00 p.m.

WHITE HOUZZ

No.4B, 14th Main Road, 6th Sector, Next to B.D.A. Complex, HSR Layout, Bangalore - 560 102. Mob : 7904413982

NO EXCHANGE - NO RETURNS

MASK COMPULSORY

No Entry For Children & Persons Above 60 years

HAND BAG & LUGGAGE NOT ALLOWED INSIDE

STREAMLINE

ಪ್ರಜಾವಾಣಿ **ಕ್ಲಾಸಿಫೈಡ್ಸ್**
ಪ್ರತಿಯೊಬ್ಬರಿಗೂ ಉಪಯುಕ್ತ

JOB OPPORTUNITIES

Graphic Designers

WANTED DTP Operator/ Graphic Designer, Corel Draw, Illustrator & Photoshop for a Pvt Limited Company in around Rajajinagar Contact: 23307910 / 9108458798

Teachers/ Professors

SIMSRC Sapthagiri Institute of Medical Science & Research Center | G D Group

SAPTHAGIRI INSTITUTE OF MEDICAL SCIENCE & RESEARCH CENTRE BENGALURU

#15, Chikkasandra, Hesarghatta Main Road, Bengaluru-90

Ref: SIMS & RC/PRI/APTS-ADVT/1/2020-21 Date: 30-03-2021

Sapthagiri Institute of Medical Science & Research Centre

Invites applications from eligible candidates for the **posts of Professors, Associate Professors, Assistant Professors & Senior Residents** for the following Departments.

- Anaesthesia
- Dermatology
- General Medicine
- Paediatrics
- Psychiatry
- Radio diagnosis
- Pulmonology
- General Surgery
- OBG
- Ophthalmology
- Orthopaedics
- ENT
- Emergency Medicine
- Physical Medicine & Rehabilitation.

Eligibility : As per NMC/MCI guidelines

Interested may email their CV's along with scanned copies of supporting documents to **principalsimsrc2020@yahoo.com** by mentioning in the subject line.

"Application for the post of ______________________ in the Department of ______________________"

For clarifications, please call : + 91 98862 56888

Last date to receive applications : 15 April 2021

DH DECCAN HERALD | ಪ್ರಜಾವಾಣಿ

JOB CORNER

BOOK MULTI COLUMN JOB ADS ON WEEKDAY + SUNDAY

@ Rs. 750/- pscm

condition apply*

For More Details Contact:
9880856233 | 9731810277
9901641752 | 9845114560 | 9886213331
080- 45557163 | 45557164

BUSINESS

Business Offers

Agents Wanted

WANTED PROMOTERS Dealers Marketing Staff for Unique Healthy Consumer Products Contact: 9448041257

Finance

NRI'S INVESTMENT And Finance Available On Low Interest Against, Properties, Land&Building,Sites, Flats, (Also)Business, Companies Call: 7411265189

PUBLIC NOTICE

PUBLIC NOTICE

Whereas, under the instructions and power given by my client M/s Gowri Enterprises (R.), Lakshmi Krupa, 9th Cross, Vidyanagara, Tumkur, represented by its partners Sri. C.K. Suresh and T.S. Madhu sudhan I am issuing this public Notice. And whereas my client is intending to purchase the schedule property from Smt. Gowriprakash W/o S.B. Shiva prakash, residing at No.201, Palace, 1st Main, Vasantha nagara, Bangalore and Nikhil Prakash S/o S.B. Shivaprakash residing at 1st Main, 5th Block, Kumara park West, Sheshadri puram, Bangalore City.

SCHEDULE: Converted for residential purpose land bearing survey No.43/4, measuring 3 acres 30 guntas, situated at Maralenahalli, Kasaba North hobli, Tumkur taluk, bounded on the East: 40 feet Bugudanahalli Road, West: Donbosco School, North: 40 feet Bugudanahalli Road, South: Donbosco School. Further, my client is intending to get purchase the schedule property in the near future; hence if any person/s having any right, title, interest or objection/s over the schedule property, they may send their objection along with suitable documents for their claim to the above mentioned address within 21 days after publication of this notice, failing which my client will going to purchase and register the schedule property.

Sign/-(K.P. Manjuprakash)
Advocate, No.9, 1st Floor,
Rajmahal Building
Church Circle, Ashoka Road,
Tumkur.

ಫಾರ್ಮ್ ಯುಆರ್‌ಸಿ–2

ಕಾಯ್ದೆಯ ಅಧ್ಯಾಯ 21ರ ಭಾಗ 1ರ ಅಡಿಯಲ್ಲಿ ನೋಂದಣಿ ಕುರಿತಾದ ಜಾಹೀರಾತು ನೀಡುವ ಪ್ರಕಟಣೆ (ಕಂಪನಿಗಳ ಕಾಯ್ದೆ 2013ರ ಸೆಕ್ಷನ್ 374(ಬಿ) ಮತ್ತು ಕಂಪನಿಗಳ ಕಾಯ್ದೆ ನಿಯಮ 4(1) (ನೋಂದಣಿಗೆ ಅಧಿಕೃತಗೊಂಡ) ನಿಯಮಗಳು, 2014)

1. ಈ ಪ್ರಕಟಣೆಯ ಮೂಲಕ ತಿಳಿಸುವುದು ಏನೆಂದರೆ ಕಂಪನಿಗಳ ಕಾಯ್ದೆ 2013ರ ಸೆಕ್ಷನ್ 366ರ ಸಬ್_ಸೆಕ್ಷನ್(2)ರ ಪ್ರಕಾರ ಸದರಿ ಪ್ರಕಟಣೆಯ ಹದಿನೈದು(15)ದಿನಗಳ ನಂತರ, ಆದರೆ ಮೂವತ್ತು(30)ದಿನಗಳ ಅವಧಿ ಮುಗಿಯುವುದರೊಳಗೆ ಡಾಟಾಕಾನ್ ಟೆಕ್ನಾಲಜಿಸ್ ಎಂಬ ಪಾಲುದಾರಿಕೆಯ ಸಂಸ್ಥೆಯನ್ನು ವ್ಯವಹಾರಿಕ ಸಂಸ್ಥೆಯನ್ನಾಗಿ ತನ್ನ ಷೇರುಗಳ ಮೂಲಕ ಕಂಪನಿ ಲಿಮಿಟೆಡ್ ಎಂದು ನೊಂದಾಯಿಸಿಕೊಳ್ಳಲು ಕಂಪನಿಗಳ ಕಾಯ್ದೆ, 2013ರ ಅಧ್ಯಾಯ 21ರ ಭಾಗ 1ರ ಅಡಿಯಲ್ಲಿ ರಿಜಿಸ್ಟ್ರಾರ್, ಸೆಂಟ್ರಲ್, ರಿಜಿಸ್ಟ್ರೇಷನ್ ಸೆಂಟರ್, (ಸಿಆರ್‌ಸಿ) ಭಾರತೀಯ ಕಾರ್ಪೋರೇಟ್ ವ್ಯವಹಾರಗಳ ಸಂಸ್ಥೆ (ಐಐಸಿಎ) ಪ್ಲಾಟ್ ನಂ 6,7 ಮತ್ತು 8 ಸೆಕ್ಟರ್ 5, ಐಎಂಟಿ, ಮಾನೆಸರ್, ಗುರಂಗಾವ್ ಜಿಲ್ಲೆ, ಹರ್ಯಾಣ ಇಂಡಿಯಾ ಪಿನ್ – 122050 ಇವರಿಗೆ ಅರ್ಜಿ ಸಲ್ಲಿಸಲು ಉದ್ದೇಶಿಸಲಾಗಿರುತ್ತದೆ.
2. ಕಂಪನಿಯ ಪ್ರಮುಖ ಉದ್ದೇಶಗಳು ಈ ಕೆಳಗಿನಂತಿರುತ್ತವೆ:
ಎ) ಭಾರತದಲ್ಲಿ ಅಥವಾ ವಿಶ್ವದ ಯಾವುದೇ ಭಾಗದಲ್ಲಿ ವ್ಯಾಪಾರ ಮುಂದುವರಿಯಲು, ಮುದ್ರಕಗಳು, ಪ್ರಕಾಶನ, ಮಾರಾಟ, ವೇರಿಯಬಲ್ ಮುದ್ರಿತ ವಸ್ತುಗಳು, ಸ್ಮಾರ್ಟ್ ಕಾರ್ಡ್‌ಗಳು, ದತ್ತಾಂಶ ಸಂಸ್ಕರಣೆ, ಮಾಹಿತಿ ತಂತ್ರಜ್ಞಾನ, ಸಾಫ್ಟ್‌ವೇರ್ ಸೇವೆಗಳು ಮತ್ತು ಇತರ ಸಂಬಂಧಿತ ಚಟುವಟಿಕೆಗಳನ್ನು ಮುಂದುವರಿಸಲು ಯಾವುದೇ ವಿಷಯದ ಬಗ್ಗೆ ಮುದ್ರಣದಲ್ಲಿ ಮತ್ತು ಮೇಲಿನ ಉದ್ದೇಶಗಳ ಸಾಧನೆಗೆ ಅಗತ್ಯವಾದ ಎಲ್ಲಾ ಸರಕುಗಳು, ಲೇಖನಗಳು ಮತ್ತು ವಸ್ತುಗಳ ವ್ಯವಹಾರ ಮುಂದುವರಿಸಲು.
3. ಪ್ರಸ್ತಾವಿತ ಕಂಪನಿಯ ಡ್ರಾಫ್ಟ್ ಮೆಮೊರೆಂಡಮ್ ಆಂಡ್ ಆರ್ಟಿಕಲ್ಸ್ ಆಫ್ ಅಸೋಸಿಯೇಷನ್ ಪ್ರತಿಯನ್ನು ನಂ 31/10 ಮಾಗಡಿ ಮುಖ್ಯರಸ್ತೆಯ ಎಡಭಾಗ, ಸರಸ್ವತಿ ಕನ್ವೆಂಷನ್ ಸೆಂಟರ್ ಹಿಂಭಾಗ ಬೆಂಗಳೂರು –560079, ಕರ್ನಾಟಕ, ಭಾರತ, ವಿಳಾಸದಲ್ಲಿ ಪರಿಶೀಲಿಸಬಹುದಾಗಿದೆ.
4. ಮುಂದುವರೆದಂತೆ ಈ ಮೂಲಕ ತಿಳಿಸುವುದು ಏನೆಂದರೆ, ಸದರಿ ಉದ್ದೇಶಿತ ಅರ್ಜಿಗೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಗೆ ಆಕ್ಷೇಪಣೆಗಳಿದಲ್ಲಿ, ಅಂತವರು ಸದರಿ ಪ್ರಕಟಣೆಯು ಪ್ರಕಟಗೊಂಡ ದಿನಾಂಕದಿಂದ ಮೂವತ್ತು ದಿನಗಳೊಳಗೆ, ರಿಜಿಸ್ಟ್ರಾರ್, ಸೆಂಟ್ರಲ್, ರಿಜಿಸ್ಟ್ರೇಷನ್ ಸೆಂಟರ್, (ಸಿಆರ್‌ಸಿ) ಭಾರತೀಯ ಕಾರ್ಪೋರೇಟ್ ವ್ಯವಹಾರಗಳ ಸಂಸ್ಥೆ (ಐಐಸಿಎ) ಪ್ಲಾಟ್ ನಂ 6,7 ಮತ್ತು 8 ಸೆಕ್ಟರ್ 5, ಐಎಂಟಿ, ಮಾನೆಸರ್, ಗುರಂಗಾವ್ ಜಿಲ್ಲೆ, ಹರ್ಯಾಣ ಇಂಡಿಯಾ ಪಿನ್ – 122050 ವಿಳಾಸಕ್ಕೆ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಸಲ್ಲಿಸುವುದು ಮತ್ತು ಒಂದು ಪ್ರತಿಯನ್ನು ಕಂಪನಿಯ ನೊಂದಾಯಿತ ಕಛೇರಿ ವಿಳಾಸಕ್ಕೆ ಕೂಡ ಸಲ್ಲಿಸುವುದು.

ಅರ್ಜಿದಾರರ ಹೆಸರುಗಳು
1. ಎಂ ಜೆ ದಿಲೀಪ್ ಕುಮಾರ್
2. ಎಂ ಡಿ ಕವಿತಾ
3. ರಾಘವೇಂದ್ರ ಕುಲಕರ್ಣಿ
4. ನರಸಿಂಹಮೂರ್ತಿ ಜಿ
5. ಸತೀಶ್ ಹೆಚ್ ಇ
6. ಸುರೇಶ್ ಬಿ ಎಸ್
7. ತಂಬಿ ಗೋವಿಂದರಾಜ್ ಶಿಲ್ಪಾ

ದಿನಾಂಕ: 26–03–2021
ಸ್ಥಳ: ಬೆಂಗಳೂರು

PERSONAL

Change of Name

SORIFA BIBI M/o 14872023P- SEP/MT- SORIF SK R/a Batuknathpur, Sonatikuri, Nowda, Murshidabad, West Bengal changed name from SORIFA BIBI to SARIFA BIBI notary KV Mani Bangalore.

ANSER SK F/o 14872023P- SEP/MT- SORIF SK R/a Batuknathpur, Sonatikuri, Nowda, Murshidabad, West Bengal changed name from ANSER SK to ANCHHAR SK notary KV Mani Bangalore.

I, RAMUKARUPPA Swamy S/o. Karuppaswamy R/at. #35, 1st cross, Immadihalli road, Whitefield, Opp. Vinayaka Layout, Bangalore-560066 have changed my name from RAMUKARUPPA SWAMY to K. RAMU STEPHEN vide affidavit dated 27/3/2021 notary A.R. Muneer Ahmed, Bengaluru.

I, SANDEEP.B.S (Balekadru Suryanarayana Sandeep in Passport) S/o.B.S.Suryanarayana, R/a.45/1,18th Cross, Malleswaram, Bengaluru-560055 have changed my name as SANDEEP MADHYASTHA vide affidavit Dated 26-03-2021 before Notary B.R.Shashikala, Bangalore

REAL ESTATE SELLING

Flat

Bommanahalli

LUXURY-APARTMENT FOR Sale. 3 BHK with attached bathroom. 1800 Sft + 1 Car Park & all amenities in Roopena Agrahara, Bommanahalli Ph: 9391024959, 7710878007

Farm House/ Land/ Resorts

HAL And Around

THREE 30X46 sqft lot Fully developed location Rs 9999/- sqft contact on WhatsApp +15127962388

House

Jayanagar

JAYANAGAR 3RD Block. For sale Residential Property built in 2000 sqft. Buyers only. Contact 9740012683.

Industrial & Factory

Hosur Road

INDUSTRIAL CONVERTED Land Measuring over 1.35 acres at Chandapura, On Hosur Main Road, Near Narayana Hrudalayala,is available for immediate sale. Contact: 07090186448

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

GM-Advertisement

केन्द्रीय विद्यालय संगठन (मुख्य)
18, संस्थागत क्षेत्र, शहीदजीत सिंह मार्ग, नई दिल्ली-110016
KENDRIYA VIDYALAYA SANGATHAN (HQ)
18, INSTITUTIONAL AREA, SHAHEED JEET SINGH MARG, NEW DELHI-110016
दूरभाष /Tel-26858570, फैक्स /FAX-26514179

प्रवेश सूचना - 2021-22

शैक्षणिक सत्र 2021-22 के लिए केंद्रीय विद्यालयों में कक्षा एक में प्रवेश के लिए ऑनलाइन पंजीकरण दिनांक 01.04.2021 प्रातः 10:00 बजे से दिनांक 19.04.2021 सांय 7:00 बजे तक किया जा सकेगा। प्रवेश संबन्धित विवरण वैबसाइट और Android मोबाइल ऐप दोनों के माध्यम से https://kvsonlineadmission.kvs.gov.in से प्राप्त किया जा सकता है।

शैक्षणिक सत्र 2021-22 में कक्षा 1 में ऑनलाइन प्रवेश के लिए आधिकारिक Android मोबाइल ऐप https://kvsonlineadmission.kvs.gov.in/apps/ पर उपलब्ध है। ऐप डाउनलोड करने और इन्स्टाल करने के निर्देश उपरोक्त URL पर उपलब्ध होंगे। अभिभावकों से अनुरोध है कि वे पोर्टल और ऐप का उपयोग करने से पहले निर्देशों का सावधानी से पालन करें।

कक्षा दो एवं दो से ऊपर की कक्षाओं में स्थान रिक्त होने पर ही प्रवेश के लिए पंजीकरण दिनांक 08.04.2021 प्रातः 8:00 बजे से दिनांक 15.04.2021 साँय 4:00 बजे तक (ऑफलाइन मोड) द्वारा किया जा सकेगा।

के.वि.सं. वैबसाइट (https://kvsangathan.nic.in) पर उपलब्ध समय सारिणी के अनुसार कक्षा XI के लिए आवेदन प्रपत्र संबन्धित विद्यालय की वैबसाइट पर डाउनलोड हेतु उपलब्ध होगा।

सभी कक्षाओं के लिए आयु की गणना 31.03.2021 से होगी। कक्षाओं में सीटों का आरक्षण के.वि.सं. के प्रवेश दिशा-निर्देश के अनुसार किया जाएगा (https://kvsangathan.nic.in) । इस संबंध में अधिक जानकारी के लिए अभिभावक संबन्धित केन्द्रीय विद्यालय/मुख्यालय की वैबसाइट देखें।

वर्तमान में COVID-19 की परिस्थितियों को ध्यान में रखते हुए सक्षम अधिकारी (केंद्र/राज्य/स्थानीय) द्वारा जारी स्वास्थ्य संबंधी निर्देशों की अनुपालना में अभिभावकों से अनुरोध है कि वे विद्यालय में जाकर भीड़ एकत्रित न करें। प्रवेश संबंधी सभी सूचनाओं की जानकारी, पंजीकरण प्रपत्र प्राप्त करने के लिए विद्यालय/मुख्यालय की वैबसाइट निरंतर देखें । कक्षा दो एवं दो से ऊपर की कक्षाओं के लिए पूर्णतया भरा हुआ पंजीकरण प्रपत्र स्कैन कर संबन्धित विद्यालय की ई मेल पर प्रेषित करें।

प्राचार्य द्वारा विद्यालय में बुलाए जाने पर निर्धारित समय अंतराल में ही प्रवेश प्रभारी/प्राचार्य से संपर्क करें।

केन्द्रीय विद्यालय संगठन (मुख्य)
18, संस्थागत क्षेत्र, शहीदजीत सिंह मार्ग, नई दिल्ली-110016
KENDRIYA VIDYALAYA SANGATHAN (HQ)
18, INSTITUTIONAL AREA, SHAHEED JEET SINGH MARG, NEW DELHI-110016
दूरभाष /Tel-26858570, फैक्स /FAX-26514179

Admission Notice: 2021-2022

Online Registration for Admission to Class I in Kendriya Vidyalayas for the Academic Year 2021-2022 will commence at 10:00 am on 01.04.2021 and will close at 7:00 pm on 19.04.2021. The Admission details can be obtained through website **https://kvsonlineadmission.kvs.gov.in** and also through Android Mobile App.

The official Android Mobile App for KVS Online Admission for Class I for the academic year 2021-2022 and instructions for downloading and installing the App will be available at **https://kvsonlineadmission.kvs.gov.in/apps/** The app will be available at the above URL and also at the Google Play Store. Parents are requested to go through the instructions for using the portal and mobile app carefully before using them.

Registration for Class II and above will be done from 08.04.2021, 8:00 am to 15.04.2021 upto 4:00 pm if vacancies exist (in offline mode).

For Class XI, Registration forms may be downloaded from Vidyalaya Website as per the schedule for admission 2021-2022 available on KVS(HQ) Website **(https://kvsangathan.nic.in)**

Reckoning of age for all Classes shall be as on 31.03.2021. Reservation of seats will be as per KVS Admission Guideline available on the Website **(https://kvsangathan.nic.in)**

Under present situation of COVID-19, the directions issued by Competent Authority (Central/State/Local) are to be followed. Accordingly, the parents are requested not to visit Kendriya Vidyalayas physically to avoid gathering. All information regarding Admission, Registration form will be available on Vidyalaya/KVS (HQ) website under common document for download.

For Class II and above, kindly fill the Registration form, Scan it and send it to concerned KV through email only.

Contact Principal/Admission In-charge only when called in the given time slot.

ಪೌರಕಾರ್ಮಿಕರ ಅಳಲು

'ಪೊರಕೆ ಖರೀದಿಗೂ ಹಣ ನೀಡುವುದಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೊರೊನಾದಿಂದ ಪರಿಸ್ಥಿತಿ ಬಿಗಡಾಯಿಸಿದ್ದಾಗ ಜನರು ಯಾರೂ ಮನೆಯಿಂದ ಹೊರಬರಲಿಲ್ಲ. ಆಗಲೂ ಧೃತಿಗೆಡದೆ ಬೆಂಗಳೂರಿನ ಕಸ ಸ್ವಚ್ಛ ಮಾಡಿದವರು ಪೌರಕಾರ್ಮಿಕರು. ಮಾಡಿದ ಕೆಲಸಕ್ಕೆ ನಮಗೆ ಸರಿಯಾದ ಸಂಬಳ ಇಲ್ಲ. ಕೆಲಸವನ್ನೂ ಕಾಯಂ ಮಾಡುತ್ತಿಲ್ಲ. ಪೊರಕೆ ಖರೀದಿಗೂ ಹಣ ನೀಡುವುದಿಲ್ಲ. ನಮ್ಮ ಹಣದಿಂದಲೇ ಪೊರಕೆ ಖರೀದಿಸುತ್ತೇವೆ'.

ಬಿಬಿಎಂಪಿ ಪೌರಕಾರ್ಮಿಕರ ಸಂಘದ ಜಂಟಿ ಕಾರ್ಯದರ್ಶಿ ಗಂಗಮ್ಮ ಅವರ ನೋವಿನ ಮಾತುಗಳಿವು.

'ಸಾರ್ವಜನಿಕ ಆರೋಗ್ಯ, ನೈರ್ಮಲ್ಯ ಮತ್ತು ತ್ಯಾಜ್ಯ ನಿರ್ವಹಣೆ ಒಂದು ವಿಕೇಂದ್ರೀಕೃತ ವಿಧಾನ' ಕುರಿತು ಎನ್ವಿರಾನ್‌ಮೆಂಟ್ ಸಪೋರ್ಟ್ ಗ್ರೂಪ್ (ಇಎಸ್‌ಜಿ) ಸೋಮವಾರ ಆಯೋಜಿಸಿದ್ದ ವೆಬಿನಾರ್‌ನಲ್ಲಿ ಅವರು ಪೌರಕಾರ್ಮಿಕರ ಸಮಸ್ಯೆಗಳನ್ನು ತೆರೆದಿಟ್ಟರು.

'ತಾವು ಬಿಸಾಡುವ ಕಸ ಸ್ವಚ್ಛಗೊಳಿಸಲು ಪೌರಕಾರ್ಮಿಕರು ಬೇಕಿತ್ತು. ಆದರೆ, ಅವರನ್ನು ದೂರದಿಂದಲೇ ಮಾತನಾಡಿಸುವ ಮನಸ್ಥಿತಿ ನಗರದ ನಿವಾಸಿಗಳಲ್ಲಿದೆ. ಒಳ್ಳೆಯ ಬಟ್ಟೆ ಧರಿಸಿದವರಿಗೆ ಸಿಗುವ ಗೌರವ ಪೌರಕಾರ್ಮಿಕರಿಗೆ ಸಿಗುತ್ತಿಲ್ಲ. ಇಂತಹ ಸಂಕಟಗಳ ಮಧ್ಯೆ ಕೆಲಸ ಮಾಡಿದರೂ ಜೀವನ ನಿರ್ವಹಣೆಗೆ ಅಗತ್ಯವಿರುವಷ್ಟೂ ಸಂಬಳ ಸಿಗುತ್ತಿಲ್ಲ. ಕೆಲಸ ಕಾಯಂ ಮಾಡುವಂತೆ ಎಷ್ಟೇ ಹೋರಾಟ ಮಾಡಿದರೂ ಅದಕ್ಕೆ ಸ್ಪಂದನೆ ಸಿಕ್ಕಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

'ಸಂಬಂಧಪಟ್ಟ ಅಧಿಕಾರಿಗಳ ಬಳಿ ನಮ್ಮ ಸಮಸ್ಯೆಗಳ ಬಗ್ಗೆ ಧ್ವನಿ ಎತ್ತಿದರೆ, ಕೆಲಸದಿಂದ ತೆಗೆಯುವುದಾಗಿ ಹೆದರಿಸುತ್ತಾರೆ. ನಾವೆಲ್ಲ ಒಂದು ದಿನ ಕಸ ತೆರವು ಮಾಡದಿದ್ದರೆ ಬೆಂಗಳೂರಿನ ಸ್ಥಿತಿ ಹೇಗಿರುತ್ತದೆ ಎಂದು ನಗರದ ನಿವಾಸಿಗಳೆಲ್ಲರೂ ಆತ್ಮಾವಲೋಕನ ಮಾಡಿಕೊಳ್ಳಬೇಕು' ಎಂದರು.

ಮಾವಳ್ಳಿಪುರದ ದಲಿತ ಸಂಘರ್ಷ ಸಮಿತಿಯ ಶ್ರೀನಿವಾಸ್, 'ಕಸದ ಮಾಫಿಯಾದಿಂದ ಬೆಂಗಳೂರು ನಾಶವಾಗುತ್ತಿದೆ. ಮಾವಳ್ಳಿಪುರ, ಮಂಡೂರು ಸೇರಿದಂತೆ ನಗರದ ಹಲವೆಡೆ ಬಿಬಿಎಂಪಿಯು ಕಸವನ್ನು ಅವೈಜ್ಞಾನಿಕ ರೀತಿಯಲ್ಲಿ ವಿಲೇವಾರಿ ಮಾಡುತ್ತಿದೆ. ಇದರಿಂದ ಸ್ಥಳೀಯರು ಅನಾರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಹಲವರು ಪ್ರಾಣವನ್ನೂ ಕಳೆದುಕೊಂಡರು' ಎಂದು ದೂರಿದರು.

ಇಎಸ್‌ಜಿ ಸಂಸ್ಥೆಯ ಟ್ರಸ್ಟಿ ಶಿರ್ಡಿ ಪ್ರಸಾದ್ ಟೇಕೂರ್, ಡ್ರೈಲಿ ಡಂಪ್ ಸಂಸ್ಥೆಯ ಸ್ಥಾಪಕಿ ಪೂನಂ ಬಿರ್ ಕಸ್ತೂರಿ ಮಾತನಾಡಿದರು.

ಮುಖ್ಯಾಂಶಗಳು

- ಕೆಲಸ ಕಾಯಂಗೊಳಿಸುವಂತೆ ಪೌರಕಾರ್ಮಿಕರ ಒತ್ತಾಯ
- ಸಮಸ್ಯೆ ಹೇಳಿಕೊಂಡರೆ ಕೆಲಸದಿಂದ ತೆಗೆಯುತ್ತಾರೆ– ಪೌರಕಾರ್ಮಿಕರ ಅಳಲು
- 'ನಮ್ಮೊಂದಿಗೂ ಗೌರವದಿಂದ ವರ್ತಿಸಿ'

'₹ 1500 ಕೋಟಿ ಏನಾಯಿತು'

'ಕಸ ವಿಲೇವಾರಿಗೆ ಬಿಬಿಎಂಪಿ ₹1,500 ಕೋಟಿ ಖರ್ಚು ಮಾಡುತ್ತಿದೆ ಎನ್ನುತ್ತಾರೆ. ಆದರೆ, ಇಷ್ಟು ದೊಡ್ಡ ಮೊತ್ತ ನಿಜಕ್ಕೂ ಏನಾಗಿದೆ ಎಂದೇ ತಿಳಿಯುತ್ತಿಲ್ಲ' ಎಂದು ಶ್ರೀನಿವಾಸ್ ಹೇಳಿದರು.

'ಜಲಮೂಲಗಳು ಕಲುಷಿತಗೊಂಡು ವಿಷದ ರೂಪ ಪಡೆದಿವೆ. ಇದಕ್ಕೆ ಕಾರಣವಾಗಿರುವ ಸಂಸ್ಥೆಗಳ ಮೇಲೆ ಯಾವುದೇ ಕ್ರಮ ಸಾಧ್ಯವಾಗಿಲ್ಲ. ಹಸಿರು ನ್ಯಾಯಮಂಡಳಿಯ ಆದೇಶಗಳು ಅನುಷ್ಠಾನಗೊಳ್ಳದೆ, ಹಾಗೆಯೇ ಉಳಿದಿರುವುದು ಇದಕ್ಕೆಲ್ಲ ಕಾರಣ' ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ಆಲೂರು: ಶಾಂತಿಯುತ ಮತದಾನ

ಪ್ರಜಾವಾಣಿ ವಾರ್ತೆ

ಹೆಸರಘಟ್ಟ: ಆಲೂರು ಗ್ರಾಮ ಪಂಚಾಯಿತಿ ಚುನಾವಣೆಯು ಶಾಂತಿಯುತವಾಗಿ ನಡೆದಿದ್ದು ಶೇಕಡ 75.94 ರಷ್ಟು ಮತದಾನವಾಗಿದೆ. ಸೋಮವಾರ ಬೆಳಿಗ್ಗೆಯಿಂದಲೇ ಮತದಾರರು ಮತ ಕೇಂದ್ರಗಳತ್ತ ಧಾವಿಸಿದರು.

ಹೆಗ್ಗಡದೇವನಪುರ ಗ್ರಾಮದಲ್ಲಿ ಮೂರು, ಆಲೂರು ಮತ್ತು ತಮ್ಮೇನಹಳ್ಳಿ ಗ್ರಾಮದಲ್ಲಿ ತಲಾ ಎರಡು ಮತಕೇಂದ್ರಗಳನ್ನು ತೆರೆಯಲಾಗಿತ್ತು. ಒಟ್ಟು ಏಳು ಮತ ಕೇಂದ್ರಗಳಲ್ಲಿ ಗ್ರಾಮಸ್ಥರು ಶಾಂತಿಯುತವಾಗಿ ಮತ ಚಲಾವಣೆ ಮಾಡಿದರು.

ಇದೇ 31 ರಂದು ಬೆಳಿಗ್ಗೆ 8ರಿಂದ ಮಾದನಾಯಕನಹಳ್ಳಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮತ ಎಣಿಕೆಯಾಗಲಿದ್ದು 33 ಅಭ್ಯರ್ಥಿಗಳ ಭವಿಷ್ಯ ನಿರ್ಧಾರವಾಗಲಿದೆ.

ಜನತಾ ಸೇವಾ ಕೋ ಆಪರೇಟಿವ್ ಬ್ಯಾಂಕ್ ಲಿ.,
ನಂ.14, ರಜತ ಭವನ, 1ನೇ ಮುಖ್ಯರಸ್ತೆ, ಹಕ್ಕ ರಸ್ತೆ,ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು–560104 ದೂರವಾಣಿ: 23300497–41159606 ಫ್ಯಾಕ್ಸ್: 23359600,
Email: vjn@jscbl.com, ಶಾಖೆ: ವಿಜಯನಗರ

ಸ್ವಾಧೀನ ಸೂಚನೆ (ಸ್ಥಿರಾಸ್ತಿಗಳಿಗಾಗಿ) ನಿಯಮ 8(1)



ಶ್ರೀ ನಾಗೇಶ್.ಎಚ್.

ಕೆಳ ಸಹಿದಾರರಾದ ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿ., ಬೆಂಗಳೂರು, ಇದರ ಅಧಿಕಾರ ಹೊಂದಿದ ಅಧಿಕೃತ ಅಧಿಕಾರಿಯಾಗಿದ್ದು, ಸೆಕ್ಯೂರಿಟೈಸೇಶನ್ ಮತ್ತು ರಿಕನ್ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸ್ಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002ರ ಅನ್ವಯ ಮತ್ತು ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002 ನಿಯಮ 3 ಅನ್ನು ಓದಿಕೊಂಡಂತೆ ಪ್ರಕರಣ 13(2)ರ ಅನ್ವಯ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಸದರಿ ತಗಾದೆ ಸೂಚನೆಯನ್ನು ದಿನಾಂಕ 02/01/2021 ರಂದು ಈ ಕೆಳಗೆ ತಿಳಿಸಿರುವ ಮೊಬಲಗು ರೂ. 42,15,254/– (ರೂ. ನಲವತ್ತೇರುಡು ಲಕ್ಷದ ಹದಿನೈದು ಸಾವಿರದ ಇನ್ನೂರ ಐವತ್ತು ನಾಲ್ಕು ಮಾತ್ರ) ಮೊತ್ತವನ್ನು ತಗಾದೆ ಸೂಚನೆ ತಲುಪಿದ 60 ದಿನಗಳ ಒಳಗೆ ಮರುಪಾವತಿ ಮಾಡುವಂತೆ ಸಾಲಗಾರರಾದ ಶ್ರೀ ನಾಗೇಶ್.ಎಚ್. ನಂ. 37, 5ನೇ ಮೈನ್, 2ನೇ ಕ್ರಾಸ್, ಎಸ್.ಜಿ.ಪಾಳ್ಯ ಸಿ.ವಿ. ರಾಮನ್‌ನಗರ, ಬೆಂಗಳೂರು–560093 (ಮುಂದೆ ಸಾಲಗಾರರು ಎಂದು ಓದಿಕೊಳ್ಳುವುದು) ರವರಿಗೆ ಸೂಚಿಸಲಾಗಿತ್ತು.

ಸಾಲಗಾರರು ಸದರಿ ಮೊಬಲಗನ್ನು ಮರುಪಾವತಿಸದೇ ಇರುವುದರಿಂದ ಮತ್ತು ಈ ಕೆಳಗೆ ತಿಳಿಸಲಾದ ಸಾಲಗಾರರು/ಜಾಮೀನುದಾರರು /ಅಡಮಾನದಾರರಿಗೆ ಹಾಗೂ ಸಾರ್ವಜನಿಕರಿಗೆ ಕೆಳಗೆ ವಿವರಿಸಲಾದ ಆಸ್ತಿಯನ್ನು ಈ ಮೇಲೆ ತಿಳಿಸಿದ ಕಾಯಿದೆ ಕಲಂ 13 ಸೆಕ್ಷನ್ (4) ರೊಂದಿಗೆ ನಿಯಮ 8ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಗೆ ವಿವರಿಸಲಾದ ಆಸ್ತಿಯನ್ನು ದಿನಾಂಕ 25/03/2021 ರಂದು ಸ್ವಾಧೀನ ಪಡಿಸಿಕೊಂಡಿರುತ್ತಾರೆ.

ನಿರ್ದಿಷ್ಟವಾಗಿ ಸಾಲಗಾರರಿಗೆ ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಗೆ ನೀಡುವುದೇನೆಂದರೆ ಯಾರೂ ಕೂಡ ಸದರಿ ಸ್ವತ್ತಿನ ಬಗ್ಗೆ ವ್ಯವಹಾರ ಮಾಡಬಾರದು ಮತ್ತು ಸದರಿ ಸ್ವತ್ತಿನ ಬಗ್ಗೆ ಯಾವುದೇ ವ್ಯವಹಾರ ನಡೆಸಿದ್ದೇ ಆದರೆ ಅದು ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿ., ವಿಜಯನಗರ ಶಾಖೆ ಇವರಿಗೆ ಬರತಕ್ಕ ಬಾಕಿ ರೂ. 42,42,701/– (ರೂ. ನಲವತ್ತೇರುಡು ಲಕ್ಷದ ನಲವತ್ತೇರುಡು ಸಾವಿರದ ಏಳುನೂರ ಒಂದು ಮಾತ್ರ) ದಿನಾಂಕ 23/03/2021 ಕ್ಕೆ ಇದ್ದಂತೆ ಜೊತೆಗೆ ಈ ದಿನಾಂಕದ ನಂತರ ಮರುಪಾವತಿಸಲಾದ ಮೊತ್ತ ಯಾವುದಾದರೂ ಇದ್ದಲ್ಲಿ ಅದನ್ನು ಕಳೆದು ಬಡ್ಡಿ ಮತ್ತು ಇತರೆ ಶುಲ್ಕಗಳ ಪಾವತಿಗೆ ಒಳಪಟ್ಟಿರುತ್ತದೆ.

ಸಾಲಕ್ಕೆ ಅಡಮಾನ ಮಾಡಿರುವ ಸ್ಥಿರಾಸ್ತಿಯ ವಿವರ

ಸ್ಥಿರಾಸ್ಥಿ ಸಂಖ್ಯೆ ನಂ. 37. ಹಳೆ ಖಾತಾ ನಂ.230, ಬಿಬಿಎಂಪಿ. ಖಾತಾ ನಂ/ 37/230, ಸದ್ಗುಂಟೆ ಪಾಳ್ಯದ ಜೋಗು ಪಾಳ್ಯದಲ್ಲಿರುವ ಭೈರಸಂದ್ರ ದಾಖಲೆ ಹೊಂದಿರುವ ಕೆ.ಆರ್.ಪುರಂ. ಹೋಬಳಿ, ಪೂರ್ವ ತಾ: ಹೊಸ ಬಿಬಿಎಂಪಿ ವಾರ್ಡ ನಂ 83. ಸಿ.ವಿ ರಾಮನ್ ನಗರ. ಪಿ.ಐ.ಡಿ ಸಂಖ್ಯೆ 83–103–37–230 ಬೆಂಗಳೂರು. ಪೂರ್ವ–ಪಶ್ಚಿಮ: 30.00 ಅಡಿಗಳು ಉತ್ತರ–ದಕ್ಷಿಣಕ್ಕೆ, 40.00.ಅಡಿಗಳು

ಚೆಕ್ಕುಬಂದಿ: ಪೂರ್ವಕ್ಕೆ : ಶ್ರೀ ಮುರುಗನ್‌ರವರಿಗೆ ಸೇರಿದ ಸ್ವತ್ತು, ಪಶ್ಚಿಮಕ್ಕೆ: ಶ್ರೀಮತಿ ರತ್ನಮ್ಮರವರಿಗೆ ಸೇರಿದ ಸ್ವತ್ತು, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಶ್ರೀ ಚೌಡಪ್ಪರವರಿಗೆ ಸೇರಿದ ಸ್ವತ್ತು

ಸಹಿ/– ಅಧಿಕೃತ ಅಧಿಕಾರಿ
ಜನತಾ ಸೇವಾ ಕೋ ಆಪರೇಟಿವ್ ಬ್ಯಾಂಕ್ ಲಿ.,

ಸ್ಥಳ : ಬೆಂಗಳೂರು
ದಿನಾಂಕ : 25/03/2021

ಚಿನ್ನ ಅಡವಿಟ್ಟುಕೊಂಡು ಪರಾರಿಯಾಗಿದ್ದವನ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಾಭರಣ ಅಡವಿಟ್ಟುಕೊಂಡು ಅಂಗಡಿಗೆ ಬೀಗ ಹಾಕಿ ಪರಾರಿಯಾಗಿದ್ದ ಆರೋಪಿ ನೀಲಮ್ ಕುಮಾರ್ (38) ಅವರನ್ನು ಕುಮಾರಸ್ವಾಮಿ ಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಯಲಚೇನಹಳ್ಳಿ ನಿವಾಸಿ ನೀಲಮ್ ಕುಮಾರ್, ಚಿನ್ನಾಭರಣ ಮಳಿಗೆ ಇಟ್ಟುಕೊಂಡಿದ್ದರು. ಅವರ ಬಳಿ ಮಹಿಳೆಯರು ಆಭರಣ ಅಡವಿಟ್ಟು ಹಣ ಪಡೆದಿದ್ದರು. ಹಣ ಮರಳಿಸಿ ಆಭರಣ ಹಿಂಪಡೆಯಲು ಬಂದಾಗ ಮಳಿಗೆಯೇ ಇರಲಿಲ್ಲ. ಈ ಬಗ್ಗೆ ಭಾಗ್ಯಲಕ್ಷ್ಮಿ ಎಂಬುವರು ಠಾಣೆಗೆ ದೂರು ನೀಡಿದ್ದರು' ಎಂದು ಪೊಲೀಸರು ಹೇಳಿದ್ದಾರೆ.

'ತಲೆಮರೆಸಿಕೊಂಡು ಓಡಾಡುತ್ತಿದ್ದ ಆರೋಪಿಯನ್ನು ಇತ್ತೀಚೆಗೆ ಬಂಧಿಸಲಾಗಿದೆ. ಲಾಕ್‌ಡೌನ್ ಜಾರಿಯಾದಾಗ ಆರ್ಥಿಕವಾಗಿ ನಷ್ಟ ಅನುಭವಿಸಿದ್ದ ನೀಲಮ್, ಯಾರಿಗೂ ಮಾಹಿತಿ ನೀಡದೇ ಮಳಿಗೆಗೆ ಬೀಗ ಹಾಕಿಕೊಂಡು ಹೋಗಿದ್ದರು. ಈ ಬಗ್ಗೆ ಅವರೇ ಹೇಳಿಕೆ ನೀಡಿದ್ದಾರೆ' ಎಂದೂ ಪೊಲೀಸರು ತಿಳಿಸಿದರು.

ಕೋವಿಡ್: ಮನೆ ಆರೈಕೆ ವೇಳೆ ಸಮಸ್ಯೆ ಉಲ್ಬಣ

• ವರುಣ್ ಹೆಗಡೆ

ಬೆಂಗಳೂರು: ನಗರದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಳವಾಗುವ ಜತೆಗೆ ಮನೆ ಆರೈಕೆಗೆ ಒಳಪಟ್ಟ ಸೋಂಕಿತರಲ್ಲಿ ಶೇ 18.5ರಷ್ಟು ಮಂದಿಗೆ ಸಮಸ್ಯೆ ಉಲ್ಬಣಿಸಿದೆ. ಇದರಿಂದಾಗಿ, ಮನೆಯಲ್ಲೇ ಆರೈಕೆಗೆ ಒಳಗಾಗುತ್ತಿರುವವರು ಕೋವಿಡ್ ಆರೈಕೆ ಕೇಂದ್ರ ಹಾಗೂ ಆಸ್ಪತ್ರೆಗಳ ಕಡೆ ಮುಖ ಮಾಡುತ್ತಿದ್ದಾರೆ.

ಕೋವಿಡ್ ಸೋಂಕಿತರಲ್ಲಿ ಬಹುತೇಕರು ಮನೆಯಲ್ಲೇ ಆರೈಕೆಗೆ ಒಳಪಡುತ್ತಿದ್ದಾರೆ. ಹೀಗಾಗಿ, ಸದ್ಯ 15,000ಕ್ಕೂ ಅಧಿಕ ಸಕ್ರಿಯ ಪ್ರಕರಣಗಳಿದ್ದರೂ ಶೇ 99.4ರಷ್ಟು ಸೋಂಕಿತರಲ್ಲಿ ಲಕ್ಷಣಗಳು ಬಹಿರಂಗವಾಗಿ ಗೋಚರಿಸಿಲ್ಲ. ಮನೆ ಆರೈಕೆಗೆ ಒಳಪಡುವವರು ಆರೋಗ್ಯದ ಬಗ್ಗೆ ಸರಿಯಾಗಿ ಕಾಳಜಿ ವಹಿಸದ ಹಾಗೂ

ಸಾರಿ ಪ್ರಕರಣಗಳು ಹೆಚ್ಚಳವಾಗುತ್ತಿದೆ. ಎಲ್ಲರಿಗೂ ಕೋವಿಡ್ ಪರೀಕ್ಷೆ ಮಾಡಲಾಗುತ್ತಿದೆ. ಶೇ 4- ಶೇ 5ರಷ್ಟು ಮಂದಿಗೆ ಸೋಂಕು ದೃಢಪಡುತ್ತಿದೆ.

ಡಾ.ಸಿ. ನಾಗರಾಜ್, ರಾಜೀವ್ ಗಾಂಧಿ ಎದೆರೋಗಗಳ ಆಸ್ಪತ್ರೆ ನಿರ್ದೇಶಕ

ವೈದ್ಯರನ್ನು ಸಂಪರ್ಕಿಸದ ಪರಿಣಾಮ ಕೆಲವರಲ್ಲಿ ಗಂಭೀರ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆ. ಇದರಿಂದಾಗಿ ತೀವ್ರ ನಿಗಾ ಘಟಕಕ್ಕೆ (ಐಸಿಯು) ದಾಖಲಾಗುವವರ ಸಂಖ್ಯೆ ಕೂಡ ಹೆಚ್ಚುತ್ತಿದ್ದು, ಸದ್ಯ 70ಕ್ಕೂ ಅಧಿಕ ಮಂದಿ ಐಸಿಯುನಲ್ಲಿ ಇದ್ದಾರೆ.

ಸದ್ಯ 60 ವರ್ಷದೊಳಗಿನವರಿಗೆ ಮಾತ್ರ ಮನೆ ಆರೈಕೆಗೆ ಅವಕಾಶ ನೀಡಲಾಗುತ್ತಿದೆ. ನಿಯಮದ ಪ್ರಕಾರ ಈ ವ್ಯವಸ್ಥೆಯಡಿ ಆರೈಕೆಗೆ ಒಳಪಡಲು ಮನೆಯಲ್ಲಿ ಉತ್ತಮ ಗಾಳಿ-ಬೆಳಕಿನ ವ್ಯವಸ್ಥೆ, ಪ್ರತ್ಯೇಕ ಕೊಠಡಿ, ಶೌಚಾಲಯ ಸೇರಿದಂತೆ ವಿವಿಧ ಸೌಕರ್ಯಗಳು ಇರಬೇಕಿದೆ. ವೈದ್ಯಾಧಿಕಾರಿಗಳು ಸೋಂಕಿತ ವ್ಯಕ್ತಿಯನ್ನು ತಪಾಸಣೆ ನಡೆಸಿ, ಅನುಮತಿ ನೀಡಬೇಕಿದೆ. ರಕ್ತದಲ್ಲಿನ ಆಮ್ಲಜನಕ ಪ್ರಮಾಣ ಸೇರಿದಂತೆ ಆರೋಗ್ಯಕ್ಕೆ ಸಂಬಂಧಿಸಿದ ವಿವಿಧ ಪರೀಕ್ಷೆಗಳನ್ನು ಪ್ರತಿನಿತ್ಯ ಮಾಡಿಕೊಂಡು, ವೈದ್ಯರ ಜತೆಗೆ ಸಮಾಲೋಚನೆ ನಡೆಸಬೇಕು. ಆದರೆ, ಈ ಪ್ರಕ್ರಿಯೆ ಹಾಗೂ ನಿಯಮಗಳು ಕಟ್ಟುನಿಟ್ಟಾಗಿ ಪಾಲನೆಯಾಗದ ಪರಿಣಾಮ ಅವರ ಜತೆಗೆ ಕುಟುಂಬದ ಸದಸ್ಯರಿಗೆ ಕೂಡ ಸೋಂಕು ಅಪಾಯವನ್ನು ತಂದೊಡ್ಡುವ ಸಾಧ್ಯತೆಗಳ ಬಗ್ಗೆ ವೈದ್ಯರು ಕಳವಳ ವ್ಯಕ್ತಪಡಿಸಿದ್ದಾರೆ.

ಪ್ರಜಾವಾಣಿ ವಿಶೇಷ

ಸಾರಿ ಪ್ರಕರಣ ಹೆಚ್ಚಳ: ನಗರದಲ್ಲಿ ತೀವ್ರ ಉಸಿರಾಟದ ಸಮಸ್ಯೆಯ (ಸಾರಿ) ಕಾರಣ ಆಸ್ಪತ್ರೆಗೆ ದಾಖಲಾಗುವವರ ಸಂಖ್ಯೆಯಲ್ಲಿ ಮತ್ತೆ ಏರಿಕೆ ಕಂಡಿದೆ. ಕೊರೊನಾ ಸೋಂಕು ಕಾಣಿಸಿಕೊಂಡ ಪ್ರಾರಂಭಿಕ ತಿಂಗಳಲ್ಲಿ ಸಾರಿ ಮತ್ತು ಶೀತಜ್ವರ ಮಾದರಿಯ ಅನಾರೋಗ್ಯ ಸಮಸ್ಯೆಗೆ (ಐಎಲ್‌ಐ) ಒಳಪಟ್ಟವರಲ್ಲಿ ಶೇ 50ರಷ್ಟು ಮಂದಿ ಕೋವಿಡ್ ಪೀಡಿತರಾಗಿದ್ದರು. ವಾಯುಮಾಲಿನ್ಯ, ವಾತಾವರಣ ಬದಲಾವಣೆ ಸೇರಿದಂತೆ ವಿವಿಧ ಕಾರಣಗಳಿಂದ ಸಾರಿ ಸಮಸ್ಯೆಗೆ ಒಳಗಾಗಿ ಆಸ್ಪತ್ರೆಗೆ ದಾಖಲಾಗುವವರ ಸಂಖ್ಯೆ ಶೇ 4ರಷ್ಟು ಹೆಚ್ಚಳವಾಗಿದೆ. ರಾಜೀವ್ ಗಾಂಧಿ ಎದೆರೋಗಗಳ ಆಸ್ಪತ್ರೆಯಲ್ಲಿ ಸಾರಿ ಕೇಂದ್ರ ನಿರ್ಮಿಸಿ, 150 ಹಾಸಿಗೆಗಳನ್ನು ಮೀಸಲಿಡಲಾಗಿದೆ. ಅಲ್ಲಿ ಕಳೆದ ಒಂದು ವಾರದಿಂದ ಪ್ರತಿನಿತ್ಯ ಸರಾಸರಿ 30ರಿಂದ 40 ಮಂದಿಯನ್ನು ದಾಖಲಿಸಿಕೊಳ್ಳಲಾಗುತ್ತಿದೆ.

‘ಕೋವಿಡ್ ಕಾರಣ ಆಸ್ಪತ್ರೆಗೆ ದಾಖಲಾಗುವವರ ಸಂಖ್ಯೆ ಮತ್ತೆ ಹೆಚ್ಚಳವಾಗಿದೆ. ಈಗ ವರದಿಯಾಗುತ್ತಿರುವ ಬಹುತೇಕ ಪ್ರಕರಣಗಳಲ್ಲಿ ರೋಗದ ಲಕ್ಷಣಗಳು ಅಷ್ಟಾಗಿ ಕಾಣಿಸಿಕೊಳ್ಳುತ್ತಿಲ್ಲ. ಆದರೆ, ಕೆಲವರು ತಡವಾಗಿ ಆಸ್ಪತ್ರೆಗೆ ತೆರಳುತ್ತಿರುವ ಕಾರಣ ಸಮಸ್ಯೆ ಸಂಕೀರ್ಣ ಸ್ವರೂಪ ಪಡೆಯುವ ಸಾಧ್ಯತೆ ಇರುತ್ತದೆ. ಸಾರಿ ಪ್ರಕರಣಗಳು ಕೂಡ ಹೆಚ್ಚಳವಾಗಿದೆ’ ಎಂದು ಬೆಂಗಳೂರು ನಗರ ಜಿಲ್ಲಾ ಶಸ್ತ್ರಚಿಕಿತ್ಸಕ ಡಾ. ಅನ್ಸರ್ ಅಹಮದ್ ತಿಳಿಸಿದರು.

ಸಮಸ್ಯೆ ಎದುರಿಸಿದ ಸೋಂಕಿತರ ವಿವರ (ಕಳೆದ 7 ದಿನಗಳಲ್ಲಿ)

ವಲಯ	ಮನೆಯಿಂದ ಆಸ್ಪತ್ರೆಗೆ ಸ್ಥಳಾಂತರ	ಮನೆ ಆರೈಕೆಗೆ ಒಳಪಟ್ಟವರು
ಬೊಮ್ಮನಹಳ್ಳಿ	242	1,184
ದಾಸರಹಳ್ಳಿ	41	227
ಪೂರ್ವ ವಲಯ	240	1,125
ಮಹದೇವಪುರ	141	1,017
ಆರ್.ಆರ್.ನಗರ	214	703
ದಕ್ಷಿಣ ವಲಯ	332	1347
ಪಶ್ಚಿಮ ವಲಯ	215	699
ಯಲಹಂಕ	138	531

ಇನ್‌ಸ್ಪೆಕ್ಟರ್ ವಿರುದ್ಧ ಅತ್ಯಾಚಾರ ಪ್ರಕರಣ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಸಾಗರದ ನಗರ ಠಾಣೆ ಇನ್‌ಸ್ಪೆಕ್ಟರ್ ಅಶೋಕ್ ಕುಮಾರ್ ವಿರುದ್ಧ ಭದ್ರಾವತಿಯ ಮಹಿಳೆಯೊಬ್ಬರು ಇಲ್ಲಿನ ಮಹಿಳಾ ಠಾಣೆಯಲ್ಲಿ ಅತ್ಯಾಚಾರ ಪ್ರಕರಣ ದಾಖಲಿಸಿದ್ದಾರೆ.

‘ಅಶೋಕ್ ಕುಮಾರ್ ನಾಲ್ಕು ವರ್ಷಗಳಿಂದ ನಿರಂತರವಾಗಿ ನನ್ನ ಮೇಲೆ ಅತ್ಯಾಚಾರ ಎಸಗಿದ್ದಾರೆ. ಭದ್ರಾವತಿ ಗ್ರಾಮಾಂತರ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುವಾಗ ಪರಿಚಯವಾಗಿತ್ತು. ಒಂದು ದಿನ ತಂಪು ಪಾನೀಯದಲ್ಲಿ ಮತ್ತು ಬರುವ ಔಷಧ ಬೆರೆಸಿ ಅತ್ಯಾಚಾರ ಎಸಗಿದ್ದರು. ನಂತರ ಅಶ್ಲೀಲ ಫೋಟೊ, ವಿಡಿಯೊ ತೋರಿಸಿ ಬ್ಲ್ಯಾಕ್‌ಮೇಲ್ ಮಾಡಿ ನನ್ನನ್ನು ಬಳಸಿಕೊಂಡಿದ್ದಾರೆ ಅಲ್ಲದೇ ನನ್ನ ಇಬ್ಬರು ಹೆಣ್ಣುಮಕ್ಕಳ ಮೇಲೂ ಲೈಂಗಿಕ ದೌರ್ಜನ್ಯ ಎಸಗುವುದಾಗಿ ಬೆದರಿಕೆ ಹಾಕಿದ್ದಾರೆ’ ಎಂದು ಮಹಿಳೆ ದೂರಿನಲ್ಲಿ ವಿವರಿಸಿದ್ದಾರೆ.

‘ಮಹಿಳೆ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡಿದ್ದೇವೆ. ತನಿಖೆಯ ನಂತರ ಸತ್ಯಾಸತ್ಯತೆ ತಿಳಿಯಲಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ಎಂ. ಶಾಂತರಾಜು ಅವರು ಪ್ರತಿಕ್ರಿಯಿಸಿದರು.

ಕೋವಿಡ್ ಹೆಚ್ಚಳ: ಪರೀಕ್ಷೆ ಮಾಡಿಸಿಕೊಳ್ಳಲು ಜನ ಹಿಂದೇಟು

ಔಷಧ ಮಳಿಗೆಗಳಿಂದ ಮಾಹಿತಿ ಸಂಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿರುವುದು ಹಾಗೂ ರೋಗ ಲಕ್ಷಣಗಳಿದ್ದರೂ ಜನ ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳಲು ಹಿಂದೇಟು ಹಾಕುತ್ತಿರುವುದು ಬಿಬಿಎಂಪಿಗೆ ತಲೆನೋವಾಗಿ ಪರಿಣಮಿಸಿದೆ.

ಈ ಸವಾಲುಗಳನ್ನು ಎದುರಿಸುವ ಮಾರ್ಗೋಪಾಯಗಳ ಬಗ್ಗೆ ಚರ್ಚಿಸಲು ಬಿಬಿಎಂಪಿ ಆಯುಕ್ತ ಎನ್. ಮಂಜುನಾಥ್ ಪ್ರಸಾದ್ ಅವರು ಅಧಿಕಾರಿಗಳೊಂದಿಗೆ ಸೋಮವಾರ ಸಮಾಲೋಚನಾ ಸಭೆ ನಡೆಸಿದರು. ಕೋವಿಡ್ ಸೋಂಕು ಹರಡುವಿಕೆ ಉಲ್ಬಣಿಸದಂತೆ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ಸೂಕ್ತ ಯೋಜನೆ ರೂಪಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಮರ್ಪಕ ವಿಳಾಸ ಪಡೆಯಿರಿ: ನಗರದ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಜ್ವರ ತಪಾಸಣಾ ಕ್ಲಿನಿಕ್‌ಗಳು, ಕೋವಿಡ್ ಪರೀಕ್ಷೆ ನಡೆಸುವ ಸಂಚಾರ ಕೇಂದ್ರಗಳು ಹಾಗೂ ಇನ್ನಿತರೆ ಆಸ್ಪತ್ರೆಗಳಲ್ಲಿ ವ್ಯಕ್ತಿಗಳಿಂದ ಮೂಗಿನ ದ್ರವ ಸಂಗ್ರಹಿಸುವ ವೇಳೆ ಕಡ್ಡಾಯವಾಗಿ ಅವರ ಮೊಬೈಲ್ ಸಂಖ್ಯೆ, ವಿಳಾಸ ಹಾಗೂ ಪಿನ್ ಕೋಡ್‌ಗಳನ್ನು ನಿಖರವಾಗಿ ಸಂಗ್ರಹ ಮಾಡಿಕೊಳ್ಳಬೇಕು. ಇದರಲ್ಲಿ ಲೋಪ ಕಂಡುಬಂದರೆ ಸಂಬಂಧಿಸಿದ ವೈದ್ಯಾಧಿಕಾರಿಗಳನ್ನು ಅಮಾನತು ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದರು.

‘ಶೇ 85 ಮಂದಿ ಮನೆಯಲ್ಲೇ ಪ್ರತ್ಯೇಕವಾಸ’

‘ನಗರದಲ್ಲಿ ಕೋವಿಡ್ ದೃಢಪಟ್ಟ ಶೇ 85 ಮಂದಿ ಮನೆಯಲ್ಲೇ ಪ್ರತ್ಯೇಕ ವಾಸದಲ್ಲಿದ್ದಾರೆ. ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿಯು ಇವರ ಮೇಲೆ ನಿಗಾವಹಿಸಬೇಕು. ಆಗಾಗ ಅವರ ಆರೋಗ್ಯ ವಿಚಾರಿಸಬೇಕು. 60 ವರ್ಷ ಮೇಲಿನವರು ಮನೆಯಲ್ಲೇ ಪ್ರತ್ಯೇಕವಾಸದಲ್ಲಿದ್ದರೆ ಅವರಿಗೆ ಸೂಕ್ತ ಚಿಕಿತ್ಸೆ ನೀಡಬೇಕು. ಏನಾದರೂ ಸಮಸ್ಯೆ ಕಂಡುಬಂದರೆ ಕೂಡಲೇ ಆಸ್ಪತ್ರೆಗೆ ಕರೆದೊಯ್ದು ಉತ್ತಮ ಚಿಕಿತ್ಸೆ ನೀಡಬೇಕು’ ಎಂದೂ ಮಂಜುನಾಥ್ ಪ್ರಸಾದ್ ಸೂಚಿಸಿದರು.

‘ಲಸಿಕೆ ಕೊರತೆ ಇಲ್ಲ’

‘ಬಿಬಿಎಂಪಿ ವ್ಯಾಪ್ತಿಯಲ್ಲಿ ಲಸಿಕೆಗೆ ಕೊರತೆ ಇಲ್ಲ. ಏ.1ರಿಂದ ಹೆಚ್ಚು ಲಸಿಕೆ ನೀಡಲು ಕ್ರಮ ವಹಿಸಬೇಕು. 45 ವರ್ಷ ಮೇಲ್ಪಟ್ಟವರೆಲ್ಲರಿಗೂ ಲಸಿಕೆ ನೀಡಬೇಕು.ಹೆಚ್ಚು ಪ್ರಕರಣಗಳು ಕಂಡುಬರುತ್ತಿರುವ ಕಡೆ ಹೆಚ್ಚು ಲಸಿಕೆ ನೀಡಲು ಮುಂದಾಗಬೇಕು’ ಎಂದು ಆಯುಕ್ತರು ಸೂಚನೆ ನೀಡಿದರು.

ಔಷಧ ಮಳಿಗೆಗಳಿಂದ ಮಾಹಿತಿ ಸಂಗ್ರಹಿಸಿ: ಪಾಲಿಕೆ ವ್ಯಾಪ್ತಿಯ ಆಯಾ ವಾರ್ಡ್‌ಗಳ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮಟ್ಟದಲ್ಲಿ ಬರುವ ಎಲ್ಲ ಔಷಧ ಮಳಿಗೆಗಳಲ್ಲಿ ಕೋವಿಡ್ ಸೋಂಕು ಲಕ್ಷಣಗಳಿಗೆ ಸಂಬಂಧಿಸಿದ ಮಾತ್ರೆಗಳನ್ನು ಖರೀದಿಸಿದವರ ವಿವರಗಳನ್ನು ನೀಡಲು ಸೂಚನೆ ನೀಡಬೇಕು. ಔಷಧ ಮಳಿಗೆಗಳಿಂದ ಪಡೆದ ಮಾಹಿತಿಯನ್ನು ಪ್ರತಿನಿತ್ಯ ಸಂಜೆ ಸಂಗ್ರಹಿಸಿಕೊಂಡು ಅಂತಹವರಿಗೆ ಕೋವಿಡ್ ಪರೀಕ್ಷೆ ಮಾಡಿ ಎಂದು ಸೂಚನೆ ನೀಡಿದರು.

ಪರೀಕ್ಷೆ ಸರಿಯಾಗಿರಲಿ: ರೋಗಲಕ್ಷಣಗಳಿರುವವರು, ಶೀತ ಜ್ವರ ಸಮಸ್ಯೆ (ಐಎಲ್‌ಐ), ತೀವ್ರ ಉಸಿರಾಟದ ತೊಂದರೆ (ಸಾರಿ) ಎದುರಿಸುತ್ತಿರುವವರು. ಅವರ ಜೊತೆ ನೇರ ಅಥವಾ ಪರೋಕ್ಷವಾಗಿ ಸಂಪರ್ಕ ಹೊಂದಿದವರು, ಅಂತರರಾಷ್ಟ್ರೀಯ ಪ್ರಯಾಣಿಕರು, ಹೊರರಾಜ್ಯದಿಂದ ಬರುವ ಪ್ರಯಾಣಿಕರೆಲ್ಲರನ್ನೂ ಪರೀಕ್ಷೆಗೆ ಒಳಪಡಿಸಬೇಕು ಎಂದರು.

7ನೇ ದಿನ ಆರ್‌ಟಿಪಿಸಿಆರ್: ಕೋವಿಡ್ ಪರೀಕ್ಷೆಯಲ್ಲಿ ಸೋಂಕು ದೃಢಪಡದ ಪ್ರಮಾಣಪತ್ರದೊಂದಿಗೆ ನಗರಕ್ಕೆ ಬಂದಿರುವವರ ಪಟ್ಟಿ ಪಡೆದು 7ನೇ ದಿನ ಆರ್.ಟಿ.ಪಿ.ಸಿ.ಆರ್ ಪರೀಕ್ಷೆಯನ್ನು ಕಡ್ಡಾಯವಾಗಿ ಮಾಡಬೇಕು. ಅದೇ ರೀತಿ ಹೊರರಾಜ್ಯಗಳಿಂದ ಬರುವವರಿಗೂ ಪರೀಕ್ಷೆ ಮಾಡಬೇಕು. ಬಸ್ ನಿಲ್ದಾಣ, ಮಾರುಕಟ್ಟೆ, ಮಾಲ್‌ಗಳು, ಮದುವೆ ಮಂಟಪ, ಚಿತ್ರಮಂದಿರ ಸೇರಿದಂತೆ ಜನಸಂದಣಿ ಪ್ರದೇಶಗಳಲ್ಲಿ ಹೆಚ್ಚು ಕೋವಿಡ್ ಪರೀಕ್ಷೆಗಳನ್ನು ನಡೆಸಬೇಕು ಎಂದರು.

ದಿನಕ್ಕೆ ಎರಡು ಬಾರಿ ಮಾದರಿ: ನಗರದಲ್ಲಿ ಐಎಲ್‌ಐ ಹಾಗೂ ಸಾರಿ ಲಕ್ಷಣಗಳಿರುವವರಿಂದ ಸಂಗ್ರಹ ಮಾಡಿದ ಗಂಟಲು ದ್ರವವನ್ನು ದಿನಕ್ಕೆರಡು ಬಾರಿ ಪ್ರಯೋಗಾಲಯಗಳಿಗೆ ಕಳುಹಿಸಿಕೊಡಿ. ಈ ಸಂಬಂಧ ಪ್ರಯೋಗಾಲಯಗಳ ಜೊತೆ ಸಮಾಲೋಚನೆ ನಡೆಸಲು ವಿಶೇಷ ಆಯುಕ್ತರಿಗೆ (ಆರೋಗ್ಯ) ಆಯುಕ್ತರು ಸೂಚನೆ ನೀಡಿದರು.

ಸಂಪರ್ಕ ಪತ್ತೆ ಸರಿಯಾಗಿರಲಿ: ಪಾಲಿಕೆ ವ್ಯಾಪ್ತಿಯಲ್ಲಿ ಕೊರೊನಾ ಸೋಂಕಿತರ ಜೊತೆ ಸಂಪರ್ಕ ಹೊಂದಿದವರ ಪತ್ತೆ (ಕಾಂಟ್ಯಾಕ್ಟ್ ಟ್ರೇಸಿಂಗ್) ಕಾರ್ಯವನ್ನು ವ್ಯವಸ್ಥಿತವಾಗಿ ಯೋಜನೆ ರೂಪಿಸಿಕೊಂಡು ನಡೆಸಬೇಕು. ಒಬ್ಬ ವ್ಯಕ್ತಿಗೆ ಕೋವಿಡ್ ಸೋಂಕು ದೃಢಪಟ್ಟಿದೆ ಎಂಬ ಮಾಹಿತಿ ಲಭ್ಯವಾದ ತಕ್ಷಣ, ಬೂತ್ ಮಟ್ಟದ ಅಧಿಕಾರಿಗಳು ಕೂಡಲೇ ಸ್ಥಳಕ್ಕೆ ಭೇಟಿ ನೀಡಿ ಪ್ರಾಥಮಿಕ ಹಾಗೂ ದ್ವಿತೀಯ ಸಂಪರ್ಕಿತರ ಪಟ್ಟಿಯನ್ನು ಸಂಬಂಧಪಟ್ಟ ಸಹಾಯಕ ಕಂದಾಯ ಅಧಿಕಾರಿಗಳಿಗೆ ನೀಡಬೇಕು ಎಂದರು.

ಬಿಬಿಎಂಪಿ ವಿಶೇಷ ಆಯುಕ್ತ (ಆರೋಗ್ಯ) ರಾಜೇಂದ್ರ ಚೋಳನ್, ಎಲ್ಲ ವಲಯ ಜಂಟಿ ಆಯುಕ್ತರು, ಆರೋಗ್ಯಾಧಿಕಾರಿಗಳು, ಆರೋಗ್ಯ ವೈದ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರದ ಆರೋಗ್ಯಾಧಿಕಾರಿಗಳು ಸಭೆಯಲ್ಲಿ ಸಲಹೆ ನೀಡಿದರು.

ರೆಸ್ಟೋರೆಂಟ್‌ಗಳಲ್ಲಿ ಹೆಚ್ಚುತ್ತಿದೆ ಸೋಂಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಬ್ ಮತ್ತು ರೆಸ್ಟೋರೆಂಟ್ ಸಿಬ್ಬಂದಿಯಲ್ಲಿ ಕೊರೊನಾ ಸೋಂಕಿನ ಪ್ರಕರಣಗಳು ಹೆಚ್ಚುತ್ತಿವೆ. ಭಾನುವಾರ ಪಬ್ ಒಂದನ್ನು ಕ್ಲಸ್ಟರ್ ಎಂದು ಘೋಷಿಸಲಾಗಿದ್ದರೆ, ಸೋಮವಾರ ರೆಸ್ಟೋರೆಂಟ್ ಒಂದರಲ್ಲಿ 11 ಜನರಿಗೆ ಸೋಂಕು ದೃಢಪಟ್ಟಿದ್ದು, ಇದನ್ನು ಕೂಡಾ ಕೋವಿಡ್ ಕ್ಲಸ್ಟರ್ ಎಂದು ಘೋಷಿಸಲಾಗಿದೆ.

ಪೂರ್ವ ವಲಯದ ವಾರ್ಡ್ ಸಂಖ್ಯೆ 80ರ ವ್ಯಾಪ್ತಿಯಲ್ಲಿರುವ ಇಂದಿರಾನಗರದ ರೆಸ್ಟೋರೆಂಟ್ ಒಂದರಲ್ಲಿ 11 ಜನರಿಗೆ ಸೋಂಕು ದೃಢಪಟ್ಟಿದೆ. ಈ ಕ್ಲಸ್ಟರ್‌ನಲ್ಲಿ ಒಟ್ಟು 110 ಜನರಿದ್ದಾರೆ.

‘ಸೋಂಕಿತರ ಪ್ರಾಥಮಿಕ ಸಂಪರ್ಕದಲ್ಲಿದ್ದ 99 ಮಂದಿ ಹಾಗೂ ದ್ವಿತೀಯ ಹಂತದಲ್ಲಿ ಸಂಪರ್ಕಕ್ಕೆ ಬಂದ 119 ಜನರನ್ನು ಪತ್ತೆ ಹಚ್ಚಲಾಗಿದೆ. ಸೋಂಕಿತರು ಸೋಂಕಿನ ಸೌಮ್ಯ ಲಕ್ಷಣ ಹೊಂದಿದ್ದಾರೆ. 11 ಮಂದಿಗೂ ಮನೆಯಲ್ಲೇ ಪ್ರತ್ಯೇಕವಾಸಕ್ಕೆ ವ್ಯವಸ್ಥೆ ಕಲ್ಪಿಸಲಾಗಿದೆ’ ಎಂದು ಬಿಬಿಎಂಪಿ ವೈದ್ಯಾಧಿಕಾರಿಯೊಬ್ಬರು ತಿಳಿಸಿದ್ದಾರೆ.

16 ಜನರಿಗೆ ಸೋಂಕು: ನಗರದ ಉತ್ತರ ಭಾಗದಲ್ಲಿರುವ ಪಬ್‌ವೊಂದರ 16 ಸಿಬ್ಬಂದಿಗೆ ಸೋಂಕು ತಗುಲಿರುವುದು ಭಾನುವಾರ ದೃಢಪಟ್ಟಿದೆ.

‘ಹೋಟೆಲ್, ಪಬ್ ಹಾಗೂ ರೆಸ್ಟೋರೆಂಟ್‌ಗಳಲ್ಲಿ ಪರೀಕ್ಷೆ ನಡೆಸಲಾಗಿತ್ತು. ಮತ್ತಿಕೆರೆಯ ನ್ಯೂ ಬಿಇಎಲ್ ರಸ್ತೆಯಲ್ಲಿರುವ ‘ದಿ ಪಬ್’ನಲ್ಲಿನ ಸಿಬ್ಬಂದಿಯನ್ನೂ ಪರೀಕ್ಷಿಸಿದಾಗ 16 ಮಂದಿಗೆ ಸೋಂಕು ತಗುಲಿರುವುದು ದೃಢಪಟ್ಟಿದೆ. ಈ ಪಬ್‌ನಲ್ಲಿ ಒಟ್ಟು 87 ಜನ ಕೆಲಸ ಮಾಡುತ್ತಿದ್ದಾರೆ. ಸೋಂಕು ದೃಢಪಟ್ಟಿರುವವರಿಗೆ ಸೋಂಕಿನ ಸಾಮಾನ್ಯ ಲಕ್ಷಣಗಳಿಲ್ಲ. ಅವರೆಲ್ಲರೂ ಮನೆಯಲ್ಲೇ ಪ್ರತ್ಯೇಕ ವಾಸದಲ್ಲಿದ್ದಾರೆ’ ಎಂದು ಪಶ್ಚಿಮ ವಲಯದ ಜಂಟಿ ಆಯುಕ್ತ ಎನ್. ಚಿದಾನಂದ ತಿಳಿಸಿದರು.

ಯಲಹಂಕ ಮತ್ತು ದಾಸರಹಳ್ಳಿ ವಲಯದಲ್ಲಿ ಹೆಚ್ಚು ಕ್ಲಸ್ಟರ್‌ಗಳು ನಿರ್ಮಾಣವಾಗಿವೆ. ಪಶ್ಚಿಮ ವಲಯದಲ್ಲಿ ಶೇ 78ರಷ್ಟು ಪ್ರಕರಣಗಳು ವರದಿಯಾಗಿದ್ದು, ಶೇ 21ರಷ್ಟು ಮಂದಿ ಮನೆಯಲ್ಲೇ ಪ್ರತ್ಯೇಕವಾಸದಲ್ಲಿದ್ದಾರೆ.

ನಗರದ ಕೋವಿಡ್ ಪ್ರಕರಣಗಳ ಅಂಕಿ–ಅಂಶ



ಸಾವಿನ ಸಂಖ್ಯೆ ಏರುಗತಿ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್‌ನಿಂದ ಸಾವಿಗೀಡಾಗುತ್ತಿರುವವರ ಪ್ರಮಾಣ ಹೆಚ್ಚಾಗುತ್ತಿದ್ದು, ತೀವ್ರ ನಿಗಾ ಘಟಕಕ್ಕೆ ದಾಖಲಾಗುತ್ತಿರುವವರ ಸಂಖ್ಯೆಯೂ ಜಾಸ್ತಿಯಾಗುತ್ತಿದೆ.

ಕೋವಿಡ್‌ನಿಂದ ಸೋಮವಾರ 16 ಮಂದಿ ಮೃತಪಟ್ಟಿದ್ದು, ಗಂಭೀರ ಆರೋಗ್ಯ ಸಮಸ್ಯೆ ಎದುರಿಸುತ್ತಿರುವ 227 ಮಂದಿಗೆ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಕಳೆದ ಎರಡು ತಿಂಗಳಲ್ಲಿ ಸಾವಿನ ಸಂಖ್ಯೆ 16ಕ್ಕೆ ತಲುಪಿರುವುದು ಇದೇ ಮೊದಲು. ಭಾನುವಾರ 12 ಮಂದಿ ಮೃತಪಟ್ಟಿದ್ದರು.

ರಾಜ್ಯದಲ್ಲಿ ಹೊಸದಾಗಿ 2,792 ಮಂದಿಯಲ್ಲಿ ಸೋಂಕು ದೃಢಪಟ್ಟಿದ್ದು, ಒಟ್ಟಾರೆ ಸೋಂಕಿತರ ಸಂಖ್ಯೆ 9.89 ಲಕ್ಷಕ್ಕೆ ತಲುಪಿದ್ದು, ಈವರೆಗೆ 12,520 ಮಂದಿ ಕೋವಿಡ್‌ನಿಂದ ಸಾವಿಗೀಡಾಗಿದ್ದಾರೆ. ಅದೇ ಹೊತ್ತಿಗೆ, ಗುಣಮುಖರಾಗುವವರ ಸಂಖ್ಯೆಯಲ್ಲಿ ಇಳಿಮುಖವಾಗುತ್ತಿದೆ. ಮಾ.29ರಂದು 1,964 ಮಂದಿ ಮಾತ್ರ ಗುಣಮುಖರಾಗಿ ಆಸ್ಪತ್ರೆಯಿಂದ ಮನೆಗೆ ತೆರಳಿದ್ದು, ಈವರೆಗೆ 9.53 ಲಕ್ಷ ಮಂದಿ ಕೋವಿಡ್‌ನಿಂದ ಮುಕ್ತರಾಗಿದ್ದಾರೆ.

ರಾಜಧಾನಿಯಲ್ಲಿ ಅತಿ ಹೆಚ್ಚು ಅಂದರೆ, 1,742 ಮಂದಿಯಲ್ಲಿ ಸೋಂಕು ಕಾಣಿಸಿಕೊಂಡಿದ್ದು, 9 ಜನ ಮೃತಪಟ್ಟಿದ್ದಾರೆ. ಹಾಸನದಲ್ಲಿ ಮೂವರು, ಮೈಸೂರಿನಲ್ಲಿ ಇಬ್ಬರು ಸಾವಿಗೀಡಾಗಿದ್ದರೆ, ಬೀದರ್ ಮತ್ತು ಮಂಡ್ಯದಲ್ಲಿ ತಲಾ ಒಬ್ಬರು ಕೋವಿಡ್‌ನಿಂದ ಸಾವಿಗೀಡಾಗಿದ್ದಾರೆ.

87,197 ಪರೀಕ್ಷೆ: ಸೋಮವಾರ 87,197 ಮಂದಿಗೆ ಕೋವಿಡ್ ಪರೀಕ್ಷೆ ಮಾಡಲಾಗಿದೆ. ಈ ಪೈಕಿ 4,055 ಮಂದಿ ರ್‍ಯಾಪಿಡ್ ಆ್ಯಂಟಿಜೆನ್ ಪರೀಕ್ಷೆಗೆ ಒಳಗಾಗಿದ್ದರೆ, 83,142 ಮಂದಿ ಆರ್‌ಟಿ ಪಿಸಿಆರ್ ಪರೀಕ್ಷೆ ಮಾಡಿಸಿಕೊಂಡಿದ್ದಾರೆ.

29 ಮಂದಿಯಲ್ಲಿ ಬ್ರಿಟನ್ ಮಾದರಿ ಸೋಂಕು ಪತ್ತೆಯಾಗಿದ್ದರೆ, ಮೂರು ಜನರಲ್ಲಿ ದಕ್ಷಿಣ ಆಫ್ರಿಕಾ ಬಗೆಯ ಕೋವಿಡ್ ಸೋಂಕು ಕಾಣಿಸಿಕೊಂಡಿದೆ ಎಂದು ಆರೋಗ್ಯ ಇಲಾಖೆ ಹೇಳಿದೆ.

56 ಸಾವಿರ ಜನರಿಗೆ ಲಸಿಕೆ



ಲಸಿಕೆ ಅಭಿಯಾನದ 73ನೇ ದಿನವಾದ ಸೋಮವಾರ ಮಧ್ಯಾಹ್ನದವರೆಗೆ ಒಟ್ಟು 56,374 ಮಂದಿ ಲಸಿಕೆ ಪಡೆದುಕೊಂಡಿದ್ದಾರೆ. 45 ವರ್ಷದಿಂದ 59 ವರ್ಷದೊಳಗಿನ 13,854 ಮಂದಿ ಮತ್ತು 60 ವರ್ಷ ಮೇಲ್ಪಟ್ಟ 39,192 ಮಂದಿಗೆ ಮೊದಲ ಡೋಸ್ ಲಸಿಕೆ ನೀಡಲಾಗಿದೆ. ಉಳಿದವರಿಗೆ ಎರಡನೇ ಡೋಸ್ ಕೊಡಲಾಗಿದೆ. ಜನವರಿ 16ರಿಂದ ಈವರೆಗೆ 34.80 ಲಕ್ಷ ಮಂದಿ ಕೋವಿಡ್ ಲಸಿಕೆ ಪಡೆದಿದ್ದಾರೆ ಎಂದು ಆರೋಗ್ಯ ಇಲಾಖೆ ಹೇಳಿದೆ.

ರಾಜ್ಯದಲ್ಲೂ 'ಜಲಶಕ್ತಿ ಅಭಿಯಾನ' ಕಾರ್ಯಕ್ರಮಕ್ಕೆ ಏಪ್ರಿಲ್ 9ರಂದು ಚಾಲನೆ

ಮಳೆ ನೀರು ಹಿಡಿದಿಡಲು ಕೆರೆ, ಕಲ್ಯಾಣಿ ಸಜ್ಜು!

ಪ್ರಜಾವಾಣಿ ವಾರ್ತೆ

ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್‌.ಈಶ್ವರಪ್ಪ ಅವರು ಗಿಡಕ್ಕೆ ನೀರೆರೆಯುವ ಮೂಲಕ 'ಜಲಶಕ್ತಿ' ಅಭಿಯಾನಕ್ಕೆ ಚಾಲನೆ ನೀಡಿದರು. ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷೆ ತಾರಾ ಅನೂರಾಧ, ಗ್ರಾಮೀಣಾಭಿವೃದ್ಧಿ ಇಲಾಖೆ ಆಯುಕ್ತ ಅನಿರುದ್ಧ ಶ್ರವಣ್ ಇದ್ದರು.

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರ 'ಮಳೆ ನೀರು ಹಿಡಿಯಿರಿ' (ಕ್ಯಾಚ್ ದ ರೈನ್) ಸಲಹೆಯನ್ನು ಸಾಕಾರಗೊಳಿಸಲು ಗ್ರಾಮೀಣಾಭಿವೃದ್ಧಿ ಇಲಾಖೆ ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ಬೃಹತ್ ಕಾರ್ಯಕ್ರಮ ಹಮ್ಮಿಕೊಂಡಿದೆ.

ಮುಂಬರುವ ಮುಂಗಾರು ಆರಂಭವಾಗುವುದರೊಳಗೆ ಗ್ರಾಮೀಣ ಪ್ರದೇಶದ ಕೆರೆಗಳು, ಕಲ್ಯಾಣಿಗಳು ಮತ್ತು ಗೋಕಟ್ಟೆಗಳಲ್ಲಿ ತುಂಬಿರುವ ಹೂಳು ತೆಗೆದು ಮಳೆ ನೀರು ಸಂಗ್ರಹಕ್ಕೆ ಸಜ್ಜುಗೊಳಿಸಲು 'ಜಲಶಕ್ತಿ ಅಭಿಯಾನ'ಕ್ಕೆ ಏಪ್ರಿಲ್ 9 ರಂದು ಚಾಲನೆ ನೀಡಲಾಗುವುದು ಎಂದು ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಈ ಯೋಜನೆಯಡಿ ಎಲ್ಲ ಜಿಲ್ಲೆಗಳ ಗ್ರಾಮಾಂತರ ಪ್ರದೇಶಗಳಲ್ಲಿ ಕೆರೆಗಳು, ಕಲ್ಯಾಣಿಗಳು ಮತ್ತು ಗೋಕಟ್ಟೆಗಳನ್ನು ಪುನಶ್ಚೇತನಗೊಳಿಸಲಾಗುವುದು. ಇವೆಲ್ಲ ಕಾಮಗಾರಿಗಳನ್ನು ನರೇಗಾ ಅಡಿಯಲ್ಲಿ ಕೈಗೆತ್ತಿಕೊಳ್ಳಲಾಗುವುದು ಎಂದು ಅವರು ತಿಳಿಸಿದರು.

ಜೂನ್‌ನಲ್ಲಿ ಮೊದಲ ವಾರದೊಳಗೇ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದು. ನರೇಗಾ ಅಡಿ ರಾಜ್ಯಕ್ಕೆ ಅತಿ ಹೆಚ್ಚು ಅಂದರೆ 15 ಕೋಟಿ ಮಾನವ ದಿನಗಳು ಲಭ್ಯವಾಗಿದೆ. ಇದರಿಂದ ಕೇಂದ್ರದಿಂದ ರಾಜ್ಯಕ್ಕೆ ನರೇಗಾ ಅಡಿ ಬರುವ ಮೊತ್ತ ₹800 ಕೋಟಿಯಷ್ಟು ಹೆಚ್ಚಾಗಲಿದೆ ಎಂದು ಈಶ್ವರಪ್ಪ ಹೇಳಿದರು.

ಸುಮಾರು 1,000 ಗ್ರಾಮ ಪಂಚಾಯ್ತಿಗಳ ವ್ಯಾಪ್ತಿಯಲ್ಲಿ ಮಳೆ ನೀರಿನಿಂದ ಕೆರೆಗಳು ಮತ್ತು ಕಲ್ಯಾಣಿಗಳನ್ನು ತುಂಬಿಸುವ ಉದ್ದೇಶದಿಂದ ಈಗಾಗಲೇ ಕ್ರಿಯಾ ಯೋಜನೆ ರೂಪಿಸಲಾಗಿದೆ. ಗೂಗಲ್ ಅರ್ಥ್ ಅಥವಾ ದಿಶಾಂಕ್ ಮೊಬೈಲ್ ಅಪ್ಲಿಕೇಷನ್ ಬಳಸಿಕೊಂಡು ಕೆರೆಗೆ ಹರಿದು ಬರುವ ಕಾಲುವೆ, ಹಳ್ಳಗಳನ್ನು ಗುರುತಿಸಿ ಅವುಗಳನ್ನು ದುರಸ್ತಿಗೊಳಿಸುವುದರ ಜತೆಗೆ ಹೂಳು ತೆಗೆಯಲಾಗುವುದು ಎಂದರು.

ಗ್ರಾಮೀಣ ಪ್ರದೇಶಕ್ಕೆ ಕುಡಿಯುವ ನೀರು

ಬೇಸಿಗೆ ಸಂದರ್ಭದಲ್ಲಿ ಕುಡಿಯುವ ನೀರಿನ ಸಮಸ್ಯೆ ತಪ್ಪಿಸಲು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಎಲ್ಲ ವ್ಯವಸ್ಥೆಯನ್ನು ಮಾಡಿಕೊಳ್ಳಲಾಗಿದೆ ಎಂದು ಈಶ್ವರಪ್ಪ ಹೇಳಿದರು.

ಕಳೆದ ಮೂರು ವರ್ಷಗಳಿಂದ ಬರಗಾಲ ಇರುವ ವಿಧಾನಸಭಾ ಕ್ಷೇತ್ರಗಳಿಗೆ ತಲಾ ₹50 ಲಕ್ಷ, 2 ವರ್ಷಗಳಿಂದ ಬರಗಾಲ ಇರುವ ವಿಧಾನಸಭಾ ಕ್ಷೇತ್ರಗಳಿಗೆ ₹35 ಲಕ್ಷ ಮತ್ತು 1 ವರ್ಷದಿಂದ ಬರ ಇರುವ ವಿಧಾನಸಭಾ ಕ್ಷೇತ್ರಗಳಿಗೆ ತಲಾ ₹25 ಲಕ್ಷ ನೀಡಲಾಗುವುದು ಎಂದು ಅವರು ತಿಳಿಸಿದರು.

ಸುದ್ದಿ 2 ನಿಮಿಷ

ತೋಟಗಾರಿಕೆ ಫಸಲು ಹರಾಜು ಏಪ್ರಿಲ್ 6ಕ್ಕೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯ ಜ್ಞಾನಭಾರತಿ ಆವರಣದಲ್ಲಿನ ಹಲಸು, ತೆಂಗು ಮತ್ತು ಅಡಿಕೆ ಮರಗಳ ಫಸಲನ್ನು ಏ.6ರಂದು ಬಹಿರಂಗ ಹರಾಜು ಹಾಕಲು ವಿಶ್ವವಿದ್ಯಾಲಯ ಮುಂದಾಗಿದೆ.

ಅಂದು ಬೆಳಿಗ್ಗೆ 11.30ಕ್ಕೆ ಸಾರ್ವಜನಿಕ ಬಹಿರಂಗ ಹರಾಜು ಪ್ರಕ್ರಿಯೆ ನಡೆಯಲಿದೆ. ₹3,000 ಠೇವಣಿಯನ್ನು ಕಟ್ಟಿ ಹರಾಜಿನಲ್ಲಿ ಭಾಗವಹಿಸಲು ಅರ್ಹತೆ ಪಡೆಯಬೇಕು. ಭಾಗವಹಿಸುವವರ ಸಂಖ್ಯೆ ಕನಿಷ್ಠ ಮೂರಕ್ಕಿಂತ ಹೆಚ್ಚಿರಬೇಕು ಇಲ್ಲದಿದ್ದಲ್ಲಿ ಹರಾಜನ್ನು ನಿಲ್ಲಿಸಿ, ಮುಂದಿನ ದಿನಾಂಕವನ್ನು ನಿಗದಿ ಪಡಿಸಲಾಗುವುದು ಎಂದು ವಿಶ್ವವಿದ್ಯಾಲಯ ಹೇಳಿದೆ.

ಸಂಪರ್ಕ ವಿಳಾಸ: ತೋಟಗಾರಿಕೆ ಅಧೀಕ್ಷಕರ ಕಚೇರಿ, ತೋಟಗಾರಿಕೆ ಇಲಾಖೆ, (ಜ್ಞಾನಭಾರತಿ ಅಗ್ನಿ ಶಾಮಕ ಠಾಣೆ ಎದುರು) ಬೆಂಗಳೂರು.

'ಗ್ರಾಮೀಣ ಕ್ರೀಡೆಗಳಿಂದ ಆರೋಗ್ಯ'

ರಾಜರಾಜೇಶ್ವರಿ ನಗರ: 'ಸೆಲ್ ಫೋನ್, ಫೇಸ್‌ಬುಕ್, ವಾಟ್ಸ್‌ಆ್ಯಪ್, ಕಂಪ್ಯೂಟರ್‌ನತ್ತ ವಿದ್ಯಾರ್ಥಿಗಳು ಮತ್ತು ಯುವಜನಾಂಗ ಮುಳುಗಿರುವುದರಿಂದ ಗ್ರಾಮೀಣ ಮತ್ತು ದೇಶಿ ಕ್ರೀಡೆಗಳು ಕಣ್ಮರೆಯಾಗುತ್ತಿವೆ' ಎಂದು ಬೆಂಗಳೂರು ಉತ್ತರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಂ.ರಾಜ್ ಕುಮಾರ್ ಕಳವಳ ವ್ಯಕ್ತಪಡಿಸಿದರು.

ಹೆಮ್ಮಿಗೇಪುರದಲ್ಲಿ ಹಮ್ಮಿಕೊಂಡಿದ್ದ ಕಬ್ಬಡಿ ಪಂದ್ಯಾವಳಿ ಉದ್ಘಾಟಿಸಿ ಮಾತನಾಡಿದ ಅವರು, 'ಗ್ರಾಮೀಣ ಸೊಗಡಿನ ಕ್ರೀಡೆಗಳು ಹೆಚ್ಚು ಹೆಚ್ಚಾಗಿ ನಡೆಯಬೇಕು. ದೇಶಿ ಕ್ರೀಡೆಗಳಲ್ಲಿ ಭಾಗವಹಿಸುವುದರಿಂದ ಆರೋಗ್ಯ ವೃದ್ಧಿಯಾಗುತ್ತದೆ' ಎಂದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಮೃತ್ ಗೌಡ, 'ದೇಶಿ ಕ್ರೀಡೆಗಳಿಗೆ ಪ್ರೋತ್ಸಾಹ ನೀಡುವ ಮೂಲಕ ಗ್ರಾಮೀಣ ಸಂಸ್ಕೃತಿಯನ್ನು ಉಳಿಸಿ ಬೆಳಸುವ ಕಾರ್ಯಕ್ಕೆ ಚಾಲನೆ ನೀಡಲಾಗುವುದು' ಎಂದರು.

ವಾರ್ಡ್ ಅಧ್ಯಕ್ಷ ಮೈಲಸಂದ್ರ ಮಂಜುನಾಥ್ ಮಾತನಾಡಿದರು. ಕಾಂಗ್ರೆಸ್ ಮುಖಂಡ ಪಿ.ನಾಗರಾಜು ಅಧ್ಯಕ್ಷತೆ ವಹಿಸಿದ್ದರು. 25 ತಂಡಗಳು ಭಾಗವಹಿಸಿದ್ದವು.

ನಗರದಲ್ಲಿ ಇಂದು

ಕುವೆಂಪು ಗೀತೋತ್ಸವ: ರಾಜ್ಯಮಟ್ಟದ ಗೀತ ಗಾಯನ ಸ್ಪರ್ಧೆ (ಬೆಳಿಗ್ಗೆ 10.30), 'ಕುವೆಂಪು ಸಾಹಿತ್ಯದಲ್ಲಿ ಅಧ್ಯಾತ್ಮ' ಕುರಿತು ಉಪನ್ಯಾಸ–ಗಂಗನಹಳ್ಳಿ ಶಿವಲಿಂಗಯ್ಯ, ಮಧ್ಯಾಹ್ನ 12.30ಕ್ಕೆ ಬಹುಮಾನ ವಿತರಣೆ ಹಾಗೂ ಸಮಾರೋಪ, ಉದ್ಘಾಟನೆ–ಕವಿ ಎಲ್.ಎನ್.ಮುಕುಂದರಾಜ್, ಬಹುಮಾನ ವಿತರಣೆ–ಬಿ.ಎಂ.ಪಟೇಲ್ ಪಾಂಡು, ಅತಿಥಿಗಳು–ಡಿ.ಕೆ.ಕೋದಂಡರಾಮ, ಹೇಮಾ ಪ್ರಸಾದ್, ಅಧ್ಯಕ್ಷತೆ–ಎಂ.ತಿಮ್ಮಯ್ಯ, ಆಯೋಜನೆ–ಕುವೆಂಪು ಕಲಾಕೇಂದ್ರ ಟ್ರಸ್ಟ್, ಸ್ಥಳ–ವಿ.ಎಸ್.ಕೃಷ್ಣ ಅಯ್ಯರ್ ಪದವಿ ಪೂರ್ವ ಕಾಲೇಜು ಸಭಾಂಗಣ, ಶ್ರೀನಿವಾಸ ನಗರ, ಬನಶಂಕರಿ 1ನೇ ಹಂತ

ಎಪಿಎಸ್ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಪಿಯು ಕಾಲೇಜು ವಾರ್ಷಿಕೋತ್ಸವ: ಅತಿಥಿ–ಪ್ರತಿಭಾ ಸೌನಾಶಿಮಠ್, ಎ.ಆರ್. ಆಚಾರ್ಯ, ಕೆ.ಮೋಹನ್ ದೇವ್ ಆಳ್ವ, ಅಧ್ಯಕ್ಷತೆ–ಟಿ.ವಿ.ಮಾರುತಿ, ಆಯೋಜನೆ–ಎಪಿಎಸ್ ಎಜುಕೇಷನ್ ಟ್ರಸ್ಟ್, ಸ್ಥಳ–ಕಾಲೇಜು ಸಭಾಂಗಣ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30

ಸಪ್ತಸ್ವರ ಸಂಗೀತ ಸಂಜೆ: ಉದ್ಘಾಟನೆ–ಬೊಮ್ಮನಹಳ್ಳಿ ಬಾಬು, ಅಧ್ಯಕ್ಷತೆ–ಟಿ.ಎ.ಶರವಣ, ಅತಿಥಿಗಳು–ಸಚಿವ ಕೆ.ಗೋಪಾಲಯ್ಯ, ಶಾಸಕ ಎಂ.ಕೃಷ್ಣಪ್ಪ, ನಟಿ ತಾರಾ ಅನೂರಾಧ, ನಟ ವಿಜಯ ರಾಘವೇಂದ್ರ, ಎಸ್.ಶಿವರಾಂ, ಭಾಸ್ಕರ್ ರಾವ್, ಎಸ್.ರಂಗಪ್ಪ, ಆಯೋಜನೆ–ವಿಜಯ ಮ್ಯೂಸಿಕ್ ಸ್ಕೂಲ್, ಸ್ಥಳ–ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ಸಂಜೆ 6

ವಿಜಯ್ ರಾಘವೇಂದ್ರ

ಭಾವಕವಿ ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟರಿಗೆ ಗೀತಗೌರವ: ಸಂವಾದದಲ್ಲಿ ಭಾಗವಹಿಸುವವರು–ಕವಿ ಬಿ.ಆರ್. ಲಕ್ಷ್ಮಣ ರಾವ್, ವಿಮರ್ಶಕ ಎಚ್.ಎಸ್. ಸತ್ಯನಾರಾಯಣ, ಆಯೋಜನೆ–ಸಂಗೀತ ಧಾಮ, ಸಹಯೋಗ–ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ–ಕೃಷ್ಣರಾಜ ಪರಿಷನ್ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 6

ಎನ್‌ಎಸ್‌ ಲಕ್ಷ್ಮೀನಾರಾಯಣ ಭಟ್ಟ

ಕಡಿಮೆ ಅಳತೆಯ ನಿವೇಶನ, ಫ್ಲ್ಯಾಟ್ ನಿರ್ಮಾಣ: ಮಾಲಿನ್ಯ ನಿಯಂತ್ರಣ ಮಂಡಳಿ ಅನುಮತಿಗೆ ವಿನಾಯಿತಿ

ನೀತಿಯ ಮರು ಪರಿಶೀಲನೆಗೆ ಎನ್‌ಜಿಟಿ ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: 2,000 ಚದರ ಮೀಟರ್‌ಗಿಂತ ಕಡಿಮೆ ಅಳತೆಯ ನಿವೇಶನ ಅಥವಾ 20 ಫ್ಲ್ಯಾಟ್‌ಗಳಿಗಿಂತ ಕಡಿಮೆ ಇರುವ ಅಪಾರ್ಟ್‌ಮೆಂಟ್ ನಿರ್ಮಾಣದ ವೇಳೆ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಅನುಮತಿ ಪಡೆಯುವುದಕ್ಕೆ ವಿನಾಯಿತಿ ನೀಡಿರುವ ನೀತಿಯನ್ನು ಮರುಪರಿಶೀಲಿಸಬೇಕು ಎಂದು ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ)ಯು ರಾಜ್ಯ ಸರ್ಕಾರಕ್ಕೆ ಸೂಚಿಸಿದೆ.

'ಆನೇಕಲ್ ತಾಲ್ಲೂಕಿನ ಸರ್ಜಾಪುರ ಹೋಬಳಿ ವ್ಯಾಪ್ತಿಯ ಕೂಡ್ಲು ಚಿಕ್ಕ ಕೆರೆಯ ಬಫರ್ ವಲಯದಲ್ಲಿ ನಿರ್ಮಾಣವಾಗಿರುವ ಅಕ್ರಮ ಕಟ್ಟಡಗಳಿಂದ ನಿಯಮ ಉಲ್ಲಂಘನೆ ಆಗುತ್ತಿದೆ' ಎಂದು ದೂರಲಾದ ಅರ್ಜಿಯ ವಿಚಾರಣೆ ವೇಳೆ ಈ ಸೂಚನೆ ನೀಡಿರುವ ನ್ಯಾಯಮೂರ್ತಿ ಆದರ್ಶಕುಮಾರ್ ಗೋಯಲ್ ನೇತೃತ್ವದ ಪ್ರಧಾನ ಪೀಠ, ಈ ಸಂಬಂಧ ರಾಜ್ಯ ಸರ್ಕಾರಕ್ಕೆ ಒಂದು ತಿಂಗಳ ಗಡುವನ್ನು ವಿಧಿಸಿದೆ.

ಯಾವುದೇ ಯೋಜನೆಯು ಕೆರೆ ಹಾಗೂ ಪರಿಸರಕ್ಕೆ ಹಾನಿ ಉಂಟು ಮಾಡುತ್ತಿದ್ದಲ್ಲಿ, ಆ ಯೋಜನೆಗೆ ವಿನಾಯಿತಿ ನೀಡುವ ನೀತಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಮತ್ತು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರಿಗಳು ಮರು ಪರಿಶೀಲಿಸಬೇಕು ಎಂದು ನ್ಯಾಯಪೀಠ ನಿರ್ದೇಶನ ನೀಡಿದೆ.

'ಪರಿಸರದ ಹಾನಿಯನ್ನು ತಡೆಗಟ್ಟುವುದು ರಾಜ್ಯ ಸರ್ಕಾರದ ಬಾಧ್ಯತೆಯಾಗಿದೆ. ತಾನೇ ರೂಪಿಸಿರುವ ನೀತಿಯ ಮರು ಪರಿಶೀಲನೆಯು ಉತ್ತಮ ಆಡಳಿತದ ಭಾಗವೂ ಆಗಿದೆ. ಈ ಮೂಲಕ ಪರಿಸರ ನಿಯಮಗಳ ಅನಿಯಂತ್ರಿತ ಉಲ್ಲಂಘನೆಯನ್ನು ತಡೆಯಬಹುದಾಗಿದೆ' ಎಂದು ನ್ಯಾಯಮಂಡಳಿ ಹೇಳಿದೆ.

ಯಾವುದೇ ನಿರ್ಮಾಣ ಯೋಜನೆಗಳಿಂದ ಜಲಮೂಲಗಳಿಗೆ ಸಂಸ್ಕರಿಸದ ಒಳಚರಂಡಿ ನೀರನ್ನು ಹರಿಬಿಡದಂತೆ ತಡೆಯಬೇಕು. ಈ ನಿಟ್ಟಿನಲ್ಲಿ ಸೂಕ್ತ ಒಳಚರಂಡಿ ವ್ಯವಸ್ಥೆಯನ್ನು ಖಾತರಿಪಡಿಸುವುದನ್ನು ಕಡ್ಡಾಯಗೊಳಿಸಬೇಕು ಎಂದೂ ಪೀಠ ತಾಕೀತು ಮಾಡಿದೆ.

ಸಮರ್ಪಕ ತ್ಯಾಜ್ಯ ನಿರ್ವಹಣಾ ವ್ಯವಸ್ಥೆ ಹಾಗೂ ಪರಿಸರ ಸಂರಕ್ಷಣೆಗೆ ಅಗತ್ಯವಾದ ಇತರ ಕ್ರಮಗಳನ್ನು ಅನುಸರಿಸುವಂತೆ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಕಟ್ಟುನಿಟ್ಟಾಗಿ ಸೂಚಿಸಬೇಕು. ಬಿಬಿಎಂಪಿ ಸೇರಿದಂತೆ ಸಂಬಂಧಿಸಿದ ಎಲ್ಲ ಇಲಾಖೆಗಳೂ ಮಂಡಳಿಯ ಸೂಚನೆ ಕಾರ್ಯಗತಗೊಳ್ಳುವಂತೆ ಪರಿಶೀಲಿಸಬೇಕು. ಈ ಮೂಲಕ ಪರಿಸರ ಸಂಬಂಧಿ ಕಾನೂನಿನ ನಿಯಮಗಳ ಜಾರಿ ಸಾಧ್ಯ ಎಂದೂ ನ್ಯಾಯಮಂಡಳಿ ಒತ್ತಿ ಹೇಳಿದೆ.

ಕೂಡ್ಲು ಕೆರೆಯ ಬಫರ್ ವಲಯದಲ್ಲಿ ನಿರ್ಮಿಸಲಾದ 29 ಕಟ್ಟಡಗಳ ಪೈಕಿ 1974ರ ಜಲ ಕಾಯ್ದೆ (ಮಾಲಿನ್ಯ ತಡೆ ಮತ್ತು ನಿಯಂತ್ರಣ)ಯ ಅಡಿ ಕೇವಲ 3 ಕಟ್ಟಡಗಳ ವಿರುದ್ಧ ಕ್ರಮ ಕೈಗೊಳ್ಳಲು ಅವಕಾಶ ಇದೆ. 2016ರ ಜನವರಿ 19ರಂದು ಕರ್ನಾಟಕ ಸರ್ಕಾರ ಹೊರಡಿಸಿರುವ ಅಧಿಸೂಚನೆಯ ಅನ್ವಯ, 20ಕ್ಕೂ ಅಧಿಕ ಫ್ಲ್ಯಾಟ್‌ಗಳಿರುವ ಅಪಾರ್ಟ್‌ಮೆಂಟ್ ಅಥವಾ 2,000 ಚದರ ಮೀಟರ್‌ಗಿಂತ ದೊಡ್ಡ ನಿವೇಶನದಲ್ಲಿ ನಿರ್ಮಿಸಲಾದ ಕಟ್ಟಡಗಳು ಜಲ ಕಾಯ್ದೆ ಅಡಿ ಬರಲಿವೆ ಎಂದು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಹಸಿರು ಪೀಠಕ್ಕೆ ತಿಳಿಸಿತ್ತು.

ರಮೇಶ ಜಾರಕಿಹೊಳಿ ಮುಖವಾಡದ ವ್ಯಕ್ತಿ ಹೊತ್ತು ಕಾಂಗ್ರೆಸ್ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು ಕೇಂದ್ರ ದಕ್ಷಿಣಉತ್ತರ ಜಿಲ್ಲಾ ಕಾಂಗ್ರೆಸ್ ಸಮಿತಿ ಕಾರ್ಯಕರ್ತರು, ಕೆಪಿಸಿಸಿ ಅಧ್ಯಕ್ಷ ಡಿಕೆ ಶಿವಕುಮಾರ್ ಅವರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿದ ಬಿಜೆಪಿ ಶಾಸಕ ರಮೇಶ್ ಜಾರಕಿಹೊಳಿ ಬಂಧಿಸುವಂತೆ ಹಾಗೂ ನ್ಯಾಯಾಂಗದ ಮೊರೆಹೋದ 6 ಸಚಿವರಗಳ ರಾಜೀನಾಮೆಗೆ ಒತ್ತಾಯಿಸಿ ಮೌರ್ಯ ವೃತ್ತದಲ್ಲಿ ಪ್ರತಿಭಟನೆ ಮಾಡಿದರು. ಪ್ರಜಾವಾಣಿ ಚಿತ್ರ : ಅನೂಪ್ ರಾಘ್‌.ಟಿ.

ಬೆಂಗಳೂರು: 'ಅತ್ಯಾಚಾರ ಪ್ರಕರಣದ ಆರೋಪಿಯಾಗಿರುವ ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಅವರನ್ನು ಕೂಡಲೇ ಬಂಧಿಸಬೇಕು' ಎಂದು ಆಗ್ರಹಿಸಿ ಕಾಂಗ್ರೆಸ್ ಕಾರ್ಯಕರ್ತರು ನಗರದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ಬೆಂಗಳೂರು ನಗರ ಪ್ರಚಾರ ಸಮಿತಿ ವತಿಯಿಂದ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು. ಕಾಂಗ್ರೆಸ್ ಕಚೇರಿಯಿಂದ ಆನಂದರಾವ್ ವೃತ್ತದ ಗಾಂಧಿ ಪ್ರತಿಮೆಯವರೆಗೆ ಕಾರ್ಯಕರ್ತರು, ಪ್ರತಿಭಟನಾ ಮೆರವಣಿಗೆ ನಡೆಸಿದರು. ರಮೇಶ ಜಾರಕಿಹೊಳಿ ಅವರ ಮುಖವಾಡ ಧರಿಸಿದ್ದ ವ್ಯಕ್ತಿಯನ್ನು ಹೊತ್ತು ಪ್ರತಿಭಟನಕಾರರು ಆಕ್ರೋಶ ಹೊರಹಾಕಿದರು. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ಮುಖವಾಡವನ್ನೂ ಧರಿಸಿ ಘೋಷಣೆ ಕೂಗಿದರು.

'ಕೆಲಸ ಕೊಡಿಸುವುದಾಗಿ ಹೇಳಿ ಅಮಾಯಕ ಯುವತಿ ಮೇಲೆ ಅತ್ಯಾಚಾರ ಎಸಗಿರುವ ಆರೋಪಿ ರಮೇಶ ಜಾರಕಿಹೊಳಿ, ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ. ಈ ಕುರಿತ ಸಿ.ಡಿ ಹಾಗೂ ವಿಡಿಯೊಗಳನ್ನು ರಾಜ್ಯದ ಜನತೆ ನೋಡಿದ್ದಾರೆ. ಇಷ್ಟಾದರೂ ರಮೇಶ ಜಾರಕಿಹೊಳಿ, ಅಧಿಕಾರ ಹಾಗೂ ಪ್ರಭಾವ ಬಳಸಿಕೊಂಡು ರಾಜಾರೋಷವಾಗಿ ಓಡಾಡುತ್ತಿದ್ದಾರೆ. ರಾಜ್ಯ ಸರ್ಕಾರ ಹಾಗೂ ಎಸ್‌ಐಟಿ, ಆರೋಪಿ ಪರವೇ ಕೆಲಸ ಮಾಡುತ್ತಿದೆ' ಎಂದೂ ಪ್ರತಿಭಟನಕಾರರು ದೂರಿದರು.

'ತಮ್ಮ ಮೇಲಿನ ಆರೋಪವನ್ನು ಮರೆಮಾಚಲು ಕಾಂಗ್ರೆಸ್ ನಾಯಕರ ಬಗ್ಗೆ ರಮೇಶ ಜಾರಕಿಹೊಳಿ ಅಶ್ಲೀಲ ಪದಗಳನ್ನು ಬಳಸಿದ್ದಾರೆ. ಇವರನ್ನು ಕೂಡಲೇ ಬಂಧಿಸಬೇಕು. ಇಲ್ಲದಿದ್ದರೆ, ಗಂಭೀರ ಸ್ವರೂಪದ ಹೋರಾಟ ನಡೆಸಲಾಗುವುದು' ಎಂದೂ ಎಚ್ಚರಿಸಿದರು.

ಹತ್ತು ಮಂದಿ ಬಂಧನ • ₹ 22.50 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ

ಗೋಡೆ ಕೊರೆದು ಬ್ಯಾಂಕ್‌ಗೆ ಕನ್ನ

ಪ್ರಜಾವಾಣಿ ವಾರ್ತೆ

ಬಂಧಿತ ಆರೋಪಿಗಳು (ನೆಲದಲ್ಲಿ ಕುಳಿತಿರುವವರು) ಹಾಗೂ ಅವರನ್ನು ಬಂಧಿಸಿದ ಪೊಲೀಸರ ತಂಡ

ಬೆಂಗಳೂರು: ಮಾರತ್ತಹಳ್ಳಿ ಮೇಲ್ಸೇತುವೆ ಬಳಿ ಇರುವ 'ಯುನಿಮೊನಿ ಫೈನಾನ್ಶಿಯಲ್ ಸರ್ವೀಸ್ ಲಿಮಿಟೆಡ್' ಬ್ಯಾಂಕ್‌ನ ಗೋಡೆ ಕೊರೆದು ಚಿನ್ನಾಭರಣ ಕದ್ದಿದ್ದ ಹತ್ತು ಮಂದಿ ಆರೋಪಿಗಳನ್ನು ಎಚ್‌ಎಎಲ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಹೊರ ರಾಜ್ಯದಿಂದ ನಗರಕ್ಕೆ ಬಂದಿದ್ದ ಆರೋಪಿಗಳ ಗ್ಯಾಂಗ್, ಸೆಕ್ಯೂರಿಟಿ ಏಜೆನ್ಸಿ ತೆರೆಯುವುದಾಗಿ ಹೇಳಿ ಠಾಣೆ ವ್ಯಾಪ್ತಿಯಲ್ಲಿ ಸುತ್ತಾಡುತ್ತಿತ್ತು. ಮಾರತ್ತಹಳ್ಳಿ ಮೇಲ್ಸೇತುವೆ ಸಮೀಪದಲ್ಲಿರುವ ಬ್ಯಾಂಕ್‌ನ ಗೋಡೆಯಲ್ಲಿ ರಂಧ್ರ ಕೊರೆದು ಚಿನ್ನಾಭರಣ ಕದ್ದುಕೊಂಡು ಪರಾರಿಯಾಗಿತ್ತು' ಎಂದು ಪೊಲೀಸರು ಹೇಳಿದರು.

'ಜಾರ್ಖಂಡ್‌ನ ಬದ್ರುದ್ದೀನ್ ಶೇಕ್ (37), ಖಮರುದ್ದೀನ್ (32), ಮುರ್ ಸಲೀಂ ಶೇಖ್ (26), ಕಮಲ್‌ಪೌಚ್‌ದಾರ್ (44), ನಜ್ರುಲ್ಲ ಶೇಖ್ (42), ಜಮೀರುಲ್ಲಾ (21), ರಬೀವುಲ್ಲಾ (23), ಅಯಾಸ್ (47) ಸೇರಿದಂತೆ 10 ಮಂದಿಯನ್ನು ಬಂಧಿಸಲಾಗಿದೆ. ಅವರಿಂದ ₹ 22.50 ಲಕ್ಷ ಮೌಲ್ಯದ 450 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ. ಪ್ರಮುಖ ಆರೋಪಿಗಳಾದ ದೇವೇಂದ್ರ ಸಿಂಗ್ ಹಾಗೂ ರಫೀಕ್ ತಲೆಮರೆಸಿಕೊಂಡಿದ್ದಾರೆ' ಎಂದು ತಿಳಿಸಿದರು.

ಪಕ್ಕದ ಮಳಿಗೆಯಲ್ಲೇ ಬಾಡಿಗೆ: 'ಕಳೆದ ವರ್ಷ ನಗರಕ್ಕೆ ಬಂದಿದ್ದ ರಫೀಕ್, ಕಳ್ಳತನ ಎಸಗಲು ಬ್ಯಾಂಕ್ ಗುರುತಿಸಿದ್ದ. ಅದರ ಪಕ್ಕದಲ್ಲೇ ಖಾಲಿಯಿದ್ದ ಮಳಿಗೆಯನ್ನು ಸೆಕ್ಯೂರಿಟಿ ಏಜೆನ್ಸಿ ನಡೆಸಲು ಬಾಡಿಗೆ ಪಡೆಯುವುದಾಗಿ ಹೇಳಿ ಮಾಲೀಕರನ್ನು ಪರಿಚಯ ಮಾಡಿಕೊಂಡಿದ್ದ' ಎಂದು ಪೊಲೀಸರು ಹೇಳಿದರು.

'ಮಳಿಗೆ ವೀಕ್ಷಿಸಲು ಸಂಬಂಧಿಕರು ಬರಲಿದ್ದಾರೆಂದು ಹೇಳಿ ಮಾಲೀಕರಿಂದ ಕೀ ಪಡೆದಿದ್ದ ರಫೀಕ್, ಗ್ಯಾಂಗ್ ಸದಸ್ಯರನ್ನು ಸ್ಥಳಕ್ಕೆ ಕರೆಸಿಕೊಂಡಿದ್ದ. ಅಂದು ರಾತ್ರಿ ಮಳಿಗೆಯಲ್ಲೇ ಉಳಿದುಕೊಂಡಿದ್ದ ಆರೋಪಿಗಳು, ಗೋಡೆ ಕೊರೆದು ಬ್ಯಾಂಕ್ ಒಳಗೆ ನುಗ್ಗಿದ್ದರು. ಸಿ.ಸಿ.ಟಿ.ವಿ ಕ್ಯಾಮೆರಾ ಕಿತ್ತು ಹಾಕಿದ್ದರು. ಗ್ಯಾಸ್ ಕಟ್ಟರ್‌ನಿಂದ ಲಾಕರ್ ಕತ್ತರಿಸಿ ಚಿನ್ನಾಭರಣ, ನಗದು ಹಾಗೂ ವಿದೇಶಿ ಕರೆನ್ಸಿ ಕದ್ದುಕೊಂಡು ಪರಾರಿಯಾಗಿದ್ದರು' ಎಂದು ತಿಳಿಸಿದರು.

ಹೊರ ರಾಜ್ಯದಲ್ಲೂ ಕೃತ್ಯ: 'ಬಂಧಿತ ಆರೋಪಿ ಬದ್ರುದ್ದೀನ್, ಖಮರುದ್ದೀನ್ ಹಾಗೂ ತಲೆಮರೆಸಿಕೊಂಡಿರುವ ರಫೀಕ್ ತಮ್ಮದೇ ಗ್ಯಾಂಗ್ ಕಟ್ಟಿಕೊಂಡು ಹಲವು ವರ್ಷಗಳಿಂದ ಕೃತ್ಯ ಎಸಗುತ್ತಿದ್ದರು. ದೆಹಲಿ, ಕೇರಳ ಹಾಗೂ ಮಹಾರಾಷ್ಟ್ರದಲ್ಲೂ ಚಿನ್ನಾಭರಣ ಮಳಿಗೆಗಳಲ್ಲಿ ಕಳ್ಳತನ ಮಾಡಿದ್ದರು. ಜೈಲಿಗೆ ಹೋಗಿ ಜಾಮೀನು ಮೇಲೆ ಹೊರಬಂದಿದ್ದರು. ಖಚಿತ ಮಾಹಿತಿ ಸಂಗ್ರಹಿಸಿ ಹೊರ ರಾಜ್ಯದಲ್ಲಿ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಿ ನಗರಕ್ಕೆ ಕರೆತರಲಾಗಿದೆ' ಎಂದು ಹೇಳಿದರು.

ಅಪರಾಧ ಸುದ್ದಿ

ಬಿಎಂಟಿಸಿ ಖಾಸಗೀಕರಣಕ್ಕೆ ಹುನ್ನಾರ:ಎಎಪಿ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು:'ಸಾರಿಗೆ ನೌಕರರ ಮುಷ್ಕರದ ನೆಪವೊಡ್ಡಿ, ಸರ್ಕಾರ ಬಿಎಂಟಿಸಿಯ ಖಾಸಗೀಕರಣಕ್ಕೆ ಹುನ್ನಾರ ನಡೆಸಿದೆ' ಎಂದು ಆಮ್ ಆದ್ಮಿ ಪಕ್ಷದ (ಎಎಪಿ) ಬೆಂಗಳೂರು ನಗರ ಘಟಕದ ಉಪಾಧ್ಯಕ್ಷ ಬಿ.ಟಿ.ನಾಗಣ್ಣ ಆರೋಪಿಸಿದರು.

ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,'ಸಾರಿಗೆ ನೌಕರರು ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಏ.7ರಂದು ಮುಷ್ಕರಕ್ಕೆ ಮುಂದಾಗಿದ್ದಾರೆ. ಇದರಿಂದ ಪ್ರಯಾಣಿಕರ ಸಮಸ್ಯೆ ನೀಗಿಸುವ ನೆಪವೊಡ್ಡಿ, ಬಿಎಂಟಿಸಿಯ ಲಾಭದಾಯಕ ಮಾರ್ಗಗಳನ್ನು ಖಾಸಗಿಯವರಿಗೆ ವಹಿಸಲು, ರಹದಾರಿ ಅರ್ಜಿಗಳನ್ನು ಕರೆದಿದೆ. ಇದು, ಅಪಾಯಕಾರಿ ಬೆಳವಣಿಗೆ' ಎಂದರು.

'ಸಾರಿಗೆ ಕಾರ್ಮಿಕ ಸಂಘಟನೆಗಳು ಪೂರ್ವನಿಯೋಜಿತವಾಗಿಯೇ ಮುಷ್ಕರ ಮಾಡಲಿದ್ದಾರೆ. ಅವರ ಸಮಸ್ಯೆಗಳನ್ನು ಆಲಿಸದೆ, ಈ ರೀತಿ ಖಾಸಗೀಕರಣಕ್ಕೆ ಮುಂದಾಗಿರುವುದು ಸರಿಯಲ್ಲ' ಎಂದು ದೂರಿದರು.

ಎಎಪಿ ವಕ್ತಾರ ಶರತ್ ಖಾದ್ರಿ,'ಥಾಣೆ, ಮುಂಬೈಗಳಲ್ಲಿ ಸಾರಿಗೆ ನಿರ್ವಹಣೆಯ ಜವಾಬ್ದಾರಿಯನ್ನು ಸ್ಥಳೀಯಾಡಳಿತ ಸಂಸ್ಥೆಗಳು ವಹಿಸಿಕೊಂಡಿವೆ. ಅಂತೆಯೇ ಬೆಂಗಳೂರಿನ ಸಾರಿಗೆ ನಿರ್ವಹಣೆಯನ್ನು ಬಿಬಿಎಂಪಿಗೆ ವಹಿಸುವುದು ಸೂಕ್ತ ಎಂಬ ಸಂಸದ ತೇಜಸ್ವಿ ಸೂರ್ಯ ಅವರ ಹೇಳಿಕೆಯೂ ಬಿಎಂಟಿಸಿ ಖಾಸಗೀಕರಣಕ್ಕೆ ಪುಷ್ಟಿ ನೀಡುವಂತಿದೆ' ಎಂದರು.

ಕೊಳವೆ ಮಾರ್ಗ ನಿರ್ಮಾಣ ಕಾಮಗಾರಿಗೆ ಚಾಲನೆ

ಪ್ರಜಾವಾಣಿ ವಾರ್ತೆ

ಕಾಮಗಾರಿಗೆ ಚಾಲನೆ ನೀಡಿದ ನಂತರ ಶಾಸಕ ಕೃಷ್ಣ ಬೈರೇಗೌಡ ಮಾತನಾಡಿದರು

ಯಲಹಂಕ: ಗ್ರಾಮಗಳಿಂದ ಹರಿದು ಬರುವ ತ್ಯಾಜ್ಯ ನೀರು ಕೆರೆಗೆ ಸೇರಬಾರದೆಂಬ ಉದ್ದೇಶದಿಂದ ಗ್ರಾಮಪಂಚಾಯಿತಿ ಅನುದಾನದಲ್ಲಿ ₹1 ಕೋಟಿ ವೆಚ್ಚದಲ್ಲಿ ಕೋಡಗಲಹಟ್ಟಿ ಕೆರೆ ಪಕ್ಕದಲ್ಲಿ ಕೊಳಚೆ ನೀರು ಸಂಸ್ಕರಣಾ ಘಟಕ ನಿರ್ಮಿಸಲಾಗುವುದು ಎಂದು ಶಾಸಕ ಕೃಷ್ಣ ಬೈರೇಗೌಡ ಹೇಳಿದರು.

ಹುಣಸಮಾರನಹಳ್ಳಿಯ ಭಾರತಿನಗರದಲ್ಲಿ ₹15 ಲಕ್ಷ ವೆಚ್ಚದಲ್ಲಿ ಪ್ರತ್ಯೇಕ ಕೊಳವೆಮಾರ್ಗ ಅಳವಡಿಸುವ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ಇಲ್ಲಿಯವರೆಗೆ ಈ ಗ್ರಾಮಗಳ ಕೊಳಚೆ ನೀರು ಹರಿದು ಹೋಗಲು ಪ್ರತ್ಯೇಕ ಕಾಲುವೆಯಿಲ್ಲದೆ ತ್ಯಾಜ್ಯ ಕಟ್ಟಿಕೊಂಡು ದುರ್ವಾಸನೆ ಬೀರುತ್ತಿತ್ತು. ಇದರಿಂದ ಜನರು ತೊಂದರೆ ಅನುಭವಿಸುತ್ತಿದ್ದರು. ಮುಂದಿನ ದಿನಗಳಲ್ಲಿ ಈ ಸಮಸ್ಯೆ ನಿವಾರಣೆಯಾಗಲಿದೆ ಎಂದರು.

ಭಾರತೀಯ ವಾಯುನೆಲೆಯ ಡೆಪ್ಯುಟಿ ಕೇಡರ್ ಮೋಹನ್ ಕುಮಾರ್, ಜಿಲ್ಲಾ ಪಂಚಾಯಿತಿ ಸದಸ್ಯೆ ಸಜಿತಾ ಅಶೋಕನ್, ತಾಲ್ಲೂಕು ಪಂಚಾಯಿತಿ ಉಪಾಧ್ಯಕ್ಷೆ ಸುಜಾತ ಶ್ರೀನಿವಾಸ್, ಕಾಂಗ್ರೆಸ್ ಮುಖಂಡರಾದ ಕೆ.ಅಶೋಕನ್, ಎಂ.ಜಯಗೋಪಾಲಗೌಡ, ದಾನೇಗೌಡ, ಎಚ್.ಪಿ.ನಾರಾಯಣಸ್ವಾಮಿ, ಶರಣ್ ಕುಮಾರ್, ದಯಾನಂದ್, ಹರೀಶ್ ಕುಮಾರ್ ಉಪಸ್ಥಿತರಿದ್ದರು.

ಭದ್ರತೆ: ಮೆಹಬೂಬಾ ಮುಫ್ತಿ ಪಾಸ್‌ಪೋರ್ಟ್ ಅರ್ಜಿ ತಿರಸ್ಕೃತ

ಶ್ರೀನಗರ: ಪಿಡಿಪಿ ಅಧ್ಯಕ್ಷೆ, ಜಮ್ಮು ಮತ್ತು ಕಾಶ್ಮೀರದ ಮಾಜಿ ಮುಖ್ಯಮಂತ್ರಿ ಮೆಹಬೂಬಾ ಮುಫ್ತಿ ಅವರಿಗೆ ಪಾಸ್‌ಪೋರ್ಟ್ ನೀಡಲು ನಿರಾಕರಿಸಿದ್ದು, ಪಾಸ್‌ಪೋರ್ಟ್ ಕಾಯ್ದೆಯಡಿ ರಾಷ್ಟ್ರೀಯ ಭದ್ರತೆ ದೃಷ್ಟಿಯಿಂದ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಲಾಗಿದೆ.

'ಸ್ಥಳೀಯ ಪಾಸ್‌ಪೋರ್ಟ್ ಕಚೇರಿಯು ಸಿಐಡಿ ವರದಿ ಆಧರಿಸಿ ನನ್ನ ಪಾಸ್‌ಪೋರ್ಟ್ ನೀಡಲು ನಿರಾಕರಿಸಿದೆ. ಮಾಜಿ ಮುಖ್ಯಮಂತ್ರಿಯೊಬ್ಬರು ಪಾಸ್‌ಪೋರ್ಟ್ ಹೊಂದಿರುವುದು ಕೂಡಾ ದೇಶದ ಸಾರ್ವಭೌಮತೆಗೆ ಧಕ್ಕೆಯಾಗಲಿದೆ' ಎಂದು ಟ್ವೀಟ್ ಮಾಡಿದ್ದಾರೆ. ಪಾಸ್‌ಪೋರ್ಟ್ ನಿರಾಕರಣೆಗೆ ಸಂಬಂಧಿಸಿದ ಕಚೇರಿಯು ನೀಡಿರುವ ಪತ್ರವನ್ನೂ ಅವರೂ ಹಂಚಿಕೊಂಡಿದ್ದಾರೆ. ಪಾಸ್‌ಪೋರ್ಟ್ ಅವಧಿ ಮುಗಿದಿದ್ದ ಕಾರಣ ನವೀಕರಣಕ್ಕಾಗಿ ಕಳೆದ ಡಿಸೆಂಬರ್ ತಿಂಗಳಲ್ಲಿ ಅರ್ಜಿಯನ್ನು ಸಲ್ಲಿಸಿದ್ದರು.

ಚಿತ್ರಾವಳಿ

ರವಿ ಪ್ರಕಾಶನವು ಬಿಎಂಶ್ರೀ ಪ್ರತಿಷ್ಠಾನದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಸರಸ್ವತಿ ಶಂಕರ್ ಅವರ 'ಅಂತಃಸ್ಫೋಟ', 'ಹದಿನಾರು ಹನಿ' ಹಾಗೂ ಎಸ್‌.ರಾಮಚಂದ್ರಪ್ಪ ಅವರ 'ಉದ್ಯೋಗ ಪರ್ವ' ಪುಸ್ತಕಗಳನ್ನು ಬಿಡುಗಡೆ ಮಾಡಲಾಯಿತು. ಸಾಹಿತಿ ಕಬ್ಬಿನಾಲೆ ವಸಂತ ಭಾರದ್ವಾಜ್, ಕರ್ನಾಟಕ ಸಾಂಸ್ಕೃತಿಕ ಕಲಾ ಪ್ರತಿಷ್ಠಾನದ ಅಧ್ಯಕ್ಷ ಎಸ್‌.ಎನ್‌.ಪಂಜಾಜೆ, ಕವಿ ಭ.ರಾ.ವಿಜಯಕುಮಾರ್, ಪ್ರಕಾಶಕ ಎಸ್‌.ಆರ್‌.ಸತ್ಯನಾರಾಯಣ ಇದ್ದರು.

ಅಂಚೆ ಇಲಾಖೆಯಿಂದ ನೀಡುವ ರಾಷ್ಟ್ರಮಟ್ಟದ ಪ್ರತಿಷ್ಠಿತ 'ಮೇಘದೂತ ಪ್ರಶಸ್ತಿ' ಪಡೆದ ಕರ್ನಾಟಕ ಅಂಚೆವೃತ್ತದ ಬೆಂಗಳೂರು ಪೂರ್ವವಿಭಾಗದ ಅಂಚೆ ಕಚೇರಿಗಳ ಹಿರಿಯ ಅಧೀಕ್ಷಕ ಬಿ.ಎಸ್‌.ಚಂದ್ರಶೇಖರ್ ಅವರನ್ನು ಡಾ.ಶಿವರಾಮ ಕಾರಂತ ನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಸನ್ಮಾನಿಸಲಾಯಿತು. ಸಂಘದ ಅಧ್ಯಕ್ಷ ಡಾ. ಇ.ಬಿ.ರಾಜೇಶ್, ಪ್ರಧಾನ ಕಾರ್ಯದರ್ಶಿ ಎ.ಎಸ್‌.ವಿಶ್ವನಾಥ್ ಹಾಗೂ ಪದಾಧಿಕಾರಿಗಳು ಇದ್ದರು.

ಅರಣ್ಯ ಇಲಾಖೆ ಸಿಬ್ಬಂದಿ ವಿರುದ್ಧ ಕೊಲೆ ಆರೋಪ; ದೂರು ದಾಖಲು

ಪ್ರಜಾವಾಣಿ ವಾರ್ತೆ

ಚಿಂಚೋಳಿ (ಕಲಬುರ್ಗಿ ಜಿಲ್ಲೆ): ತಾಲ್ಲೂಕಿನ ಕುಸ್ರಂಪಳ್ಳಿ ಗಡಿಯಲ್ಲಿ ತೆಲಂಗಾಣ ಮೂಲದ ವ್ಯಕ್ತಿಯೊಬ್ಬರ ಶವ ಭಾನುವಾರ ದೊರೆತಿದ್ದು, ಇದು ಅರಣ್ಯ ಇಲಾಖೆಯ ಸಿಬ್ಬಂದಿಯೇ ಮಾಡಿದ ಕೊಲೆ ಎಂದು ಮೃತನ ಪುತ್ರ ದೂರು ನೀಡಿದ್ದಾರೆ.

ತೆಲಂಗಾಣ ರಾಜ್ಯ ಗಡಿಯ ಗೌಸಾಬಾದ್ ತಾಂಡಾದ ಮಾಣಿಕ ಚವ್ಹಾಣ (65) ಅನುಮಾನಾಸ್ಪದವಾಗಿ ಮೃತಪಟ್ಟವರು.

ವನ್ಯಜೀವಿ ಧಾಮದ ಅರಣ್ಯ ರಕ್ಷಕ ಹಣಮಂತ, ಕ್ಷೇಮಾಭಿವೃದ್ಧಿ ನೌಕರ ದೇವಪ್ಪ ಹಾಗೂ ಗುತ್ತಿಗೆ ನೌಕರರಾದ ಸಂಬಣ್ಣ ನರಸಪ್ಪ, ಕುಸ್ರಂಪಳ್ಳಿ, ರಾಜು ಬಕ್ಕಪ್ಪ ಕುಸ್ರಂಪಳ್ಳಿ, ಪಾಡು ರಾಮಣ್ಣ ಕುಸ್ರಂಪಳ್ಳಿ ಅವರ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಮಾಣಿಕ ಅವರು 30 ವರ್ಷಗಳ ಹಿಂದೆ ಹತ್ತಿರದ ಗಡಿ ಗ್ರಾಮ ಕುಸ್ರಂಪಳ್ಳಿಯ ಸರ್ವೆ ನಂಬರ್ 19ರಲ್ಲಿ 4ಎಕರೆ 20 ಗುಂಟೆ ಜಮೀನು ಖರೀದಿಸಿದ್ದಾರೆ. ಈ ಹೊಲವು ಕರ್ನಾಟಕದ ವನ್ಯಜೀವಿ ಧಾಮದ ಗಡಿಗೆ ಅಂಟಿಕೊಂಡೇ ಇದೆ. ಭಾನುವಾರ ಇದೇ ಹೊಲದಲ್ಲಿ ಅವರ ಶವ ಪತ್ತೆಯಾಗಿದ್ದು, ಅರಣ್ಯ ಸಿಬ್ಬಂದಿಯೇ ಕುಟುಂಬದವರಿಗೆ ಸುದ್ದಿ ಮುಟ್ಟಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಐವರು ನಕ್ಸಲರ ಹತ್ಯೆ

ನಾಗಪುರ (ಪಿಟಿಐ): ಮಹಾರಾಷ್ಟ್ರದ ಗಡ್ಚಿರೋಲಿ ಜಿಲ್ಲೆಯ ಖೋಬ್ರಮೇಂಡಾ ಅರಣ್ಯ ಪ್ರದೇಶದಲ್ಲಿ ಸೋಮವಾರ ಬಂಡುಕೋರರ ವಿರುದ್ಧ ಪೊಲೀಸ್ ಕಮಾಂಡೊಗಳು ನಡೆಸಿದ ಕಾರ್ಯಾಚರಣೆಯಲ್ಲಿ ಐವರು ನಕ್ಸಲರು ಸಾವನ್ನಪ್ಪಿದ್ದಾರೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಜಿಲ್ಲೆಯ ನಕ್ಸಲ್ ನಿಗ್ರಹ ಪೊಲೀಸ್ ಪಡೆಯವರು ಶನಿವಾರ ಇದೇ ಅರಣ್ಯ ಪ್ರದೇಶದಲ್ಲಿ ರೈಫಲ್ ಮತ್ತು ಮೂರು ಬಾಂಬ್‌ಗಳನ್ನು ವಶಪಡಿಸಿಕೊಂಡಿದ್ದರು. 'ನಕ್ಸಲ್ ಸಪ್ತಾಹ'ದ ಹಿನ್ನೆಲೆಯಲ್ಲಿ ಈ ಅರಣ್ಯ ಪ್ರದೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ನಕ್ಸಲರು ಸೇರುತ್ತಾರೆಂಬ ಮಾಹಿತಿ ಆಧರಿಸಿ ಶನಿವಾರ ಗಡ್ಚಿರೋಲಿ ಪೊಲೀಸ್ ಇಲಾಖೆಯ ವಿಶೇಷ ನಕ್ಸಲ್ ನಿಗ್ರಹ ಪಡೆಯ ಘಟಕದ 'ಸಿ–60 ಕಮಾಂಡೋಗಳು' ಹೆಟಲ್ಕಸ ಅರಣ್ಯ ಪ್ರದೇಶದಲ್ಲಿ ನಕ್ಸಲ್ ವಿರೋಧಿ ಕಾರ್ಯಾಚರಣೆ ನಡೆಸಿದರು.

ವಿದ್ಯಾರ್ಥಿ ಸಾವು

ಚಾಮರಾಜನಗರ: ತಾಲ್ಲೂಕಿನ ಕೋಳಿಪಾಳ್ಯದ ಸರ್ಕಾರಿ ಶಾಲೆಯ ಏಳನೇ ತರಗತಿ ವಿದ್ಯಾರ್ಥಿಯೊಬ್ಬ ಸೋಮವಾರ ಶಾಲಾ ಕಾಂಪೌಂಡ್‌ನಿಂದ ಬಿದ್ದು, ಕುತ್ತಿಗೆ ಬಳಿ ತೀವ್ರ ಗಾಯವಾಗಿ ಮೃತಪಟ್ಟಿದ್ದಾನೆ.

ಕೋಳಿಪಾಳ್ಯದ ಸೀನ ನಾಯಕ ಎಂಬುವವರ ಮಗ, ಲಕ್ಷ್ಮೀಕಾಂತ್ (13) ಮೃತಪಟ್ಟ ವಿದ್ಯಾರ್ಥಿ. ಮಧ್ಯಾಹ್ನ ಊಟದ ಬಿಡುವಿನ ವೇಳೆಯಲ್ಲಿ ಆಟವಾಡುವಾಗ ಈ ಘಟನೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ವಿದ್ಯಾರ್ಥಿ ಕಾಂಪೌಂಡ್ ಹತ್ತಿ ನಡೆದಾಡುತ್ತಿದ್ದಾಗ ಆಯತಪ್ಪಿ ಬಿದ್ದಿದ್ದಾನೆ. ಕೆಳಗಡೆ ಇದ್ದ ಚೂಪಾದ ಮರದ ತುಂಡು ಇಲ್ಲವೇ ಬೇರೆ ಇನ್ನಾವುದೋ ವಸ್ತು ಕುತ್ತಿಗೆ ಬಳಿ ತಾಗಿದ್ದರಿಂದ ತೀವ್ರ ರಕ್ತಸ್ರಾವವಾಗಿದೆ. ತಕ್ಷಣ ವಿದ್ಯಾರ್ಥಿಯನ್ನು ಸ್ಥಳೀಯ ಕ್ಲಿನಿಕ್‌ಗೆ ಕರೆದುಕೊಂಡು ಹೋಗಿ ಪ್ರಾಥಮಿಕ ಚಿಕಿತ್ಸೆ ಕೊಡಿಸಲಾಯಿತು. ಅಲ್ಲಿಂದ ಆಟೊದಲ್ಲಿ ಜಿಲ್ಲಾಸ್ಪತ್ರೆಗೆ ಕರೆದುಕೊಂಡು ಬರುವಾಗ ದಾರಿ ಮಧ್ಯೆ ಕೊನೆಯುಸಿರೆಳೆದಿದ್ದಾನೆ ಎಂದು ಸ್ಥಳೀಯರು ತಿಳಿಸಿದ್ದಾರೆ.

ಸಾಲದ ಹೊರೆ: ರೈತ ಆತ್ಮಹತ್ಯೆ

ಹರಪನಹಳ್ಳಿ: ತಾಲ್ಲೂಕಿನ ಬಳಿಗನೂರು ಗ್ರಾಮದಲ್ಲಿ ಸಾಲದ ಹೊರೆ ತಾಳಲಾರದೆ ರೈತರೊಬ್ಬರು ಆತ್ಮಹತ್ಯೆ ಮಡಿಕೊಂಡಿದ್ದಾರೆ.

ಎಸ್.ಎಲ್.ನಾರನಗೌಡ (48) ಆತ್ಮಹತ್ಯೆ ಮಾಡಿಕೊಂಡವರು. ಎರಡು ಎಕರೆ ಜಮೀನಿನಲ್ಲಿ ಉಳುಮೆ ಮಾಡಿಕೊಂಡು ಜೀವನ ನಡೆಸುತ್ತಿದ್ದರು.

ಪ್ರಸಕ್ತ ಸಾಲಿನಲ್ಲಿ ಈರುಳ್ಳಿ ಮತ್ತು ಟೊಮೊಟೊ ಬೆಳೆ ಬೆಳೆದಿದ್ದರು. ವೈಜ್ಞಾನಿಕ ಬೆಲೆ ಸಿಗದೆ ನಷ್ಟ ಅನುಭವಿಸಿದ್ದರು. ಬೆಳೆ ಬೆಳೆಯಲು ಕೊಟ್ಟೂರಿನ ಕಾರ್ಪೊರೇಷನ್ ಬ್ಯಾಂಕ್‌ನಲ್ಲಿ ₹1 ಲಕ್ಷ, ಕೈಗಡವಾಗಿ ₹2 ಲಕ್ಷ ಸಾಲ ಪಡೆದಿದ್ದರು. ಸಾಲ ತೀರಿಸಲಾಗದೇ ಬೇಸತ್ತು ಸೋಮವಾರ ಬೆಳಿಗ್ಗೆ ಜಮೀನಿನಲ್ಲಿ ಕ್ರಿಮಿನಾಶಕ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಬಿಬಿಎಂಪಿ ಬಜೆಟ್: ಯಾರು ಏನಂತಾರೆ?

ತಾರಸಿ ಉದ್ಯಾನಕ್ಕೆ ಉತ್ತೇಜನ ಸ್ವಾಗತಾರ್ಹ

ಇದೊಂದು ಉತ್ತಮ ಮತ್ತು ಜನರನ್ನು ಹೆಚ್ಚು ಒಳಗೊಳ್ಳುವ ಬಜೆಟ್. ತಾರಸಿ ಉದ್ಯಾನ ಚಟುವಟಿಕೆಗೆ ಉತ್ತೇಜನ ನೀಡಿರುವುದು ಸ್ವಾಗತಾರ್ಹ. ಆದರೆ, ಮನೆಯಲ್ಲಿಯೇ ಗೊಬ್ಬರ ತಯಾರಿಸುತ್ತಿರುವ ನಾಗರಿಕರಿಗೆ ಕಸ ಸಂಗ್ರಹದ ಸೆಸ್ ಕಡಿತ ಮಾಡಬೇಕಾಗಿತ್ತು. ರಸ್ತೆಯಲ್ಲಿ ಕಸ ಗುಡಿಸುವ ಕಾರ್ಯದ ವೀಕ್ಷಣೆಗೆ ಆನ್‌ಲೈನ್ ಪೋರ್ಟಲ್ ಮಾಡಿರುವುದು ಉತ್ತಮ. ಆದರೆ, ಇದನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಬೇಕು.

ರೇಣುಕಾಪ್ರಸಾದ್, ಶಾಂತಿನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ

ಸಾರಕ್ಕಿ ಮೇಲ್ಸೇತುವೆ ಉಲ್ಲೇಖವಿಲ್ಲ

ಸಾರಕ್ಕಿ ಸಿಗ್ನಲ್ ಮೇಲ್ಸೇತುವೆ ಬಗ್ಗೆ ಬಜೆಟ್‌ನಲ್ಲಿ ಪ್ರಸ್ತಾಪಿಸುವ ನಿರೀಕ್ಷೆ ಇತ್ತು. ಆದರೆ, ಈ ಬಗ್ಗೆ ಯಾವುದೇ ಉಲ್ಲೇಖ ಇರದಿರುವುದು ಬೇಸರ ತಂದಿದೆ. ಈ ವೃತ್ತದಲ್ಲಿ ಅತಿ ಹೆಚ್ಚು ವಾಹನ ದಟ್ಟಣೆ ಇದ್ದು, ಇಲ್ಲಿ ಮೇಲ್ಸೇತುವೆಯ ಅಗತ್ಯ ತುಂಬಾ ಇದೆ. ಇದಕ್ಕೆ ನಿರ್ದಿಷ್ಟ ಅನುದಾನ ಘೋಷಿಸಿ ಕಾರ್ಯರೂಪಕ್ಕೆ ತರಬೇಕು.

ಡಾ.ಎ. ಭಾನು, ಪ್ರೆಸ್ಟೀಜ್ ಫಾಲ್ಕನ್ ಸಿಟಿ ನಿವಾಸಿಗಳ ಸಂಘ

ವಾರ್ಡ್‌ವಾರು ಅನುದಾನ ಹಂಚಿಕೆಗೆ ಮೆಚ್ಚುಗೆ

ವಿವೇಚನಾ ನಿಧಿ ಅಡಿಯಲ್ಲಿ ಅನುದಾನ ಕೊಡುವ ಬದಲು, ಪಾದಚಾರಿ ಮಾರ್ಗ ನಿರ್ಮಾಣಕ್ಕಾಗಿ ಎಲ್ಲ ವಾರ್ಡ್‌ಗಳಿಗೆ ತಲಾ ₹20 ಲಕ್ಷ ಘೋಷಿಸಿರುವುದು ಸ್ವಾಗತಾರ್ಹ. ಇಲ್ಲದಿದ್ದರೆ ಪ್ರಭಾವಿಗಳು ತಮ್ಮ ವಾರ್ಡ್‌ಗಳಿಗೆ ಮಾತ್ರ ಅನುದಾನ ಬಿಡುಗಡೆ ಮಾಡಿಸಿ ಕೊಂಡು ಚೆನ್ನಾಗಿರುವ ರಸ್ತೆಗಳನ್ನೂ ಅಗೆಯುವ ಕೆಲಸವಾಗುತ್ತಿತ್ತು. ಈಗ ಅದು ತಪ್ಪಲಿದೆ.

ಅಬ್ದುಲ್ ಅಲೀಂ, ಕನಕಪುರ ರೋಡ್ ಚೇಂಜ್ ಮೇಕರ್ಸ್ ಅಧ್ಯಕ್ಷ

ಶೌಚಾಲಯಗಳ ನಿರ್ಮಾಣಕ್ಕೆ ಅನುದಾನ: ಶ್ಲಾಘನೀಯ

ನಗರದಲ್ಲಿ ಎಲ್ಲ ಮೂಲಸೌಕರ್ಯ ಅಭಿವೃದ್ಧಿಗೆ ತಕ್ಕಂತೆ ಪಾದಚಾರಿ ಮಾರ್ಗ ನಿರ್ಮಾಣವಾಗಿಲ್ಲ. ಈಗ ಪ್ರತಿ ವಾರ್ಡ್‌ನಲ್ಲಿ ಪಾದಚಾರಿ ಮಾರ್ಗ ಮತ್ತು ಶೌಚಾಲಯಗಳ ನಿರ್ಮಾಣಕ್ಕಾಗಿಯೇ ಅನುದಾನ ಘೋಷಿಸಿರುವುದು ಸ್ವಾಗತಾರ್ಹ. ಇದೊಂದು ಉತ್ತಮ ಬಜೆಟ್.

ಚೈತನ್ಯಾ ಸುಬ್ರಹ್ಮಣ್ಯ, ಶೋಭಾ ಹಿಲ್‌ವ್ಯೂ ನಿವಾಸಿಗಳ ಸಂಘದ ಸದಸ್ಯೆ

ಆರೋಗ್ಯ ವಲಯಕ್ಕೆ ಹೆಚ್ಚು ಆದ್ಯತೆ ನೀಡಿಲ್ಲ

ಕೋವಿಡ್ ಸಂದರ್ಭದಲ್ಲಿ ಆರೋಗ್ಯ ವಲಯಕ್ಕೆ ಹೆಚ್ಚು ಆದ್ಯತೆ ನೀಡಬೇಕಾಗಿತ್ತು. ಆದರೆ, ಸಾಂಕ್ರಾಮಿಕ ಕಾಯಿಲೆಗಳ ನಿಯಂತ್ರಣಕ್ಕೆ ಯಾವುದೇ ಹಣ ಮೀಸಲಿಟ್ಟಿಲ್ಲ. ವೈದ್ಯಕೀಯ ಮತ್ತು ಸಾಮಾನ್ಯ ಸಾರ್ವಜನಿಕ ಆರೋಗ್ಯಕ್ಕೆ 2020-21ರ ಪರಿಷ್ಕೃತ ಬಜೆಟ್‌ನಲ್ಲಿ ₹443 ಕೋಟಿ ಮೀಸಲಿರಿಸಿದ್ದರೆ, 2021-22ರ ಸಾಲಿಗೆ ಕೇವಲ ₹337 ಕೋಟಿ ಮೀಸಲಿರಿಸಲಾಗಿದೆ.

ಕೆ.ಎನ್. ಉಮೇಶ್, ಸಿಪಿಎಂ, ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿ ಕಾರ್ಯದರ್ಶಿ

ವಿದ್ಯಾರ್ಥಿಗಳಿಗೆ ಉತ್ತೇಜನ

ಕೋವಿಡ್ ಸಂದರ್ಭದಲ್ಲಿ ವಿದ್ಯಾರ್ಥಿಗಳನ್ನು ಮತ್ತೆ ಶಾಲೆಗೆ ಕರೆತರುವ ನಿಟ್ಟಿನಲ್ಲಿ ಉತ್ತೇಜನಕಾರಿ ಕ್ರಮಗಳನ್ನು ಕೈಗೊಳ್ಳಲಾಗಿದೆ. ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ₹25 ಸಾವಿರ, ಶಿಕ್ಷಕರಿಗೆ ₹2 ಲಕ್ಷದವರೆಗೆ ಪ್ರೋತ್ಸಾಹ ಧನ ಘೋಷಿಸಿರುವುದು ಸ್ವಾಗತಾರ್ಹ. ವಿದೇಶಿಗರಿಗೆ ನಮ್ಮ ನಾಡು–ನುಡು, ಸಂಸ್ಕೃತಿ, ಇತಿಹಾಸವನ್ನು ಪರಿಚಯಿಸುವ 'ಎಕ್ಸ್‌ಪಿರಿಯನ್ಸ್ ಬೆಂಗಳೂರು' ಉತ್ತಮ ಯೋಜನೆಯಾಗಿದೆ.

ಪುರುಷೋತ್ತಮ ರಾಜು, ಜರಗನಹಳ್ಳಿ ನಿವಾಸಿಗಳ ಕಲ್ಯಾಣ ಸಂಘದ ಅಧ್ಯಕ್ಷ

ಜನಪ್ರತಿನಿಧಿಗಳು ಹೇಳುವುದೇನು?

ತೆರಿಗೆ ಹೆಚ್ಚಿಸದ ಜನಸ್ನೇಹಿ ಬಜೆಟ್

ಕೋವಿಡ್ ಸಂಕಷ್ಟ ಕಾಲದಲ್ಲೂ ಜನರ ಮೇಲೆ ಯಾವುದೇ ರೀತಿಯ ತೆರಿಗೆ ಹೆಚ್ಚಿಸದ ಈ ಬಜೆಟ್ ಜನಸ್ನೇಹಿಯಾಗಿದೆ. ಮೂಲಸೌಕರ್ಯ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಲಾಗಿದೆ. ಬಜೆಟ್‌ನಲ್ಲಿ ನಗರದ ಎಲ್ಲ ವಾರ್ಡುಗಳಿಗೆ, ವಲಯಗಳಿಗೆ ಸಮಾನ ಪ್ರಾಮುಖ್ಯತೆ ಕೊಡಲಾಗಿದೆ.

ಡಾ.ಸಿ.ಎನ್. ಅಶ್ವತ್ಥನಾರಾಯಣ, ಉಪಮುಖ್ಯಮಂತ್ರಿ

ರಾಜಕಾಲುವೆಗೆ ಇನ್ನಷ್ಟು ಅನುದಾನ ಬೇಕಿತ್ತು

ಮಳೆಗಾಲದ ಸಂದರ್ಭದಲ್ಲಿ ನಗರದಲ್ಲಿ ಕೃತಕ ಪ್ರವಾಹ ಸೃಷ್ಟಿಯಾಗುತ್ತದೆ. ಈ ಉದ್ದೇಶದಿಂದ ಮಳೆನೀರುಗಾಲುವೆಗಳ ನಿರ್ಮಾಣ–ನಿರ್ವಹಣೆಗೆ ಹೆಚ್ಚು ಅನುದಾನ ನೀಡಬೇಕಾಗಿತ್ತು. ಕಳೆದ ಬಾರಿಯೂ ಈ ಉದ್ದೇಶಕ್ಕೆ ಹಣ ತೆಗೆದಿರಿಸಿರಲಿಲ್ಲ. ಇನ್ನು, ಆಸ್ತಿಗಳನ್ನು ಬಿ ಖಾತೆಗಳಿಂದ 'ಎ' ಖಾತಾ ಮಾಡುವುದನ್ನು ನಾನು ಸ್ವಾಗತಿಸುತ್ತೇನೆ. ಬಡ–ಮಧ್ಯಮ ವರ್ಗದವರಿಗೆ ಇದರಿಂದ ಅನುಕೂಲವಾಗುತ್ತದೆ.

ಬೈರತಿ ಸುರೇಶ್, ಕಾಂಗ್ರೆಸ್ ಶಾಸಕ

ಬಿಜೆಪಿ ಶಾಸಕರ ಕ್ಷೇತ್ರಗಳಿಗಷ್ಟೇ ಅನುದಾನ

ಬಿಬಿಎಂಪಿಗೆ ಸೇರ್ಪಡೆಯಾದ 110 ಹಳ್ಳಿಗಳ ಅಭಿವೃದ್ಧಿಗಾಗಿ ಬಜೆಟ್‌ನಲ್ಲಿ ₹1 ಸಾವಿರ ಕೋಟಿ ಅನುದಾನ ಮೀಸಲಿಡಲಾಗಿದೆ. ಇದರಲ್ಲಿ ₹950 ಕೋಟಿಯನ್ನು ಬಿಜೆಪಿ ಶಾಸಕರು ಪ್ರತಿನಿಧಿಸುವ ಕ್ಷೇತ್ರಗಳಿಗೆ ಹಂಚಿಕೆ ಮಾಡಲಾಗಿದೆ. ಬಿಜೆಪಿಯವರು ಪ್ರತಿನಿಧಿಸುವ ಕ್ಷೇತ್ರಗಳಿಗೆ ತಲಾ₹ 200 ಕೋಟಿ ನೀಡಿದರೆ, ಬಿಜೆಪಿಯೇತರ ಶಾಸಕರು ಪ್ರತಿನಿಧಿಸುವ ಕ್ಷೇತ್ರಗಳಿಗೆ ತಲಾ ₹ 25 ಕೋಟಿ ನೀಡಲಾಗಿದೆ. ಹೆಚ್ಚು ಹಳ್ಳಿಗಳು ಇರುವುದು ನಮ್ಮ ಕ್ಷೇತ್ರಗಳಲ್ಲೇ. ಈ ತಾರತಮ್ಯಕ್ಕೆ ಕೊನೆ ಎಂದು?

ಆರ್.ಮಂಜುನಾಥ್, ಜೆಡಿಎಸ್ ಶಾಸಕ

ಮೀಸಲಾತಿಗೆ ಇರಲಿ ಏಕರೂಪ ನೀತಿ • ಹಿಂದುಳಿದ ವರ್ಗ ಎ, ಬಿಗೆ ಮೀಸಲಾತಿ ಕೈಬಿಟ್ಟಿದ್ದೇಕೆ?

ಸುಗಮ ಆಡಳಿತಕ್ಕೆ ಬೇಕು ಮೇಯೋರಲ್ ಸಮಿತಿ

• ಪಿ.ಜಿ. ಶೆಣೈ, ಸಿ.ಆರ್. ರವೀಂದ್ರ

ಬಿಬಿಎಂಪಿಯ ವಿಕೇಂದ್ರೀಕೃತ ಆಡಳಿತವನ್ನು ಸುಗಮಗೊಳಿಸಲು ಬಿಬಿಎಂಪಿ ಕೌನ್ಸಿಲ್, ಸ್ಥಾಯಿ ಸಮಿತಿಗಳು ಹಾಗೂ ವಲಯ ಸಮಿತಿಗಳ ನಡುವೆ ಸಮನ್ವಯ ಅಗತ್ಯ. ಇದಕ್ಕಾಗಿ 'ಮೇಯೋರಲ್ ಕಾರ್ಯಕಾರಿ ಸಮಿತಿ ರಚಿಸಿಕೊಂಡು, ಈ ಸಮಿತಿಗೆ ಬಜೆಟ್ ನಿರ್ವಹಣೆಯನ್ನು ಹೊರತುಪಡಿಸಿ ಪಾಲಿಕೆಯ ಉಳಿದೆಲ್ಲಾ ಆರ್ಥಿಕ ಮತ್ತು ಆಡಳಿತಾತ್ಮಕ ಅಧಿಕಾರವನ್ನು ಚಲಾಯಿಸಲು ಅನುವು ಮಾಡುವುದು ಸೂಕ್ತ.

ಮೇಯೋರಲ್ ಕಾರ್ಯಕಾರಿ ಸಮಿತಿ ರಚನೆಯಿಂದ ಪಾಲಿಕೆಯ ವಿಕೇಂದ್ರೀಕೃತ ಆಡಳಿತ ನಿರ್ವಹಣೆಗೆ ಒತ್ತು ಕೊಟ್ಟಂತಾಗುತ್ತದೆ ಮತ್ತು ಪಾಲಿಕೆ ದಿನ ನಿತ್ಯದ ಅಗತ್ಯಗಳಿಗೆ ಬೇಕಾದ ಆಡಳಿತಾತ್ಮಕ ನಿರ್ಣಯಗಳನ್ನು ಪಾರದರ್ಶಕವಾದ ರೀತಿಯಲ್ಲಿ ತಕ್ಷಣದಲ್ಲಿ ತೆಗೆದುಕೊಳ್ಳುವುದು ಸಾಧ್ಯವಾಗಲಿದೆ. ಇದು ಪಾಲಿಕೆಯ ಆಡಳಿತವನ್ನು ಸುಗಮವಾಗಿಸಲು ಅನುಕೂಲ ಕಲ್ಪಿಸುತ್ತದೆ.

ಈ ನಿಟ್ಟಿನಲ್ಲಿ ಬಿಬಿಎಂಪಿ ಕಾಯ್ದೆಗೆ ತಿದ್ದುಪಡಿ ತಂದು ಈ ಸುಧಾರಣಾ ಕ್ರಮವನ್ನು ತೆಗೆದುಕೊಳ್ಳಬಹುದಾಗಿದೆ. 'ಮೇಯೋರಲ್ ಕಾರ್ಯಕಾರಿ ಸಮಿತಿಗೆ ಮೇಯರ್ ಅವರೇ ಅಧ್ಯಕ್ಷರಾಗಿರುತ್ತಾರೆ. ಎಲ್ಲಾ ಸ್ಥಾಯಿ ಸಮಿತಿಗಳ ಮತ್ತು ವಲಯ ಸಮಿತಿಗಳ ಅಧ್ಯಕ್ಷರುಗಳು ಮೇಯೋರಲ್ ಸಮಿತಿಯ ಸದಸ್ಯರಾಗಿರುತ್ತಾರೆ. ಮುಖ್ಯ ಆಯುಕ್ತರನ್ನು ಈ ಸಮಿತಿಯ ಕಾರ್ಯಕಾರಿ ಸದಸ್ಯರನ್ನಾಗಿ

ಪಿ.ಜಿ.ಶೆಣೈ

ಸಿ.ಆರ್. ರವೀಂದ್ರ

ನೇಮಿಸಬಹುದು. ಶಾಸನಾತ್ಮಕ ಚೌಕಟ್ಟಿನಲ್ಲಿ ಸುಧಾರಣೆ ತರುವ ಸಲುವಾಗಿ ಸರ್ಕಾರವು ಈ ಬಗ್ಗೆ ಚಿಂತಿಸುವುದು ಒಳ್ಳೆಯದು.

ಬಿಬಿಎಂಪಿ ಚುನಾವಣೆ: ಸಂವಿಧಾನದ ಆರ್ಟಿಕಲ್ 243-ಯು ಅಡಿಯಲ್ಲಿ ಸಂವಿಧಾನದ ಆದೇಶವನ್ನು ಪೂರೈಸಲು, ಬಿಬಿಎಂಪಿ ಕೌನ್ಸಿಲ್ ಚುನಾವಣೆ ಹಿಂದಿನ ಬಿಬಿಎಂಪಿ ಕೌನ್ಸಿಲ್ ಆಡಳಿತ ಅವಧಿ ಮುಗಿಯುವ ಮುನ್ನ ಅಂದರೆ, 2020ರ ಸೆಪ್ಟೆಂಬರ್ 10ಕ್ಕೆ ಮುನ್ನವೇ ನಡೆಯಬೇಕಾಗಿತ್ತು. ಆರ್ಟಿಕಲ್ 243-ಯು ಅಡಿಯ ಈ ಸಾಂವಿಧಾನಿಕ ಬದ್ಧತೆಯನ್ನು ಗಮನದಲ್ಲಿಟ್ಟುಕೊಂಡು ರಾಜ್ಯ ಸರ್ಕಾರವು ತಾನು ಬಯಸಿದಂತೆ ಬಿಬಿಎಂಪಿಯ ಈಗಿನ ಸರಹದ್ದಿನಲ್ಲಿ ಅಥವಾ ವಿಸ್ತೃತ ಸರಹದ್ದಿ ನಲ್ಲಿ ಕನಿಷ್ಠ 225 ಅಥವಾ ಗರಿಷ್ಠ 243 ವಾರ್ಡುಗಳ ಪುನರ್ವಿಂಗಡನೆ ಮಾಡಬಹುದು. ಇದಕ್ಕಾಗಿ ಎಲ್ಲಾ ಅವಶ್ಯಕ ಆಡಳಿತಾತ್ಮಕ ಕ್ರಮಗಳನ್ನು ತೆಗೆದುಕೊಂಡು ವಾರ್ಡ್ ಮರು ವಿಂಗಡಣೆಗಾಗಿ ಅಂತಿಮ ಅಧಿಸೂಚನೆಯನ್ನು ಮತ್ತು ಇದಕ್ಕೆ ಪೂರಕವಾಗಿ ವಾರ್ಡ್ ಮೀಸಲಾತಿ ಅಧಿಸೂಚನೆಯನ್ನು ರಾಜ್ಯಪತ್ರದಲ್ಲಿ ಕೂಡಲೇ ಪ್ರಕಟಿಸಿ, ರಾಜ್ಯ ಚುನಾವಣೆ ಆಯೋಗಕ್ಕೆ ಬಿಬಿಎಂಪಿ ಚುನಾವಣೆಯನ್ನು ನಡೆಸಲು ಅನುವು ಮಾಡಿಕೊಡುವುದು ಒಳ್ಳೆಯದು. ಬಿಬಿಎಂಪಿ ಕಾಯ್ದೆ ಅನುಸಾರ ಬಿಬಿಎಂಪಿ ಕೌನ್ಸಿಲ್ ರಚನೆಗಾಗಿ ವಲಯ ಸಮಿತಿಗಳನ್ನು ಪಾಲಿಕೆಯ ಪ್ರಾಧಿಕಾರಗಳಾಗಿ ಸಂರಚಿಸಬೇಕಾಗುತ್ತದೆ. ಇದಕ್ಕಾಗಿ ವಲಯಗಳ ಸರಹದ್ದನ್ನು ವಾರ್ಡ್ ಮರು ವಿಂಗಡಣೆಯ ಅಧಿಸೂಚನೆಯಲ್ಲಿಯೇ ಅಳವಡಿಸಿಕೊಂಡಿರ ಬೇಕಾಗುತ್ತದೆ. ಇಲ್ಲದಿದ್ದಲ್ಲಿ ವಲಯ ಸಮಿತಿಗಳನ್ನು ರಚಿಸಲು ಸಾಧ್ಯವಾಗುವುದಿಲ್ಲ.

ಮೀಸಲಾತಿ ಗೊಂದಲ: ಬಿಬಿಎಂಪಿ ಕಾಯ್ದೆಯ ಸೆಕ್ಷನ್ 58ರಲ್ಲಿ ಮೇಯರ್ ಮತ್ತು ಉಪ ಮೇಯರ್ ಹುದ್ದೆಗಳಿಗೆ ಹಿಂದುಳಿದ ವರ್ಗ- ಎ ಮತ್ತು ಹಿಂದುಳಿದ ವರ್ಗ – ಬಿ ಮೀಸಲಾತಿಯನ್ನು ಕೈಬಿಡಲಾಗಿದೆ. ರಾಜ್ಯದ ಎಲ್ಲಾ ಮಹಾ ನಗರ ಪಾಲಿಕೆಗಳಲ್ಲಿ ಮತ್ತು ಪೌರಸಭೆಗಳಲ್ಲಿ ಏಕ ರೂಪದ ಮೀಸಲಾತಿಯ ನೀತಿಯು ಇರುವುದನ್ನು ಗಮನದಲ್ಲಿಟ್ಟುಕೊಂಡು ಬಿಬಿಎಂಪಿ ಮೇಯರ್ ಮತ್ತು ಉಪ ಮೇಯರ್ ಹುದ್ದೆಗೂ ಈ ವರ್ಗಗಳಿಗೆ ಮೀಸಲಾತಿಯ ನಿಯಮವನ್ನು ಈ ಹಿಂದೆ ಇದ್ದಂತೆ ವಿಸ್ತರಿಸಿಕೊಳ್ಳಲು ಅನುಮಾಡಿಕೊಡಬೇಕಾದ ಅಗತ್ಯ ಇದೆ. ಈ ಬಗ್ಗೆ ರಾಜ್ಯ ಸರ್ಕಾರವು ಗಮನ ಹರಿಸು ವುದು ಸೂಕ್ತ. ಮೇಯರ್ ಮತ್ತು ಉಪ ಮೇಯರ್ ಚುನಾವಣೆಯು ಬಿಬಿಎಂಪಿ ಕೌನ್ಸಿಲ್ ಸಂರಚನೆಯ ಅವಿಭಾಜ್ಯ ಚಟುವಟಿಕೆಯಾಗಿರುವುದರಿಂದ ಈ ಬಗ್ಗೆ ಮುಂಚಿತವಾಗಿಯೇ ಸರ್ಕಾರವು ಕ್ರಮವಹಿಸುವ ಅಗತ್ಯವಿದೆ.

ಬಿಬಿಎಂಪಿ ಕಾಯ್ದೆಯ ಬದಲಾಗಿ ಬಿಬಿಎಂಪಿಯ ಆಡಳಿತಕ್ಕಾಗಿ ಒಂದು ನೂತನವಾದ ಸಮಗ್ರ ಕಾನೂನನ್ನು ಸಮರೋಪಾದಿಯಾಗಿ ಮರು ರೂಪಿಸಲು ಕ್ರಮವಹಿಸುವುದು ಸರಿಯಾದ ಮಾರ್ಗ. ಇಂತಹ ನೂತನ ಕಾನೂನನ್ನು ರೂಪಿಸುವ ಮುನ್ನ ನಾಗರಿ ಕರ ಭಾಗವಹಿಸುವಿಕೆಯೊಂದಿಗೆ ವಿವಿಧ ಕ್ಷೇತ್ರಗಳಲ್ಲಿ ತಜ್ಞರ ಅಭಿಪ್ರಾಯಗಳನ್ನು ಪರಿಗಣಿಸಿ ಮುಂದಿನ ಕ್ರಮವಹಿಸಬಹುದು. ಬಿಬಿಎಂಪಿ ಕಾಯ್ದೆಗೆ ಅಲ್ಲೊಂದು ಇಲ್ಲೊಂದು ತಿದ್ದುಪಡಿಯನ್ನು ತಂದರೆ ಯಾವುದೇ ಉದ್ದೇಶ ಈಡೇರಿಸಿದಂತಾಗುವುದಿಲ್ಲ ಎಂಬುದು ನಮ್ಮ ಅನಿಸಿಕೆ. ಸಂವಿಧಾನದ ಆಶಯದಂತೆ ಚುನಾವಣೆಯ ಮೂಲಕ ಬಿಬಿಎಂಪಿ ಕೌನ್ಸಿಲ್ ಪುನರ್ರಚಿಸುವ ನಿಟ್ಟಿನಲ್ಲಿ ಸರ್ಕಾರ ಶ್ರದ್ಧೆಯಿಂದ ಕ್ರಮವಹಿಸಬೇಕಾಗಿದೆ.

(ಲೇಖಕರು ಸೆಂಟರ್ ಫಾರ್ ಅರ್ಬನ್ ಗವರ್ನೆನ್ಸ್ ಸ್ಟಡೀಸ್ ಆ್ಯಂಡ್ ಪಾಲಿಸಿ ರಿಸರ್ಚ್ ಸಂಸ್ಥೆಯ ನಿರ್ದೇಶಕರು)

ವರ್ಷ ಕಳೆದರೂ ಅನುಷ್ಠಾನಗೊಳ್ಳದ 2020–21ನೇ ಸಾಲಿನ ಬಜೆಟ್ ಘೋಷಣೆಗಳು

ಭರವಸೆಯಲ್ಲೇ ಉಳಿದ 'ಉಚಿತ ನೀರು'

• ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: 'ನಗರದ 2.5 ಲಕ್ಷ ಮನೆಗಳಿಗೆ ತಿಂಗಳಿಗೆ 10 ಸಾವಿರ ಲೀಟರ್ ನೀರನ್ನು ಉಚಿತವಾಗಿ ಪೂರೈಕೆ ಮಾಡಲಾಗುತ್ತದೆ...'

ಬಿಬಿಎಂಪಿಯಲ್ಲಿ ಬಿಜೆಪಿ ಆಡಳಿತ ವಿದ್ದಾಗ ಮಂಡಿಸಿದ್ದ 2020–21ನೇ ಸಾಲಿನ ಬಜೆಟ್‌ನಲ್ಲಿ ನೀಡಿದ್ದ ಈ ಭರವಸೆ ವರ್ಷ ಕಳೆದರೂ ಈಡೇರಿಲ್ಲ.

'ಇದುವರೆಗೆ ಯಾವೆಲ್ಲ ಮನೆಗಳಲ್ಲಿ ತಿಂಗಳಿಗೆ 10 ಸಾವಿರ ಲೀಟರ್‌ಗಿಂತ ಕಡಿಮೆ ನೀರು ಪೂರೈಕೆ ಆಗುತ್ತಿತ್ತೋ ಅಂತಹ 2.5 ಲಕ್ಷ ಕುಟುಂಬಗಳಿಗೆ ಇದರಿಂದ ಪ್ರಯೋಜನವಾಗಲಿದೆ. ಕೊರೊನಾ ಲಾಕ್‌ಡೌನ್‌ನಿಂದ ಸಂಕಷ್ಟಕ್ಕೆ ಸಿಲುಕಿರುವ ಬಡಕುಟುಂಬಗಳಿಗೂ ಇದರಿಂದ ನೆರವಾಗಲಿದೆ' ಎಂದು ಆಗಿನ ಮೇಯರ್ ಗೌತಮ್ ಕುಮಾರ್ ಅವರು ಬಜೆಟ್ ಮಂಡನೆ ಬಳಿಕ ಸುದ್ದಿಗೋಷ್ಠಿಯಲ್ಲಿ ವಿವರಿಸಿದ್ದರು.

'ಪ್ರತಿ ಮನೆಗೆ ಉಚಿತ ನೀರು ಪೂರೈಕೆಗೆ ತಿಂಗಳಿಗೆ ₹ 150 ವೆಚ್ಚವಾಗಲಿದೆ. ಈ ಯೋಜನೆಗೆ ₹ 43 ಕೋಟಿ ಕಾಯ್ದಿರಿಸಲಾಗಿದೆ. ಬಿಬಿಎಂಪಿಗೆ ಹೊಸತಾಗಿ ಸೇರ್ಪಡೆಯಾದ 110 ವಾರ್ಡ್‌ಗಳ ಮನೆಗಳಿಗೂ ಇದರ ಪ್ರಯೋಜನ ಸಿಗಲಿದೆ. ತಿಂಗಳಿಗೆ 10 ಸಾವಿರ ಲೀಟರ್‌ಗಿಂತ ಹೆಚ್ಚು ನೀರು ಬಳಸಿದರೆ ಸಂಪೂರ್ಣ ಬಿಲ್ ಅನ್ನು ಆ ಕುಟುಂಬವೇ ಪಾವತಿಸಬೇಕು. ಈ ಕಾರ್ಯಕ್ರಮ ನೀರಿನ ಮಿತವ್ಯಯವನ್ನು ಉತ್ತೇಜಿಸಲಿದೆ' ಎಂದೂ ಹೇಳಿದ್ದರು.

'ಕುಡಿಯುವ ನೀರು ಸರಬರಾಜು ವ್ಯವಸ್ಥೆಗಾಗಿ ಕಾಮಗಾರಿಗಳಿಗೆ ಲೆಕ್ಕಶೀರ್ಷಿಕೆ ಪಿ–1802ರ ಅಡಿ ₹ 50 ಕೋಟಿ ವೆಚ್ಚಕ್ಕೆ ಅನುವು ಮಾಡಿಕೊಡಲಾಗಿದೆ. ಈ ಪೈಕಿ ₹ 13.45 ಕೋಟಿ ವೆಚ್ಚದ ಕಾಮಗಾರಿಗಳಿಗೆ ಜಾಬ್‌ಕೋಡ್‌ಗಳನ್ನು ನೀಡಲಾಗಿದೆ. ಕಾಮಗಾರಿ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳಲಾಗಿದೆ' ಎಂದು 2020–21ನೇ ಸಾಲಿನ ಬಜೆಟ್ ಕಾರ್ಯನಿರ್ವಹಣಾ ವರದಿಯಲ್ಲಿ ಹೇಳಲಾಗಿದೆ.

ಆದರೆ, ಅದರಲ್ಲಿ ಉಚಿತ ನೀರು ಪೂರೈಕೆ ಬಗ್ಗೆ ಉಲ್ಲೇಖವಿಲ್ಲ.

ಇದುವರೆಗೂ ತಿಂಗಳಿಗೆ 10 ಸಾವಿರ ಲೀಟರ್‌ಗಳಿಗಿಂತ ಕಡಿಮೆ ನೀರು ಬಳಸುವ ಯಾವುದೇ ಮನೆಗೂ ಉಚಿತ ನೀರು ಇನ್ನೂ ಸಿಕ್ಕಿಲ್ಲ.

ಈ ಬಗ್ಗೆ ಪ್ರತಿಕ್ರಿಯೆ ಪಡೆಯಲು ಈ ಹಿಂದಿನ ಮೇಯರ್ ಗೌತಮ್ ಕುಮಾರ್ ಅವರಿಗೆ ಕರೆ ಮಾಡಲಾಯಿತಾದರೂ ಅವರು ಕರೆ ಸ್ವೀಕರಿಸಲಿಲ್ಲ.

ಪಾಲಿಕೆ ಆಯುಕ್ತ ಎನ್.ಮಂಜುನಾಥ ಪ್ರಸಾದ್, 'ಈ ಬಗ್ಗೆ ಹೆಚ್ಚಿನ ಮಾಹಿತಿ ಪಡೆದು ಪ್ರತಿಕ್ರಿಯಿಸುತ್ತೇನೆ' ಎಂದು ತಿಳಿಸಿದರು.

ಪ್ರಜಾವಾಣಿ ವಿಶೇಷ

ಪುಸ್ತಕದಲ್ಲೇ ಉಳಿದ ಬಜೆಟ್ ಘೋಷಣೆಗಳು

ಬಿಬಿಎಂಪಿಯ 2020–21ನೇ ಸಾಲಿನ ಬಜೆಟ್‌ನಲ್ಲಿ ಘೋಷಿಸಿದ್ದ ಅನೇಕ ಕಾರ್ಯಕ್ರಮಗಳೂ ಅನುಷ್ಠಾನಗೊಂಡಿಲ್ಲ. ನಾಡಪ್ರಭು ಕೆಂಪೇಗೌಡರ ಹೆಸರಿನಲ್ಲಿ ಎಂಟು ಕಡೆ ಸ್ವಾಗತ ಕಮಾನುಗಳ ನಿರ್ಮಾಣ ಮಾಡುವುದಾಗಿ ಬಜೆಟ್‌ನಲ್ಲಿ ಹೇಳಲಾಗಿತ್ತು. ಇದರ ಅನುಷ್ಠಾನಕ್ಕೆ ಕೈಗೊಂಡ ಕ್ರಮಗಳ ಬಗ್ಗೆ ಕಾರ್ಯನಿರ್ವಹಣಾ ವರದಿಯಲ್ಲೂ ಉಲ್ಲೇಖವಿಲ್ಲ.

ಬಿಬಿಎಂಪಿ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್, ಉಚಿತ ಲ್ಯಾಪ್‌ಟಾಪ್ ವಿತರಣೆಯಂತಹ ಜನಪ್ರಿಯ ಯೋಜನೆಗಳನ್ನು 2020–21ರ ಬಜೆಟ್‌ನಲ್ಲಿ ಘೋಷಿಸಲಾಗಿತ್ತು. ಕೋವಿಡ್ ಕಾರಣದಿಂದ ಶಾಲಾ ಕಾಲೇಜು ಪ್ರಾರಂಭವಾಗದ ಕಾರಣ ಉಚಿತ ಬಸ್‌ಪಾಸ್‌ಗೆ ಮೀಸಲಿಟ್ಟ ಅನುದಾನ ಬಳಕೆಯಾಗಿಲ್ಲ ಎಂದು ಕಾರ್ಯನಿರ್ವಹಣಾ ವರದಿಯಲ್ಲಿ ಹೇಳಲಾಗಿದೆ. ಉಚಿತ ಬಸ್ ಪಾಸ್‌ಗೆ 2021–22ನೇ ಸಾಲಿನ ಬಜೆಟ್‌ನಲ್ಲಿ ಮತ್ತೆ ₹ 75 ಲಕ್ಷ ಅನುದಾನ ಕಾಯ್ದಿರಿಸಲಾಗಿದೆ.

ಬಡವಿದ್ಯಾರ್ಥಿಗಳಿಗೆ ದಿವಂಗತ ಅನಂತ ಕುಮಾರ್ ಹೆಸರಿನಲ್ಲಿ ಉಚಿತ ಲ್ಯಾಪ್‌ಟಾಪ್ ವಿತರಣೆಗೆ ₹ 15 ಕೋಟಿ ಕಾಯ್ದಿರಿಸಲಾಗಿತ್ತು. ಪ್ರತಿ ವಾರ್ಡ್‌ಗೆ 15 ಲ್ಯಾಪ್‌ಟಾಪ್‌ಗಳನ್ನು ಹಂಚಿಕೆ ಮಾಡಲಾಗುತ್ತದೆ ಎಂದು ಬಜೆಟ್‌ನಲ್ಲಿ ಹೇಳಲಾಗಿತ್ತು. ಈ ಅನುದಾನ ಇನ್ನೂ ಬಳಕೆಯಾಗಿಲ್ಲ. ಇದರ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ ಎಂದು ಕಾರ್ಯನಿರ್ವಹಣಾ ವರದಿಯಲ್ಲಿ ತಿಳಿಸಲಾಗಿದೆ.

ಬಿಬಿಎಂಪಿ ಕಾಯ್ದೆ: ಸರ್ಕಾರ, ಪಾಲಿಕೆಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 2020ರ ಬಿಬಿಎಂಪಿ ಕಾಯ್ದೆಯ ನಿಬಂಧನೆಗಳನ್ನು ಪ್ರಶ್ನಿಸಿ ಸಲ್ಲಿಕೆಯಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಆಧರಿಸಿ ರಾಜ್ಯ ಸರ್ಕಾರ ಮತ್ತು ಬಿಬಿಎಂಪಿಗೆ ಹೈಕೋರ್ಟ್ ನೋಟಿಸ್ ನೀಡಿದೆ.

ಸಾಮಾಜಿಕ ಕಾರ್ಯಕರ್ತ ಸಿ.ಎನ್. ದೀಪಕ್ ಮತ್ತು ಇತರರು ಸಲ್ಲಿಸಿರುವ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ವಿಚಾರಣೆ ನಡೆಸಿತು.

'ಹೊಸ ಕಾಯ್ದೆ ಪ್ರಕಾರ ವಾರ್ಡ್ ಸಮಿತಿಗಳಿಗೆ ಯಾವುದೇ ಅಧಿಕಾರ ಇರುವುದಿಲ್ಲ. ಅನುದಾನ ಹಂಚಿಕೆಯ ಅಧಿಕಾರ ಕ್ಷೇತ್ರವಾರು ಸಮಿತಿ ಮತ್ತು ವಲಯವಾರು ಸಮಿತಿಗಳಿಗೆ ನೀಡಲಾಗಿದೆ. ಇದು ಸಂವಿಧಾನದ 243ನೇ ವಿಧಿಯ ಉಲ್ಲಂಘನೆ' ಎಂದು ಅರ್ಜಿದಾರರು ದೂರಿದ್ದಾರೆ.

'ಬಿಬಿಎಂಪಿಗೆ ಪ್ರತ್ಯೇಕ ಕಾನೂನು ರೂಪಿಸುವ ಅಧಿಕಾರವನ್ನು ರಾಜ್ಯ ಸರ್ಕಾರ ಹೊಂದಿಲ್ಲ' ಎಂದು ಆರೋಪಿಸಿ ಸಾಮಾಜಿಕ ಕಾರ್ಯಕರ್ತ ಎಲ್.ಎಸ್. ಮಲ್ಲಿಕಾರ್ಜುನ ಸಲ್ಲಿಸಿರುವ ಅರ್ಜಿಯನ್ನೂ ಒಟ್ಟಿಗೆ ವಿಚಾರಣೆ ನಡೆಸಲು ಪೀಠ ನಿರ್ಧರಿಸಿತು.

ತಮಿಳುನಾಡಿನ ಚುನಾವಣೆ ಹಿನ್ನೆಲೆಯಲ್ಲಿ ಉಸ್ತುವಾರಿ ವಹಿಸಿಕೊಂಡಿರುವ ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ ಅವರು ಧರಪುರಂನ ವಿಧಾನ ಸಭಾ ಕ್ಷೇತ್ರದ ಅಭ್ಯರ್ಥಿ ಡಾ.ಎಲ್‌.ಮುರುಗನ್ ಪರವಾಗಿ ವಿವಿಧ ಭಾಗಗಳಲ್ಲಿ ಪ್ರಚಾರ ನಡೆಸಿದರು

ನೇಪಾಳದ ಹಿರಿಯ ಕಮ್ಯುನಿಸ್ಟ್ ಮುಖಂಡ ಬಿಷ್ಣು ಬಹದ್ದೂರ್ ನಿಧನ

ಕಠ್ಮಂಡು: ನೇಪಾಳದ ಹಿರಿಯ ಕಮ್ಯುನಿಸ್ಟ್ ಮುಖಂಡ ಬಿಷ್ಣು ಬಹದ್ದೂರ್ ಮನಂಧರ್ (91) ಸೋಮವಾರ ನಿಧನರಾದರು.

ನ್ಯೂಮೋನಿಯಾದಿಂದ ಬಳಲುತ್ತಿದ್ದ ಅವರು ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾರೆ ಎಂದು ಮೂಲಗಳು ತಿಳಿಸಿವೆ.

26 ವರ್ಷ ನೇಪಾಳ ಕಮ್ಯುನಿಸ್ಟ್ ಪಕ್ಷದ (ಯುನೈಟೆಡ್) ಪ್ರಧಾನ ಕಾರ್ಯದರ್ಶಿಯಾಗಿ ಅವರು ಕಾರ್ಯನಿರ್ವಹಿಸಿದ್ದರು.

ನೇಪಾಳದ ಪ್ರಜಾಪ್ರಭುತ್ವ ಪರ ಹೋರಾಟದಲ್ಲಿ ಸಕ್ರಿಯರಾಗಿದ್ದ ಮನಂಧರ್ ಅವರು, ಆರು ದಶಕಗಳಿಂದ ಕಮ್ಯುನಿಸ್ಟ್ ಚಳವಳಿಯೊಂದಿಗೆ ನಂಟು ಹೊಂದಿದ್ದರು.

ಬೆಂಗಳೂರು ವಿಶ್ವವಿದ್ಯಾಲಯದ ಸೆನೆಟ್ ಸಭಾಂಗಣದಲ್ಲಿ ವಿಶ್ವವಿದ್ಯಾಲಯದ 55ನೇ ಕಿರು ಘಟಿಕೋತ್ಸವವು ಕುಲಪತಿ ಪ್ರೊ. ಕೆ.ಆರ್. ವೇಣುಗೋಪಾಲ್ ಕೆ.ಆರ್ ಅವರ ಅಧ್ಯಕ್ಷತೆಯಲ್ಲಿ ನೆರವೇರಿತು. ಕುಲಸಚಿವರಾದ ಪ್ರೊ. ಜೆ.ಟಿ. ದೇವರಾಜು (ಮೌಲ್ಯಮಾಪನ) , ಕೆ. ಜ್ಯೋತಿ (ಆಡಳಿತ), ಹಣಕಾಸು ಅಧಿಕಾರಿ ಎಚ್‌.ಬಿ. ಪಾರ್ವತಿ, ವಿವಿಧ ವಿಭಾಗಗಳ ಮುಖ್ಯಸ್ಥರು ಇದ್ದರು. 10,349 ವಿದ್ಯಾರ್ಥಿಗಳು ಪದವಿ ಪಡೆದರು.

ಅರಕನಕೆರೆ: ರೈತ, ಅರಣ್ಯ ಸಿಬ್ಬಂದಿ ಮೇಲೆ ಚಿರತೆ ದಾಳಿ

ಪ್ರಜಾವಾಣಿ ವಾರ್ತೆ

ಮೇಲುಕೋಟೆ (ಮಂಡ್ಯ): ಮಂಡ್ಯ–ಮೇಲುಕೋಟೆ ಮಾರ್ಗದ ಅರಕನಕೆರೆಯಲ್ಲಿ ಹೊಲದಲ್ಲಿ ಕೆಲಸ ಮಾಡುತ್ತಿದ್ದ ರೈತ ಪ್ರತಾಪ್ ಅವರ ಮೇಲೆ ಸೋಮವಾರ ಚಿರತೆಯೊಂದು ದಾಳಿ ಮಾಡಿದೆ. ವಿಷಯ ತಿಳಿದು, ಪರಿಶೀಲಿಸಲು ಹೋದ ಅರಣ್ಯ ಇಲಾಖೆ ಸಿಬ್ಬಂದಿ ಮೇಲೂ ಚಿರತೆ ದಾಳಿ ನಡೆಸಿದೆ.

ರೈತನ ಮೇಲೆ ನಡೆದ ದಾಳಿ ವಿಷಯ ತಿಳಿದ ನಾಗಮಂಗಲ ಉಪವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಶಂಕರೇಗೌಡ, ಪಾಂಡವಪುರ ತಾಲ್ಲೂಕು ಅರಣ್ಯಾಧಿಕಾರಿ ಪುಟ್ಟಸ್ವಾಮಿ, ಅರಣ್ಯವೀಕ್ಷಕ ಮರಿಸ್ವಾಮಿ ಸ್ಥಳಕ್ಕೆ ತೆರಳಿದ್ದರು. ಈ ವೇಳೆ ಅವಿತಿದ್ದ ಚಿರತೆಯು ದಾಳಿ ನಡೆಸಿದ್ದು, ಮರಿಸ್ವಾಮಿ ಗಾಯಗೊಂಡಿದ್ದಾರೆ.

ಗಾಯಾಳುಗಳನ್ನು ಹೆಚ್ಚಿನ ಚಿಕಿತ್ಸೆಗೆ ಮೈಸೂರಿನ ಆಸ್ಪತ್ರೆಗೆ ದಾಖಲಿಸಲಾಗಿದೆ.

ಚಿರತೆ ಸೆರೆಗಾಗಿ, ಅರಕನಗೆರೆಯಲ್ಲಿ ಇಡಲಾದ ಬೋನು

ಚಿರತೆ ಓಡಾಡುವ ಸ್ಥಳದಲ್ಲಿ ಬೋನು ಇರಿಸಲಾಗಿದೆ. ದಾಳಿಗೊಳಗಾದ ರೈತರಿಗೆ ಪರಿಹಾರ ನೀಡಲು ಸರ್ಕಾರಕ್ಕೆ ವರದಿ ನೀಡಲಾಗಿದ್ದು, ಮೇಲುಕೋಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಶಂಕರೇಗೌಡ ಮಾಹಿತಿ ನೀಡಿದ್ದಾರೆ.

ನೀಳಾದೇವಿ ಅವರಿಗೆ ಪ್ರೊ. ಎಸ್‌.ವಿ. ಪರಮೇಶ್ವರ ಭಟ್ಟ ಸಂಸ್ಮರಣ ಪ್ರಶಸ್ತಿ ಪ್ರದಾನ

'ಸಾಹಿತ್ಯ ವಲಯದಲ್ಲೂ ಗುಂಪುಗಾರಿಕೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇಂದಿನ ಸಾಹಿತ್ಯ ಕ್ಷೇತ್ರದಲ್ಲಿ ಗುಂಪುಗಾರಿಕೆ ಇದೆ. ಇದು ಈ ಕ್ಷೇತ್ರದ ಬೆಳವಣಿಗೆ ದೃಷ್ಟಿಯಿಂದ ಅಪಾಯಕಾರಿ' ಎಂದು ಹಿರಿಯ ಲೇಖಕಿ ಡಾ. ಕೆ.ಆರ್. ಸಂಧ್ಯಾರೆಡ್ಡಿ ಅವರು ಅಭಿಪ್ರಾಯಪಟ್ಟರು.

'ಪ್ರೊ.ಎಸ್.ವಿ. ಪರಮೇಶ್ವರ ಭಟ್ಟ ಪ್ರತಿಷ್ಠಾನ'ದಿಂದ ಸೋಮವಾರ ಆಯೋಜಿಸಿದ್ದ 2021ನೇ ಸಾಲಿನ 'ಪ್ರೊ.ಎಸ್.ವಿ. ಪರಮೇಶ್ವರ ಭಟ್ಟ ಸಂಸ್ಮರಣ ಪ್ರಶಸ್ತಿ' ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

'ಮಹಿಳಾ ಸಾಹಿತ್ಯವನ್ನು ಓದುವ ವರ್ಗದಿಂದ ದೂರವಿರಿಸಿದ ಕೀರ್ತಿ ವಿಮರ್ಶಕರಿಗೆ ಸಲ್ಲುತ್ತದೆ. ಲೇಖಕಿಯರನ್ನು ವಿಮರ್ಶಕರು ಕಡೆಗಣಿಸಿದ್ದಾರೆ. ಲೇಖಕಿಯರ ಪುಸ್ತಕಗಳನ್ನು ವಿಮರ್ಶೆಗೆ ತೆಗೆದುಕೊಳ್ಳಬಾರದು ಎಂಬ ರೀತಿಯ ಅಸ್ಪೃಶ್ಯ ಮನೋಭಾವ ವಿಮರ್ಶಕರಲ್ಲಿದೆ' ಎಂದು ಬೇಸರ ವ್ಯಕ್ತಪಡಿಸಿದರು.

'ಲೇಖಕಿಯರು ಬರೆದಿದ್ದೆಲ್ಲ ಶ್ರೇಷ್ಠವಲ್ಲ. ಆದರೆ, ಅದರಲ್ಲಿನ ಮುತ್ತುಗಳನ್ನು ಆರಿಸಬೇಕಿದೆ. ವಿಮರ್ಶಕರು ಸಾಗರದಲ್ಲಿನ ಮುತ್ತುಗಳನ್ನು ಆರಿಸದಿದ್ದರೂ ಸಾಗರದಲ್ಲಿ ಪಯಣಿಸುವ ಸುಖ ನೀಡಬೇಕು' ಎಂದು ಅವರು ಹೇಳಿದರು.

'ಲೇಖಕಿಯರಲ್ಲಿ ಶ್ರೇಷ್ಠತೆಯ ಗರ್ವ ಇಲ್ಲ. ಅಂತಹ ಮಹತ್ವದ ಲೇಖಕಿಯರ ಸಾಲಿನಲ್ಲಿ ನೀಳಾದೇವಿ ಅಗ್ರಸ್ಥಾನದಲ್ಲಿ ನಿಲ್ಲುತ್ತಾರೆ. ತಮ್ಮ ಸುತ್ತಲಿನ ಪರಿಸರದಲ್ಲಿನ ಆಗುಹೋಗುಗಳನ್ನು ಕಾದಂಬರಿಯ ವಸ್ತುವಾಗಿಸಿದರು' ಎಂದು ವಿವರಿಸಿದರು.

ಕಥೆ, ಕಾದಂಬರಿಗಳು ರೂಪುಗೊಂಡಿದ್ದ ಮಹಿಳಾ ಸಾಹಿತ್ಯದಿಂದ ಎಂಬುದನ್ನು ಮರೆಯಬಾರದು. ಕಾದಂಬರಿ ಮೂಲಕ ಓದುವ ವರ್ಗವನ್ನು ಸೃಷ್ಟಿಸಿದ ಕೀರ್ತಿ ಮಹಿಳಾ ಸಾಹಿತ್ಯಕ್ಕೆ ಸಲ್ಲುತ್ತದೆ ಎಂದರು.

ಪ್ರಶಸ್ತಿ ಪುರಸ್ಕೃತ ಹಿರಿಯ ಲೇಖಕಿ ನೀಳಾದೇವಿ ಮಾತನಾಡಿ, 'ಎಸ್.ವಿ. ಪರಮೇಶ್ವರ ಭಟ್ಟ (ಎಸ್‌ವಿಪಿ) ಅವರ ಪ್ರೇರಣೆಯಿಂದಲೇ ನಾನು ಅನುವಾದ ಮಾಡಲು ಸಾಧ್ಯವಾಯಿತು. ಅಮೆರಿಕದ ಲೇಖಕ ನಾಥನೀಲ್ ಅವರ ಎರಡು ಇಂಗ್ಲಿಷ್ ಕಾದಂಬರಿಗಳ ಆಧರಿಸಿ 'ಚಕ್ರ' ಹಾಗೂ 'ಕಸೂತಿ ಮತ್ತು ಕಪ್ಪುಕಲೆ' ಕಾದಂಬರಿಗಳು ರಚನೆಯಾದವು. ಭಾಷೆಗಿಂತ ಭಾವನೆ ಮುಖ್ಯ ಎಂಬ ಅವರ ಮಾತು ಅನುವಾದಕ್ಕೆ ಸ್ಫೂರ್ತಿ ನೀಡಿತು' ಎಂದು ಹೇಳಿದರು.

ವಿಮರ್ಶಕ ವಿವೇಕ್ ರೈ, 'ಪರಮೇಶ್ವರ ಭಟ್ಟರು ಕನ್ನಡ ಕಟ್ಟುವುದನ್ನು ಕಲಿಸಿದರು. ಬಿಎಂಶ್ರೀ, ತೀನಂಶ್ರೀ, ಡಿಎಲ್‌ಎನ್ ಅವರ ವಿದ್ಯಾರ್ಥಿಗಳಾಗಿ ನಂತರ ಅವರ ಜೊತೆಯಲ್ಲಿ ವೃತ್ತಿ ನಿರ್ವಹಿಸಿದರು. ಕನ್ನಡದ ಪುಸ್ತಕಗಳನ್ನು ಮನೆಮನೆಗೆ ಹಂಚುವ ಮೂಲಕ ಕನ್ನಡದ ಪ್ರೀತಿಯನ್ನು ಹಂಚಿದರು' ಎಂದು ಹೇಳಿದರು.

ಎಸ್‌ವಿಪಿ ಅವರ ಪುತ್ರ ಎಸ್.ಪಿ. ರಾಮಚಂದ್ರ ಮಾತನಾಡಿ, 'ತಂದೆಯವರು ಶ್ರೇಷ್ಠ ಅನುವಾದಗಳನ್ನು ಮಾಡಿದ್ದಾರೆ ಅವರ ಅನುವಾದ ಸಾಹಿತ್ಯವನ್ನು ಕುವೆಂಪು ಭಾಷಾ ಭಾರತಿ ಪ್ರಕಟಿಸುತ್ತಿದೆ' ಎಂದರು.



ಹಿರಿಯ ಲೇಖಕಿ ನೀಳಾದೇವಿ ಅವರಿಗೆ ಲೇಖಕಿ ಡಾ.ಕೆ.ಆರ್.ಸಂಧ್ಯಾರೆಡ್ಡಿ ಪ್ರಶಸ್ತಿ ಪ್ರದಾನ ಮಾಡಿದರು. ಸಾಹಿತಿ ದಾಮೋದರ ಶೆಟ್ಟಿ, ಬಹುರೂಪಿ ಪ್ರಕಾಶನದ ಜಿ.ಎನ್‌.ಮೋಹನ್, ಜಿ.ಪಿ.ಓ ಚಂದ್ರು, ಶೈಲಜಾ ಸುರೇಶ್, ಎಸ್‌ವಿಪಿ ಪ್ರತಿಷ್ಠಾನದ ಅಧ್ಯಕ್ಷ ಪ್ರೊ. ಬಿ.ಎ. ವಿವೇಕ ರೈ, ವನಮಾಲಾ ಸಂಪನ್ನಕುಮಾರ್, ಎಸ್‌.ಪಿ.ರಾಮಚಂದ್ರ ಇದ್ದರು

ಪುರಸಭಾ ಕಾರ್ಯಾಲಯ ಜಗಣಿ

ಜಿಗಣಿ ಹೋಬಳಿ, ಆನೇಕಲ್ ತಾಲ್ಲೂಕು,
ಬೆಂಗಳೂರು ನಗರ ಜಿಲ್ಲೆ–560 105, ದೂರವಾಣಿ ಸಂಖ್ಯೆ : 080–29760400,
E- mail – itstaff_ulb_jigani@yahoo.com, jiganideo@gmail.com
ಕ್ರ.ಸಂ ಜಿಪುಕಾ/ಕಂ.ಶಾ/ಸಿಆರ್/01/2016–17 ದಿನಾಂಕ: 19.03.2021

"ಸಾರ್ವಜನಿಕ ಪ್ರಕಟಣೆ"

ಈ ಮೂಲಕ ಜಿಗಣಿ ಪುರಸಭೆ ವ್ಯಾಪ್ತಿಯ ಗೌರವಾನ್ವಿತ ಆಸ್ತಿ ಮಾಲೀಕರಿಗೆ/ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಮಾನ್ಯ ನಿರ್ದೇಶಕರು ಪೌರಾಡಳಿತ ನಿರ್ದೇಶನಾಲಯ ಬೆಂಗಳೂರು ರವರ ಸುತ್ತೋಲೆ ಸಂಖ್ಯೆ 292794 DMA/DEV/TAX/3/2020, ದಿನಾಂಕ: 19.02.2021 ರ ಸುತ್ತೋಲೆಯಂತೆ ಮತ್ತು ಕರ್ನಾಟಕ ಪೌರಸಭೆಗಳ ಅಧಿನಿಯಮ 1964 ರ 2021 ಕ್ಕೆ ದಿನಾಂಕ:18–02–2021 ರಂದು ಕಲಂ 101,102, ಮತ್ತು 102ಎ ಗಳಿಗೆ ತಿದ್ದುಪಡಿ ಮಾಡಿರುವಂತೆ ಜಿಗಣಿ ಪುರಸಭೆ ವ್ಯಾಪ್ತಿಯಲ್ಲಿ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಅಧಿಸೂಚನೆಯಂತೆ ಕರ್ನಾಟಕ ಮುದ್ರಾಂಕ ಕಾಯ್ದೆ 1957 ಸೆಷನ್ 45ಬಿ ರಡಿಯಲ್ಲಿ ಪ್ರಕಟಿಸಲಾದ ಚಾಲ್ತಿ ಸಾಲಿನ ಮಾರ್ಗಸೂಚಿ ದರಗಳನ್ವಯ ದಿನಾಂಕ: 01–04–2021 ರಿಂದ ಅನ್ವಯವಾಗುವಂತೆ ಈ ಕೆಳಕಂಡ ಅಂಶಗಳನ್ನು ಆಧಾರವಾಗಿಟ್ಟುಕೊಂಡು ಆಸ್ತಿ ತೆರಿಗೆಯ ಶೇಕಡವಾರು ದರಗಳನ್ವಯ ಆಸ್ತಿ ತೆರಿಗೆ ನಿಗಧಿಪಡಿಸಲು ದಿನಾಂಕ: 03.03.2021 ರಂದು ಮಾನ್ಯ ಅಧ್ಯಕ್ಷರು ಜಿಗಣಿ ಪುರಸಭೆ ಕಾರ್ಯಾಲಯ ಆನೇಕಲ್ ತಾಲ್ಲೂಕು ಬೆಂಗಳೂರು ನಗರ ಜಿಲ್ಲೆ ರವರ ಅಧ್ಯಕ್ಷತೆಯಲ್ಲಿ ನಡೆದ ವಿಶೇಷ ಸಭೆಯ ವಿಷಯ ಸಂಖ್ಯೆ:01 ರಲ್ಲಿ ಜಿಗಣಿ ಪುರಸಭೆ ವ್ಯಾಪ್ತಿಯಲ್ಲಿ ಬರುವ ಆಸ್ತಿಗಳಿಗೆ ಮಾನ್ಯ ನಿರ್ದೇಶಕರು ಪೌರಾಡಳಿತ ನಿರ್ದೇಶನಾಲಯ ಬೆಂಗಳೂರು ರವರು ದಿನಾಂಕ: 19.02.2021 ರಂದು ಹೊರಡಿಸಿರುವ ಸುತ್ತೋಲೆಯಂತೆ ದಿನಾಂಕ: 01.04.2021 ರಿಂದ ಜಾರಿಗೆ ಬರುವಂತೆ ತೆರಿಗೆ ನಿಗಧಿಪಡಿಸಲು ತೀರ್ಮಾನಿಸಲಾಗಿರುತ್ತದೆ.

❖ **ವಿಶೇಷ ಸಭೆಯ ಪ್ರಮುಖ ಅಂಶಗಳು ಈ ಕೆಳಕಂಡಂತಿವೆ,**

- ಜಿಗಣಿ ಪುರಸಭೆ ವ್ಯಾಪ್ತಿಯಲ್ಲಿ ಸ್ವತ್ತಿನ ಮೂಲ ಮೌಲ್ಯವನ್ನು ಕರ್ನಾಟಕ ಸ್ಟಾಂಪ್‌ಗಳ ಅಧಿನಿಯಮ 1957 ಸೆಕ್ಷನ್ 45ಬಿ ರಡಿಯಲ್ಲಿ ಪ್ರಕಟಿಸಲಾದ ಚಾಲ್ತಿ ಸಾಲಿನ ಮಾರುಕಟ್ಟೆ ಮೌಲ್ಯದ ಮಾರ್ಗಸೂಚಿ ಬೆಲೆಯ ಶೇ 25 ರಷ್ಟನ್ನು ಸುತ್ತೋಲೆಯಂತೆ ಪರಿಗಣಿಸುವುದು.
- ವಾಸದ ಮತ್ತು ವಾಣಿಜ್ಯೇತರ ಕಟ್ಟಡಗಳಿಗೆ ಸ್ವತ್ತು ತೆರಿಗೆಯ ದರವನ್ನು ಕಟ್ಟಡದ ಮೂಲ ಬೆಲೆಯ ಶೇ 0.2 ಕ್ಕಿಂತ ಕಡಿಮೆ ಇಲ್ಲದಂತೆ ಹಾಗೂ ಶೇ 1.5 ಕ್ಕಿಂತ ಹೆಚ್ಚಿಗೆ ಇಲ್ಲದಂತೆ ಪ್ರದೇಶ/ವಾರ್ಡ್‌ವಾರು ಲೆಕ್ಕಚಾರ ಮಾಡಿ ದರ ನಿಗದಿಪಡಿಸುವುದು.
- ಕಟ್ಟಡಕ್ಕೆ ಹೊಂದಿಕೊಂಡಿರುವ 1000 ಚ.ಅ ವರೆಗಿನ ಖಾಲಿ ಭೂಮಿಗೆ ವಿನಾಯಿತಿಯನ್ನು ನೀಡುವುದು ಮತ್ತು 1000 ಚ.ಅ ಗಿಂತ ಹೆಚ್ಚಿರುವ ಖಾಲಿ ಭೂಮಿಗೆ ಸ್ವತ್ತು ತೆರಿಗೆಯನ್ನು ಖಾಲಿ ಭೂಮಿಗೆ ವಿಧಿಸುವ ಆಸ್ತಿ ತೆರಿಗೆ ದರದಲ್ಲಿ ವಿಧಿಸುವುದು.
- ಖಾಲಿ ಭೂಮಿಗೆ ಸಂಬಂಧಪಟ್ಟಂತೆ ತೆರಿಗೆಗೆ ಗುರಿಯಾಗತಕ್ಕ ಭೂಮಿಯ ಮೂಲ ಬೆಲೆಯ ಶೇ.0.2 ಕ್ಕಿಂತ ಕಡಿಮೆ ಇಲ್ಲದಂತೆ ಮತ್ತು ಶೇ 0.5 ಕ್ಕಿಂತ ಹೆಚ್ಚಿಗೆ ಇಲ್ಲದಂತೆ ವಿಧಿಸುವುದು.
- 2021–22 ನೇ ಸಾಲಿಗೆ ಅನ್ವಯವಾಗುವಂತೆ ವಸತಿ, ವಾಣಿಜ್ಯ, ಕೈಗಾರಿಕೆ, ಹಾಗೂ ಖಾಲಿ ನಿವೇಶನ ಉಪಯೋಗಗಳಿಗೆ ಸಂಬಂಧಿಸಿದಂತೆ ಶೇಕಡವಾರು ಆಸ್ತಿ ತೆರಿಗೆ ದರವನ್ನು ನಿಗಧಿಪಡಿಸಲಾಗಿರುತ್ತದೆ. ಸದರಿ ಪ್ರತಿಯನ್ನು ಪುರಸಭೆ ಕಛೇರಿಯ ನೋಟೀಸ್‌ಬೋರ್ಡ್‌ನಲ್ಲಿ ಪ್ರಚುರಪಡಿಸಲಾಗಿದೆ.

ಮೇಲ್ಕಂಡ ಅಂಶಗಳನ್ನು ಆದಾರವಾಗಿಟ್ಟುಕೊಂಡು, ಜಿಗಣಿ ಪುರಸಭೆ ವ್ಯಾಪ್ತಿಯಲ್ಲಿರುವ ಆಸ್ತಿಗಳಿಗೆ (ವಸತಿ,ವಾಣಿಜ್ಯ,ಕೈಗಾರಿಕೆ, ಖಾಲಿನಿವೇಶನ) ದಿನಾಂಕ: 01–04–2021 ರಿಂದ ಅನ್ವಯವಾಗುವಂತೆ "ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿಯಲ್ಲಿ" ಆಸ್ತಿ ತೆರಿಗೆ ಶೇಕಡವಾರು ದರಗಳನ್ನು ನಿಗದಿಪಡಿಸಲಾಗಿರುತ್ತದೆ. ಪ್ರದೇಶ/ಬಡಾವಣೆವಾರು ದರಗಳನ್ನು ಪುರಸಭೆ ಕಛೇರಿಯ ನೋಟೀಸ್ ಬೋರ್ಡ್‌ನಲ್ಲಿ ಪ್ರಕಟಿಸಲಾಗಿದೆ. ಮತ್ತು ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಗಾಗಿ ಪುರಸಭೆ ಕಛೇರಿಯ ಕಂದಾಯ ಶಾಖೆಯ ಅಧಿಕಾರಿಗಳನ್ನು ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿರುತ್ತದೆ. ಜಿಗಣಿ ಪುರಸಭೆ ಗೌರವಾನ್ವಿತ ಆಸ್ತಿ ಮಾಲೀಕರು ಸಕಾಲದಲ್ಲಿ ತೆರಿಗೆ ಪಾವತಿ ಮಾಡಿ ಪುರಸಭೆ ಅಭಿವೃದ್ಧಿಗೆ ಸಹಕರಿಸಲು ಈ ಮೂಲಕ ಕೋರಿದೆ.

ಸಹಿ/– ಅಧ್ಯಕ್ಷರು ಪುರಸಭೆ, ಜಿಗಣಿ	ಸಹಿ/– ಉಪಾಧ್ಯಕ್ಷರು ಪುರಸಭೆ, ಜಿಗಣಿ	ಸಹಿ/– ಮುಖ್ಯಾಧಿಕಾರಿಗಳು ಪುರಸಭೆ, ಜಿಗಣಿ

3.20 ಲಕ್ಷ ಅನಕ್ಷರಸ್ಥರ ಸಾಕ್ಷರರಾಗಿಸುವ ಗುರಿ– ಸಚಿವ ಸುರೇಶ್‌ಕುಮಾರ್

2ರಿಂದ ‘ಓದು–ಬರಹ’ ಅಭಿಯಾನ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಐದು ಜಿಲ್ಲೆಗಳ ವ್ಯಾಪ್ತಿಯಲ್ಲಿ ಅಭಿಯಾನ
- ಕಲಿಕಾರ್ಥಿಗಳಿಗೆ ಪರೀಕ್ಷೆ ನಡೆಸಿ ಪ್ರಮಾಣಪತ್ರ
- ನವ ಸಾಕ್ಷರರಿಗೆ ಜೀವನೋಪಾಯ ಕೌಶಲ ಒದಗಿಸಲು ಒತ್ತು

ಬೆಂಗಳೂರು: ‘ಕೇಂದ್ರ ಸರ್ಕಾರ ಪ್ರಾಯೋಜಿತ ‘ಓದು-ಬರಹ’ ಅಭಿಯಾನಕ್ಕೆ ಏ. 2ರಂದು ಚಾಲನೆ ನೀಡುವ ಮೂಲಕ, 3.20 ಲಕ್ಷ ಅನಕ್ಷರಸ್ಥರನ್ನು ಮೇ ತಿಂಗಳ ಒಳಗೆ ಸಾಕ್ಷರಸ್ಥರನ್ನಾಗಿಸಲು ಕ್ರಮ ವಹಿಸಲಾಗುವುದು’ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ಹೇಳಿದರು.

ಲೋಕ ಶಿಕ್ಷಣ ನಿರ್ದೇಶನಾಲಯದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಸಚಿವರು, ‘ರಾಯಚೂರು, ಯಾದಗಿರಿ, ಕಲಬುರ್ಗಿ, ವಿಜಯಪುರ ಮತ್ತು ಚಾಮರಾಜನಗರ ಜಿಲ್ಲೆಗಳ 24 ತಾಲ್ಲೂಕು, 219 ಗ್ರಾಮ ಪಂಚಾಯಿತಿ ಮತ್ತು 19 ನಗರ, ಪಟ್ಟಣ ಪ್ರದೇಶಗಳಲ್ಲಿ ಈ ಅಭಿಯಾನ ಹಮ್ಮಿಕೊಳ್ಳಲಾಗುವುದು. 15ರಿಂದ 50 ವರ್ಷದ 2.4 ಲಕ್ಷ ಮಹಿಳೆಯರು ಮತ್ತು 80 ಸಾವಿರ ಪುರುಷ ಅನಕ್ಷರಸ್ಥರಿಗೆ ಅಕ್ಷರ ಕಲಿಸುವ ಗುರಿ ಹೊಂದಲಾಗಿದೆ’ ಎಂದರು.

‘ಕಲಿಕೆ ಪೂರ್ಣಗೊಂಡ ನಂತರ ಕಲಿಕಾರ್ಥಿಗಳಿಗೆ ಪರೀಕ್ಷೆ ನಡೆಸಿ, ಉತ್ತೀರ್ಣರಾದವರಿಗೆ ಸಾಕ್ಷರತಾ ಪ್ರಮಾಣ ಪತ್ರ ನೀಡಲಾಗುವುದು. ರಾಜ್ಯದಲ್ಲಿ ಗುರುತಿಸಲಾಗಿರುವ 1.26 ಕೋಟಿ ಅನಕ್ಷರಸ್ಥರ ಪೈಕಿ ಈಗಾಗಲೇ 57 ಲಕ್ಷ ಜನರನ್ನು ಸಾಕ್ಷರರನ್ನಾಗಿ ಮಾಡಲಾಗಿದೆ. ಕೇಂದ್ರ ಸರ್ಕಾರದ ರಾಷ್ಟ್ರೀಯ ಶಿಕ್ಷಣ ನೀತಿಯ ಆಶಯದಂತೆ ಸಾಕ್ಷರತೆಯ ಪ್ರಮಾಣವನ್ನು ಮುಂದಿನ ದಿನಗಳಲ್ಲಿ ಹೊಸ ಸ್ತರಕ್ಕೆ ಕೊಂಡೊಯ್ಯಲು ಕ್ರಿಯಾ ಯೋಜನೆಯನ್ನು ಇಲಾಖೆ ರೂಪಿಸುತ್ತಿದೆ. ನವ ಸಾಕ್ಷರರಿಗೆ ಜೀವನೋಪಾಯ ಕೌಶಲಗಳನ್ನು ದೊರಕಿಸಲು ಕ್ರಮ ವಹಿಸಲಾಗುತ್ತಿದೆ’ ಎಂದರು.

‘ಗ್ರಾಮ ಪಂಚಾಯಿತಿ ಸದಸ್ಯರಾಗಿ ಚುನಾಯಿತರಾಗಿರುವ ಅನಕ್ಷರಸ್ಥ ಸದಸ್ಯರಿಗೆ ನಿರಂತರ ಸಾಕ್ಷರತಾ ಕಾರ್ಯಕ್ರಮವನ್ನು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಳ್ಳಲು ಸಂಬಂಧಪಟ್ಟ ಇಲಾಖೆಗಳ ಮುಖ್ಯಸ್ಥರೊಂದಿಗೆ ಚರ್ಚಿಸಿ, ಕ್ರಿಯಾ ಯೋಜನೆ ಸಿದ್ಧಪಡಿಸಬೇಕು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆ ನಿರ್ವಹಿಸುತ್ತಿರುವ ಗ್ರಾಮೀಣ ಗ್ರಂಥಾಲಯಗಳಲ್ಲಿ ನವ ಸಾಕ್ಷರರ ಕಲಿಕೆಗೆ ಪೂರಕವಾಗಿ ಪ್ರತ್ಯೇಕ ಆಸನಗಳು ಹಾಗೂ ಪುಸ್ತಕ ಸಂಗ್ರಹಣ ಕಪಾಟುಗಳನ್ನು ಪೂರೈಸುವ ವ್ಯವಸ್ಥೆ ಮಾಡಬೇಕು ಎಂದೂ ಅಧಿಕಾರಿಗಳಿಗೆ ಸುರೇಶ್‌ಕುಮಾರ್ ಸೂಚಿಸಿದರು.

ಲೋಕ ಶಿಕ್ಷಣ ಇಲಾಖೆಯ ನಿರ್ದೇಶಕಿ ಸುಷ್ಮಾ ಗೋಡಬೋಲೆ ಇದ್ದರು.

‘ಮೋದಿ ಸರ್ಕಾರವನ್ನು ಟೀಕಿಸಿಲ್ಲ’

ಪ್ರಜಾವಾಣಿ ವಾರ್ತೆ

ತುಮಕೂರು: ‘ಒಕ್ಕೂಟ ವ್ಯವಸ್ಥೆಗೆ ಸಂಬಂಧಿಸಿದಂತೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವನ್ನು ಟೀಕಿಸಿಲ್ಲ ಎಂದು ಸಣ್ಣ ನೀರಾವರಿ ಸಚಿವ ಜೆ.ಸಿ. ಮಾಧುಸ್ವಾಮಿ ಇಲ್ಲಿ ಸೋಮವಾರ ಸ್ಪಷ್ಟಪಡಿಸಿದ್ದಾರೆ.

‘ಈವರೆಗೆ ಕೇಂದ್ರದಲ್ಲಿ ಆಡಳಿತ ನಡೆಸಿದ ಎಲ್ಲ ಸರ್ಕಾರಗಳ ಬಗ್ಗೆ ಮಾತನಾಡಿದ್ದೇನೆ’ ಎಂದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಮೈಸೂರಿನಲ್ಲಿ ನಡೆದ ವಿಚಾರ ಸಂಕಿರಣವೊಂದರಲ್ಲಿ ನನ್ನ ಅಭಿಪ್ರಾಯ ಹೇಳಿದ್ದೇನೆ. ಅದು ಅಲ್ಲಿಗೆ ಸೀಮಿತ’ ಎಂದರು.

‘ನನ್ನ ಹೇಳಿಕೆ ಬಗ್ಗೆ ಯಾರೇ ಮಾತನಾಡುವ ಮೊದಲು ಪೂರ್ತಿ ಭಾಷಣ ಕೇಳಬೇಕು. ನಾನು ಬಿಜೆಪಿ ಸಚಿವನಾಗಿ, ಕೇಂದ್ರ ಸರ್ಕಾರದ ವಿರುದ್ಧ ಮಾತನಾಡಲು ಸಾಧ್ಯವೇ? ನನ್ನ ಹೇಳಿಕೆಯನ್ನು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ತಪ್ಪಾಗಿ ಅರ್ಥೈಸಿಕೊಂಡಿದ್ದಾರೆ’ ಎಂದು ಹೇಳಿದರು.

ಆಳಂದ ತಾಲ್ಲೂಕಿನ ಖಜೂರಿ ಕೋರಣೇಶ್ವರ ಮಠದ ಉತ್ತರಾಧಿಕಾರಿಯಾಗಿ ನೀಲಲೋಚನಾ ತಾಯಿ ಅವರಿಗೆ ಅಧಿಕಾರ ಹಸ್ತಾಂತರಿಸಲಾಯಿತು. ಮುರುಘೇಂದ್ರ ಸ್ವಾಮೀಜಿ, ಸತ್ಯಕ್ಕ ತಾಯಿ ಇದ್ದರು

ಖಜೂರಿ ಮಠಕ್ಕೆ ಮಹಿಳಾ ಉತ್ತರಾಧಿಕಾರಿ

ಆಳಂದ (ಕಲಬುರ್ಗಿ ಜಿಲ್ಲೆ): ತಾಲ್ಲೂಕಿನ ಗಡಿಗ್ರಾಮ ಖಜೂರಿಯ ಕೋರಣೇಶ್ವರ ಮಠದ ಉತ್ತರಾಧಿಕಾರಿಯನ್ನಾಗಿ ನೀಲಲೋಚನಾ ತಾಯಿ ಅವರನ್ನು ಪೀಠಾಧಿಪತಿ ಮುರುಘೇಂದ್ರ ಕೋರಣೇಶ್ವರ ಸ್ವಾಮೀಜಿ ಘೋಷಿಸಿದರು.

ಖಜೂರಿಯ ಕೋರಣೇಶ್ವರ ಮಠಕ್ಕೆ ಈವರೆಗೆ ನಾಲ್ವರು ಮಠಾಧೀಶರು ಆಗಿದ್ದಾರೆ. ಸೋಮವಾರ ಮಠದಲ್ಲಿ ನಡೆದ ಸರಳ ಕಾರ್ಯಕ್ರಮದಲ್ಲಿ ಬಸವಕಲ್ಯಾಣದ ಬಸವಾಶ್ರಮದ ಸತ್ಯಕ್ಕ ತಾಯಿ ಅವರ ಸಮ್ಮುಖದಲ್ಲಿ ಅಧಿಕಾರ ಹಸ್ತಾಂತರಿಸಲಾಯಿತು. ಖಜೂರಿ ಗ್ರಾಮದವರಾದ ನೀಲಲೋಚನಾ ತಾಯಿಯವರು ನೆರೆಯ ಮಹಾರಾಷ್ಟ್ರದ ಮುರುಮದಲ್ಲಿ ಮರಾಠಿಯಲ್ಲಿ 10ನೇ ತರಗತಿವರೆಗೆ ಶಿಕ್ಷಣ ಪಡೆದಿದ್ದಾರೆ. ನಂತರ ಚಿತ್ರದುರ್ಗದ ಮುರುಘಾಮಠದಲ್ಲಿ 3 ವರ್ಷ ಅಧ್ಯಾತ್ಮಿಕ, ಧಾರ್ಮಿಕ ಶಿಕ್ಷಣ ಪಡೆದು ಸನ್ಯಾಸ ಸ್ವೀಕರಿಸಿದರು.

ರಥೋತ್ಸವ

ಚಿತ್ರದುರ್ಗ ಜಿಲ್ಲೆಯ ನಾಯಕನಹಟ್ಟಿ ಗುರು ತಿಪ್ಪೇರುದ್ರಸ್ವಾಮಿ ವಾರ್ಷಿಕ ಜಾತ್ರೆಯ ಪ್ರಯುಕ್ತ ಸೋಮವಾರ ಸಾವಿರಾರು ಭಕ್ತರ ಸಮ್ಮುಖದಲ್ಲಿ ಮಹಾರಥೋತ್ಸವ ನಡೆಯಿತು

ಶ್ರೀಗುರು ತಿಪ್ಪೇರುದ್ರಸ್ವಾಮಿ ಜಾತ್ರಾ ಮಹೋತ್ಸವದ ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ
https://bit.ly/3cyZLbl

ಕರಾವಳಿ, ಮಲೆನಾಡಿನಲ್ಲಿ ಮಳೆ ಸಿಡಿಲು ಬಡಿದು ವ್ಯಕ್ತಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರಾವಳಿ ಹಾಗೂ ಮಲೆನಾಡು ಭಾಗದಲ್ಲಿ ಸೋಮವಾರವೂ ಮಳೆ ಸುರಿದಿದೆ. ಭಾನುವಾರದಂದು ಸಿಡಿಲು ಬಡಿದು ಕುಂಸಿ ಬಳಿ ವ್ಯಕ್ತಿಯೊಬ್ಬರು ಮೃತಪಟ್ಟಿದ್ದು, ಮುಂಡಗೋಡ ಬಳಿ 17 ಕುರಿಗಳು ಸತ್ತಿವೆ.

ಚಿಕ್ಕಮಗಳೂರು ಜಿಲ್ಲೆಯ ಕಳಸ ತಾಲ್ಲೂಕಿನ ಹಲವೆಡೆ ಸಂಜೆ ಆಲಿಕಲ್ಲು ಸಹಿತ ರಭಸದ ಮಳೆಯಾಗಿದೆ. ಅರ್ಧ ಗಂಟೆ ಧಾರಾಕಾರವಾಗಿ ಮಳೆ ಸುರಿದಿದ್ದು, ಕಾಫಿ, ಅಡಿಕೆ ತೋಟಗಳಲ್ಲಿ ತೇವಾಂಶ ಹೆಚ್ಚಿದೆ. ಬಿಸಿಲಿನಿಂದ ಹಲವೆಡೆ ಹಸಿರು ಒಣಗತೊಡಗಿತ್ತು. ಕೃಷಿಕರಲ್ಲಿ ಮಳೆ ಭರವಸೆ ಮೂಡಿಸಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ, ಬೆಳ್ತಂಗಡಿಯಲ್ಲಿ ಅಲ್ಪ ಪ್ರಮಾಣದ ಮಳೆಯಾಗಿದೆ. ಮಂಗಳೂರಿನಲ್ಲಿ ಸಂಜೆ ಗುಡುಗು ಸಹಿತ ಧಾರಾಕಾರ ಮಳೆ ಆಯಿತು. ಉಡುಪಿ ಜಿಲ್ಲೆಯ ಕಾರ್ಕಳ ಹಾಗೂ ಸುತ್ತಲಿನ ಭಾಗದಲ್ಲಿ ಧಾರಾಕಾರ ಮಳೆಯಾಗಿದೆ.

ಉತ್ತರ ಕನ್ನಡ ಜಿಲ್ಲೆಯ ಮಲೆನಾಡು ಮತ್ತು ಅರೆ ಮಲೆನಾಡು ಪ್ರದೇಶಗಳಲ್ಲಿ ಗುಡುಗು ಸಹಿತ ಜೋರಾಗಿ ಮಳೆಯಾಯಿತು. ಮುಂಡಗೋಡದ ಶಿಂಗನಹಳ್ಳಿ ಸಿಡಿಲು ಬಡಿದು 17 ಕುರಿಗಳು ಸತ್ತಿವೆ. ಶಿಂಗನಳ್ಳಿಯಲ್ಲಿ ಮನೆಗೂ ಸಿಡಿಲು ಬಡಿದಿದೆ, ಯಾವುದೇ ಅನಾಹುತವಾಗಿಲ್ಲ. ಕಾತೂರ, ನಂದಿಪುರ,ಶಿಂಗನಹಳ್ಳಿ ಗ್ರಾಮದಲ್ಲಿ ಗಾಳಿ ಸಹಿತ ಮಳೆಯಾಗಿದೆ.

ಯಲ್ಲಾಪುರ, ಶಿರಸಿ ಹಾಗೂ ಸಿದ್ದಾಪುರದಲ್ಲೂ ಬಿರುಸಿನ ಮಳೆ ಸುರಿದಿದೆ. ಕರಾವಳಿಯಾದ್ಯಂತ ಅಲ್ಲಲ್ಲಿ ಮೋಡ ಕವಿದ ವಾತಾವರಣವಿದ್ದು, ಸೆಕೆಯ ತೀವ್ರತೆ ಹೆಚ್ಚಿದೆ.

ಕುಂಸಿ ಸಮೀಪದ ಆಯನೂರಿನ ಚಾಮುಂಡಿಪುರದಲ್ಲಿ ಭಾನುವಾರ ಸಂಜೆ ಸಿಡಿಲು ಬಡಿದು ಶಿವಮೊಗ್ಗದ ಅಣ್ಣಾನಗರ ನಿವಾಸಿ ಆದಿಲ್ (18) ಮೃತಪಟ್ಟಿದ್ದಾರೆ. ಶುಂಠಿ ಕಣದಲ್ಲಿ ಕೆಲಸ ಮಾಡುವಾಗ ಅವಘಡ ನಡೆದಿದೆ.

ಕಳಸ ಸಮೀಪದ ಹೆಬ್ಬೊಳೆ ಬಳಿ ಸೋಮವಾರ ಮಧ್ಯಾಹ್ನ ರಭಸವಾಗಿ ಮಳೆ ಸುರಿಯಿತು

ನಿಧನ ವಾರ್ತೆ

ಮಾಜಿ ಶಾಸಕ ಫಾದರ್ ಜೇಕಬ್

ಕಲಘಟಗಿ(ಧಾರವಾಡ): ತಾಲ್ಲೂಕಿನ ತುಮರಿಕೊಪ್ಪ ಶಾಲೆಯ ಸಂಸ್ಥಾಪಕ, ಶಿಕ್ಷಣ ತಜ್ಞ, ಮಾಜಿ ಶಾಸಕ ಫಾದರ್ ಜೇಕಬ್ (90) ಸೋಮವಾರ ನಿಧನರಾದರು.

1983ರಲ್ಲಿ ಕಲಘಟಗಿ ಮತಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಶಾಸಕರಾಗಿ ಆಯ್ಕೆಯಾದ ಬಳಿಕ ಅಂದಿನ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ಇವರನ್ನು ಲೋಕಲ್ ಫೈನಾನ್ಸ್ ಕಮಿಷನ್ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದ್ದರು.

ಆಂಗ್ಲಮಾಧ್ಯಮ ಶಾಲೆ ಸ್ಥಾಪನೆ ಮಾಡಿ ತಾಂತ್ರಿಕ ಶಿಕ್ಷಣಕ್ಕೆ ಒತ್ತು ನೀಡಿದರು. ತಮ್ಮ ಸಂಸ್ಥೆಯಿಂದ ರಸ್ತೆ, ಮನೆಗಳನ್ನು ನಿರ್ಮಿಸಿ ಗ್ರಾಮ ಸ್ವರಾಜ್ಯ ಪರಿಕಲ್ಪನೆ ಸಾಕಾರಗೊಳಿಸಿದ್ದರು. ಅಂತ್ಯಕ್ರಿಯೆ ಮಂಗಳವಾರ (ಮಾ.30) ಸಂಜೆ 4 ಗಂಟೆಗೆ ಪಟ್ಟಣದ ಮಾಚಾಪುರ ಹತ್ತಿರ ಸೇಂಟ್ ಮೇರಿಸ್ ಶಾಲೆಯ ಆವರಣದಲ್ಲಿ ಕ್ರೈಸ್ತ ಸಂಪ್ರದಾಯದ ಪ್ರಕಾರ ನೆರವೇರಲಿದೆ.

ಚಿತ್ತರಂಜನ್ ದಾಸ್



ಸುಳ್ಯ (ದಕ್ಷಿಣ ಕನ್ನಡ): ದೆಹಲಿಯ ಆಕಾಶವಾಣಿ ಉದ್ಘೋಷಕ, ಜಾಹೀರಾತು ಉದ್ಯಮಿ, ಅನುವಾದಕರಾಗಿದ್ದ ತಾಲ್ಲೂಕಿನ ನೆಲ್ಲೂರು ಕೆಮ್ರಾಜೆಯ ಎ.ವಿ. ಚಿತ್ತರಂಜನ್ ದಾಸ್ (61) ಸುಳ್ಯದಲ್ಲಿ ಹೃದಯಾಘಾತದಿಂದ ಭಾನುವಾರ ರಾತ್ರಿ ನಿಧನರಾದರು. ಅವರಿಗೆ ಪತ್ನಿ, ಇಬ್ಬರು ಪುತ್ರಿಯರು ಇದ್ದಾರೆ.

ಬೆಂಗಳೂರಿನಲ್ಲಿ ನೆಲೆಸಿರುವ ಅವರು, ಕೆಲ ದಿನಗಳ ಹಿಂದೆ ಊರಿಗೆ ಬಂದಿದ್ದು, ಭಾನುವಾರ ರಾತ್ರಿ ವಾಪಸು ತೆರಳುವವರಿದ್ದರು. ಅಮರಮುಡ್ನೂರು ಗ್ರಾಮದ ಮೈರಾಳ ಬಳಿಯ ಮನೆಯೊಂದರಲ್ಲಿ ಪೂಜಾ ಕಾರ್ಯಕ್ರಮಕ್ಕೆ ಹೋಗಿದ್ದ ಅವರಿಗೆ ಹೃದಯಾಘಾತವಾಗಿದೆ. ದೆಹಲಿ ಆಕಾಶವಾಣಿಯಿಂದ ಪ್ರಸಾರವಾಗುತ್ತಿದ್ದ ಕನ್ನಡ ವಾರ್ತೆಗಳನ್ನು ಓದುತ್ತಿದ್ದವರಲ್ಲಿ ಚಿತ್ತರಂಜನ್ ದಾಸ್ ಒಬ್ಬರಾಗಿದ್ದರು. ಕೆಲಕಾಲ ಸುಳ್ಯದಲ್ಲಿ ಪತ್ರಕರ್ತರಾಗಿಯೂ ಕಾರ್ಯ ನಿರ್ವಹಿಸಿದ್ದರು.

ಕುಲಪತಿ ಹುದ್ದೆ ಆಮಿಷ: ₹ 17.5 ಲಕ್ಷ ಪಡೆದು ವಂಚನೆ

ರಾಮಸೇನೆ ಮುಖಂಡನ ಬಂಧನ

ಪ್ರಜಾವಾಣಿ ವಾರ್ತೆ

ಪ್ರಸಾದ್ ಅತ್ತಾವರ

ಮಂಗಳೂರು: ರಾಯಚೂರು ವಿಶ್ವವಿದ್ಯಾಲಯದ ಕುಲಪತಿ ಮಾಡಿಸುವುದಾಗಿ ನಂಬಿಸಿ ಮಂಗಳೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕರೊಬ್ಬರಿಂದ ₹17.5 ಲಕ್ಷ ಪಡೆದು ವಂಚಿಸಿದ ಆರೋಪದ ಮೇಲೆ ರಾಮಸೇನೆ ಮುಖಂಡ ಪ್ರಸಾದ್ ಅತ್ತಾವರ ಅವರನ್ನು ಪೊಲೀಸರು ಸೋಮವಾರ ಬಂಧಿಸಿದ್ದಾರೆ.

ಮಂಗಳೂರು ವಿಶ್ವವಿದ್ಯಾಲಯದ ಕಾಲೇಜು ಅಭಿವೃದ್ಧಿ ಸಮಿತಿ ನಿರ್ದೇಶಕರಾಗಿರುವ ಡಾ.ಜೈಶಂಕರ್ ಅವರಿಗೆ, ವಿವೇಕ್ ಆಚಾರ್ಯ ಮೂಲಕ ಪ್ರಸಾದ್ ಅತ್ತಾವರ ಪರಿಚಯವಾಗಿದ್ದರು.

‘ಮುಖ್ಯಮಂತ್ರಿ ಸೇರಿದಂತೆ ಪ್ರಮುಖರ ಜೊತೆ ನಂಟು ಹೊಂದಿದ್ದು, ₹30 ಲಕ್ಷ ಕೊಟ್ಟರೆ ಕುಲಪತಿ ಮಾಡಿಸುತ್ತೇನೆ’ ಎಂದು ನಂಬಿಸಿದ್ದ ಪ್ರಸಾದ್ ಅತ್ತಾವರ, ಗಣ್ಯ ವ್ಯಕ್ತಿಗಳೊಂದಿಗೆ ತೆಗೆಸಿಕೊಂಡಿರುವ ಫೋಟೊಗಳನ್ನು ನೀಡಿದ್ದರು. ವಿವೇಕ ಆಚಾರ್ಯ ಅವರ ಮೂಲಕ ಪ್ರಾಧ್ಯಾಪಕರಿಂದ ₹17.5 ಲಕ್ಷ ಪಡೆದುಕೊಂಡಿದ್ದರು. ಉಳಿದ ಹಣಕ್ಕೆ 3 ಖಾಲಿ ಚೆಕ್ ಪಡೆದಿದ್ದರು.

‘ವರ್ಷ ಕಳೆದರೂ ಯಾವುದೇ ಕೆಲಸ ಆಗಿರಲಿಲ್ಲ. ಮೋಸ ಹೋಗಿರುವುದು ಗೊತ್ತಾಗುತ್ತಿದ್ದಂತೆಯೇ ಪ್ರಾಧ್ಯಾಪಕರು ಹಣ ವಾಪಸ್ ಕೇಳಿದ್ದರು. ಆಗ ಪ್ರಸಾದ್ ಅತ್ತಾವರ ಬೈದು, ಜೀವ ಬೆದರಿಕೆ ಹಾಕಿದ್ದಾನೆ’ ಎಂದು ಕಂಕನಾಡಿ ನಗರ ಪೊಲೀಸ್ ಠಾಣೆಯಲ್ಲಿ ದಾಖಲಿಸಿರುವ ದೂರಿನಲ್ಲಿ ವಿವೇಕ್ ಆಚಾರ್ಯ ತಿಳಿಸಿದ್ದಾರೆ.

ವಿವಿಧ ಹಿಂದೂ ಸಂಘಟನೆಗಳ ನಂಟು ಹೊಂದಿರುವ ಪ್ರಸಾದ್ ಅತ್ತಾವರ, ಶ್ರೀರಾಮ ಸೇನೆ ಜಿಲ್ಲಾ ಘಟಕದ ಅಧ್ಯಕ್ಷನಾಗಿ, ರಾಜ್ಯ ಸಂಚಾಲಕನಾಗಿ ಕೆಲಸ ಮಾಡಿದ್ದರು. ಅಲ್ಲಿಂದ ಹೊರಬಂದು ರಾಮಸೇನೆಯನ್ನು ಆರಂಭಿಸಿದ್ದು, 2016 ರಲ್ಲಿ ಬಿಜೆಪಿ ಸೇರಿದ್ದರು. 2009 ರಲ್ಲಿ ನಡೆದ ಅಮ್ನೇಷಿಯಾ ಪಬ್ ಮೇಲಿನ ದಾಳಿಯ ಪ್ರಮುಖ ಆರೋಪಿಯಾಗಿದ್ದು, ಆದರೆ, ಕೋರ್ಟ್‌ನಲ್ಲಿ ಆರೋಪ ಸಾಬೀತಾಗಿರಲಿಲ್ಲ.

‘ಪ್ರಸಾದ್ ಅತ್ತಾವರ ಹೆಸರು ಕಂಕನಾಡಿ ನಗರ ಹಾಗೂ ಮಂಗಳೂರು ಉತ್ತರ ಪೊಲೀಸ್ ಠಾಣೆಯ ರೌಡಿ ಪಟ್ಟಿಯಲ್ಲಿದ್ದು, ಇತರ ಠಾಣೆಗಳಲ್ಲೂ ದೂರುಗಳಿವೆ’ ಎಂದು ಪೊಲೀಸ್ ಕಮಿಷನರ್ ಶಶಿಕುಮಾರ್ ಎನ್. ತಿಳಿಸಿದ್ದಾರೆ.

ಕರ್ನಾಟಕ ಸರ್ಕಾರ
ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ, ಹುಬ್ಬಳ್ಳಿ
ನಿರ್ದೇಶಕರ ಕಚೇರಿ, ವಿದ್ಯಾನಗರ, ಹುಬ್ಬಳ್ಳಿ–580 021
ದೂರವಾಣಿ (ಕ): 0836–2373348 ಫ್ಯಾಕ್ಸ್ : 0836–2373724
No:KIMS/SUP(1)/C/235/2020-21 ದಿನಾಂಕ: 26–03–2021
ಟೆಂಡರ್ ಪ್ರಕಟಣೆ–2ನೇ ಕರೆ
ಈ ಮೂಲಕ ಅಧಿಕೃತ ಪೂರೈಕೆದಾರರಿಗೆ ತಿಳಿಸುವುದೇನೆಂದರೆ, ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ, ಹುಬ್ಬಳ್ಳಿ ಇಲ್ಲಿನ ಆಸ್ಪತ್ರೆಗೆ ಅವಶ್ಯವಿರುವ Drugs /disposal/Chemical items ಪೂರೈಕೆಗಾಗಿ ಇ–ಟೆಂಡರ ಮುಖಾಂತರ ಕರೆಯಲಾಗಿದೆ. ಈ ಬಗ್ಗೆ ನಿಗಧಿಪಡಿಸಿದ ಹೆಚ್ಚಿನ ವಿವರ ಮತ್ತು ಮಾಹಿತಿಯನ್ನು www.eproc.karnataka.gov.in ವೆಬ್‌ಸೈಟನಲ್ಲಿ ಪಡೆಯಬಹುದು.
Eproc Indent No : ME/2020-21/IND3654
ME/2020-21/IND3655 ME/2020-21/IND3650
ಸಹಿ/– ನಿರ್ದೇಶಕರು
ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ, ಹುಬ್ಬಳ್ಳಿ

ಕಾರ್ಯಪಾಲಕ ಇಂಜಿನಿಯರ್, ನಂ.4, ಹೇಮಾವತಿ ಎಡದಂಡೆ ನಾಲಾ ವಿಭಾಗ, ಕಾನೀನಿ (ನಿ), ತುರುವೇಕೆರೆ.
ಕಾರ್ಯಪಾಲಕ ಇಂಜಿನಿಯರ್, ನಂ,4, ಹೇಮಾವತಿ ಎಡದಂಡೆ ನಾಲಾ ವಿಭಾಗ ತುರುವೇಕೆರೆ–ತುಮಕೂರು ಜಿಲ್ಲೆ, ಪಿನ್–572227
ಸಂ:12/2020–21 ದಿನಾಂಕ:29.03.2021
ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು, ರವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ನಂ.04 ಹೇಮಾವತಿ ಎಡದಂಡೆ ನಾಲಾ ವಿಭಾಗ, ಕಾನೀನಿನಿ ತುರುವೇಕೆರೆ ವ್ಯಾಪ್ತಿಯ ಈ ಕೆಳಗೆ ನಮೂದಿಸಿರುವ ಇಂಡೆಂಟ್ ನಂಬರ್‌ನ ಕಾಮಗಾರಿಗಳಿಗೆ ಐಟಂವಾರು ಟೆಂಡರ್‌ನ್ನು “ಎರಡು ಲಕೋಟೆ” ಪದ್ಧತಿಯಲ್ಲಿ KW-3 ನಿಬಂಧನೆಗಳೊಂದಿಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ.
(1) Improvements to Road from Kibbanahally to Kibbanahally Palya in Tiptur Taluk (34582). ಕಾಮಗಾರಿ ಟೆಂಡರ್‌ಗಿಟ್ಟ ಮೊತ್ತ : ರೂ: 84.77 ಲಕ್ಷ, ಇ.ಎಂ.ಡಿ. ಮೊತ್ತ: ರೂ: 1.695 ಲಕ್ಷ, ದರ್ಜೆ I ‘ಬಿ’ ಮತ್ತು ಮೇಲ್ಪಟ್ಟ ಗುತ್ತಿಗೆದಾರರು, ಕೆಲಸ ಪೂರ್ಣಗೊಳಿಸಲು ಕಾಲಮಿತಿ (ಮಳೆಗಾಲ ಸೇರಿದಂತೆ) 04 ತಿಂಗಳು. ಫಾರಂ ಶುಲ್ಕ ಇ–ಪೋರ್ಟಲ್‌ನಲ್ಲಿ ನಿಗಧಿಪಡಿಸಿದಂತೆ, ಇ–ಪೋರ್ಟಲ್‌ನಲ್ಲಿ ಆಕ್ಷೇಪಣೆಗಳಿಗೆ ಕೊನೆಯ ದಿನಾಂಕ: 31.03.2021 ಸಂಜೆ 16.00 ಗಂಟೆ ವರೆಗೆ. ಇ–ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 29.03.2021 ರಿಂದ 07.04.2021 ಸಂಜೆ 16.00 ಗಂಟೆ ರವರೆಗೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 09.04.2021 ಸಂಜೆ: 16.30 ಗಂಟೆ ನಂತರ. ಆರ್ಥಿಕ ಬಿಡ್ ತೆರೆಯುವ ದಿನಾಂಕ ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ. ಕಾಮಗಾರಿ ವಿವರ, ಷರತ್ತುಗಳು, ಕಾಲಾವಧಿ ಹಾಗೂ ಇನ್ನಿತರ ವಿವರಗಳನ್ನು ಇ–ಪ್ರೊಕ್ಯೂರ್ ಮೆಂಟ್ ಪೋರ್ಟಲ್ ಸಿಸ್ಟಮ್ http://eproc.karnataka.gov.in ಮೂಲಕ ಪಡೆಯಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ನಂ.4, ಹೇಮಾವತಿ ಎಡದಂಡೆ ನಾಲಾ ವಿಭಾಗ, ಕಾನೀನಿ(ನಿ), ತುರುವೇಕೆರೆ.
DIPR/TUM/505/MCA/2020-21
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಗೋವಿಂದರಾಜನಗರ ವಿಭಾಗ, 2ನೇ ಮಹಡಿ, ಶಕ್ತಿ ಸೌಧ, 4ನೇ ಬಿ ಮುಖ್ಯರಸ್ತೆ, ಎಂ.ಸಿ. ಬಡಾವಣೆ, ವಿಜಯನಗರ, ಬೆಂಗಳೂರು–560 040.
ಸಂಖ್ಯೆ: ಕಾಪಾಅ(ಗೋರಾನ)/ಟೆಂಡರ್/ಜಿಎಲ್–28/2020–21 ದಿನಾಂಕ: 26.03.2021
ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) (ದ್ವಿಲಕೋಟೆ ಪದ್ಧತಿ)
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)
ಕಾರ್ಯಪಾಲಕ ಅಭಿಯಂತರರು ಗೋವಿಂದರಾಜನಗರ ವಿಭಾಗ, ಬೃ.ಬೆಂ.ಮ.ಪಾಲಿಕೆ ಇವರು 1) 2020–21 ಸಾಲಿಗೆ ಸರ್ಕಾರದ ಆದೇಶ ಕ್ರ ಸಂ: 1, 2, 3ರಂತೆ ಗೋವಿಂದರಾಜನಗರ ಕ್ಷೇತ್ರದ ವಾರ್ಡ್ ಸಂಖ್ಯೆ: 103, 105 ಮತ್ತು 131ರಲ್ಲಿ ರಸ್ತೆಗಳು, ಚರಂಡಿಗಳು ಹಾಗೂ ಪಾದಚಾರಿ ಮಾರ್ಗಗಳನ್ನು ಸಮಗ್ರ ಅಭಿವೃದ್ಧಿ ಮಾಡುವ ಕಾಮಗಾರಿಗಾಗಿ 2) 2020–21 ಸಾಲಿಗೆ ಸರ್ಕಾರದ ಆದೇಶ ಕ್ರ ಸಂ: 1, 2, 3, 4ರಂತೆ ಗೋವಿಂದರಾಜನಗರ ಕ್ಷೇತ್ರದ ವಾರ್ಡ್ ಸಂಖ್ಯೆ: 103, 104 ಮತ್ತು 105ರಲ್ಲಿ ಕಟ್ಟಡ, ಆಟದ ಮೈದಾನ, ರಸ್ತೆಗಳು, ಚರಂಡಿಗಳು ಹಾಗೂ ಪಾದಚಾರಿ ಮಾರ್ಗಗಳನ್ನು ಸಮಗ್ರ ಅಭಿವೃದ್ಧಿ ಮಾಡುವ ಕಾಮಗಾರಿಗಾಗಿ ಈ ಕೆಳಗಿನ ಪಟ್ಟಿಯಲ್ಲಿರುವ ಕಾಮಗಾರಿಗಳಿಗೆ ಸಮಾಲೋಚಕರನ್ನು ನೇಮಿಸಿಕೊಳ್ಳಲು (ತಾಂತ್ರಿಕ & ಆರ್ಥಿಕ) ಪ್ರಸ್ತಾವನೆಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ	ಕಾಮಗಾರಿಗಳ ಹೆಸರು	ಯೋಜನೆಯ ಮೊತ್ತ (₹. ಕೋಟಿಗಳಲ್ಲಿ)	ಪಿಎಂಸಿ ಮೊತ್ತ (₹. ಲಕ್ಷಗಳಲ್ಲಿ)
	ನಿರ್ಮಾಣ ಮೇಲ್ವಿಚಾರಣೆ, ಯೋಜನೆ ನಿರ್ವಹಣೆ ಸಲಹೆ ಸೇವೆಗಳು ಮತ್ತು ಗುಣಮಟ್ಟ ನಿಯಂತ್ರಣಕ್ಕಾಗಿ ಸಲಹೆ ಸೇವೆಗಳು		
1.	2020–21 ಸಾಲಿಗೆ ಸರ್ಕಾರದ ಆದೇಶದ ಕ್ರ ಸಂ: 1, 2, 3ರಂತೆ ಗೋವಿಂದರಾಜನಗರ ಕ್ಷೇತ್ರದ ವಾರ್ಡ್ ಸಂಖ್ಯೆ: 103, 105 ಮತ್ತು 131ರಲ್ಲಿ ರಸ್ತೆಗಳು, ಚರಂಡಿಗಳು ಹಾಗೂ ಪಾದಚಾರಿ ಮಾರ್ಗಗಳನ್ನು ಸಮಗ್ರ ಅಭಿವೃದ್ಧಿ ಮಾಡುವುದು.	9.25	9.25
2.	2020–21 ಸಾಲಿಗೆ ಸರ್ಕಾರದ ಆದೇಶದ ಕ್ರ ಸಂ: 1, 2, 3, 4ರಂತೆ ಗೋವಿಂದರಾಜನಗರ ಕ್ಷೇತ್ರದ ವಾರ್ಡ್ ಸಂಖ್ಯೆ: 103, 104 ಮತ್ತು 105ರಲ್ಲಿ ಕಟ್ಟಡ, ಆಟದ ಮೈದಾನ, ರಸ್ತೆಗಳು, ಚರಂಡಿಗಳು ಹಾಗೂ ಪಾದಚಾರಿ ಮಾರ್ಗಗಳನ್ನು ಸಮಗ್ರ ಅಭಿವೃದ್ಧಿ ಮಾಡುವುದು.	11.50	11.50
ಇಎಂಡಿ (₹. ಗಳಲ್ಲಿ)	ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಆಇ 675, ವೆಚ್ಚ–12/2020, ಬೆಂಗಳೂರು ಇದರಂತೆ, ದಿನಾಂಕ: 22–12–2020 ರಿಂದ 31–12–2021 ರವರೆಗೆ ಮಾತ್ರ ಇಎಂಡಿಗೆ ವಿನಾಯಿತಿ ನೀಡಲಾಗಿದೆ.		

ಟೆಂಡರ್ ವೇಳಾಪಟ್ಟಿ: (1) ಆಕ್ಷೇಪಣೆಗಳಿಗೆ ಕೊನೆಯ ದಿನಾಂಕ 29.03.2021ರ ಮಧ್ಯಾಹ್ನ 3:00 ಗಂಟೆಯವರೆಗೆ. (2) ಬಿಡ್ ಪೂರ್ವಭಾವಿ ಸಭೆಯನ್ನು ಕಾರ್ಯಪಾಲಕ ಅಭಿಯಂತರರ ಕಚೇರಿ (ಗೋವಿಂದರಾಜನಗರ ವಿಭಾಗ) ಇಲ್ಲಿ ದಿನಾಂಕ 31.03.2021ರ ಮಧ್ಯಾಹ್ನ 3:30 ಗಂಟೆಗೆ ನಡೆಸಲಾಗುವುದು. (3) ಭರ್ತಿ ಮಾಡಿದ ಪ್ರಸ್ತಾವನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 09.04.2021ರ ಸಂಜೆ 4:00 ಗಂಟೆಯವರೆಗೆ. (4) ತಾಂತ್ರಿಕ ಪ್ರಸ್ತಾವನೆಗಳನ್ನು ದಿನಾಂಕ 12.04.2021ರ ಸಂಜೆ 4:00 ಗಂಟೆಗೆ ತೆರೆಯಲಾಗುವುದು. (5) ಆರ್ಥಿಕ ಪ್ರಸ್ತಾವನೆಗಳನ್ನು ತಾಂತ್ರಿಕ ಪ್ರಸ್ತಾವನೆಗಳಿಗೆ ಅನುಮೋದನೆ ದೊರೆತ ನಂತರ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://eproc.karnataka.gov.in ನಲ್ಲಿ ಪಡೆದುಕೊಳ್ಳಬಹುದಾಗಿದೆ.
ಸಹಿ/– ಕಾರ್ಯಪಾಲಕ ಅಭಿಯಂತರರು – ಗೋವಿಂದರಾಜನಗರ ವಿಭಾಗ
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

(ಕರ್ನಾಟಕ ಸರ್ಕಾರ)
ಶಸ್ತ್ರಚಿಕಿತ್ಸಕರ ಕಾರ್ಯಾಲಯ, ಸಾರ್ವಜನಿಕ ಆಸ್ಪತ್ರೆ, ಹೊಳೆನರಸೀಪುರ.
No:GH/HNP/OS/01/2020-21 ದಿನಾಂಕ: 26.03.2021
ಅಲ್ಪಾವಧಿ ಮರು ಟೆಂಡರ್ ಅಧಿಸೂಚನೆ
ಸಾರ್ವಜನಿಕ ಆಸ್ಪತ್ರೆ 250 ಹಾಸಿಗೆಗಳು ಮತ್ತು ತಾಯಿ ಮತ್ತು ಮಕ್ಕಳ ಆಸ್ಪತ್ರೆ 30 ಹಾಸಿಗೆಗಳು ಒಟ್ಟು 280 ಹಾಸಿಗೆಗಳ ಈ ಎರಡು ಆಸ್ಪತ್ರೆಗಳಿಗೆ ಒಟ್ಟು 52 ಹೊರಗುತ್ತಿಗೆ ಹುದ್ದೆಗಳ ಸೇವೆ ಒದಗಿಸುವ ಸಲುವಾಗಿ ಪ್ರತ್ಯೇಕ ದ್ವಿ ಲಕೋಟೆ ಪದ್ಧತಿಯಲ್ಲಿ ಇ ಪ್ರೊಕ್ಯೂರ್‌ಮೆಂಟ್ ಮುಖಾಂತರ ಅಲ್ಪಾವಧಿ ಮರು ಟೆಂಡರ್ ಆಹ್ವಾನಿಸಲಾಗಿದೆ. ದಿನಾಂಕ: 26.03.2021 ರಿಂದ ಟೆಂಡರ್ ದಾಖಲಾತಿಗಳನ್ನು ಸಲ್ಲಿಸಬಹುದಾಗಿದೆ. ಟೆಂಡರ್ ದಾಖಲಾತಿಗಳ ಸ್ವೀಕೃತಿಗೆ ಅಂತಿಮ ದಿನಾಂಕ:09.04.2021 ರ ಪೂರ್ವಾಹ್ನ 11.30 ಗಂಟೆಯಾಗಿರುತ್ತದೆ. ಹೆಚ್ಚಿನ ವಿವರಗಳು www.eproc.karnataka.gov.in ನಲ್ಲಿ ಲಭ್ಯವಿರುತ್ತದೆ.
ಸಹಿ/– ಶಸ್ತ್ರಚಿಕಿತ್ಸಕರು, ಸಾರ್ವಜನಿಕ ಆಸ್ಪತ್ರೆ, ಹೊಳೆನರಸೀಪುರ. ಹಾಸನ ಜಿಲ್ಲೆ–573211
ವಾಸಾಸಂಇ/ಹಿಸನಿ/ಹಾಸನ/ಎಂಸಿಎ/746/2020–21
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

NATIONAL ASSESSMENT AND ACCREDITATION COUNCIL(NAAC)
(An Autonomous Institution of the University Grants Commission)
P.O.Box No.1075, Nagarbhavi, Bengaluru- 560072
www.naac.gov.in
NAAC/Admin/Eng/B & C/2021 Date: 26.03.2021
TENDER NOTICE
Refurbishment of Board Room in NAAC
Sealed tenders are invited from the reputed contractors who are financially sound and well experienced for carrying out the work of refurbishment of Board Room in NAAC. The nature of engagement is purely contractual and on mutually agreed terms and conditions. The EMD for the above work Rs. 46,864/-. The last date for submission of application is 26.04.2021. For further details, please visit the website www.naac.gov.in
Contact:- The Administrative Officer, NAAC, Jnanabharathi Road, Nagarabhavi, Bengaluru-560 072. Ph: 23005101/ 23005139, Time: 10.00 AM to 1.00 PM and 2.30 PM to 5.00 PM (Monday to Friday)
Sd/- Administrative Officer

ಕಾರ್ಯಪಾಲಕ ಅಭಿಯಂತರವರ ಕಛೇರಿ, ಲೋ.ಇ, ವಿಶೇಷ ವಿಭಾಗ, ಶಿವಮೊಗ್ಗ.
ಫೋನ್‌ನಂ.:08182–222942 ಇ–ಮೇಲ್: spdivision@gmail.com
ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿ–ಲಕೋಟೆ ಪದ್ಧತಿ)
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ)
ಐ.ಎಫ್.ಟಿ. ಸಂಖ್ಯೆ: 67/2020–21 ದಿ: 26.03.2021
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ/ಡಬ್ಲ್ಯೂ–4 ನಿಯಮದನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ 1ನೇ ದರ್ಜೆ ಗುತ್ತಿಗೆದಾರರಿಗೆ CONSTRUCTION OF SAMUDHAYA BHAVAN AT NITTURU OF HUNCHADAKATTE POST IN THIRTHAHALLI TALUK EXTENSION WORK(AMRUTHA,NEAR NARAYANAGURU MAHASAMSTHANA). (Indent No. 135151) ಟೆಂಡರ್‌ನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಈ ಕೆಳಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಸದರಿ ಕಾಮಗಾರಿಯ ಟೆಂಡರ್ ಗಿಟ್ಟ ಮೊತ್ತ ರೂ. 170.19 ಲಕ್ಷ ಹಾಗೂ ಇ.ಎಂ.ಡಿ. ಮೊತ್ತ ರೂ. 2.55 ಲಕ್ಷ ಸದರಿ ಕಾಮಗಾರಿಯ ಟೆಂಡರ್ ಅವಧಿ 11 ತಿಂಗಳು ಮಳೆಗಾಲ ಸೇರಿ, ಸದರಿ ಕಾಮಗಾರಿಗೆ ಈ ಕೆಳಸಹಿ ಮಾಡಿರುವವರು ಟೆಂಡರ್ ಆಹ್ವಾನಿಸಿರುತ್ತಾರೆ. ಅರ್ಹ ಗುತ್ತಿಗೆದಾರರು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ http://eproc.karnataka.gov.in ಮುಖಾಂತರ ಟೆಂಡರ್ ದಸ್ತಾವೇಜಿನ ಸೆಕ್ಷನ್ –2 ರ (ಟೆಂಡರ್‌ದಾರರಿಗೆ ತಿಳುವಳಿಕೆ) ಕ್ಲಾಸ್–4 ರನ್ವಯ ಅರ್ಹತೆ ವಿವರಗಳನ್ನು ಗಮನಿಸತಕ್ಕದ್ದು. ವಿದ್ಯುನ್ಮಾನ ಜಾಲದಲ್ಲಿ ದಿ: 29–03–2021 ರಿಂದ 12–04–2021 ರ 17.00 ಗಂಟೆವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್‌ನ್ನು ದಿನಾಂಕ: 12–04–2021 ರ ಸಂಜೆ 05:00 ಗಂಟೆಯೊಳಗೆ ಇ–ಪ್ರೊಕ್ಯೂರ್‌ಮೆಂಟ್ ನಲ್ಲಿ ಭರಿಸತಕ್ಕದ್ದು. ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ನಲ್ಲಿ ದಿನಾಂಕ: 15–04–2021 ರಂದು ತೆರೆಯಲಾಗುವುದು ಹಾಗೂ ಆರ್ಥಿಕ ಬಿಡ್‌ನ್ನು ದಿನಾಂಕ: 16–04–2021 ರ ನಂತರ ತೆರೆಯಲಾಗುವುದು. ಹೆಚ್ಚಿನ ವಿವರಗಳು ಬೇಕಾದಲ್ಲಿ ಈ ಕಛೇರಿಯನ್ನು ಕಛೇರಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯುಬಹುದಾಗಿದೆ. ವೆಬ್‌ಸೈಟ್‌ನಲ್ಲಿರುವ ಟೆಂಡರ್ ವಿವರಗಳೇ ಅಂತಿಮವಾಗಿರುತ್ತವೆ.
ಸಹಿ/– ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ವಿಶೇಷ ವಿಭಾಗ, ಶಿವಮೊಗ್ಗ.
ವಾ.ಸಾ.ಸಂ.ಇ/ಶಿ/ನಂ–192/03/ಎಂಸಿಎ/20–21

ನಿಮ್ಮ ಉತ್ತರವು ಎ ಬಿ ಸಿ ಸಾಲಿನ ಕ್ರಮದಲ್ಲಿ ಇದ್ದು, ಪ್ರತಿ ಸಾಲು ಎಡದಿಂದ ಬಲಕ್ಕೆ ಇರಬೇಕು.
ಪ್ರಜಾವಾಣಿ
ಚಿತ್ರಬಂಧ
ಮಾದರಿ ಉದಾಹರಣೆಗೆ ಇಲ್ಲಿ ಸ್ಕ್ಯಾನ್ ಮಾಡಿ
ಕಣ್ಣಿಗೆ ಗೊಂದಲವಾಗಿ ಕಾಣುವ ಚಿತ್ರವನ್ನು ಕಲ್ಪನೆಯಲ್ಲಿ ಚಿತ್ರಿಸಿ ಬಹುಮಾನ ಗೆಲ್ಲಿ
ಹೆಚ್ಚು ಹೆಚ್ಚು ಭಾಗವಹಿಸಿ ಬಂಪರ್ ಬಹುಮಾನವನ್ನು ಗೆಲ್ಲುವ ಅವಕಾಶ ನಿಮ್ಮದಾಗಿಸಿಕೊಳ್ಳಿ. ಈ ಸ್ಪರ್ಧೆಯು ಒಂದು ವಾರಕ್ಕೆ ಮೂರು ದಿನಗಳು ಮಾತ್ರ ಪ್ರಕಟವಾಗುವುದು.



ಬಂಪರ್ ಬಹುಮಾನ*
ONE PLUS 7 PRO ಮೊಬೈಲ್
14 ಅದೃಷ್ಟಶಾಲಿಗಳಿಗೆ, ಪ್ರತಿದಿನ ₹500 ಬೆಲೆಯ ಅಮೆಝಾನ್ ಗಿಫ್ಟ್ ವೌಚರ್
ಸರಿಯಾದ ಉತ್ತರದ ಕ್ರಮವನ್ನು PVCB A <3ಸಂಖ್ಯೆ> B <3ಸಂಖ್ಯೆ> C <3ಸಂಖ್ಯೆ> ಎಂದು ಟೈಪ್ ಮಾಡಿ, ಇಂದು ರಾತ್ರಿ 8ರೊಳಗೆ 9246020020ಗೆ SMS ಮಾಡಿ.
ಉತ್ತರಿಸುವ ಕ್ರಮದ ಉದಾಹರಣೆ: PVCB A143 B276 C859
*ಷರತ್ತುಗಳು ಅನ್ವಯ
ನಿನ್ನೆಯ ಉತ್ತರ: A368 B524 C791

ಬೊಜ್ಜುತನ ಇತ್ತೀಚೆಗೆ ಮಕ್ಕಳಲ್ಲಿಯೂ ಹೆಚ್ಚಾಗಿ ಕಂಡುಬರುತ್ತಿದೆ. ಇದಕ್ಕೆ ಮೊದಲ ಮದ್ದು ಎಂದರೆ ಮನೆಯೇ. ಪಾಲಕರು ಮನೆಯಲ್ಲಿ ಕೆಲವೊಂದು ಎಚ್ಚರಿಕೆಗಳನ್ನು ತೆಗೆದುಕೊಂಡರೆ ಮಕ್ಕಳ ಬೊಜ್ಜುತನವನ್ನು ತಡೆಗಟ್ಟಬಹುದು.

ಮಕ್ಕಳ ಬೊಜ್ಜುತನಕ್ಕೆ ಮನೆಮದ್ದು

ಲಾವಣ್ಯಗೌರಿ ವೆಂಕಟೇಶ್

‘ಸ್ಥೂಲಕಾಯ’ ಅಥವಾ ‘ಒಬೆಸಿಟಿ’ – ಎಂದರೆ ದೇಹದಲ್ಲಿರುವ ಅತಿಯಾದ ಬೊಜ್ಜುತನ. ಇದು ಇತ್ತೀಚೆಗೆ ಮಕ್ಕಳಲ್ಲಿಯೂ ಹೆಚ್ಚಾಗಿ ಕಂಡುಬರುತ್ತಿದೆ.

ಬದಲಾಗುತ್ತಿರುವ ಜೀವನಶೈಲಿಯೂ ಮಕ್ಕಳಲ್ಲಿ ಬೊಜ್ಜುತನಕ್ಕೆ ರಹದಾರಿ ತೋರುತ್ತಿದೆ. ದಿನದ ಹೆಚ್ಚಿನಂಶ ಮಕ್ಕಳು ಕುಳಿತೇ ಕಳೆಯುತ್ತಾರೆ. ಆಟಗಳೆಲ್ಲಾ ಈಗ ಅಪರೂಪವಾಗಿಬಿಟ್ಟಿವೆ! ಕೂರುವ ಭಂಗಿಯು ಸಹ ಬೊಜ್ಜುತನಕ್ಕೆ ಕಾರಣವೆಂದರೆ ಆಶ್ಚರ್ಯವಾಗುತ್ತದೆ. ಮನೆಯಲ್ಲಿ ಮಾಡುವ ತಿಂಡಿಗಿಂತ ಹೊರಗೆ ಸಿಗುವ ತಿಂಡಿಯನ್ನು ತಿನ್ನುವ ಜನ ಹೆಚ್ಚಾಗಿದ್ದಾರೆ. ಸಾಮಾನ್ಯವಾಗಿ ಹೆಚ್ಚಿನ ಮಕ್ಕಳು ಬೊಜ್ಜುತನದ ಸಮಸ್ಯೆಗೆ ಒಳಗಾಗುವವರು 7-15 ವಯಸ್ಸಿನ ಮಕ್ಕಳು. ಅವರಿಗೆ ಖಂಡಿತ ಅದರ ಆಗುಹೋಗುಗಳ ಅರಿವಿರುವುದಿಲ್ಲ. ಪೋಷಕರಾದವರು ಮಕ್ಕಳಿಗೆ ತಿಳಿ ಹೇಳಿ ಅವರ ಜೀವನಶೈಲಿಯನ್ನು ಬದಲಿಸಬೇಕಾಗುತ್ತದೆ.

ಬೊಜ್ಜುತನವನ್ನು ತಡೆಗಟ್ಟುವುದು ಹೇಗೆ?

ಸಾಮಾಜಿಕ ಕಾರಣಗಳು

ಮಕ್ಕಳಲ್ಲಿ ಬೊಜ್ಜುತನಕ್ಕೆ ಸಮಾಜದ ಕೊಡುಗೆಯೂ ಅಪಾರ. ಮುಖ್ಯವಾಗಿ ಕಡಿಮೆ ಬೆಲೆಗೆ ಸಿಗುವ ಅನಾರೋಗ್ಯಕರ ತಿನಿಸುಗಳು. ಸಕ್ಕರೆಯ ಅಂಶವುಳ್ಳ ಪೇಯಗಳು, ಕ್ಯಾಂಡಿಗಳು ಮತ್ತು ಫಾಸ್ಟ್‌ಫುಡ್. ರೆಸ್ಟೋರೆಂಟ್‌ಗಳ ಆಕರ್ಷಕ ಜಾಹೀರಾತುಗಳು ಮಕ್ಕಳನ್ನು ಸೆಳೆಯುತ್ತವೆ. ಆಟವಾಡಲು ಮಕ್ಕಳಿಗೆ ಸ್ಥಳದ ಅಭಾವ, ಶಾಲೆಯಲ್ಲಿ ದೈಹಿಕ ಚಟುವಟಿಕೆಗಳಿಗೆ ಹೆಚ್ಚು ಸಮಯ ಕೊಡದಿರುವಿಕೆ, ಶಾಲೆಯಲ್ಲಿರುವ ಫಾಸ್ಟ್ ಫುಡ್ ಯಂತ್ರಗಳು ಹಾಗೂ ಶಾಲಾ ಕ್ಯಾಂಟೀನ್‌ಗಳಲ್ಲಿ ಸಿಗುವ ರೆಡಿಫುಡ್‌ಗಳು – ಇವೆಲ್ಲಾ ಕಾರಣಗಳು ಮಕ್ಕಳ ಸ್ಥೂಲಕಾಯಕ್ಕೆ ದಾರಿಗಳು. ಎಲ್ಲದರ ಜೊತೆಗೆ ಬೊಜ್ಜುತನಕ್ಕೆ ಅತಿ ಮುಖ್ಯ ಕಾರಣ ತಂತ್ರಜ್ಞಾನ! ಬೊಜ್ಜುತನಕ್ಕೆ ಇಂಬುಕೊಡುವ ಆಹಾರಗಳ ಪ್ರಚಾರ ಮಾಡುವ ಮಾಧ್ಯಮಗಳು, ಅದರ ಮುಂದೆ ಕುಳಿತು, ಮಲಗಿ, ತಿನ್ನುತ್ತಾ ಅದನ್ನು ವೀಕ್ಷಿಸುವ ಮಕ್ಕಳು, ಇವೆಲ್ಲದರ ಸಂಯೋಗ ಸ್ಥೂಲಕಾಯದ ಹುಟ್ಟಿಗೆ ಕಾರಣಗಳು.

1. ಆರೋಗ್ಯಕರ ಜೀವನಶೈಲಿಯನ್ನು ರೂಢಿಸಿಕೊಳ್ಳಬೇಕು. ನಿತ್ಯಜೀವನದಲ್ಲಿ ದೈಹಿಕ ಚಟುವಟಿಕೆಗಳು ಇರಬೇಕು. ಆರೋಗ್ಯಕರ ಆಹಾರಪದ್ಧತಿಯನ್ನು ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳಬೇಕು; ಹೆಚ್ಚಾಗಿ ಹಣ್ಣು ಹಾಗೂ ತರಕಾರಿಗಳ ಸೇವನೆ.
2. ಕುಟುಂಬದಲ್ಲಿ ಎಲ್ಲರೂ ದೈಹಿಕ ಚಟುವಟಿಕೆಯನ್ನು ಹವ್ಯಾಸವನ್ನಾಗಿ ಮಾಡಿಕೊಳ್ಳಬೇಕು. ಮಕ್ಕಳ ಜೊತೆ ಪೋಷಕರೂ ವ್ಯಾಯಾಮ ಹಾಗೂ ಆಟೋಟಗಳಲ್ಲಿ ತೊಡಗಿಕೊಂಡಾಗ ಮಕ್ಕಳಿಗೆ ಒಂಟಿತನ ಕಾಡುವುದಿಲ್ಲ.
3. ಮೊಬೈಲ್ ಫೋನ್, ದೂರದರ್ಶನ, ವಿಡಿಯೊ ಗೇಮ್‌ಗಳಿಂದ ಮೊದಲು ಮಕ್ಕಳನ್ನು ದೂರವಿಡಬೇಕು. ದಿನದಲ್ಲಿ ನಿಯಮಿತ ವೇಳೆಯನ್ನು ಗೊತ್ತುಮಾಡಿ, ಅಷ್ಟು ಸಮಯ ಮಾತ್ರ ಅವರು ಕುಳಿತು ಆಟವಾಡಿಯೋ ಅಥವಾ ಟಿವಿ ನೋಡಿಯೋ ಕಾಲ ಕಳೆಯುವಂತೆ ನೋಡಿಕೊಳ್ಳಬೇಕು.
4. ಜಿಡ್ಡುಪದಾರ್ಥದ ಆಹಾರಗಳು, ಸಕ್ಕರೆ ಮತ್ತು ಸೋಡಾಭರಿತ ಪೇಯಗಳು ಹಾಗೂ ಪ್ಯಾಕ್ಡ್ ಫುಡ್‌ಗಳಿಂದ ದೂರವಿರುವುದು ಒಳ್ಳೆಯದು.
5. ಬೆಳಗಿನ ಉಪಹಾರಕ್ಕೆ ಮೊದಲ ಆದ್ಯತೆ ಕೊಡಿ. ಲಘು ಉಪಹಾರ ಲಘುವಾಗಿರಲಿ, ಹೆಚ್ಚಾದರೆ ಭೋಜನವಾಗುತ್ತದೆ.
6. ಬೊಜ್ಜು ಇರುವ ಮಕ್ಕಳಿಗೆ ಅವರ ವಯಸ್ಸಿಗೆ ಯೋಗ್ಯವಾದಷ್ಟು ಪಾಲಿನ ಆಹಾರವನ್ನು ಮಾತ್ರ ಕೊಡಿ. ಈ ರೀತಿಯ ಮಕ್ಕಳಿಗೆ ತಿನ್ನುವ ವಿಷಯದಲ್ಲಿ ಹಿಡಿತವಿರುವುದಿಲ್ಲ. ಇದನ್ನು ಪೋಷಕರು ಅರಿಯಬೇಕು. ಇಲ್ಲಿ ಭಾವುಕತೆಗೆ ಅವಕಾಶವನ್ನು ನೀಡಬಾರದು.
7. ಸಕ್ಕರೆಯ ಅಂಶವುಳ್ಳ ಪದಾರ್ಥಗಳನ್ನು ಪೂರ್ಣವಾಗಿ ಸ್ಥಗಿತಗೊಳಿಸಬಾರದು. ಹೀಗೆ ಮಾಡುವುದರಿಂದ ಬೇರೆ ಪದಾರ್ಥಗಳನ್ನು ಹೆಚ್ಚೆಚ್ಚು ತಿನ್ನಲು ಶುರುಮಾಡುತ್ತಾರೆ.
8. ದೈಹಿಕ ಚಟುವಟಿಕೆಗಳನ್ನು ಶಿಕ್ಷೆಯ ರೂಪದಲ್ಲಿ ಕೊಡಬೇಡಿ.
9. ಮಕ್ಕಳಿಗೆ ಇಷ್ಟವೆಂದು ಯಾವುದೇ ಕಾರಣಕ್ಕೂ ಅವರು ಮಾಡಿದ ಒಳ್ಳೆಯ ಕೆಲಸಕ್ಕೆ ಬಹುಮಾನ ಅಥವಾ ಪುರಸ್ಕಾರವನ್ನು ಆಹಾರದ ಹೆಸರಿನಲ್ಲಿ ಕೊಡಬೇಡಿ.
10. ದಿನದಲ್ಲಿ ಒಮ್ಮೆಯಾದರೂ ಕುಟುಂಬದ ಸದಸ್ಯರೆಲ್ಲಾ ಒಟ್ಟಿಗೆ ಕುಳಿತು ಊಟ ಮಾಡಿ.

ಒಮ್ಮೆಲೇ ಎಲ್ಲವೂ ಸರಿಹೋಗುವುದಿಲ್ಲ. ಮಕ್ಕಳಿಗೆ ತಿಳಿ ಹೇಳುವ ತಾಳ್ಮೆ ಪೋಷಕರಲ್ಲಿ ಇರಬೇಕು. ಒಳ್ಳೆಯ ಮಾತಿನಲ್ಲಿ ಹೇಳಿದರೆ ತಿಳಿದುಕೊಳ್ಳುವ ಆಸಕ್ತಿ ಮಕ್ಕಳಲ್ಲೂ ಬರುತ್ತದೆ. ಬೊಜ್ಜುತನದಿಂದಾಗುವ ಸಾಧಕ–ಬಾಧಕಗಳ ಬಗ್ಗೆ ಮಕ್ಕಳಲ್ಲಿ ತಿಳಿವನ್ನು ಮೂಡಿಸಬೇಕು.

ಮನೆಯೆ ಮೊದಲ ಪಾಠಶಾಲೆ, ತಾಯಿಯೇ ಮೊದಲ ಗುರು; ಇದು ಎಲ್ಲರಿಗೂ ತಿಳಿದಿರುವ ನಿತ್ಯಸತ್ಯ. ಹೆಚ್ಚುಕಾಲ ಸ್ತನ್ಯಪಾನ ಮಾಡಿದ ಮಕ್ಕಳಿಗೆ ಸ್ಥೂಲಕಾಯ ಬರುವ ಸಾಧ್ಯತೆಗಳು ಕಡಿಮೆ. ತಾಯಂದಿರು ಇದನ್ನರಿತು ಎಳವೆಯಿಂದಲೇ ಮಕ್ಕಳ ಬಗ್ಗೆ ಜಾಗೃತರಾಗಿರಬೇಕು. ❖

ಬೇಸಿಗೆಯಲ್ಲಿ ವ್ಯಾಯಾಮ: ಹೀಗೆ ಮಾಡಿ...

ಡಾ. ವಿನಯ ಶ್ರೀನಿವಾಸ್

ಇಂದಿನ ಹಲವಾರು ಆರೋಗ್ಯ ಸಮಸ್ಯೆಗಳಿಗೆ ಮೂಲಕಾರಣ ವ್ಯಕ್ತಿಯ ಜಡ ಜೀವನಶೈಲಿ. ಆದ್ದರಿಂದಲೇ ಎಲ್ಲ ವಯೋಮಾನದವರೂ ಒಂದಲ್ಲ ಒಂದು ಬಗೆಯ ವ್ಯಾಯಾಮವನ್ನು ದಿನಚರಿಯಲ್ಲಿ ರೂಢಿಸಿಕೊಳ್ಳುವುದು ಅತ್ಯವಶ್ಯ. ನಮ್ಮ ಎತ್ತರ ಹಾಗೂ ವಯಸ್ಸಿಗೆ ತಕ್ಕ ದೇಹತೂಕವನ್ನು ಹೊಂದುವುದರ ಜೊತೆಯಲ್ಲಿಯೇ ಫಿಟ್‌ನೆಸ್ ಕೂಡ ಅಷ್ಟೇ ಮುಖ್ಯ. ಈ ಗುರಿಯನ್ನು ತಲುಪುವ ಸಲುವಾಗಿಯೇ ಪ್ರತಿಯೊಬ್ಬರೂ ಯಾವುದಾದರೂ ಬಗೆಯ ವ್ಯಾಯಾಮದಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು. ಯೋಗ, ನೃತ್ಯ, ಸರಳ ವ್ಯಾಯಾಮ, ಬಿರುಸಿನ ವ್ಯಾಯಾಮ (ಜಿಮ್), ನಡಿಗೆ, ಓಡುವುದು, ಈಜು – ಹೀಗೆ ತಮಗೆ ಸರಿ ಹೊಂದುವ ದೇಹದಂಡನೆಗೆ ಜನರು ಹೊಂದಿಕೊಂಡಿದ್ದಾರೆ.

ನೆನಪಿಡಿ, ವ್ಯಾಯಾಮ ಯಾವ ಬಗೆಯದ್ದಾದರೂ ಸರಿ, ಆದರೆ ನಿಯಮಿತವಾಗಿ ಮಾಡಿದಾಗ ಮಾತ್ರವೇ ಅದರ ಗರಿಷ್ಠ ಪ್ರಯೋಜನ ಪಡೆಯಲು ಸಾಧ್ಯ. ಆದ್ದರಿಂದಲೇ ಎಲ್ಲ ಕಾಲದಲ್ಲಿಯೂ, ಎಲ್ಲ ದಿನಗಳಲ್ಲಿಯೂ ತಪ್ಪದೇ ವ್ಯಾಯಾಮ ಮಾಡುವುದು ಮುಖ್ಯ. ಇದು ಬೇಸಿಗೆ ಕಾಲ. ವಾತಾವರಣದ ಉಷ್ಣಾಂಶ ಹೆಚ್ಚುತ್ತಲಿರುವ ಈ ದಿನಗಳಲ್ಲಿ ವ್ಯಾಯಾಮ ಮಾಡುವಾಗ ಕೆಲವು ಮುನ್ನೆಚ್ಚರಿಕೆಗಳನ್ನು ವಹಿಸಬೇಕಾಗುತ್ತದೆ.

- ವ್ಯಾಯಾಮ ಮಾಡಲು ಸಾಕಷ್ಟು ಸ್ವಾಭಾವಿಕ ಗಾಳಿ ಬೆಳಕಿರುವ ಕೊಠಡಿಯನ್ನೇ ಆಯ್ಕೆ ಮಾಡಿಕೊಳ್ಳಿ.
- ಬೆಳಗಿನ ಹತ್ತರಿಂದ ನಾಲ್ಕು ಗಂಟೆಯವರೆಗಿನ ಸಮಯದಲ್ಲಿ ವ್ಯಾಯಾಮ ಮಾಡುವುದು ಬೇಡ. ನಸುಕಿನ ಅಥವಾ ಸೂರ್ಯಾಸ್ತದ ನಂತರ ತಂಪಾಗಿರುವ ಸಮಯವೇ ದೇಹದಂಡನೆಗೆ ಸೂಕ್ತ. ಏಕೆಂದರೆ, ಏರಿದ ಉಷ್ಣತೆಯು ದೇಹವನ್ನು ಬಲು ಬೇಗ ಆಯಾಸಗೊಳಿಸಿ ಕಾರ್ಯಕ್ಷಮತೆಯನ್ನು ಕಡಿಮೆ ಮಾಡಬಹುದು. ವ್ಯಕ್ತಿಯು ನಿರ್ಜಲೀಕರಣಕ್ಕೂ ಒಳಗಾಗಬಹುದು.
- ಬೇರೆ ದಿನಗಳಿಗಿಂತ ವ್ಯಾಯಾಮದ ಕಾಲಾವಧಿಯನ್ನು ತುಸು ಕಡಿಮೆ ಮಾಡಿದರೂ ಸರಿಯೇ. ದಿನವೂ ಇಪ್ಪತ್ತರಿಂದ ಮೂವತ್ತು ನಿಮಿಷಗಳ ವ್ಯಾಯಾಮ ಕೂಡ ದೇಹ-ಮನಸ್ಸುಗಳನ್ನು ಸುಸ್ಥಿತಿಯಲ್ಲಿಡಬಲ್ಲದು.
- ವ್ಯಾಯಾಮದ ವೇಳೆಯಲ್ಲಿ ಹಗುರವಾದ, ತಿಳಿಯಾದ ಬಣ್ಣದ, ಸಡಿಲವಾದ ಉಡುಪುಗಳನ್ನೇ ಧರಿಸಿರಿ. ಗಾಢಬಣ್ಣದ ಉಡುಪುಗಳು ಸೂರ್ಯನ ಶಾಖವನ್ನು ಹೆಚ್ಚು ಹೀರಿಕೊಳ್ಳುವುದರಿಂದ, ಬಿಗಿಯಾದ ಮತ್ತು ಭಾರವಾದ ಉಡುಪುಗಳು ದೇಹ ಬೆವರಲು ಅಣಿವು ಮಾಡಿಕೊಡದೇ ಇರುವುದರಿಂದ ದೇಹದ ಶಾಖವು ಬೇಗನೇ ಹೆಚ್ಚುತ್ತದೆ. ಇದರಿಂದ ವ್ಯಕ್ತಿ ಬೇಗ ದಣಿಯುತ್ತಾನೆ.
- ಅತಿ ಬಿರುಸಾದ ವ್ಯಾಯಾಮ ಮಾಡುವವರು ತಾವು ಸರಿಯಾದ ಪ್ರಮಾಣದಲ್ಲಿ ನೀರು ಹಾಗೂ ನೀರಿನಾಂಶದ ಪದಾರ್ಥಗಳನ್ನು ಸೇವಿಸುತ್ತಿರುವುದನ್ನು ಖಚಿತಪಡಿಸಿಕೊಳ್ಳಿ. ವ್ಯಾಯಾಮ ಮಾಡುವಾಗ ಮಧ್ಯದಲ್ಲಿ ಸ್ವಲ್ಪ ಸ್ವಲ್ಪವೇ (ಒಂದೊಂದೇ ಗುಟುಕು) ನೀರನ್ನು ಕುಡಿಯಬೇಕು. ವ್ಯಾಯಾಮದ ನಂತರ ಪ್ರತಿ ಒಂದು ಗಂಟೆಯ ಅಂತರದಲ್ಲಿ ಅರ್ಧ ಲೀಟರ್‌ನಂತೆ ಕನಿಷ್ಠ ಎರಡು ಲೀಟರ್ ನೀರನ್ನು ಕುಡಿದರೆ ಉತ್ತಮ. ಬೇಸಿಗೆಯಲ್ಲಿ ದಿನಕ್ಕೆ ಸಾಮಾನ್ಯಕ್ಕಿಂತಲೂ ಎರಡು ಲೀಟರ್ ಹೆಚ್ಚು ನೀರನ್ನು ಕುಡಿಯುವ ಅಗತ್ಯ ಇರುತ್ತದೆ. ವ್ಯಾಯಾಮತಜ್ಞರು ಹೇಳುವಂತೆ ಬೇಸಿಗೆಯ ದಿನಗಳು ತೂಕ ಇಳಿಸಲು ಹೆಚ್ಚು ಸೂಕ್ತ. ಬೇರೆ ದಿನಗಳಿಗಿಂತ ಬೆವರಿನ ಉತ್ಪಾದನೆಯು ಹೆಚ್ಚಿರುವ ಈ ದಿನಗಳಲ್ಲಿ ಕ್ಯಾಲೊರಿಗಳನ್ನು ವೇಗವಾಗಿ ಹಾಗೂ ಸುಲಭವಾಗಿ ಇಳಿಸುವುದು ಸಾಧ್ಯ. ಆದರೆ ನಿರ್ಜಲೀಕರಣಕ್ಕೆ ಒಳಗಾಗದಂತೆ ನೀರು ಹಾಗೂ ಲವಣಾಂಶಗಳಿರುವ ಹಣ್ಣು-ತರಕಾರಿಗಳನ್ನು ಯಥೇಚ್ಛವಾಗಿ ಸೇವಿಸುವುದನ್ನು ಮರೆಯಬಾರದು.
- ಬೇಸಿಗೆಯಲ್ಲಿ ದೇಹದಂಡನೆ ಮಾಡುವವರಲ್ಲಿ ಮಾಂಸಖಂಡಗಳಲ್ಲಿ ತೀವ್ರತರವಾದ ನೋವು ಕಾಣಿಸಿಕೊಳ್ಳುವುದು ಸಾಮಾನ್ಯ. ನೀರು ಹಾಗೂ ಲವಣಾಂಶಗಳ ಕೊರತೆಯೇ ಇದಕ್ಕೆ ಕಾರಣ. ಇದನ್ನು ತಪ್ಪಿಸಲು ಬಾಯಾರಿಕೆಯಾಗುವ ಮೊದಲೇ ನೀರು ಕುಡಿಯುವುದನ್ನು ರೂಢಿ ಮಾಡಿಕೊಳ್ಳಬೇಕು. ನೀರಿನ ಜೊತೆಯಲ್ಲಿಯೇ ಮಾಂಸಖಂಡಗಳ ಕಾರ್ಯಕ್ಷಮತೆಗೆ ಅತ್ಯಗತ್ಯವಾದ ಮೆಗ್ನಿಸಿಯಂ, ಕ್ಯಾಲ್ಸಿಯಂ, ಸೋಡಿಯಂ, ಪೋಟ್ಯಾಸಿಯಂ ಮೊದಲಾದ ಲವಣಾಂಶಗಳು ಹೇರಳವಾಗಿರುವ ಎಳನೀರು, ಹಣ್ಣು, ತರಕಾರಿಗಳನ್ನೂ ಸೇವಿಸಬೇಕು.
- ಬೇಸಿಗೆಯ ದಿನಗಳಲ್ಲಿ ವ್ಯಾಯಾಮ ಮಾಡುವವರು ನಿರ್ಜಲೀಕರಣದ ಮುನ್ಸೂಚನಾ ಚಿಹ್ನೆಗಳ ಬಗ್ಗೆ ತಿಳಿದಿರಬೇಕು. ಆಯಾಸ, ತಲೆಸುತ್ತುವಿಕೆ, ತಲೆನೋವು, ಚರ್ಮ ಬಿಳಿಚಿಕೊಳ್ಳುವುದು, ಮಾಂಸಖಂಡಗಳಲ್ಲಿ ನೋವು, ಹೃದಯದ ಬಡಿತ ಹೆಚ್ಚಾಗುವುದು, ವಾಕರಿಕೆ, ವಾಂತಿ ಮೊದಲಾದ ಗುಣಲಕ್ಷಣಗಳು ಕಂಡ ಕೂಡಲೇ ವ್ಯಾಯಾಮ ಮಾಡುವುದನ್ನು ನಿಲ್ಲಿಸಬೇಕು. ಕೂಡಲೇ ಗಾಳಿ- ಬೆಳಕಿರುವ ತಂಪಾದ ಸ್ಥಳಕ್ಕೆ ತೆರಳಿ, ನೀರು ಅಥವಾ ಹಣ್ಣಿನ ರಸವನ್ನು ಕುಡಿದು ವಿಶ್ರಾಂತಿ ಪಡೆಯಬೇಕು. ಒಂದು ವೇಳೆ ಗುಣಲಕ್ಷಣಗಳು ಮುಂದುವರಿದಲ್ಲಿ ಕೂಡಲೇ ವೈದ್ಯರ ಸಲಹೆಯನ್ನು ಪಡೆಯಬೇಕು.
- ಬೇಸಿಗೆಯಲ್ಲಿ ಬೆಳಗಿನ ಅಥವಾ ಸಂಜೆಯ ವೇಳೆ ವಾಕ್ ಮಾಡುವವರು ಕೂಡ ಹೆಚ್ಚು ಜಾಗ್ರತೆ ವಹಿಸಬೇಕು. ಆದಷ್ಟೂ ಗಿಡ ಮರಗಳಿರುವ ತಂಪಾದ ಸ್ಥಳವನ್ನೇ ವಾಕಿಂಗ್‌ಗೆ ಆರಿಸಿಕೊಳ್ಳಿ. ನಡಿಗೆಯ ವೇಗ ಹಾಗೂ ದೂರವನ್ನು ಬೇರೆ ದಿನಗಳಿಗಿಂತ ತುಸು ಕಡಿಮೆ ಮಾಡಿಕೊಂಡರೆ ಉತ್ತಮ. ಏಕೆಂದರೆ ವಾತಾವರಣದ ಏರಿದ ಉಷ್ಣತೆಯಿಂದಾಗಿ ವ್ಯಕ್ತಿ ಒಮ್ಮೊಮ್ಮೆ ಸೂರ್ಯಾಘಾತಕ್ಕೆ (ಹೀಟ್ ಸ್ಟ್ರೋಕ್) ತುತ್ತಾಗಬಹುದು. ಉಸಿರಾಟದ ತೊಂದರೆ, ಏರುವ ದೇಹದ ಉಷ್ಣತೆ, ವೇಗಗೊಳ್ಳುವ ನಾಡಿಮಿಡಿತ, ಮಾನಸಿಕ ಗೊಂದಲ, ವಿಚಿತ್ರವಾದ ವರ್ತನೆ ಮೊದಲಾದವು ಸೂರ್ಯಾಘಾತದ ಕೆಲವು ಲಕ್ಷಣಗಳು. ಈ ರೀತಿಯ ಲಕ್ಷಣಗಳು ಕಂಡುಬಂದಲ್ಲಿ ಕೂಡಲೇ ವೈದ್ಯರನ್ನು ಸಂಪರ್ಕಿಸಬೇಕು. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಕೆಲವು ನಿರ್ದಿಷ್ಟ ಕೋನಗಳಿಗೆ ತ್ರಿಕೋನಮಿತಿ ಅನುಪಾತಗಳು

ಗಣಿತ

ಎಸ್ಸೆಸ್ಸೆಲ್ಸಿ

ರೇಖಾ ಗಣಿತದಿಂದ ನಿಮಗೆ ಈಗಾಗಲೇ ಅಳತೆಯ ಕೋನಗಳನ್ನು ರಚಿಸುವ ವಿಧಾನ ತಿಳಿದಿದೆ. ಈ ಎಲ್ಲಾ ಕೋನಗಳಿಗೆ ತ್ರಿಕೋನಮಿತಿ ಅನುಪಾತಗಳನ್ನು ಕಂಡು ಹಿಡಿಯುತ್ತೇವೆ.

45^0 ಯ ತ್ರಿಕೋನ ಮಿತಿ ಅನುಪಾತಗಳು



ಒಂದು ಕೋನವು 45^0 ಆದರೆ

ΔABC ಯಲ್ಲಿ $\angle B = 90^o$

ಮತ್ತೊಂದು ಕೋನವು 45^0 ಆಗಿರುತ್ತದೆ.

ಅಂದರೆ

$\angle B = \angle B = 45^o$

ಆದ್ದರಿಂದ $BC = AB = a$

ಆಗ ಪೈಥಾಗೋರಸನ ಪ್ರಮೇಯದಿಂದ

ಮತ್ತು ಆದ್ದರಿಂದ

$AC^2 = AB^2 + BC^2 = a^2 + a^2 = 2a^2$

ತ್ರಿಕೋನ ಮಿತಿಯ $AC = a\sqrt{2}$

ಅನುಪಾತಗಳ ವ್ಯಾಖ್ಯಾನಗಳನ್ನು ಬಳಸಿಕೊಂಡು

$Sin\ 45^o = \frac{45^0 \text{ ಕೋನಕ್ಕೆ ಅಭಿಮುಖ ಬಾಹು}}{\text{ವಿಕರ್ಣ}} = \frac{BC}{AC} = \frac{a}{a\sqrt{2}} = \frac{1}{\sqrt{2}}$

$COS\ 45^o = \frac{45^0 \text{ ಕೋನಕ್ಕೆ ಪಾರ್ಶ್ವಬಾಹು}}{\text{ವಿಕರ್ಣ}} = \frac{AB}{AC} = \frac{a}{a\sqrt{2}} = \frac{1}{\sqrt{2}}$

$ton\ 45^o = \frac{45^0 \text{ ಕೋನಕ್ಕೆ ಅಭಿಮುಖಬಾಹು}}{\text{ಕೋನಕ್ಕೆ ಪಾರ್ಶ್ವಬಾಹು}} = \frac{BC}{AB} = \frac{a}{a} = 1$

ಹಾಗೆಯೇ

$COSee\ 45^o = \frac{1}{Sin\ 45^o} = \sqrt{2},\ Sec\ 45^o = \frac{1}{cos\ 45^o} = \sqrt{2},\ COt45^o\ \frac{1}{ton\ 45} = 1$

30^0 ಮತ್ತು 60^0 ಯ ತ್ರಿಕೋನ ಮಿತಿ ಅನುಪಾತಗಳು



ಇದೀಗ ನಾವು 30^0 ಮತ್ತು 60^0 ಯ ತ್ರಿಕೋನಮಿತಿ ಅನುಪಾತಗಳಲ್ಲಿ ಲೆಕ್ಕಿಸೋಣ. ಸಮಬಾಹು ತ್ರಿಭುಜ ABC ಯನ್ನು ಪರಿಗಣಿಸೋಣ. ಸಮಬಾಹು ತ್ರಿಭುಜದ ಪ್ರತಿಕೋನದ ಅಳತೆ 60^0 ಆಗಿರುವುದಿಂದ $\angle A = \angle B = \angle C = 60^o$

ಬಾಹು BC ಗೆ AಯಿಂದAD ಲಂಬ ಎಳೆಯಿರಿ.

ಈಗ $\Delta ABD \cong \Delta ACD$

ಆದ್ದರಿಂದ $BAD = CAD$

ಮತ್ತು $BD = DC$

ΔABD ಲಂಬಕೋನದ ತ್ರಿಭುಜ $\angle A = 90^o$ ಮತ್ತು $BAD = 30^o$ ಹಾಗೂ

$ABD = 60^o$ ಆಗಿದೆ

ನಾವು $AB = 2a$ ಎಂದು ಭಾವಿಸೋಣ.

ಆಗ $BD = \frac{1}{2}\ BC = A$ ಮತ್ತು $AD^2 = AB^2 - BD^2 =$

$(2a)^2 - a^2 = 3a^2$

ಆದ್ದರಿಂದ $AD = a\sqrt{3}$

ಈಗ $Sin30^o = \frac{BD}{AB} = \frac{a}{2a} = \frac{1}{2}$ $cosec30^o = \frac{1}{sin30^o} = 2$

$cos30^o = \frac{AD}{AB} = \frac{a\sqrt{3}}{2a} = \frac{\sqrt{3}}{2}$ $Sec30^o = \frac{1}{cos30^o} = \frac{2}{\sqrt{3}}$

$ton30^o = \frac{BD}{AD} = \frac{a}{a\sqrt{3}} = \frac{1}{\sqrt{3}}$ $cot30^o = \frac{1}{ton30^o} = \sqrt{3}$

ಹಾಗೆಯೇ

$Sin60^o = \frac{AD}{AB} = \frac{a\sqrt{3}}{2a} = \frac{\sqrt{3}}{2}$, $Cos\ 60^o = \frac{1}{2},\ ton60^o = \sqrt{3}$

$Cosec\ 60^o = \frac{2}{\sqrt{3}},\ sec\ 60^o = 2$ ಮತ್ತು $Cot\ 60^o = \frac{1}{\sqrt{3}}$

ಪ್ರಜಾವಾಣಿ ನೋಡಿಯೊ

ಹತ್ತನೇ ತರಗತಿಯ ಇಂಗ್ಲಿಷ್ ಮಾಧ್ಯಮದ ಗಣಿತಶಾಸ್ತ್ರ ವಿಭಾಗದ ‘ಸಿಮಿಲರ್ ಟ್ರಯಾಂಗಲ್ಸ್’ ಪಾಠವನ್ನು ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://bit.ly/39pWAB5

ಜೈವಿಕ ಅಣುಗಳು

ರಸಾಯನಶಾಸ್ತ್ರ

ದ್ವಿತೀಯ ಪಿಯುಸಿ

‘ದೇಹದಲ್ಲಿನ ರಾಸಾಯನಿಕ ಸಾಮರಸ್ಯ ಮತ್ತು ಪ್ರತಿಕ್ರಿಯೆಗಳು ಸಮಕಾಲೀನ ಪ್ರಗತಿಗಳು ಜೀವನವನ್ನು ಮುನ್ನಡೆಸಲು ಕಾರಣವಾಗಿರುತ್ತವೆ’.

ಜೈವಿಕ ವ್ಯವಸ್ಥೆಯು ತನ್ನಷ್ಟಕ್ಕೆ ತಾನೇ ಬೆಳೆಯುವುದು, ಜೀವಿಸುವುದು ಮತ್ತು ತದ್ರೂಪಿಯನ್ನು ಪಡೆಯುವುದು. ಈ ಜೈವಿಕ ವ್ಯವಸ್ಥೆಯಲ್ಲಿ ಬಹಳ ಆಶ್ಚರ್ಯಕರ ಸಂಗತಿಯೆಂದರೆ ಇವೆಲ್ಲವೂ ನಿರ್ಜಲೀಕರಣ ಕಣಗಳಾದ ಅಣು ಮತ್ತು ಪರಮಾಣುಗಳಿಂದ ಕೂಡಿವೆ ಎಂಬುದು. ಒಂದು ಜೀವ ವ್ಯವಸ್ಥೆಯೊಳಗೆ ರಾಸಾಯನಿಕವಾಗಿ ಏನೆಲ್ಲಾ ನಡೆಯುತ್ತದೆ ಎಂಬ ಜ್ಞಾನದ ಅನ್ವೇಷಣೆಯು ಜೀವ ರಸಾಯನಶಾಸ್ತ್ರದ ಡೊಮೇನ್ (ಪ್ರಾಂತ್ಯ)ದೊಳಗೆ ಬರುತ್ತದೆ. ಎಲ್ಲ ಜೀವ ವೈವಿಧ್ಯಗಳು, ವಿವಿಧ ಸಂಕೀರ್ಣ ಜೀವಾಣುಗಳಾದ ಕಾರ್ಬೊಹೈಡ್ರೇಟ್, ಪ್ರೊಟೀನ್, ನ್ಯೂಕ್ಲಿಯಿಕ್ ಆಮ್ಲ, ಲಿಪಿಡ್ ಮುಂತಾದವುಗಳಿಂದ ಮಾಡಲ್ಪಟ್ಟಿವೆ.

ಕಾರ್ಬೋಹೈಡ್ರೇಟ್‌ಗಳು ಪ್ರಧಾನವಾಗಿ ಸಸ್ಯಗಳಿಂದ ಉತ್ಪತ್ತಿಯಾಗುವ ಹಾಗೂ ಬಹಳ ದೊಡ್ಡ ನೈಸರ್ಗಿಕ ಸಾವಯವ ಸಂಯುಕ್ತಗಳ ಗುಂಪಾಗಿರುತ್ತವೆ.

ಉದಾಹರಣೆ: ಕಬ್ಬಿನ ಸಕ್ಕರೆ, ಗ್ಲುಕೋಸ್ ಇತ್ಯಾದಿಗಳು

ಇವುಗಳಲ್ಲಿ ಹೆಚ್ಚಿನವುಗಳು ಸಾಮಾನ್ಯ ಸೂತ್ರ $C_x(H_2O)_Y$ ಮತ್ತು ಇವನ್ನು ಇಂಗಾಲದ ಹೈಡ್ರೇಟ್‌ಗಳೆಂದು ಪರಿಗಣಿಸಿದ್ದರಿಂದ ಕಾರ್ಬೋಹೈಡ್ರೇಟ್ಸ್ ಎಂಬ ಹೆಸರು ಹುಟ್ಟಿಕೊಂಡಿತು.

ಉದಾಹರಣೆ: ಗ್ಲುಕೋಸ್‌ನ ಅಣು ಸೂತ್ರವು $C_6(H_2O)_6$

ರಾಸಾಯನಿಕವಾಗಿ ಕಾರ್ಬೋಹೈಡ್ರೇಟ್‌ಗಳನ್ನು ಈ ರೀತಿಯಾಗಿ ವ್ಯಾಖ್ಯಾನಿಸಬಹುದು ದ್ಯುತಿ ಪಟುತ್ವ ಹೊಂದಿರುವ ಪಾಲಿ ಹೈಡ್ರಾಕ್ಸಿ ಆಲ್ಡಿಹೈಡ್ ಅಥವಾ ಕಿಟೋನ್‌ಗಳು ಅಥವಾ ಜಲ ವಿಭಜನೆ ನಂತರ ಅಂತಹ ಘಟಕಗಳನ್ನು ನೀಡುವ ಸಂಯುಕ್ತಗಳು. ಕೆಲವು ಕಾರ್ಬೋಹೈಡ್ರೇಟ್ಸ್‌ಗಳು ಸಿಹಿಯಾಗಿದ್ದು, ಅವುಗಳನ್ನು ಸಕ್ಕರೆಗಳು (ಶುಗರ್) ಎಂದು ಸಹ ಕರೆಯುವರು.

ಕಾರ್ಬೋಹೈಡ್ರೇಟ್‌ಗಳ ವರ್ಗೀಕರಣ

ಕಾರ್ಬೋಹೈಡ್ರೇಟ್‌ಗಳನ್ನು ಅವು ಜಲವಿಭಜನೆ ಕ್ರಿಯೆಯಲ್ಲಿ ವರ್ತಿಸುವಿಕೆಯ ಆಧಾರದ ಮೇಲೆ ವರ್ಗೀಕರಿಸಲಾಗಿದೆ. ಅವುಗಳನ್ನು ಈ ಕೆಳಗಿನ ಮೂರು ಗುಂಪುಗಳಾಗಿ ವಿಂಗಡಿಸಲಾಗಿದೆ.

1)ಮೋನೊ ಸ್ಯಾಕರೈಡ್‌ಗಳು: ಜಲವಿಭಜನೆಯಿಂದ ಸರಳ ಘಟಕಗಳಾದ ಪಾಲಿಹೈಡ್ರಾಕ್ಸಿ ಆಲ್ಡಿಹೈಡ್ ಅಥವಾ ಕಿಟೋನ್‌ಗಳನ್ನು ನೀಡದ ಕಾರ್ಬೋಹೈಡ್ರೇಟ್‌ಗಳನ್ನು ಮೋನೊ ಸ್ಯಾಕರೈಡ್‌ಗಳೆನ್ನುವರು.

ಉದಾಹರಣೆ: ಗ್ಲುಕೋಸ್, ಫ್ರಕ್ಟೋಸ್, ರೈಬೋಸ್ ಮುಂತಾದವುಗಳು

2) ಒಲಿಗೊ ಸ್ಯಾಕರೈಡ್: ಜಲವಿಭಜನೆಯಲ್ಲಿ ಎರಡರಿಂದ ಹತ್ತು ಮೋನೊ ಸ್ಯಾಕರೈಡ್ ಘಟಕಗಳನ್ನು ನೀಡುವ ಕಾರ್ಬೋಹೈಡ್ರೇಟ್‌ಗಳನ್ನು ಒಲಿಗೊ ಸ್ಯಾಕರೈಡ್‌ಗಳೆನ್ನುವರು. ಜಲವಿಭಜನೆ ಹೊಂದಿದಾಗ ನೀಡುವ ಮೋನೊ ಸ್ಯಾಕರೈಡ್‌ಗಳ ಸಂಖ್ಯೆಗೆ ಅನುಗುಣವಾಗಿ ಇವುಗಳನ್ನು ಪುನಃ ಡೈ ಸ್ಯಾಕರೈಡ್, ಟ್ರೈ ಸ್ಯಾಕರೈಡ್, ಟೆಟ್ರಾ ಸ್ಯಾಕರೈಡ್‌ಗಳೆಂದು ವರ್ಗೀಕರಿಸಲಾಗಿದೆ.

ಡೈ ಸ್ಯಾಕರೈಡ್‌ಗಳು ಜಲವಿಭಜನೆ ಹೊಂದಿದಾಗ ಸಿಗುವ ಎರಡು ಮೋನೊ ಸ್ಯಾಕರೈಡ್‌ಗಳು ಒಂದೇ ರೀತಿಯವು ಅಥವಾ ಬೇರೆ ಬೇರೆ ರೀತಿಯವು ಇರಬಹುದು.

ಉದಾಹರಣೆ: ಸುಕ್ರೋಸ್ ಜಲವಿಭಜನೆ ಹೊಂದಿದಾಗ ಒಂದು ಗ್ಲುಕೋಸ್ ಮತ್ತು ಒಂದು ಫ್ರಕ್ಟೋಸ್ ಅಣುಗಳನ್ನು ನೀಡುತ್ತವೆ.

3) ಪಾಲಿ ಸ್ಯಾಕರೈಡ್‌ಗಳು: ಜಲವಿಭಜನೆಯಿಂದ ಬಹುಸಂಖ್ಯೆಯ ಮೋನೊ ಸ್ಯಾಕರೈಡ್ ಘಟಕಗಳನ್ನು ನೀಡುವ ಕಾರ್ಬೋಹೈಡ್ರೇಟ್‌ಗಳನ್ನು ಪಾಲಿ ಸ್ಯಾಕರೈಡ್‌ಗಳೆನ್ನುವರು.

ಉದಾಹರಣೆ: ಪಿಷ್ಟ, ಸೆಲ್ಯುಲೋಸ್, ಗ್ಲೈಕೋಜನ್, ಅಂಟು ಮುಂತಾದವುಗಳು. ಪಾಲಿ ಸ್ಯಾಕರೈಡ್‌ಗಳಿಗೆ ಸಿಹಿರುಚಿ ಇರುವುದಿಲ್ಲ. ಕಾರಣ ಅವುಗಳನ್ನು ಸಿಹಿ ರಹಿತ ಸಕ್ಕರೆಗಳು (ನಾನ್ ಶುಗರ್ಸ್) ಎನ್ನುವರು.

5) ಪೆಂಟೋಸ್ 6) ಹೆಕ್ಸೋಸ್ 7) ಹೆಪ್ಟೋಸ್

ಗ್ಲುಕೋಸ್: ಪ್ರಕೃತಿಯಲ್ಲಿ ಗ್ಲುಕೋಸ್ ಮೂಲ ರೂಪದಲ್ಲಲ್ಲದೆ ಸಂಯೋಜನೆ ಹೊಂದಿದ ರೂಪದಲ್ಲೂ ಸಿಗುತ್ತದೆ. ಇದು ಸಿಹಿಯಾದ ಹಣ್ಣು ಮತ್ತು ಜೇನುತುಪ್ಪಗಳಲ್ಲೂ ಇರುತ್ತದೆ. ಕಳಿತ ದ್ರಾಕ್ಷಿಯಲ್ಲಿ ಗ್ಲುಕೋಸ್ ಸಮೃದ್ಧವಾಗಿದೆ. ಇದಿನ್ನು ಈ ಕೆಳಗಿನ ವಿಧಾನಗಳಿಂದ ತಯಾರಿಸುವರು.

ಗ್ಲುಕೋಸ್ ತಯಾರಿಕೆ:

ಸುಕ್ರೋಸ್‌ನಿಂದ (ಕಬ್ಬಿನ ಸಕ್ಕರೆ): ದುರ್ಬಲ ಹೈಡ್ರೋಕ್ಲೋರಿಕ್ ಆಮ್ಲ ಅಥವಾ ಸಲ್ಫೂರಿಕ್ ಆಮ್ಲದೊಂದಿಗೆ ಆಲ್ಕೋಹಾಲ್ ಯುಕ್ತ ಸುಕ್ರೋಸ್ ದ್ರಾವಣವನ್ನು ಕುದಿಸಿದಾಗ, ಗ್ಲುಕೋಸ್ ಮತ್ತು ಫ್ರಕ್ಟೋಸ್ ಸಮ ಪ್ರಮಾಣದಲ್ಲಿ ಸಿಗುತ್ತದೆ.

$$\underset{\text{ಸುಕ್ರೋಸ್}}{C_{12}H_{22}O_{11}} + H_2O \xrightarrow{H^+} \underset{\text{ಗ್ಲುಕೋಸ್}}{C_6H_{12}O_6} + \underset{\text{ಫ್ರಕ್ಟೋಸ್}}{C_6H_{12}O_6}$$

2) ಪಿಷ್ಟದಿಂದ: ವಾಣಿಜ್ಯಕವಾಗಿ ಪಿಷ್ಟವನ್ನು ದುರ್ಬಲ ಸಲ್ಫೂರಿಕ್ ಆಮ್ಲದೊಡನೆ 393K ಉಷ್ಣತೆಯಲ್ಲಿ ಮತ್ತು 2-3 atm ಒತ್ತಡದಲ್ಲಿ ಕುದಿಸಿ ಜಲ ವಿಭಜನೆಯಿಂದ ಪಡೆಯುತ್ತದೆ.

$$C_6H_{10}O_5 + bH_2O \xrightarrow[393k,2\text{-}3atm]{H^+} n\ c_6H_{12}o_6$$

ಪಿಷ್ಟ ಅಥವಾ ಸೆಲ್ಯುಲೋಸ್

ಗ್ಲುಕೋಸ್ ರಚನೆ: ಗ್ಲುಕೋಸ್, ಆಲ್ಡೊಹೆಕ್ಸೋಸ್ ಮತ್ತು ಡೆಕ್ಸ್ಟ್ರೋಸ್ ಎಂದು ಸಹ ಪರಿಚಿತವಾಗಿದೆ. ಇದು ಹೆಚ್ಚಿನ ಬೃಹತ್ ಕಾರ್ಬೋಹೈಡ್ರೇಟ್‌ಗಳಾದ ಪಿಷ್ಟ, ಸೆಲ್ಯುಲೋಸ್‌ಗಳಲ್ಲಿ ಮಾನೊಮರ್ ಆಗಿರುತ್ತದೆ. ಇದು ಬಹುಶಃ ಭೂಮಿಯಲ್ಲಿ ಹೇರಳವಾಗಿರುವ ಸಾವಯವ ಸಂಯುಕ್ತ, ಕೆಳಗಿನ ಸಾಕ್ಷ್ಯಾಧಾರಗಳ ಆಧಾರದ ಮೇಲೆ ಇದಕ್ಕೆ ಈ ರಚನೆಯನ್ನು ನೀಡಲಾಗಿವೆ.

ಕಾರ್ಬೋಹೈಡ್ರೇಟ್‌ಗಳನ್ನು ಅಪಕರ್ಷಕ ಅಥವಾ ಅಪಕರ್ಷಕವಲ್ಲದ ಸಕ್ಕರೆಗಳೆಂದು ಸಹ ವರ್ಗೀಕರಿಸಲಾಗಿದೆ. ಫಾಲಿಂಗ್ ದ್ರಾವಣ ಅಥವಾ ಟಾಲಿನ್ ಕಾರಕವನ್ನು ಅಪಕರ್ಷಿಸುವ ಎಲ್ಲಾ ಕಾರ್ಬೋಹೈಡ್ರೇಟ್‌ಗಳನ್ನು ಅಪಕರ್ಷಕ ಸಕ್ಕರೆ ಎನ್ನುವರು. ಎಲ್ಲಾ ಮೋನೊ ಸ್ಯಾಕರೈಡ್‌ಗಳು, ಆಲ್ಡಿಹೈಡ್‌ಗಳಿರಬಹುದು ಅಥವಾ ಕಿಟೋನ್‌ಗಳಿರಬಹುದು. ಅವು ಅಪಕರ್ಷಕ ಸಕ್ಕರೆಗಳಾಗಿವೆ. ಡೈ ಸ್ಯಾಕರೈಡ್‌ಗಳಲ್ಲಿ ಎರಡೂ ಮೋನೊ ಸ್ಯಾಕರೈಡ್ ಘಟಕಗಳ ಅಪಕರ್ಷಕ ಗುಂಪುಗಳೆಂದರೆ ಆಲ್ಡಿಹೈಡಿಕ್ ಅಥವಾ ಕಿಟೋನಿಕ್ ಗುಂಪುಗಳು ರಾಸಾಯನಿಕ ಬಂಧನದಲ್ಲಿದ್ದರೆ ಅಂತವುಗಳು ಅಪಕರ್ಷಕವಲ್ಲದ ಸಕ್ಕರೆಗಳಾಗಿರುತ್ತದೆ.

ಉದಾಹರಣೆ: ಸುಕ್ರೋಸ್,

ಸ್ವತಂತ್ರ ಕ್ರಿಯಾಶೀಲ ಗುಂಪುಗಳನ್ನು ಹೊಂದಿರುವ ಸಕ್ಕರೆಗಳನ್ನು ಅಪಕರ್ಷಕ ಸಕ್ಕರೆಗಳೆನ್ನುವರು.

ಉದಾಹರಣೆ: ಮಾಲ್ಟೋಸ್, ಲಾಕ್ಟೋಸ್

ಮೋನೊ ಸ್ಯಾಕರೈಡ್‌ಗಳು: ಮೋನೊ ಸ್ಯಾಕರೈಡ್‌ಗಳನ್ನು ಅವುಗಳಲ್ಲಿರುವ ಕಾರ್ಬನ್ ಪರಮಾಣುಗಳ ಸಂಖ್ಯೆ ಮತ್ತು ಕ್ರಿಯಾತ್ಮಕ ಗುಂಪುಗಳ ಆಧಾರದ ಮೇಲೆ ಸಹ ವರ್ಗೀಕರಿಸಲಾಗಿದೆ.

ಆಲ್ಡಿ ಹೈಡ್ ಗುಂಪು ಹೊಂದಿರುವ ಮೋನೊ ಸ್ಯಾಕರೈಡ್‌ಗಳನ್ನು ಆಲ್ಡೋಸ್‌ಗಳೆನ್ನುವರು. ಕಿಟೋನ್ ಗುಂಪನ್ನು ಹೊಂದಿರುವವುಗಳನ್ನು ಕಿಟೋನ್‌ಗಳೆನ್ನುವರು.

ವಿವಿಧ ರೀತಿಯ ಮೋನೊ ಸ್ಯಾಕರೈಡ್‌ಗಳು

ಇಂಗಾಲದ ಪರಮಾಣುಗಳು	ಮೊನೊಮರ್
3	ಟ್ರಯೋಸ್
4	ಟೆಟ್ರೋಸ್

❖

ದ್ವಿತೀಯ ಪಿಯುಸಿ ಭೌತಶಾಸ್ತ್ರ ವಿಭಾಗದ ‘ಐನ್‌ಸ್ಟೀನ್ಸ್ ಫೋಟೊಎಲೆಕ್ಟ್ರಿಕ್ ಇಕ್ವೇಷನ್ಸ್’ ಇಂಗ್ಲಿಷ್ ಪಾಠವನ್ನು ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://bit.ly/3cwXON9

ಉ

ಕಾಂಚೀಪುರಂ ಹೆಮ್ಮೆಯಿಂದ ಅರ್ಪಿಸುತ್ತಿದೆ ಕಾಂಚೀಪುರಂ ರೇಷ್ಮೆ ಸೀರೆಗಳ ಹೊಚ್ಚ ಹೊಸ ಸಂಗ್ರಹಣೆ

ಕಾಂಚೀಪುರಂ ಪಚ್ಚೈಯಪ್ಪಾಸ್ ಸಿಲ್ಕ್ಸ್ Since 1926

ಮದುವೆ ರೇಷ್ಮೆ ಸೀರೆಗಳು

ಕಡಿಮೆ ಬೆಲೆಯಲ್ಲಿ ಕಾಂಚೀಪುರಂ ರೇಷ್ಮೆ ಸೀರೆಗಳು @ ಕಾಂಚೀಪುರಂ ಬೆಲೆಯಲ್ಲಿ

ಸ್ಥಳ:

ಶ್ರೀ ವಾಸವಿ ಮಹಲ್ ಕಲ್ಯಾಣ ಮಂಟಪ

18ನೇ ಪ್ರಧಾನ ರಸ್ತೆ, ಐಡಿಯಲ್ ಹೋಮ್ಸ್ ಟೌನ್‌ಷಿಪ್, ರಿಲೈಯನ್ಸ್ ಡಿಜಿಟಲ್‌ನ ಬಳಿ, ಶ್ರೀ ರಾಜರಾಜೇಶ್ವರಿ ನಗರ, ಬೆಂಗಳೂರು - 560098.

Exhibition Cum Sale 27th MAR to 03rd APR 2021

SILK MARK

T.Nagar Chennai - 17 Ph: 044 - 28155455 | Gandhi Road, Kanchipuram - 1. Ph : 044 - 2723465 | Kamarajar Street, Kanchipuram - 1. Ph : 044 - 27225055 | Thottapalayam, Vellore - 4. Ph: 0416 - 2225055

+91 84899 43468 support@pachaiyappas.in Shop Online: www.pachaiyappas.in instagram.com/pachaiyappas_silks For enquire: 84899 43926

ಸಿ.ಡಿ. ಪ್ರಕರಣ: ಕಬ್ಬನ್ ಪಾರ್ಕ್ ಠಾಣೆ ಪೊಲೀಸರಿಂದ ನಾಲ್ಕು ಗಂಟೆ ವಿಚಾರಣೆ • ಏಪ್ರಿಲ್ 2ಕ್ಕೆ ಪುನಃ ವಿಚಾರಣೆ

ವಕೀಲರ ಕೇಳಿ ಉತ್ತರ; ಜಾರಿಕೊಂಡ ರಮೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿ.ಡಿ.ಯಲ್ಲಿದ್ದಾರೆ ಎನ್ನಲಾದ ಯುವತಿ ನೀಡಿದ್ದ ದೂರು ಆಧರಿಸಿ ದಾಖಲಾಗಿರುವ ಎಫ್‌ಐಆರ್ ತನಿಖೆ ಆರಂಭಿಸಿರುವ ಕಬ್ಬನ್ ಪಾರ್ಕ್ ಠಾಣೆ ಪೊಲೀಸರು, ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಅವರನ್ನು ಸೋಮವಾರ ನಾಲ್ಕು ಗಂಟೆ ವಿಚಾರಣೆ ನಡೆಸಿದರು.

‘ಕೆಲಸ ಕೊಡಿಸುವುದಾಗಿ ಹೇಳಿದ್ದ ರಮೇಶ ಜಾರಕಿಹೊಳಿ ನನ್ನ ಮೇಲೆ ಅತ್ಯಾಚಾರ ಎಸಗಿದ್ದಾರೆ’ ಎಂದು ಆರೋಪಿಸಿ ಯುವತಿ ನೀಡಿದ್ದ ದೂರು ಆಧರಿಸಿ, ರಮೇಶ ವಿರುದ್ಧ ಪ್ರಕರಣ ದಾಖಲಾಗಿತ್ತು. ವಿಚಾರಣೆಗೆ ಹಾಜರಾಗುವಂತೆ ರಮೇಶಗೆ ಪೊಲೀಸರು ನೋಟಿಸ್ ನೀಡಿದ್ದರು.

ವಿಶೇಷ ವಿಚಾರಣಾ ಕೊಠಡಿಗೆ ಬೆಳಿಗ್ಗೆ 10 ಗಂಟೆಗೆ ಹೋಗಿದ್ದ ರಮೇಶ,

ರಮೇಶ ಜಾರಕಿಹೊಳಿ

ಮಧ್ಯಾಹ್ನ 2 ರವರೆಗೆ ವಿಚಾರಣೆ ಎದುರಿಸಿದರು. ಇನ್‌ಸ್ಪೆಕ್ಟರ್ ಮಾರುತಿ ನೇತೃತ್ವದ ತಂಡ, ಹಲವು ಪ್ರಶ್ನೆಗಳಿಗೆ ಉತ್ತರ ಪಡೆಯಲು ಪ್ರಯತ್ನಿಸಿತು. ಸಮರ್ಪಕ ಉತ್ತರ ನೀಡದ ರಮೇಶ, ‘ವಕೀಲರ ಕೇಳಿ ಹೇಳುವೆ. ಕಾಲಾವಕಾಶ ಕೊಡಿ’ ಎಂದಷ್ಟೇ ಹೇಳಿ ವಿಚಾರಣೆಯಿಂದ ಜಾರಿಕೊಂಡರು ಎಂದು ಗೊತ್ತಾಗಿದೆ.

ಯುವತಿ ಪರಿಚಯವೇ ? ಯಾವಾಗಲಾದರೂ ಭೇಟಿಯಾಗಿದ್ದಿರಾ? ಯುವತಿಗೆ ಕೆಲಸ ಕೊಡಿಸುವ ಭರವಸೆ ನೀಡಿದ್ದು ನಿಜವೇ ? ನಿಮ್ಮ ಮನೆಗೆ ಯುವತಿ ಬಂದಿದ್ದರಾ ? ಯುವತಿಯನ್ನು ನೋಡಿದರೆ ಗುರುತು ಹಿಡಿಯುತ್ತಿರಾ ? ನಿಮ್ಮ ಮೇಲೆ ಹನಿಟ್ರ್ಯಾಪ್ ಆಗಿದೆಯಾ? ಸೇರಿದಂತೆ ಹಲವು ಪ್ರಶ್ನೆಗಳು ಪೊಲೀಸರ ಪಟ್ಟಿಯಲ್ಲಿದ್ದವು.

‘ಯುವತಿ ನನಗೆ ಗೊತ್ತೇ ಇಲ್ಲವೆಂದ ಮೇಲೆ ಮುಂದಿನ ಪ್ರಶ್ನೆಗಳಿಗೆ ಹೇಗೆ ಉತ್ತರಿಸುವುದು. ನನ್ನ ವಿರುದ್ಧವೇ ಷಡ್ಯಂತ್ರ ನಡೆಯುತ್ತಿದೆ. ಸಿ.ಡಿ.ಯಲ್ಲಿರುವ ವಿಡಿಯೊ ಸಂಕಲನ ಮಾಡಿದ್ದಾಗಿದೆ. ನನ್ನ ಬಳಿ 11 ದಾಖಲೆಗಳು ಇವೆ. ಅದನ್ನು ಎಸ್‌ಐಟಿಗೆ ಕೊಡುತ್ತೇನೆ’ ಎಂದರು.

‘ದಾಖಲೆಗಳು ಎಲ್ಲಿ ಸಿಕ್ಕವು’ ಎಂದು ಪೊಲೀಸರು ಪ್ರಶ್ನಿಸಿದ್ದಕ್ಕೆ, ರಮೇಶ ತಬ್ಬಿಬ್ಬಾದರು. ‘ಅದು ನನ್ನ ವೈಯಕ್ತಿಕ ಮೂಲ. ಆ ಬಗ್ಗೆಯೂ ವಕೀಲರನ್ನು ಕೇಳಿಯೇ ಹೆಚ್ಚಿನ ಮಾಹಿತಿ ನೀಡುವೆ’ ಎಂದು ಹೇಳಿ ನುಣಚಿಕೊಂಡರೆಂದೂ ಮೂಲಗಳು ಹೇಳಿವೆ.

‘ನಿಮ್ಮ ಎಲ್ಲ ಪ್ರಶ್ನೆಗಳಿಗೂ ಉತ್ತರಿಸುವೆ. ಆದರೆ, ಏಪ್ರಿಲ್ 2ರವರೆಗೆ ಕಾಲಾವಕಾಶ ನೀಡಿ’ ಎಂದೂ ರಮೇಶ ಕೋರಿದರು. ಅದನ್ನು ಒಪ್ಪಿದ ಪೊಲೀಸರು, ಏಪ್ರಿಲ್ 2ರಂದು ಪುನಃ ವಿಚಾರಣೆಗೆ ಬರುವಂತೆ ಹೇಳಿ ರಮೇಶ ಅವರನ್ನು ವಾಪಸ್ ಕಳುಹಿಸಿದ್ದಾರೆ.

ಹಿಂಬಾಗಿಲಿನಿಂದ ಹೊರಟರು: ವಿಚಾರಣಾ ಕೊಠಡಿಗೆ ಮುಂಬಾಗಿಲಿನಿಂದ ಪ್ರವೇಶಿಸಿದ್ದ ರಮೇಶ, ವಿಚಾರಣೆ ಮುಗಿದ ನಂತರ ಹಿಂಬಾಲಿನಿಂದ ಹೊರಟು ಹೋದರು. ಪ್ರತಿಕ್ರಿಯೆಗಾಗಿ ಕಾದು ನಿಂತಿದ್ದ ಮಾಧ್ಯಮದವರ ಕಣ್ಣು ತಪ್ಪಿಸಲು ಹೀಗೆ ಹೋದರು ಎಂದು ಹೇಳಲಾಗಿದೆ.

ಪೊಲೀಸರಿಂದಲೇ ತನಿಖೆ: ‘ಯುವತಿ ನೀಡಿದ್ದ ದೂರು ಆಧರಿಸಿ ಕಬ್ಬನ್ ಪಾರ್ಕ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಪ್ರಕರಣವನ್ನು ಇದುವರೆಗೂ ಎಸ್‌ಐಟಿಗೆ ಹಸ್ತಾಂತರಿಸಿಲ್ಲ.

‘ರಮೇಶ ದಾಖಲಿಸಿದ್ದ ಪ್ರಕರಣದ ತನಿಖೆಯನ್ನು ಎಸ್‌ಐಟಿ ನಡೆಸುತ್ತಿದೆ. ಯುವತಿ ನೀಡಿದ್ದ ದೂರಿನ ಪ್ರಕರಣವನ್ನು ಪೊಲೀಸರು ತನಿಖೆ ಮಾಡುತ್ತಿದ್ದಾರೆ. ಯುವತಿಯಿಂದ ನೇರವಾಗಿ ಹೇಳಿಕೆ ಪಡೆಯಲು ಪ್ರಯತ್ನಿಸುತ್ತಿದ್ದಾರೆ’ ಎಂದೂ ಹಿರಿಯ ಅಧಿಕಾರಿಯೊಬ್ಬರು ಹೇಳಿದರು.

ಒಳ ಉಡುಪು ಹಿಡಿದು ಪ್ರತಿಭಟನೆ; ವಶಕ್ಕೆ

ರಮೇಶ ವಿಚಾರಣೆ ನಡೆಯುತ್ತಿದ್ದ ಸಂದರ್ಭದಲ್ಲೇ ಯುವ ಕಾಂಗ್ರೆಸ್ ಕಾರ್ಯಕರ್ತರು ಆಡುಗೋಡಿಯಲ್ಲಿ ಪ್ರತಿಭಟನೆ ನಡೆಸಿದರು.

ಒಳ ಉಡುಪು ಹಿಡಿದು ಘೋಷಣೆ ಕೂಗಿದ ಕಾರ್ಯಕರ್ತರು, ‘ರಮೇಶ ಅವರನ್ನು ಕೂಡಲೇ ಬಂಧಿಸಿ ಜೈಲಿಗಟ್ಟಬೇಕು’ ಎಂದು ಆಗ್ರಹಿಸಿದರು.

‘ಅಧಿಕಾರ ಹಾಗೂ ಪ್ರಭಾವದ ದರ್ಪದಿಂದ ಯುವತಿಯನ್ನು ಲೈಂಗಿಕವಾಗಿ ಬಳಸಿಕೊಂಡು ಅತ್ಯಾಚಾರ ಎಸಗಿರುವ ರಮೇಶ ವಿರುದ್ಧ ಈಗಾಗಲೇ ಪ್ರಕರಣ ದಾಖಲಾಗಿದೆ. ಅಷ್ಟಾದರೂ ಅವರ ವಿರುದ್ಧ ಪೊಲೀಸರು ಕ್ರಮ ಕೈಗೊಂಡಿಲ್ಲ. ಪೊಲೀಸರು ಹಾಗೂ ರಾಜ್ಯ ಸರ್ಕಾರವೇ ರಮೇಶ ಪರ ಕೆಲಸ ಮಾಡುತ್ತಿದೆ’ ಎಂದೂ ದೂರಿದರು.

ಸ್ಥಳಕ್ಕೆ ಬಂದ ಪೊಲೀಸರು, ಕಾರ್ಯಕರ್ತರನ್ನು ವಶಕ್ಕೆ ಪಡೆದು ಕರೆದೊಯ್ದರು. ಮಧ್ಯಾಹ್ನದ ನಂತರ ಬಿಡುಗಡೆಗೊಳಿಸಿದರು.

ಪ್ರಜಾವಾಣಿ
ಸರ್ಕಾರಿ ಸೇವೆ: ಪಡೆಯೋದು ಹೇಗೆ

ಲೇಔಟ್ ಮಾಡುವುದು ಹೇಗೆ? ಖಾತಾ ಪ್ರಕ್ರಿಯೆಗಳು ಹೇಗೆ?
ಇಲ್ಲಿದೆ ಮಾಹಿತಿ
ಡಾ.ಬಿ.ಆರ್.ಹರೀಶ್ ನಾಯ್ಕ್, ಉಪವಿಭಾಗಾಧಿಕಾರಿ, ಬಿಡಿಎ ಹಾಗೂ ಬಿಬಿಎಂಪಿ
https://bit.ly/3u0pC2f

ನಾಗರಿಕ ಸೇವಾ ಮಂಡಳಿ ಪುನರ್ ಸ್ಥಾಪನೆ

ಶರತ್ ವರ್ಗಾವಣೆ :ಮರು ಪರಿಶೀಲನೆಗೆ ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2014ರಿಂದ ನಿಷ್ಕ್ರಿಯ ಸ್ಥಿತಿಯಲ್ಲಿದ್ದ ನಾಗರಿಕ ಸೇವಾ ಮಂಡಳಿಯನ್ನು(ಸಿಎಸ್‌ಬಿ) ಕೇಂದ್ರ ಆಡಳಿತ ನ್ಯಾಯಮಂಡಳಿ(ಸಿಎಟಿ) ಪುನರ್ ಸ್ಥಾಪಿಸಿದೆ. ಈ ಮಂಡಳಿಯ ಶಿಫಾರಸು ಆಧರಿಸಿ ಐಎಎಸ್ ಅಧಿಕಾರಿ ಬಿ.ಶರತ್ ಅವರ ವರ್ಗಾವಣೆ ಆದೇಶ ಮರುಪರಿಶೀಲಿಸುವಂತೆ ಸರ್ಕಾರಕ್ಕೆ ಸಿಎಟಿ ನಿರ್ದೇಶನ ನೀಡಿದೆ.

ಟಿ.ಎಸ್.ಆರ್. ಸುಬ್ರಮಣಿಯನ್ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನಿರ್ದೇಶನಗಳಿಗೆ ಅನುಸಾರವಾಗಿ ಭಾರತೀಯ ಆಡಳಿತ ಸೇವೆ (ಕೇಡರ್) ತಿದ್ದುಪಡಿ ನಿಯಮಗಳನ್ನು ಕೇಂದ್ರ ಸರ್ಕಾರ 2014ರಲ್ಲಿ ಜಾರಿಗೆ ತಂದಿದೆ. ಮುಖ್ಯವಾಗಿ ಐಎಎಸ್ ಅಧಿಕಾರಿಗಳ ಕನಿಷ್ಠ ಅಧಿಕಾರಾವಧಿಯನ್ನು ಈ ನಿಯಮಾವಳಿ ಒಳಗೊಂಡಿದೆ. ಈ ನಿಯಮಾವಳಿ ಅಡಿಯಲ್ಲಿ 2014ರ ಜನವರಿ 31ರಲ್ಲಿ ರಾಜ್ಯ ಸರ್ಕಾರವು ಸಿಎಸ್‌ಬಿ ರಚಿಸಿತ್ತು. ಸರ್ಕಾರದ ಮುಖ್ಯ ಕಾರ್ಯದರ್ಶಿ ಅವರು ಮಂಡಳಿಗೆ ಅಧ್ಯಕ್ಷರಾಗಿ, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅವರು ಸದಸ್ಯರಾಗಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ(ಡಿಪಿಎಆರ್) ಕಾರ್ಯದರ್ಶಿ ಅವರು ಸಂಯೋಜಕರಾಗಿದ್ದರು. ಆದರೆ, 2014ರ ಮಾರ್ಚ್ 12ರಂದು ಅದನ್ನು ನಿಷ್ಕ್ರಿಯಗೊಳಿಸಲಾಗಿತ್ತು.

‘ಮಂಡಳಿಯನ್ನು ಅನಿರ್ದಿಷ್ಟಾವಧಿ ತನಕ ಅಮಾನ್ಯ ಸ್ಥಿತಿಯಲ್ಲಿ ಇರಿಸುವುದು ಸುಪ್ರೀಂ ಕೋರ್ಟ್ ಆದೇಶಗಳಿಗೆ ವಿರುದ್ಧವಾಗಿದೆ’ ಎಂದು ನ್ಯಾಯಾಂಗ ಸದಸ್ಯ ಸುರೇಶ್‌ಕುಮಾರ್ ಮೊಂಗಾ ಮತ್ತು ಆಡಳಿತ ಸದಸ್ಯ ರಾಕೇಶ್‌ಕುಮಾರ್ ಗುಪ್ತಾ ಅವರನ್ನು ಒಳಗೊಂಡ ಸಿಎಟಿ ಪೀಠ(ಬೆಂಗಳೂರು) ಅಭಿಪ್ರಾಯಪಟ್ಟಿತು.

‘2020ರ ಸೆಪ್ಟೆಂಬರ್ 28ರಂದು ಬಿ.ಶರತ್ ಅವರನ್ನು ವರ್ಗಾವಣೆ ಮಾಡಿ ಹೊರಡಿಸಿರುವ ಆದೇಶವನ್ನು ಮಂಡಳಿಯ ಶಿಫಾರಸು ಆಧರಿಸಿ ಪುನರ್ ಪರಿಶೀಲಿಸಬೇಕು’ ಎಂದು ಸಿಎಟಿ ನಿರ್ದೇಶನ ನೀಡಿತು.

ಶರತ್ ವರ್ಗಾವಣೆ ಪ್ರಕರಣವನ್ನು ವಿಚಾರಣೆ ನಡೆಸಬೇಕು ಎಂದು ಮಂಡಳಿಗೂ ಪೀಠ ಆದೇಶಿಸಿತು. ಈ ಎಲ್ಲಾ ಪ್ರಕ್ರಿಯೆಗಳು ಒಂದು ತಿಂಗಳ ಅವಧಿಯಲ್ಲಿ ಪೂರ್ಣಗೊಳ್ಳಬೇಕು ಎಂದು ತಿಳಿಸಿದೆ.

‘ಕೋರ್ಟ್ ಮಧ್ಯಪ್ರವೇಶಿಸಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಿ.ಡಿ ಪ್ರಕರಣದಿಂದ ಮಹಿಳಾ ಸಂಕುಲಕ್ಕೆ ಅವಮಾನ ಆಗಿದೆ. ಬಿಜೆಪಿ ಶಾಸಕರು ನೀಚತನ ತೋರಿಸಿದ್ದಾರೆ. ಈ ಪ್ರಕರಣದಲ್ಲಿ ಕೋರ್ಟ್ ಮಧ್ಯಪ್ರವೇಶಿಸಬೇಕು. ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ತನಿಖೆ ಆಗಬೇಕು’ ಎಂದು ಕಾಂಗ್ರೆಸ್ ನಾಯಕಿ ಮೋಟಮ್ಮ ಆಗ್ರಹಿಸಿದರು.

ಪಕ್ಷದ ನಾಯಕಿಯರಾದ ಉಮಾಶ್ರೀ, ಜಯಮಾಲಾ ಮತ್ತು ಮಂಜುಳಾ ನಾಯ್ಡು ಜೊತೆ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಯಡಿಯೂರಪ್ಪ ಮುಖ್ಯಮಂತ್ರಿ ಆಗಿದ್ದು ರಮೇಶ ಜಾರಕಿಹೊಳಿ ಸೇರಿದಂತೆ ಕಾಂಗ್ರೆಸ್, ಜೆಡಿಎಸ್‌ನಿಂದ ಬಿಜೆಪಿಗೆ ಬಂದ ಶಾಸಕರಿಂದ. ತಮಗೆ ನೀಡಿದ ಭರವಸೆಗಳನ್ನು ಈಡೇರಿಸಿಲ್ಲವೆಂದು ಅವರೆಲ್ಲ ಬಿಜೆಪಿಯ ರಾಷ್ಟ್ರೀಯ ನಾಯಕರಿಗೆ ದೂರು ಕೊಡುತ್ತಿದ್ದರು. ಅದಕ್ಕೆ ಬಿಜೆಪಿಯವರೇ ಈ ಸಿ.ಡಿ ಮಾಡಿದ್ದಾರೆ’ ಎಂದು ಆರೋಪಿಸಿದರು.

ಜಯಮಾಲಾ ಮಾತನಾಡಿ, ‘ಸಂತ್ರಸ್ತೆ ಮಾತ್ರ ಸತ್ಯ ಹೇಳಲು ಸಾಧ್ಯ. ತಪ್ಪು ಯಾರೇ ಮಾಡಿದ್ದರೂ ಶಿಕ್ಷೆ ಆಗಬೇಕು. ಕೆಪಿಸಿಸಿ ಅಧ್ಯಕ್ಷರಿಗೂ ಇಬ್ಬರು ಹೆಣ್ಣು ಮಕ್ಕಳಿದ್ದಾರೆ. ಅಂಥವರು ಇಂಥ ಹೊಲಸು ಕೆಲಸ ಮಾಡುತ್ತಾರಾ’ ಎಂದು ಪ್ರಶ್ನಿಸಿದರು.

‘ನನ್ನ ಅನುಭವದಲ್ಲಿ ಇಷ್ಟೊಂದು ಗೊಂದಲದಿಂದ ಕೂಡಿದ ಮೊದಲ ಪ್ರಕರಣವಿದು. ಸಂತ್ರಸ್ತೆ ಪತ್ತೆ ಮಾಡಲು ಆಗಿಲ್ಲ ಎಂದ ಮೇಲೆ ಅಸಹಾಯಕರೆಂದು ಸರ್ಕಾರ ಒಪ್ಪಿಕೊಳ್ಳಬೇಕು’ ಎಂದು ಉಮಾಶ್ರೀ ಹೇಳಿದರು.

‘ಈ ಪ್ರಕರಣದಲ್ಲಿ ಎಸ್‌ಐಟಿ ಪ್ರಾಥಮಿಕ ತನಿಖಾ ವರದಿ ನೀಡಬೇಕಿತ್ತು. ವಿಳಂಬ ಮಾಡುತ್ತಿರುವುದು ಅನುಮಾನಗಳಿಗೆ ಕಾರಣವಾಗಿದೆ’ ಎಂದು ಮಂಜುಳಾ ನಾಯ್ಡು ಹೇಳಿದರು.

ಸಂತ್ರಸ್ತೆ ಒತ್ತೆ ಇರಿಸಿಕೊಂಡ ಡಿಕೆಶಿ: ಬಿಜೆಪಿ ಟ್ವೀಟ್

ಬೆಂಗಳೂರು: ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸಂತ್ರಸ್ತೆಯನ್ನು ಒತ್ತೆಯಾಗಿ ಇರಿಸಿಕೊಂಡಿದ್ದಾರೆ ಎಂದು ಆಕೆಯ ಪೋಷಕರು ಹೇಳಿದ್ದಾರೆ. ಒಂದು ವೇಳೆ ಆಕೆಗೆ ಏನಾದರೂ ಆದರೆ ಶಿವಕುಮಾರ್ ಅವರೇ ಹೊಣೆಗಾರರಾಗುತ್ತಾರೆ ಎಂದು ಬಿಜೆಪಿ ಟ್ವೀಟ್ ಮಾಡಿದೆ.

ಸಂತ್ರಸ್ತೆಗೆ ಏನಾದರೂ ಹೆಚ್ಚು ಕಮ್ಮಿ ಆದರೆ ಅದಕ್ಕೆ ಮುಖ್ಯಮಂತ್ರಿ ಯಡಿಯೂರಪ್ಪ, ಬಿಜೆಪಿ ಹೊಣೆ ಎಂದು ಸಿದ್ದರಾಮಯ್ಯ ಅವರಿಗೆ ತಿರುಗೇಟು ನೀಡಿರುವ ಬಿಜೆಪಿ, ‘ಯುವತಿಯ ಪೋಷಕರು ನೇರವಾಗಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರ ಮೇಲೆ ಬೊಟ್ಟು ಮಾಡಿ, ಸಂತ್ರಸ್ತೆಯನ್ನು ಒತ್ತೆಯಾಗಿರಿಸಿಕೊಂಡಿದ್ದಾರೆ ಎಂದು ಆರೋಪಿಸಿದ್ದಾರೆ. ಹೀಗಿರುವಾಗ ಯುವತಿಗೆ ಅಪಾಯ ಎದುರಾದರೆ ಕಾನೂನಿನ ಪ್ರಕಾರ ಶಿವಕುಮಾರ್ ಅವರೇ ಹೊಣೆಗಾರರಾಗುತ್ತಾರೆ ಅಲ್ಲವೆ’ ಎಂದು ಬಿಜೆಪಿ ಪ್ರಶ್ನಿಸಿದೆ.

ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರಶ್ನೆ

ಸರ್ಕಾರ ಅಸ್ತಿತ್ವದಲ್ಲಿದೆಯೇ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಿ.ಡಿ ಹಗರಣದ ಯುವತಿ ತನಗೆ ಪ್ರಾಣ ಭಯ ಇದೆ ಎಂದು

ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗೆ ಬರೆದಿದ್ದಾರೆ ಎನ್ನಲಾದ ಪತ್ರ ಗಾಬರಿ ಹುಟ್ಟಿಸುವಂತಿದೆ. ಯಡಿಯೂರಪ್ಪನವರೇ ರಾಜ್ಯದಲ್ಲಿ ಸರ್ಕಾರ ಅಸ್ತಿತ್ವದಲ್ಲಿದೆಯೇ’ ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

ಸರಣಿ ಟ್ವೀಟ್ ಮಾಡಿರುವ ಅವರು, ‘ಸಂತ್ರಸ್ತ ಯುವತಿ ಆರಂಭದ ಆಡಿಯೊದಲ್ಲಿ ಆತ್ಮಹತ್ಯೆಗೆ ಪ್ರಯತ್ನ ಮಾಡಿದ್ದೆ ಎಂದಿದ್ದಳು. ಈಗ ತನಗೆ ಪ್ರಾಣಭಯ ಇದೆ ಎಂದು ಪತ್ರ ಬರೆದಿದ್ದಾಳೆ. ಆಕೆಯ ಪ್ರಾಣಕ್ಕೆ ಅಪಾಯ ಎದುರಾದರೆ ಇಡೀ ಸರ್ಕಾರವೇ ಹೊಣೆಯಾಗುತ್ತದೆ’ ಎಂದು ಎಚ್ಚರಿಸಿದ್ದಾರೆ.

‘ಮುಖ್ಯ ನ್ಯಾಯಮೂರ್ತಿಗೆ ಬರೆದ ಪತ್ರದಲ್ಲಿ ಎಸ್‌ಐಟಿ ಮೇಲೆಯೇ ಅಪನಂಬಿಕೆ ವ್ಯಕ್ತಪಡಿಸಿರುವುದು ಮಾತ್ರವಲ್ಲ, ಅವರು ಸಾಕ್ಷ್ಯನಾಶ ಮಾಡುತ್ತಿದ್ದಾರೆ. ತನ್ನ ವಿರೋಧಿಗಳ ಜೊತೆ ಶಾಮೀಲಾಗಿದ್ದಾರೆ ಎಂದೆಲ್ಲ ಸಂತ್ರಸ್ತೆ ಆರೋಪಿಸಿರುವುದು ಗಂಭೀರ ವಿಷಯ. ಸಂತ್ರಸ್ತೆ ನಿರಂತರ ವಿಡಿಯೊ, ಪತ್ರಗಳನ್ನು ಬಿಡುಗಡೆ ಮಾಡುತ್ತಿದ್ದರೆ, ಮುಖ್ಯಮಂತ್ರಿ, ಗೃಹ ಸಚಿವರು, ಪೊಲೀಸರು ನಿರಂತರ ಸಭೆ ನಡೆಸುತ್ತಿದ್ದಾರೆ. ಫಲಿತಾಂಶ ಏನು’ ಎಂದೂ ಪ್ರಶ್ನಿಸಿದ್ದಾರೆ.

‘ಸಿ.ಡಿ ಬಹಿರಂಗಗೊಂಡು 27 ದಿನಗಳು ಕಳೆದರೂ ಹಗರಣದ ಕೇಂದ್ರ ವ್ಯಕ್ತಿಯಾದ ಸಂತ್ರಸ್ತ ಯುವತಿಯ ವಿಚಾರಣೆ ನಡೆಸಲು ಸಾಧ್ಯವಾಗದ ಪೊಲೀಸರ ವೈಫಲ್ಯಕ್ಕೆ ಯಾರು ಹೊಣೆ, ಅವರ ಮೇಲೆ ಪ್ರಭಾವ ಬೀರುತ್ತಿರುವವರು ಯಾರು, ರಾಜ್ಯದಲ್ಲಿ ಕಾನೂನು ವ್ಯವಸ್ಥೆ ಕುಸಿದು ಬಿದ್ದಿರುವುದಕ್ಕೆ ಬೇರೆ ಸಾಕ್ಷಿ ಬೇಕೇ’ ಎಂದು ಸಿದ್ದರಾಮಯ್ಯ ವಾಗ್ದಾಳಿ ನಡೆಸಿದ್ದಾರೆ.

‘ಮಗಳು ಒತ್ತಡದಲ್ಲಿದ್ದಾಳೆ, ಈಗ ಹೇಳಿಕೆ ಪಡೆಯಬೇಡಿ’

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ನಮ್ಮ ಮಗಳು ಒತ್ತಡದಲ್ಲಿದ್ದಾಳೆ. ಒತ್ತಡ ನಿವಾರಣೆಯ ನಂತರ ಆಕೆಯಿಂದ ಹೇಳಿಕೆ ಪಡೆಯಬೇಕು’ ಎಂದು ಗೋಕಾಕ ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಅವರಿಗೆ ಸಂಬಂಧಿಸಿದ್ದು ಎನ್ನಲಾದ ಸಿ.ಡಿ.ಯಲ್ಲಿರುವ ಯುವತಿಯ ತಂದೆ ಆಗ್ರಹಿಸಿದರು. ಇದೇ ವೇಳೆ ಕುಟುಂಬ ಸದಸ್ಯರು, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರ ವಿರುದ್ಧ ಆರೋಪಗಳನ್ನು ಮಾಡಿದ್ದಾರೆ.

ಇಲ್ಲಿ ಸೋಮವಾರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ‘ಆಕೆ ಯಾವ ಸ್ಥಿತಿಯಲ್ಲಿದ್ದಾಳೆ ಗೊತ್ತಿಲ್ಲ. ಆಕೆಯನ್ನು ನಾಲ್ಕೈದು ದಿನ ನಮ್ಮೊಂದಿಗೆ ಬಿಡಬೇಕು. ಸದ್ಯಕ್ಕೆ ಆಕೆಯಿಂದ ನೇರವಾಗಿ ಯಾವ ಹೇಳಿಕೆಯನ್ನೂ ನ್ಯಾಯಾಧೀಶರು ಪರಿಗಣಿಸಬಾರದು’ ಎಂದು ಮನವಿ ಮಾಡಿದರು.

‘ನಮ್ಮ ಹಿಂದೆ ಯಾರೂ ಇಲ್ಲ. ಯಾವುದೇ ಒತ್ತಡವಿಲ್ಲ. ಯಾರಿಂದಲೂ ಭಯವಿಲ್ಲ. ನಿವೃತ್ತ ಸೈನಿಕನಾದ ನಾನು ಆಕೆಗೆ ರಕ್ಷಣೆ ಒದಗಿಸಲು ಸಿದ್ಧವಿದ್ದೇನೆ. ಮುಖ್ಯಮಂತ್ರಿ, ನ್ಯಾಯಾಧೀಶರು ಹಾಗೂ ಗೃಹ ಸಚಿವರು ನಮ್ಮ ಕೋರಿಕೆಯನ್ನು ಗಂಭೀರವಾಗಿ ಪರಿಗಣಿಸಬೇಕು’ ಎಂದು ಕೋರಿದರು.

‘ಎಸ್‌ಐಟಿ ಪೊಲೀಸರ ತನಿಖೆ ಮೇಲೆ ನಮಗೆ ನಂಬಿಕೆ ಇದೆ’ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

‘ಡಿಕೆಶಿ ವಿರುದ್ಧ ದೂರು ಕೊಡುವಿರಾ’ ಎಂಬ ಪ್ರಶ್ನೆಗೆ, ‘ನಮಗೆ ಮಗಳು ಮುಖ್ಯ. ಆಕೆ ನಮ್ಮಲ್ಲಿಗೆ ಬಂದ ಮೇಲೆ ಮುಂದೇನು ಮಾಡಬೇಕೆಂದು ನಮ್ಮ ವಕೀಲರನ್ನು ಕೇಳುತ್ತೇವೆ. ನಮ್ಮ ಬಳಿ 11 ಸಾಕ್ಷಿಗಳಿವೆ. ಈಗಾಗಲೇ 2 ಆಡಿಯೊ ಬಿಡುಗಡೆ ಮಾಡಿದ್ದೇವೆ. ಇನ್ನೂ 9 ಇವೆ. ಮೊದಲು ಮಗಳನ್ನು ನಮ್ಮಲ್ಲಿಗೆ ಕಳುಹಿಸಿಕೊಡಬೇಕು’ ಎಂದರು.

‘ರಮೇಶ ಜಾರಕಿಹೊಳಿಯಿಂದ ಅನ್ಯಾಯವಾಗಿದೆ ಎಂದು ಮಗಳು ಹೇಳಿದರೆ ಏನು ಮಾಡುವಿರಿ’ ಎಂಬ ಪ್ರಶ್ನೆಗೆ, ‘ಕುಟುಂಬದವರೆಲ್ಲರೂ ಸೇರಿ ಚರ್ಚಿಸಿ ನಿರ್ಧರಿಸುತ್ತೇವೆ’ ಎಂದು ಪ್ರತಿಕ್ರಿಯಿಸಿದರು. ಸಹೋದರ ಮಾತನಾಡಿ, ‘ಈವರೆಗೆ ಬಂದಿರುವ ವಿಡಿಯೊ ಹಾಗೂ ಮುಂದೆ ಬರಲಿರುವ ವಿಡಿಯೊಗಳನ್ನು ಸಿ.ಡಿ. ಗ್ಯಾಂಗ್‌ನವರು ಹಾಗೂ ಡಿ.ಕೆ. ಶಿವಕುಮಾರ್ ಒತ್ತಾಯಪೂರ್ವಕವಾಗಿ ಮಾಡಿಸುತ್ತಿದ್ದಾರೆ. ಹೇಳಿಕೆ ಕೊಡಿಸುತ್ತಿದ್ದಾರೆ’ ಎಂದು ದೂರಿದರು.

ತಾಯಿ ಮಾತನಾಡಿ, ‘ರಾಜಕೀಯದವರ ಜೊತೆ ಸೇರಬೇಡ ಎಂದು ಹೇಳಿದ್ದೆ. ಡಿ.ಕೆ. ಶಿವಕುಮಾರ್ ಸಂಬಂಧಿಕರು ಕೆಲಸ ಕೊಡಿಸುವುದಾಗಿ ಹೇಳಿದ್ದಾರೆ ಎಂದು 4 ತಿಂಗಳ ಹಿಂದೆ ತಿಳಿಸಿದ್ದಳು. ₹ 40ಸಾವಿರ ಸಂಬಳ ಇರುವಾಗ ಇದ್ಯಾಕೆ ಬೇಕು? ಮನೆಗೆ ಬಾ ಎಂದು ಹೇಳಿದ್ದೆ. ಆ ಸಿಡಿಯಲ್ಲಿರುವುದು ನಾನಲ್ಲ ಎಂದಿದ್ದಳು. ಆಕೆಯಿಂದ ಮೊಬೈಲ್ ಫೋನ್ ಕಸಿದುಕೊಂಡಿದ್ದಾರೆ. ನನ್ನೊಂದಿಗೆ ಮಾತನಾಡಲು ಬಿಟ್ಟಿಲ್ಲ’ ಎಂದು ಕಣ್ಣೀರಿಟ್ಟರು.

ಕುಟುಂಬ ಭೇಟಿಯಾದ ವಾಲ್ಮೀಕಿ ಶ್ರೀ: ಯುವತಿಯ ಪೋಷಕರನ್ನು ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದಪುರಿ ಸ್ವಾಮೀಜಿ ಸೋಮವಾರ ರಾತ್ರಿ ಭೇಟಿಯಾಗಿ ಮಾತುಕತೆ ನಡೆಸಿದರು.

ಬಳಿಕ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ‘ನೋವಿನಲ್ಲಿರುವ ಕುಟುಂಬದವರಿಗೆ ಸಾಂತ್ವನ ಹೇಳಿ, ಧೈರ್ಯ ತುಂಬಿದ್ದೇನೆ. ಈ ಪ್ರಕರಣದಲ್ಲಿ ರಾಜಕೀಯ ಷಡ್ಯಂತ್ರವಾಗಿದ್ದು, ಸರಿಯಾಗಿ ತನಿಖೆ ಆಗಬೇಕು’ ಎಂದು ಒತ್ತಾಯಿಸಿದರು.

‘ಸಿ.ಡಿ. ವಿಚಾರ ಸದ್ಯ ಮಾತಾಡುವುದಿಲ್ಲ’

ಬೆಳಗಾವಿ: ‘ರಮೇಶ ಜಾರಕಿಹೊಳಿ ವಿರುದ್ಧದ ಸಿ.ಡಿ. ವಿಚಾರವಾಗಿ ಸದ್ಯಕ್ಕೆ ನಾನೇನೂ ಮಾತನಾಡುವುದಿಲ್ಲ. ನಮಗೆ ಉಪ ಚುನಾವಣೆಗಳಲ್ಲಿ ಗೆಲ್ಲುವುದು ಮುಖ್ಯ. ಆ ಬಗ್ಗೆ ಗಮನಹರಿಸುತ್ತಿದ್ದೇನೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

‘ರಮೇಶ ಹತ್ಯೆ ಮಾಡಿಸಬಹುದು ಎಂಬ ಭಯ’– ಸರ್ಕಾರದ ಮೇಲೆ ನಂಬಿಕೆ ಇಲ್ಲ’

ಮುಖ್ಯ ನ್ಯಾಯಮೂರ್ತಿ ಮಧ್ಯಪ್ರವೇಶಕ್ಕೆ ಯುವತಿ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿ.ಡಿ. ಪ್ರಕರಣ ದಿನದಿಂದ ದಿನಕ್ಕೆ ತಿರುವು ಪಡೆಯುತ್ತಲೇ ಸಾಗುತ್ತಿದ್ದು, ಸಿ.ಡಿ.ಯಲ್ಲಿದ್ದಾರೆ ಎನ್ನಲಾದ ಯುವತಿ ಇದೀಗ ಸುಪ್ರೀಂಕೋರ್ಟ್ ಹಾಗೂ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳಿಗೆ ಪತ್ರ ಬರೆದಿದ್ದಾರೆ.

‘ಸಿ.ಡಿ.ಪ್ರಕರಣದ ತನಿಖೆ ನಿಮ್ಮ (ಮುಖ್ಯ ನ್ಯಾಯಮೂರ್ತಿ) ಮೇಲ್ವಿಚಾರಣೆಯಲ್ಲಿ ನಡೆಸಬೇಕು ಹಾಗೂ ನನಗೆ ಸೂಕ್ತ ಭದ್ರತೆ ಒದಗಿಸುವಂತೆ ರಾಜ್ಯ ಸರ್ಕಾರಕ್ಕೆ ಸೂಚನೆ ನೀಡಬೇಕು’ ಎಂದು ಯುವತಿ ಪತ್ರದಲ್ಲಿ ಕೋರಿದ್ದಾರೆ.

ಇ-ಮೇಲ್ ಮೂಲಕ ಭಾನುವಾರವೇ ಯುವತಿ ಪತ್ರ ಕಳುಹಿಸಿದ್ದಾರೆ ಎನ್ನಲಾಗಿದೆ.

ಪತ್ರದ ಪ್ರಮುಖ ಅಂಶಗಳು:

- ನಾನು ಅತ್ಯಾಚಾರ ಪ್ರಕರಣದ ಸಂತ್ರಸ್ತೆ. ಬೆಂಗಳೂರಿನ ಕಬ್ಬನ್ ಪಾರ್ಕ್ ಠಾಣೆಯಲ್ಲಿ ಮಾಜಿ ಸಚಿವ ರಮೇಶ ಜಾರಕಿಹೊಳಿ ವಿರುದ್ಧ ಎಫ್‌ಐಆರ್ ದಾಖಲಿಸಿರುತ್ತೇನೆ.
- ರಮೇಶ ಜಾರಕಿಹೊಳಿ ಪ್ರಭಾವಿ ವ್ಯಕ್ತಿ. ಅವರ ವಿರುದ್ಧ ಮಾಡಿರುವ ಆರೋಪಗಳನ್ನು ಹಿಂಪಡೆಯುವಂತೆ ಸಾರ್ವಜನಿಕವಾಗಿ ನನಗೆ ಬೆದರಿಕೆ ಹಾಕುತ್ತಿದ್ದಾರೆ. ನನಗೆ ಮತ್ತು ನನ್ನ ಕುಟುಂಬಕ್ಕೆ ರಮೇಶ ಮತ್ತು ಅವರ ಬೆಂಬಲಿಗರಿಂದ ಬೆದರಿಕೆ ಬರುತ್ತಿರುವುದರಿಂದ ಆತಂಕ ತೋಡಿಕೊಂಡಿದ್ದೇನೆ.
- ನನಗೆ ಮತ್ತು ನನ್ನ ಕುಟುಂಬಕ್ಕೆ ರಕ್ಷಣೆ ನೀಡುವಂತೆ ಎಸ್‌ಐಟಿ ಅಧಿಕಾರಿಗಳಿಗೆ ವಿನಂತಿಸಿದರೂ ಪ್ರಯೋಜನವಾಗಿಲ್ಲ. ರಮೇಶ ಅವರೊಂದಿಗೆ ಎಸ್‌ಐಟಿ ಶಾಮೀಲಾಗಿದೆ. ಪ್ರಕರಣ ಸಂಬಂಧ ನ್ಯಾಯಾಧೀಶರ ಮುಂದೆ ಹಾಜರಾಗಿ ಆರೋಪಿ ವಿರುದ್ಧ ಹೇಳಿಕೆ ನೀಡದಂತೆ ನನ್ನನ್ನು ತಡೆಯಲು ಎಸ್‌ಐಟಿ ಮೂಲಕ ಪ್ರಯತ್ನಿಸುತ್ತಿದ್ದಾರೆ.
- ಪ್ರಕರಣಕ್ಕೆ ಸಂಬಂಧಿಸಿದ ಪುರಾವೆಗಳನ್ನು ನಾಶಗೊಳಿಸಲು ರಮೇಶ ಜಾರಕಿಹೊಳಿ ಯತ್ನಿಸಿದ್ದಾರೆ. ನಾನು ತನಿಖಾ ಸಂಸ್ಥೆಯನ್ನು ಸಂಪರ್ಕಿಸದಂತೆ ಹಾಗೂ ತಮ್ಮ ವಿರುದ್ಧ ಹೇಳಿಕೆ ದಾಖಲಿಸದಂತೆ ನಿರ್ಬಂಧಿಸಲು ಯಾವುದೇ ಹಂತಕ್ಕೂ ಹೋಗಲು ಸಿದ್ಧವಿರುವುದಾಗಿ ರಮೇಶ ಧಮ್ಕಿ ಹಾಕಿದ್ದಾರೆ.
- ನನ್ನನ್ನು ಯಾವ ಕ್ಷಣದಲ್ಲಾದರೂ, ಎಲ್ಲಿಯಾದರೂ ರಮೇಶ್ ಜಾರಕಿಹೊಳಿ ಹತ್ಯೆ ಮಾಡಬಹುದು. ಆರೋಪಿ ತಾಳಕ್ಕೆ ತಕ್ಕಂತೆ ಎಸ್‌ಐಟಿ ಕುಣಿಯುತ್ತಿದೆ. ರಾಜ್ಯ ಸರ್ಕಾರವೂ ಅವರ ರಕ್ಷಣೆಗೆ ನಿಂತಿದೆ. ಹೀಗಾಗಿ, ನನಗೆ ರಾಜ್ಯ ಸರ್ಕಾರ ಹಾಗೂ ತನಿಖಾ ಸಂಸ್ಥೆ ಮೇಲೆ ವಿಶ್ವಾಸವಿಲ್ಲ.
- ನ್ಯಾಯಕ್ಕಾಗಿ ನಾನು ಸ್ವ-ಇಚ್ಛೆಯಿಂದ ಹೋರಾಡುತ್ತಿದ್ದೇನೆ. ನಾನೊಬ್ಬ ಶೋಷಿತೆಯಾಗಿದ್ದು, ನನ್ನ ಮಾನ ಮತ್ತು ಗೌರವ ಕಾಪಾಡಿಕೊಳ್ಳಲು, ಸ್ತ್ರೀ ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳಲು ಹೋರಾಡುತ್ತಿದ್ದೇನೆ. ನನ್ನ ಪೋಷಕರು ನೀಡಿರುವ ಹೇಳಿಕೆಯಂತೆ ನನ್ನನ್ನು ಯಾರೂ ಅಪಹರಿಸಿಲ್ಲ. ಆಧಾರ ರಹಿತ ಹೇಳಿಕೆ ನೀಡುವಂತೆ ಪೋಷಕರ ಮೇಲೆ ರಮೇಶ ಜಾರಕಿಹೊಳಿ ಒತ್ತಡ ಹಾಕುತ್ತಿದ್ದಾರೆ.
- ನನ್ನ ಕುಟುಂಬವನ್ನೇ ರಮೇಶ ಜಾರಕಿಹೊಳಿ ಒತ್ತೆಯಾಗಿರಿಸಿಕೊಂಡಿದ್ದಾರೆ. ಡಿವೈಎಸ್ಪಿ ಕಟ್ಟಿಮನಿ, ರಮೇಶ ಪರ ಕೆಲಸ ಮಾಡುತ್ತಿದ್ದಾರೆ. ನಮ್ಮ ಕುಟುಂಬದ ಮೇಲೂ ಅವರು ಒತ್ತಡ ಹಾಕುತ್ತಿದ್ದಾರೆ. ಹೀಗಾಗಿ, ಗೌರವಾನ್ವಿತ ನ್ಯಾಯಾಲಯವು ನಾನು ಎದುರಿಸುತ್ತಿರುವ ಜೀವಭಯವನ್ನು ಗಂಭೀರವಾಗಿ ಪರಿಗಣಿಸುವಂತೆ ವಿನಂತಿಸುತ್ತೇನೆ. ಪ್ರಕರಣದ ತನಿಖೆಯನ್ನು ನ್ಯಾಯಾಲಯದ ಮೇಲ್ವಿಚಾರಣೆಯಲ್ಲಿ ಮಾಡಿ ನನಗೆ ನ್ಯಾಯ ಕೊಡಿಸಬೇಕು ಎಂದು ಬೇಡಿಕೊಳ್ಳುತ್ತಿದ್ದೇನೆ.

ಯುವತಿಗೆ ಪೊಲೀಸರ ನೋಟಿಸ್

‘ತಾವು ನೀಡಿರುವ ದೂರು ಆಧರಿಸಿ ಎಫ್‌ಐಆರ್ ದಾಖಲಾಗಿದೆ. ತಮ್ಮ ಹೇಳಿಕೆ ಅಗತ್ಯವಿರುವುದರಿಂದ ಸೋಮವಾರ ಬೆಳಿಗ್ಗೆ ವಿಚಾರಣೆಗೆ ಹಾಜರಾಗಿ’ ಎಂದು ಕಬ್ಬನ್‌ಪಾರ್ಕ್ ಠಾಣೆ ಪೊಲೀಸರು, ಯುವತಿಗೆ ಸೋಮವಾರ ನೋಟಿಸ್ ನೀಡಿದ್ದಾರೆ.

ಯುವತಿ ಹಾಜರಿಗೆ ಅರ್ಜಿ; 24ನೇ ಎಸಿಎಂಎಂ ನ್ಯಾಯಾಲಯದಲ್ಲಿ ದಾಖಲು

ಸಿ.ಡಿ.ಪ್ರಕರಣ ಬೆಳಕಿಗೆ ಬಂದಾಗಿನಿಂದ ಅಜ್ಞಾತ ಸ್ಥಳದಲ್ಲಿರುವ ಯುವತಿ, ಖುದ್ದು ನ್ಯಾಯಾಧೀಶರ ಎದುರು ಹಾಜರಾಗಿ ಹೇಳಿಕೆ ನೀಡುವುದಾಗಿ ವಿಡಿಯೊ ಒಂದರಲ್ಲಿ ಹೇಳಿದ್ದಾರೆ.

ಯುವತಿ ಪರ ವಕೀಲ ಕೆ.ಎನ್. ಜಗದೀಶ್‌ಕುಮಾರ್, ಸಿಆರ್‌ಪಿಸಿ 164 ಅಡಿ ಹೇಳಿಕೆ ದಾಖಲಿಸಲು ಸಂತ್ರಸ್ತೆಗೆ ಅವಕಾಶ ನೀಡುವಂತೆ ಕೋರಿ ಮ್ಯಾಜಿಸ್ಟ್ರೇಟ್ ನ್ಯಾಯಾಲಯಕ್ಕೆ ಸೋಮವಾರ ಅರ್ಜಿ ಸಲ್ಲಿಸಿದ್ದಾರೆ. ಅದು ಸ್ವೀಕೃತಗೊಂಡಿದ್ದು, 24ನೇ ಎಸಿಎಂಎಂ ನ್ಯಾಯಾಲಯದಲ್ಲಿ ಅರ್ಜಿ ದಾಖಲಾಗಿದೆ.

‘ಪ್ರಕರಣದ ಬಗ್ಗೆ ಯುವತಿ ಈಗಾಗಲೇ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಅವರಿಗೂ ಪತ್ರ ಬರೆದಿದ್ದಾರೆ. ಇದೊಂದು ಗಂಭೀರ ಪ್ರಕರಣ. ಯುವತಿಯ ಸ್ವ-ಇಚ್ಛಾ ಹೇಳಿಕೆ ಮಹತ್ವ ಪಡೆದುಕೊಳ್ಳುತ್ತದೆ. ಹೇಳಿಕೆ ದಾಖಲಿಸುವ ಪ್ರಕ್ರಿಯೆಯು ನ್ಯಾಯಾಲಯಕ್ಕೆ ಬಂದಿದೆ. ನಿಗದಿತ ಸಮಯಕ್ಕೆ ಯುವತಿ ನ್ಯಾಯಾಲಯಕ್ಕೆ ಬರಲಿದ್ದಾರೆ’ ಎಂದು ಜಗದೀಶ್‌ಕುಮಾರ್ ‘ಪ್ರಜಾವಾಣಿ’ಗೆ ತಿಳಿಸಿದರು. ‘ಹೇಳಿಕೆ ಪಡೆಯುವ ಸಂದರ್ಭದಲ್ಲಿ ತನಿಖಾಧಿಕಾರಿಯೂ ನ್ಯಾಯಾಲಯದಲ್ಲಿ ಹಾಜರಿರಲಿದ್ದಾರೆ. ಅವರೇ ಯುವತಿಯನ್ನು ಗುರುತಿಸಿ ಮುಂದಿನ ಪ್ರಕ್ರಿಯೆಗೆ ಅನುಮತಿ ನೀಡಲಿದ್ದಾರೆ. ನಂತರ, ನ್ಯಾಯಾಧೀಶರು ಯುವತಿ ಹೇಳಿಕೆ ದಾಖಲಿಸಿಕೊಳ್ಳಲಿದ್ದಾರೆ. ಅದಾದ ನಂತರವೇ ಮುಂದಿನ ಕಾನೂನು ಕ್ರಮ’ ಎಂದೂ ಹೇಳಿದರು.

ಕಾಯುತ್ತಿದ್ದ ಪೊಲೀಸರು: ಸೋಮವಾರ ಬೆಳಿಗ್ಗೆಯೇ ಯುವತಿ ನ್ಯಾಯಾಲಯಕ್ಕೆ ಹಾಜರಾಗುವ ಸುದ್ದಿ ಹರಿದಾಡಿತ್ತು. ಹೀಗಾಗಿ, ಪೊಲೀಸರು ನ್ಯಾಯಾಲಯದ ಆವರಣದಲ್ಲಿ ಬಿಗಿ ಭದ್ರತೆ ಕೈಗೊಂಡಿದ್ದರು. ಸಂಜೆಯೂ ಹಾಜರಾಗುವ ಸುದ್ದಿ ಇತ್ತು. ಅವಾಗಲೂ ಭದ್ರತೆಗೆ ಪೊಲೀಸರನ್ನು ನಿಯೋಜಿಸಲಾಗಿತ್ತು. ಯುವತಿ ಬಾರದಿದ್ದರಿಂದ ಪೊಲೀಸರು ವಾಪಸು ಹೋದರು.

ಕೋವಿಡ್: 15 ದಿನ ಕಟ್ಟೆಚ್ಚರ

ಒಂದನೇ ಪುಟದಿಂದ

ಅಪಾರ್ಟ್‌ಮೆಂಟ್‌ಗಳಲ್ಲಿ ನಿಗಾ: ಬೆಂಗಳೂರಿನಲ್ಲಿ 14 ದಿನಗಳ ಅವಧಿಯಲ್ಲಿ 16,921 ಮಂದಿಯಲ್ಲಿ ಸೋಂಕು ದೃಢಪಟ್ಟಿದೆ. ಅಪಾರ್ಟ್‌ಮೆಂಟ್ ಸಮುಚ್ಚಯಗಳಲ್ಲೇ ಹೆಚ್ಚು ಸೋಂಕು ಹರಡುತ್ತಿದೆ. ಕೊಳೆಗೇರಿಗಳಲ್ಲಿ ಪ್ರಕರಣಗಳ ಸಂಖ್ಯೆ ಕಡಿಮೆ ಇದೆ. ಅಪಾರ್ಟ್‌ಮೆಂಟ್‌ಗಳ ಮೇಲೆ ನಿಗಾ ಇರಿಸಲಾಗುವುದು. ಅಪಾರ್ಟ್‌ಮೆಂಟ್ ನಿವಾಸಿಗಳಿಗೆ ಅಲ್ಲಿಯೇ ಲಸಿಕೆ ವಿತರಣೆಗೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಯಡಿಯೂರಪ್ಪ ತಿಳಿಸಿದರು.

ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರದಲ್ಲಿ ಪ್ರಕರಣಗಳ ಸಂಖ್ಯೆಯಲ್ಲಿ ಹೆಚ್ಚಿನ ಏರಿಕೆಯಾಗಿದೆ. ಮೈಸೂರು, ಕಲಬುರ್ಗಿ, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ದಿನವೊಂದಕ್ಕೆ ಸರಾಸರಿ 100 ಪ್ರಕರಣಗಳು ವರದಿಯಾಗುತ್ತಿವೆ. ಈ ಜಿಲ್ಲೆಗಳಲ್ಲೂ ನಿಗಾ ಇಡಲಾಗುವುದು ಎಂದರು.

ಮಾಲೀಕರಿಗೆ ದಂಡ:‘ಮದುವೆ ಸಮಾರಂಭಗಳಲ್ಲಿ ಕೋವಿಡ್ ಮಾರ್ಗಸೂಚಿ ಉಲ್ಲಂಘನೆಯಾದರೆ ಈವರೆಗೂ ಆಯೋಜಕರಿಗೆ ದಂಡ ಹಾಕಲಾಗುತ್ತಿತ್ತು. ಮುಂದೆ ಕಲ್ಯಾಣ ಮಂಟಪಗಳ ಮಾಲೀಕರಿಗೆ ದಂಡ ವಿಧಿಸಿ, ಆರು ತಿಂಗಳವರೆಗೆ ಮುಚ್ಚುವಂತೆ ಆದೇಶ ಹೊರಡಿಸಲು ನಿರ್ಧರಿಸಲಾಗಿದೆ ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ಸಚಿವರಾದ ಆರೋಗ್ಯ ಸಚಿವ ಡಾ.ಕೆ. ಸುಧಾಕರ್, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್, ಅಬಕಾರಿ ಸಚಿವ ಕೆ. ಗೋಪಾಲಯ್ಯ, ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್, ಆರೋಗ್ಯ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಾವೇದ್ ಅಖ್ತರ್ ಸಭೆಯಲ್ಲಿದ್ದರು.

ಬಳ್ಳಾರಿ ಪಾಲಿಕೆ, 5 ನಗರಸಭೆಗೆ ಚುನಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಳ್ಳಾರಿ ಮಹಾನಗರ ಪಾಲಿಕೆ, 5 ನಗರಸಭೆಗಳು, 3 ಪುರಸಭೆ ಹಾಗೂ 2 ಪಟ್ಟಣ ಪಂಚಾಯಿತಿಗಳ ಚುನಾವಣಾ ವೇಳಾ ಪಟ್ಟಿಯನ್ನು ರಾಜ್ಯ ಚುನಾವಣಾ ಆಯೋಗ ಪ್ರಕಟಿಸಿದೆ.

ಏ.24ರಂದು ಮತದಾನ ನಡೆಯಲಿದ್ದು, ಈ ಸಂಬಂಧ ಏ. 8 ರಂದು ಅಧಿಸೂಚನೆ ಹೊರಡಿಸಲಾಗುವುದು. ನಾಮ ಪತ್ರ ಸಲ್ಲಿಸಲು ಏ. 15 ಕೊನೆಯ ದಿನವಾಗಿದೆ. ಏ.30 ರಂದು ಮತಗಳ ಎಣಿಕೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ರಾಮನಗರ ಮತ್ತು ಚನ್ನಪಟ್ಟಣ– ನಗರಸಭೆ (ರಾಮನಗರ ಜಿಲ್ಲೆ), ಭದ್ರಾವತಿ– ನಗರಸಭೆ, ಮಡಿಕೇರಿ– ನಗರಸಭೆ (ಕೊಡಗು ಜಿಲ್ಲೆ), ಬೀದರ್– ನಗರಸಭೆ (ಬೀದರ್ ಜಿಲ್ಲೆ).

ವಿಜಯಪುರ– ಪುರಸಭೆ(- ಬೆಂಗಳೂರು ಗ್ರಾಮಾಂತರ ಜಿಲ್ಲೆ), ಬೇಲೂರು– ಪುರಸಭೆ (ಹಾಸನ ಜಿಲ್ಲೆ). ಗುಡಿಬಂಡೆ– ಪಟ್ಟಣ ಪಂಚಾಯತ್ (ಚಿಕ್ಕಬಳ್ಳಾಪುರ), ತೀರ್ಥಹಳ್ಳಿ– ಪಟ್ಟಣ ಪಂಚಾಯತ್(ಶಿವಮೊಗ್ಗ)ಗಳಿಗೆ ಚುನಾವಣೆ ನಡೆಯಲಿದೆ.

ಬೆಳೆವಿಮೆ: ಪ್ರಚಾರ ನೀಡಲು ನಿರ್ದೇಶನ

ಬೆಂಗಳೂರು: ‘ಬೆಳೆ ವಿಮೆ ಯೋಜನೆ ಮತ್ತು ಅದರ ಲಾಭಗಳ ಬಗ್ಗೆ ರೈತರಿಗೆ ಎಲ್ಲಾ ಜಿಲ್ಲೆಗಳಲ್ಲಿ ವ್ಯಾಪಕ ಪ್ರಚಾರ ನೀಡಬೇಕು’ ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ರೈತರ ಆತ್ಮಹತ್ಯೆ ಮತ್ತು ಬೆಳೆ ವಿಮಾ ಯೋಜನೆ ಅನುಷ್ಠಾನದ ಕುರಿತು ಅಖಂಡ ಕರ್ನಾಟಕ ರೈತ ಸಂಘ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ವಿಚಾರಣೆ ನಡೆಸಿತು. ರಾಜ್ಯ ಮತ್ತು ಜಿಲ್ಲಾ ಮಟ್ಟದ ಕುಂದು ಕೊರತೆ ಪರಿಹಾರ ಸಮಿತಿ ಸಭೆಗಳ ಬಗ್ಗೆ ರಾಜ್ಯ ಸರ್ಕಾರ ಸಲ್ಲಿಸಿದ್ದ ಅಫಿಡವಿಟ್ ಪರಿಶೀಲಿಸಿದ ಪೀಠ, ‘ಆಗಾಗ್ಗೆ ಸಭೆಗಳನ್ನು ನಡೆಸಿಲ್ಲ’ ಎಂದು ಹೇಳಿತು.

ಲೋಕ ಅದಾಲತ್: ₹1,033 ಕೋಟಿ ಪರಿಹಾರ

ಬೆಂಗಳೂರು: ಮಾ.27ರಂದು ನಡೆದ ಮೆಗಾ ಲೋಕ ಅದಾಲತ್‌ನಲ್ಲಿ 3.32 ಲಕ್ಷ ಪ್ರಕರಣಗಳು ಇತ್ಯರ್ಥಗೊಂಡಿದ್ದು, ₹1,033 ಕೋಟಿ ಪರಿಹಾರ ಪಾವತಿಸಲಾಗಿದೆ ಎಂದು ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ (ಕೆಎಸ್‌ಎಲ್‌ಎಸ್‌ಎ) ಕಾರ್ಯನಿರ್ವಾಹಕ ಅಧ್ಯಕ್ಷ ನ್ಯಾಯಮೂರ್ತಿ ಅರವಿಂದಕುಮಾರ್ ತಿಳಿಸಿದರು.

ಮೊಕದ್ದಮೆ ದಾಖಲಾಗುವ ಮೊದಲನ 19,113 ಪ್ರಕರಣಗಳು ಮತ್ತು 3,13,823 ಬಾಕಿ ಪ್ರಕರಣಗಳು ಸೇರಿವೆ. ₹18.2 ಕೋಟಿ ದಂಡ ವಿಧಿಸಲಾಗಿದೆ ಎಂದು ಅವರು ಸೋಮವಾರ ವಿವರಿಸಿದರು.

ಕ್ರಿಮಿನಲ್ ಪ್ರಕರಣಗಳು, ಅಪಘಾತ ಪ್ರಕರಣಗಳು, ಆಸ್ತಿ ವ್ಯಾಜ್ಯ ರೀತಿಯ ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ. ಒಬ್ಬ ನ್ಯಾಯಧೀಶರು ದಿನಕ್ಕೆ ಮೂರು ಪ್ರಕರಣ ಇತ್ಯರ್ಥಪಡಿಸಿದರೂ, ಇಷ್ಟು ಪ್ರಕರಣಗಳ ಇತ್ಯರ್ಥಕ್ಕೆ ಕನಿಷ್ಠ 95 ದಿನಗಳು ಬೇಕಾಗಬಹುದು ಎಂದರು.

2020ರ ಡಿಸೆಂಬರ್‌ನಲ್ಲಿ ನಡೆದ ಎರಡು ಲೋಕ ಅದಾಲತ್‌ನಲ್ಲಿ ಕ್ರಮವಾಗಿ 1,15,938 ಮತ್ತು 2,63,215 ಪ್ರಕರಣಗಳು ಇತ್ಯರ್ಥಗೊಂಡಿವೆ ಎಂದರು.

ಕಲಬುರ್ಗಿ ನಗರ: ಹೋಳಿ ನಿಮಿತ್ತ ಬಣ್ಣದಾಟ ಆಡಿದ್ದ ಯುವಕರು

ಕೊಲೆ; ಉದ್ರಿಕ್ತರಿಂದ ಕಾರು, ಬೈಕ್ ಜಖಂ

ಪ್ರಜಾವಾಣಿ ವಾರ್ತೆ

ಕಲಬುರ್ಗಿ: ಇಲ್ಲಿನ ಸೇಡಂ ರಸ್ತೆಯ ಜಿಮ್ಸ್ ಆಸ್ಪತ್ರೆ ಎದುರು ಉದ್ರಿಕ್ತ ಯುವಕರ ಗುಂಪೊಂದು ಮಾಂಗರವಾಡಿಯ ವೀರತಾ ಉಪಾಧ್ಯ (26) ಎಂಬ ಯುವಕನ ಮೇಲೆ ಕಲ್ಲು ಎತ್ತಿ ಹಾಕಿ ಸೋಮವಾರ ಸಂಜೆ ಕೊಲೆ ಮಾಡಿ ಪರಾರಿಯಾಗಿದೆ.

ವೀರತಾ

ನಂತರ ಈ ಕೊಲೆಗೆ ಸುಂದರ ನಗರದ ಯುವಕರೇ ಕಾರಣ ಎಂದು 200ಕ್ಕೂ ಹೆಚ್ಚು ಯುವಕರ ತಂಡ ಕೈಯಲ್ಲಿ ತಲವಾರ್, ಬಡಿಗೆ ಕಲ್ಲುಗಳನ್ನು ಹಿಡಿದುಕೊಂಡು ಟೊಯೊಟಾ ಇನ್ನೋವಾ, ಸುಜುಕಿ ಹಾಗೂ ಟಾಟಾ ಕಂಪನಿಯ ಮೂರು ಕಾರು, ಹತ್ತಾರು ಬೈಕ್–ಸ್ಕೂಟರ್‌ಗಳನ್ನು ಜಖಂಗೊಳಿಸಿ ಪರಾರಿಯಾಗಿದೆ.

ಕಲಬುರ್ಗಿಯ ಮಂಗಡೇರ ಗಲ್ಲಿಯ ಗುಂಪಿನ ವ್ಯಕ್ತಿ ವೀರತ ವಿಠ್ಠಲ್ ಕೊಲೆ ಹಿನ್ನಲೆ ಮಂಗಡೇರ ಗುಂಪಿನವರು ಸುಂದರ ನಗರದ ಓಣಿಯಲ್ಲಿ ಏಕಾಏಕಿ ಮನೆಗಳನ್ನು, ವಾಹನಗಳನ್ನು ಧ್ವಂಸ ಮಾಡಿದ್ದು ಸೋಮವಾರ ಕಂಡುಬಂತು.

ಹೋಳಿ ನಿಮಿತ್ತ ಬಣ್ಣದಾಟ ಆಡಿದ್ದ ಯುವಕರು ಪಾನಮತ್ತರಾಗಿದ್ದರು ಎನ್ನಲಾಗಿದೆ. ಈ ಸಂದರ್ಭದಲ್ಲಿ ಮಹಾದೇವಿ ಒಂಟಿ ಎಂಬ ವೃದ್ಧೆಯ ಮನೆ ಹೊಕ್ಕು ಕಟ್ಟಿಗೆಯಿಂದ ಹೊಡೆದು ಗಾಯಗೊಳಿಸಿದ್ದಾರೆ. ಅವರ ಮನೆ ಹಾಗೂ ಅಕ್ಕಪಕ್ಕದ ಮನೆಯ ಕಿಟಕಿಯ ಗಾಜುಗಳನ್ನು ಒಡೆಯಲಾಗಿದೆ.

‘ಉದ್ರಿಕ್ತ ತಂಡದಿಂದ ತಪ್ಪಿಸಿಕೊಳ್ಳಲು ಮನೆಯ ಬಾಗಿಲು ಭದ್ರಪಡಿಸಿಕೊಂಡು ಕಾಟ್ ಕೆಳಗಡೆ ಅವಿತು ಕುಳಿತುಕೊಂಡಿದ್ದೆವು’ ಎಂದು ನಿವಾಸಿಗಳು ಅಳಲು ತೋಡಿಕೊಂಡರು.

ಹಲವು ಮನೆಗಳ ಗಾಜು ಒಡೆದಿದ್ದು, ಸ್ಥಳದಲ್ಲಿ ಉದ್ರಿಕ್ತ ಪರಿಸ್ಥಿತಿ ನಿರ್ಮಾಣವಾಗಿದೆ. 50ಕ್ಕೂ ಅಧಿಕ ಪೊಲೀಸರನ್ನು ನಿಯೋಜಿಸಲಾಗಿದೆ. ಕೊಲೆಗಾರರ ಪತ್ತೆಗೆ ಪೊಲೀಸರು ತಂಡ ರಚಿಸಿದ್ದಾರೆ.

ಮದುವೆಯಾದ ಕೆಲ ಗಂಟೆಗಳಲ್ಲಿಯೇ ವರನ ಪೋಷಕರ ವಿರೋಧ: ಮನೆ ಬಳಿ ಜಗಳ

ಠಾಣೆ ಮೆಟ್ಟಿಲೇರಿದ ಚೈತ್ರಾ ಕೋಟೂರು ದಂಪತಿ

ಪ್ರಜಾವಾಣಿ ವಾರ್ತೆ

ಕೋಲಾರ: ಬಿಗ್‌ಬಾಸ್ 7ನೇ ಆವೃತ್ತಿಯ ಸ್ಪರ್ಧಿ ಚೈತ್ರಾ ಕೋಟೂರು ಹಾಗೂ ರಿಯಲ್ ಎಸ್ಟೇಟ್ ಉದ್ಯಮಿ ನಾಗಾರ್ಜುನ ಅವರು ಮದುವೆಯಾದ ಕೆಲವೇ ತಾಸಿನಲ್ಲಿ ಪೊಲೀಸ್ ಠಾಣೆಯ ಮೆಟ್ಟಿಲೇರಿದ್ದು, ದಾಂಪತ್ಯದಲ್ಲಿ ಬಿರುಕು ಮೂಡಿದೆ.

ಕೋಲಾರ ಜಿಲ್ಲೆಯ ಚೈತ್ರಾ ಮತ್ತು ಮಂಡ್ಯ ಜಿಲ್ಲೆಯ ನಾಗಾರ್ಜುನ ಅವರು ಬೆಂಗಳೂರಿನ ಬ್ಯಾಟರಾಯನಪುರದ ಗಣೇಶ ದೇವಸ್ಥಾನದಲ್ಲಿ ಭಾನುವಾರ (ಮಾರ್ಚ್ 28) ಬೆಳಿಗ್ಗೆ ಮದುವೆಯಾಗಿ, ಸಂಜೆ ಕೋಲಾರಕ್ಕೆ ಬಂದಿದ್ದರು.

ನಾಗಾರ್ಜುನ ಅವರ ಪೋಷಕರಿಗೆ ಈ ಮದುವೆ ಇಷ್ಟವಿರಲಿಲ್ಲ. ಪೋಷಕರ ವಿರೋಧದ ನಡುವೆಯೂ ಅವರು ಚೈತ್ರಾರನ್ನು ಮದುವೆಯಾಗಿದ್ದರು. ಇದರಿಂದ ಆಕ್ರೋಶಗೊಂಡ ನಾಗಾರ್ಜುನ ಕುಟುಂಬ ಸದಸ್ಯರು ಭಾನುವಾರ ರಾತ್ರಿ ಕೋಲಾರದ ಕುರುಬರಪೇಟೆಯಲ್ಲಿರುವ ಚೈತ್ರಾ ಮನೆ ಬಳಿ ಬಂದು ಜಗಳವಾಡಿದ್ದಾರೆ. ನಂತರ ಚೈತ್ರಾ, ರಕ್ಷಣೆ ಕೋರಿ ಪೊಲೀಸರಿಗೆ ದೂರು ಕೊಟ್ಟಿದ್ದಾರೆ ಎಂದು ಮಹಿಳಾ ಠಾಣೆ ಪೊಲೀಸರು ತಿಳಿಸಿದ್ದಾರೆ.

ಚೈತ್ರಾ ಕೋಟೂರು ಮತ್ತು ನಾಗಾರ್ಜುನ್ ಬೆಂಗಳೂರಿನಲ್ಲಿ ಭಾನುವಾರ ಮದುವೆಯಾದ ಕ್ಷಣ.

‘ನನಗೆ ಚೈತ್ರಾ ಅವರನ್ನು ಮದುವೆಯಾಗಲು ಇಷ್ಟವಿರಲಿಲ್ಲ. ಆದರೆ, ಕೆಲ ಸಂಘಟನೆಗಳ ಸದಸ್ಯರು ನನ್ನನ್ನು ಗೃಹ ಬಂಧನದಲ್ಲಿಟ್ಟು ಬೆದರಿಸಿ ಬಲವಂತವಾಗಿ ಅವರೊಂದಿಗೆ ಮದುವೆ ಮಾಡಿಸಿದ್ದಾರೆ’ ಎಂದು ನಾಗಾರ್ಜುನ ಅವರು ಪೊಲೀಸರ ಮುಂದೆ ಹೇಳಿಕೆ ನೀಡಿದ್ದಾರೆ.

ಇದಕ್ಕೆ ಪ್ರತಿಯಾಗಿ ಚೈತ್ರಾ, ‘ನಾನು ಮತ್ತು ನಾಗಾರ್ಜುನ ಒಂದು ವರ್ಷದಿಂದ ಪರಿಚಿತರು. ಪರಸ್ಪರರು ಪ್ರೀತಿಸಿ ಮದುವೆಯಾಗಿದ್ದೇವೆ. ನಾನು ನಾಗಾರ್ಜುನ ಅವರೊಂದಿಗೆ ಬದುಕುತ್ತೇನೆ’ ಎಂದು ಪೊಲೀಸರಿಗೆ ತಿಳಿಸಿದ್ದಾರೆ.

ಪ್ರಕರಣ ದಾಖಲಿಸಿಲ್ಲ: ‘ರಾಜಿ ಸಂಧಾನದ ಮೂಲಕ ವಿವಾದ ಬಗೆಹರಿಸಿಕೊಳ್ಳುವುದಾಗಿ ತಿಳಿಸಿರುವ ಚೈತ್ರಾ ಮತ್ತು ನಾಗಾರ್ಜುನ ಕುಟುಂಬ ಸದಸ್ಯರು ಮೂರು ದಿನಗಳ ಕಾಲಾವಕಾಶ ಕೋರಿದ್ದಾರೆ. ಹೀಗಾಗಿ ಯಾವುದೇ ಪ್ರಕರಣ ದಾಖಲಿಸಿಲ್ಲ. ನಾಗಾರ್ಜುನ ಅವರು ತಮ್ಮ ಪೋಷಕರ ಜತೆ ಹೊರಟು ಹೋಗಿದ್ದಾರೆ’ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

‘ನಾನು ನಾಗಾರ್ಜುನ ಅವರನ್ನು ಮದುವೆಯಾಗುವುದು ಅವರ ಪೋಷಕರಿಗೆ ಇಷ್ಟವಿರಲಿಲ್ಲ. ಈ ಕಾರಣಕ್ಕೆ ಅವರು ನನಗೆ ಕೊಲೆ ಬೆದರಿಕೆ ಹಾಕಿದ್ದರು. ಮೂರ್ನಾಲ್ಕು ದಿನದಲ್ಲಿ ಎಲ್ಲಾ ಸರಿ ಹೋಗುತ್ತದೆ’ ಎಂದು ಚೈತ್ರಾ ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

ಸುಧಾರಣೆ: ಪಕ್ಷಗಳು, ಸರ್ಕಾರ, ಮತದಾರ, ಚುನಾವಣಾ ಆಯೋಗ ಎಲ್ಲರ ಹೊಣೆ

ಚುನಾವಣೆ: ಮೇಲುಗೈಯಾಗದಿರಲಿ ಜಾತಿ–ಹಣ

ಬೆಂಗಳೂರು: 'ಒಬ್ಬ ಅಭ್ಯರ್ಥಿ ₹ 70 ಲಕ್ಷದಲ್ಲಿ ಲೋಕಸಭೆ, ₹ 26 ಲಕ್ಷದಲ್ಲಿ ವಿಧಾನಸಭೆ ಚುನಾವಣೆ ನಡೆಸಲು ಸಾಧ್ಯವಿಲ್ಲ. ಈ ಕಾರಣಕ್ಕೆ ಎಲ್ಲರೂ ರಾಮನ ಲೆಕ್ಕ, ಕೃಷ್ಣನ ಲೆಕ್ಕ ಕೊಡುತ್ತಿದ್ದಾರೆ. ಚುನಾವಣೆ ಪದ್ಧತಿಯಲ್ಲಿ ಸುಧಾರಣೆ ಅಗತ್ಯ...'

ಹೀಗೆ ಪ್ರತಿಪಾದಿಸಿದವರು ಕಾಂಗ್ರೆಸ್ ಪ್ರಮುಖ ವಿ.ಆರ್. ಸುದರ್ಶನ್ ಮತ್ತು ಬಿಜೆಪಿ ಪ್ರಮುಖ ಅಶ್ವತ್ಥನಾರಾಯಣ ಗೌಡ.

ಇದಕ್ಕೆ ಧ್ವನಿಗೂಡಿಸಿದ ಜನವಾದಿ ಸಂಘಟನೆಯ ಕೆ.ಎಸ್. ವಿಮಲಾ, 'ಜಾತಿ, ಹಣದಿಂದಲೇ ಚುನಾವಣೆ ಗೆಲ್ಲುವಂಥ ಸ್ಥಿತಿ ಇದೆ. ಪ್ರಜಾಪ್ರಭುತ್ವ ವ್ಯವಸ್ಥೆ ಉಳಿಯಲು ಜನಪರ ನಿಲುವುಗಳು ಚುನಾವಣಾ ವಿಷಯ ಆಗಬೇಕು' ಎಂದು ವಾದಿಸಿದರು.

'ಪ್ರಜಾವಾಣಿ' ಸಂವಾದದಲ್ಲಿ ಪಾಲ್ಗೊಂಡ ಈ ಮೂವರೂ, ಸದ್ಯದ ರಾಜಕೀಯ ವ್ಯವಸ್ಥೆ, ಪಕ್ಷಗಳ ಧೋರಣೆಗಳ ಬಗ್ಗೆ ವಿಶ್ಲೇಷಿಸಿದರು.

'ಕುಟುಂಬ ರಾಜಕೀಯ' ವಿಷಯ ಪ್ರಸ್ತಾಪವಾದಾಗ, ದಿವಂಗತ ಸುರೇಶ ಅಂಗಡಿ ಪತ್ನಿಗೆ ಟಿಕೆಟ್ ನೀಡಿರುವುದನ್ನು ಸಮರ್ಥಿಸಿದ ಅಶ್ವತ್ಥನಾರಾಯಣ ಗೌಡ, ಕೆಲವೊಮ್ಮೆ ಅನಿವಾರ್ಯವಾಗುತ್ತದೆ ಎಂದರು. 'ಕಾಂಗ್ರೆಸ್ ಟಿಕೆಟ್ ನೀಡಿದರೆ ವಂಶ ಪಾರಂಪರ್ಯ, ಬಿಜೆಪಿ ನೀಡಿದರೆ ಅನಿವಾರ್ಯವೇ?' ಎಂದು ಸುದರ್ಶನ್ ಮರು ಪ್ರಶ್ನೆ ಕೇಳಿದರು.

ಪ್ರಜಾವಾಣಿ ಸಂವಾದ

ಸಂವಾದ ವೀಕ್ಷಿಸಲು https://www.facebook com/prajavani.net

ಚುನಾವಣೆಗಳಲ್ಲಿ ಜಾತಿ, ಹಣದ ಪ್ರಭಾವ ತಡೆಯುವ ಜವಾಬ್ದಾರಿ ರಾಜಕೀಯ ಪಕ್ಷಗಳು, ಮತದಾರ, ಸರ್ಕಾರ, ಚುನಾವಣಾ ಆಯೋಗ ಹೀಗೆ ಎಲ್ಲರ ಮೇಲಿದೆ. ಈ ಬಗ್ಗೆ ಚರ್ಚೆ ನಡೆಯಬೇಕು. ಜಾತಿ, ಹಣದ ಕೆಟ್ಟ ಪ್ರಭಾವದಿಂದ ಸಂಸದೀಯ ಗುಣಮಟ್ಟ ಕಡಿಮೆಯಾಗುತ್ತಿದೆ. ಸದ್ಭಾವನೆ, ಸಿದ್ಧಾಂತಗಳ ಮೇಲೆ ಚುನಾವಣೆಗಳು ನಡೆಯಬೇಕು. ಆದರೆ, ಇತ್ತೀಚಿನ ವರ್ಷಗಳಲ್ಲಿ ಆ ಬಗ್ಗೆ ಚರ್ಚಿಸುತ್ತಲೇ ನಗೆಪಾಟಲಿಗೆ ಈಡಾಗುತ್ತಿದ್ದೇವೆ.

ಇತ್ತೀಚಿನ ಚುನಾವಣೆಗಳಲ್ಲಿ ವಿಷಯಗಳು ಮುಖ್ಯ ಆಗುತ್ತಿಲ್ಲ. ಎದುರಾಗಿರುವ ಚುನಾವಣೆಗೆ ನಾವು (ಕಾಂಗ್ರೆಸ್) ವ್ಯವಸ್ಥಿತವಾಗಿ ಸಂಘಟಿತರಾಗಿ ಸಿದ್ಧರಾಗಿದ್ದೇವೆ. ಯುದ್ಧಕ್ಕೆ ಹೋಗುವ ಸಂದರ್ಭದಲ್ಲಿ ವಿಶ್ವಾಸ ಇರಬೇಕಲ್ಲವೇ? ಮತದಾರರ ನಾಡಿಮಿಡಿತ ಗಮನಿಸಿದರೆ ವಾತಾವರಣ ನಮಗೆ ಪೂರಕವಾಗಿದೆ. ಚುನಾವಣಾ ಪದ್ಧತಿ ಸರಳಗೊಳಿಸಬೇಕಿದೆ. ಜಾತಿ ಮತ್ತು ಹಣ ಕೆಟ್ಟ ರೀತಿಯಲ್ಲಿ ಪ್ರಭಾವ ಬೀರುತ್ತಿದ್ದು ಫಲಿತಾಂಶವನ್ನು ನಿರ್ಧರಿಸುತ್ತಿದೆ. ಸಮ ಸಮಾಜ ನಿರ್ಮಾಣಕ್ಕೆ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ಅಗತ್ಯವೆಂಬ ಕಾರಣಕ್ಕೆ ಸಿದ್ದರಾಮಯ್ಯ ಅದನ್ನು ಮಾಡಿಸಿದ್ದರು. ಜಾತಿ ವ್ಯವಸ್ಥೆ ಬೇಕು ಎಂದಲ್ಲ. ಸರ್ಕಾರ ಹೊಣೆಗಾರಿಕೆಯಿಂದ ವರ್ತಿಸಿದಷ್ಟೆ ಸಮಾಜಕ್ಕೂ ಹೊಣೆಯಿದೆ. ಸಾರ್ವಜನಿಕ ಹಣ ವೆಚ್ಚ ಮಾಡಿದ ಈ ಸಮೀಕ್ಷೆಯ ಬಗ್ಗೆ ಸದನದಲ್ಲಿ, ಸಂಪುಟದಲ್ಲಿ ಚರ್ಚಿಸಬೇಕು. ಅನುಷ್ಠಾನ ನಂತರದ ವಿಷಯ. ವರದಿಯನ್ನೇ ಬಹಿರಂಗಪಡಿಸುವುದಿಲ್ಲ ಎನ್ನುವುದು ಸರಿಯಲ್ಲ. ಸದನವನ್ನು ರಾಜಕೀಯ ವೇದಿಕೆಯಾಗಿ ಮಾಡುವುದು ಸರಿಯಲ್ಲ ಎಂಬ ವಾದಕ್ಕೆ ನನ್ನ ಸಹಮತವಿದೆ. ಸದನ ನಡೆಯುವ ವೇಳೆ ಸಭಾತ್ಯಾಗ, ಧರಣಿ ಕೆಲವೊಮ್ಮೆ ಅನಿವಾರ್ಯ.

ವಿ.ಆರ್. ಸುದರ್ಶನ್
ಸಹ ಅಧ್ಯಕ್ಷ, ಕೆಪಿಸಿಸಿ ಮಾಧ್ಯಮ ಮತ್ತು ಸಂವಹನ ವಿಭಾಗ

ವ್ಯವಸ್ಥೆಯಲ್ಲಿ ಸುಧಾರಣೆಯಾದರೆ ಮಾತ್ರ ಚುನಾವಣೆಯಲ್ಲಿ ಜಾತಿ, ಹಣದ ಪ್ರಭಾವ ಕಡಿಮೆ ಮಾಡಲು ಸಾಧ್ಯ. ಈ ವಿಷಯದಲ್ಲಿ ನಮ್ಮ (ಬಿಜೆಪಿ) ನಿಲುವು ಸ್ಪಷ್ಟ. ಜಾತಿ, ಧರ್ಮ ಆಧಾರಿತ ಬಜೆಟ್ ಕೂಡಾ ಸರಿಯಲ್ಲ. ಸರ್ಕಾರದ ರೀತಿ, ನೀತಿ, ಸಾಧನೆ, ಅಭಿವೃದ್ಧಿ ವಿಚಾರಗಳು ಚುನಾವಣೆಯ ವಿಷಯಗಳಾಗಬೇಕು. ಉಪ ಚುನಾವಣೆ ನಡೆಯುವ ಮೂರೂ ಕ್ಷೇತ್ರಗಳಲ್ಲಿ ನಮ್ಮ ಪರ ಉತ್ತಮ ವಾತಾವರಣವಿದೆ.

ಜಾತಿ ಸಮೀಕ್ಷೆ ಬಹಿರಂಗ ಪಡಿಸಬೇಕಿತ್ತು. ಸಿದ್ದರಾಮಯ್ಯ ಜಾತಿ ಆಧಾರಿತ ಬಜೆಟ್ ಕೊಟ್ಟುಕೊಂಡು ಬಂದವರು. ಸಮೀಕ್ಷೆಯ ವರದಿಯನ್ನು ಅವರು ಸದನದಲ್ಲಿ ಮಂಡಿಸಬೇಕಿತ್ತು. ಸಮ್ಮಿಶ್ರ ಸರ್ಕಾರ ಇದ್ದಾಗಲಾದರೂ ಮಾಡಬೇಕಿತ್ತಲ್ಲ. ಈಗ ಸಿದ್ದರಾಮಯ್ಯ ಎಚ್ಚೆತ್ತುಕೊಂಡಿದ್ದಾರೆ, ವರದಿಯಲ್ಲಿರುವ ಅಂಶಗಳ ಸೋರಿಕೆಯಿಂದ ಗೊಂದಲವಾಗಿದೆ. ಜಾತಿ ವಿಷಯವೂ ಸೇರಿದಂತೆ ಎಲ್ಲ ವಿಷಯಗಳಲ್ಲಿ ಚುನಾವಣಾ ಪ್ರಣಾಳಿಕೆಯಲ್ಲೇ ಪಕ್ಷದ ನಿಲುವು ಸ್ಪಷ್ಟಪಡಿಸಿದ್ದೇವೆ. ಬಜೆಟ್, ಮೀಸಲಾತಿ ಬಗ್ಗೆ ಸದನದಲ್ಲಿ ಚರ್ಚೆ ಮಾಡದೆ ಹೊರಗಡೆ ಕಾಂಗ್ರೆಸ್ ಮಾತನಾಡುವುದು ಸರಿಯಲ್ಲ.

ಸೆಸ್ ಕಡಿಮೆ ಮಾಡಬೇಕು.ಆಗ ಮಾತ್ರ ಬೆಲೆ ಏರಿಕೆ ಕಡಿಮೆ ಆಗಲು ಸಾಧ್ಯ. ಈ ವಿಷಯವನ್ನು ಪಕ್ಷದ ವೇದಿಕೆಯಲ್ಲಿ ಚರ್ಚೆ ಮಾಡಿದ್ದೇವೆ. ಜಿಎಸ್‌ಟಿ ಬಾಕಿಯನ್ನು ಕೇಂದ್ರ ಇವತ್ತಲ್ಲ, ನಾಳೆ ಕೊಟ್ಟೇ ಕೊಡುತ್ತೆ. ಕಾರ್ಯಕರ್ತರ ಆಧಾರಿತವಾಗಿ ಪಕ್ಷ ಬೆಳೆಯಬೇಕು, ಕುಟುಂಬ ಆಧಾರಿತವಾಗಿ ಅಲ್ಲ ಎನ್ನುವುದು ವರಿಷ್ಠರ ನಿಲುವು. ಆದರೆ, ಕೆಲವೊಮ್ಮೆ ಅನಿವಾರ್ಯ.ವಿರೋಧ ಪಕ್ಷದ ಅಭ್ಯರ್ಥಿಯನ್ನು ಗಣನೆಗೆ ತೆಗದುಕೊಂಡು ಅಭ್ಯರ್ಥಿಯನ್ನು ಆಯ್ಕೆ ಮಾಡಬೇಕಾದ ಸನ್ನಿವೇಶವೂ ಇರುತ್ತದೆ.

ಅಶ್ವತ್ಥನಾರಾಯಣ ಗೌಡ
ಪ್ರಧಾನ ಕಾರ್ಯದರ್ಶಿ, ಬಿಜೆಪಿ ರಾಜ್ಯ ಘಟಕ

ಹದಗೆಟ್ಟಿರುವ ರಾಜಕಾರಣದ ವ್ಯವಸ್ಥೆಯಲ್ಲಿ ಈ ಉಪ ಚುನಾವಣೆಗಳು ನಡೆಯುತ್ತಿವೆ. ರಾಜಕೀಯ ಪಕ್ಷಗಳು ಮತದಾರರನ್ನು ಭ್ರಮಿತರನ್ನಾಗಿ ಮಾಡಿವೆ. ಪ್ರಜಾತಂತ್ರದ ಜೀವನಾಡಿಯಲ್ಲಿ ಜಾತಿ, ಹಣ ಪ್ರಭಾವ ತುಂಬ ಹೆಚ್ಚಿದೆ. ಅದರ ಆಧಾರದಲ್ಲಿ ತಮ್ಮ ಗೆಲುವು ಖಚಿತ ಎಂದು ಪಕ್ಷಗಳು ಹೇಳಿಕೊಳ್ಳುತ್ತವೆ. ಜಾತಿ ಕಟು ವಾಸ್ತವ. ಅದನ್ನು ಕಹಿ ವಾಸ್ತವ ಮಾಡಬೇಕಿದೆ.

ಆದರೆ, ಚುನಾವಣೆಗಳಲ್ಲಿ ಎಲ್ಲ ಪಕ್ಷಗಳು ಪ್ರಬಲ ಜಾತಿಯ ಅಭ್ಯರ್ಥಿಯನ್ನು ಕಣಕ್ಕಿಳಿಸುವುದರಿಂದ ಆ ಜಾತಿಯ ಮತಗಳು ಹಂಚಿ ಹೋಗಿ, ಹಣ ಪ್ರಭಾವ ಬೀರುತ್ತದೆ. ಈ ವ್ಯವಸ್ಥೆಯನ್ನು ತಡೆಯಬೇಕಿದೆ. ಚುನಾವಣಾ ಸುಧಾರಣೆ ಎಂದರೆ ಒಂದು ದೇಶ, ಒಂದು ಚುನಾವಣೆ ಅಲ್ಲ.

ಕೇಂದ್ರ ತಂದಿರುವ ಕಾಯ್ದೆಗಳು ರೈತರ ಮರಣ ಶಾಸನವಾಗಿದೆ. ಉಜ್ವಲ ಯೋಜನೆ ಕೊಟ್ಟರೂ ಸಿಲಿಂಡರ್ ಖರೀದಿಸಲು ಹಣ ಇಲ್ಲ. ಬೆಲೆ ಏರಿಕೆಯಿಂದ ಜನ ಹೈರಾಣಾಗಿದ್ದಾರೆ. ಬಿಪಿ, ಶುಗರ್ ಮಾತ್ರೆ ತೆಗೆದುಕೊಳ್ಳಲು ಸಾಧ್ಯವಾಗದ ಸ್ಥಿತಿ ಇದೆ. ಅವುಗಳ ಬಗ್ಗೆ ಸರ್ಕಾರ ತಲೆಕೆಡಿಸಿಕೊಂಡಿಲ್ಲ. ರೈತರಿಗೆ ಭದ್ರತೆ ಇಲ್ಲ.

ನಿರುದ್ಯೋಗ ಕಂಡುಕೇಳರಿಯದಷ್ಟು ಜಾಸ್ತಿಯಾಗಿದೆ. ದೇಶವನ್ನು ಸಂವಿಧಾನದ ಅಡಿಯಲ್ಲಿ ನಡೆಸಿಕೊಂಡು ಹೋಗುತ್ತೇವೆ ಎಂದು ಒಪ್ಪಿಕೊಂಡಿದ್ದೇವೆ. ಬಹುತ್ವ ಭಾರತವನ್ನು ಉಳಿಸಿಕೊಳ್ಳಬೇಕೆಂಬ ಆಶಯಕ್ಕೆ ವಿರುದ್ಧವಾದ ರಾಜಕೀಯ ವ್ಯವಸ್ಥೆ ಜಾರಿಗೊಳಿಸುವ ಹುನ್ನಾರವನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕಿದೆ.

ಕೆ.ಎಸ್. ವಿಮಲಾ
ಉಪಾಧ್ಯಕ್ಷೆ, ಜನವಾದಿ ಮಹಿಳಾ ಸಂಘಟನೆ

ಕಾಂಗ್ರೆಸ್ ಅಭ್ಯರ್ಥಿಗೆ ಹಾಲುಮತ ಸಮಾಜದಿಂದ ₹2 ಲಕ್ಷ ದೇಣಿಗೆ

ಪ್ರಜಾವಾಣಿ ವಾರ್ತೆ

ಮಸ್ಕಿ (ರಾಯಚೂರು ಜಿಲ್ಲೆ): ಸೋಮವಾರ ಇಲ್ಲಿ ನಡೆದ ಕಾಂಗ್ರೆಸ್ ಪ್ರಚಾರ ಸಭೆಯಲ್ಲಿ, ಅಭ್ಯರ್ಥಿ ಬಸನಗೌಡ ತುರ್ವಿಹಾಳ ಅವರಿಗೆ ಚುನಾವಣೆ ಪ್ರಚಾರಕ್ಕಾಗಿ ತಾಲ್ಲೂಕಿನ ಹಾಲುಮತ ಸಮಾಜದವರು ₹2 ಲಕ್ಷ ದೇಣಿಗೆ ನೀಡಿದರು.

ಬಸನಗೌಡ ತುರ್ವಿಹಾಳ

ಪಕ್ಷದ ಮುಖಂಡರಾದ ಎಚ್.ಬಿ.ಮುರಾರಿ, ಪಾಮಯ್ಯ ಮುರಾರಿ ಅವರೂ ₹2 ಲಕ್ಷ ದೇಣಿಗೆ ನೀಡುವುದಾಗಿ ಘೋಷಿಸಿದರು. ಬಸನಗೌಡ ಅವರು ಕ್ಷೇತ್ರದಲ್ಲಿ ಪ್ರಚಾರಕ್ಕೆ ಹೋದ ಕಡೆಗಳಲ್ಲಿ ಜನರು ದೇಣಿಗೆ ನೀಡುವುದು ಸಾಮಾನ್ಯವಾಗಿದೆ.

ಗಿಮಿಕ್: 'ಕಾಂಗ್ರೆಸ್‌ನ ಕೆಲ ನಾಯಕರು ಜನರ ಕೈಗೆ ಮೊದಲೇ ಹಣ ಕೊಡುತ್ತಿದ್ದಾರೆ. ಆ ಹಣವನ್ನೇ ಜನರಿಂದ ಬಸನಗೌಡ ವಾಪಸ್ ಪಡೆದು ಗಿಮಿಕ್ ಮಾಡುತ್ತಿದ್ದಾರೆ' ಎಂದು ಬಿಜೆಪಿ ಅಭ್ಯರ್ಥಿ ಪ್ರತಾಪಗೌಡ ಪಾಟೀಲ ಟೀಕಿಸಿದ್ದಾರೆ.

ಪ್ರಮಾಣಕ್ಕೆ ಸಿದ್ಧ: 'ಕ್ಷೇತ್ರದ ಜನರು ತಾವು ಬೆವರು ಸುರಿಸಿ ದುಡಿದ ಹಣವನ್ನು ಬೆಂಬಲ ರೂಪದಲ್ಲಿ ದೇಣಿಗೆ ನೀಡುತ್ತಿದ್ದಾರೆ. ದುಡ್ಡು ಪಡೆಯುವ ಜಾಯಮಾನ ನನ್ನದಲ್ಲ. ಆದರೆ, ಪ್ರತಾಪಗೌಡ ಪಾಟೀಲ ಅವರಿಗೆ ದುಡ್ಡು ಪಡೆಯುವ ರೂಢಿ ಇದೆ. ಹೀಗಾಗಿ ಬೇರೆಯವರ ಬಗ್ಗೆ ಅನುಮಾನದಿಂದ ಮಾತನಾಡುತ್ತಾರೆ. ಅವರು ಹೇಳಿದ ದೇವಸ್ಥಾನಕ್ಕೆ ತೆರಳಿ ಪ್ರಮಾಣ ಮಾಡಲು ಸಿದ್ಧ' ಎಂದು ಬಸನಗೌಡ ತಿರುಗೇಟು ನೀಡಿದ್ದಾರೆ.

'ಏ.2ರ ನಂತರ ಕಾಂಗ್ರೆಸ್ ಸೇರ್ಪಡೆ'

ಪ್ರಜಾವಾಣಿ ವಾರ್ತೆ

ಬೆಳಗಾವಿ: ಬೆಳಗಾವಿ ಲೋಕಸಭಾ ಕ್ಷೇತ್ರದ ಉಪ ಚುನಾವಣೆ ಹೊಸ್ತಿಲಲ್ಲಿ ಜೆಡಿಎಸ್ ಹಾಗೂ ಲಿಂಗಾಯತ ಸಮಾಜದ ಮುಖಂಡ ಅಶೋಕ ಪೂಜಾರಿ ಅವರನ್ನು ಪಕ್ಷದತ್ತ ಸೆಳೆಯುವಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ಯಶಸ್ವಿಯಾಗಿದ್ದಾರೆ. ಅವರ ಆಹ್ವಾನಕ್ಕೆ ಒಪ್ಪಿರುವ ಪೂಜಾರಿ, ಕಾಂಗ್ರೆಸ್ ಸೇರ್ಪಡೆ ಆಗುವುದಾಗಿ ಪ್ರಕಟಿಸಿದ್ದಾರೆ.

ಇಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರೊಂದಿಗೆ ಚರ್ಚಿಸಿದ ಬಳಿಕ ಈ ನಿರ್ಧಾರ ತೆಗೆದುಕೊಂಡಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ಗೋಕಾಕ ವಿಧಾನಸಭಾ ಕ್ಷೇತ್ರದಲ್ಲಿ ರಾಜಕೀಯ ಹಾಗೂ ಆಡಳಿತಾತ್ಮಕ ವ್ಯವಸ್ಥೆ ಬದಲಾವಣೆ ಆಗಬೇಕು ಎನ್ನುವುದು ಅಲ್ಲಿಯ ಜನರು, ಹಿತೈಷಿಗಳು ಹಾಗೂ ಅಭಿಮಾನಿಗಳ ಒತ್ತಾಸೆ. ಅದೇ ನನ್ನ ಮುಖ್ಯ ಗುರಿ. ಅದಕ್ಕಾಗಿ ಪಕ್ಷ ಬದಲಾವಣೆ ಮಾಡಬೇಕಾಗಿದೆ' ಎಂದು ತಿಳಿಸಿದರು.



ಅಶೋಕ ಪೂಜಾರಿ

'ಕೆಪಿಸಿಸಿಅಧ್ಯಕ್ಷಡಿ.ಕೆ.ಶಿವಕುಮಾರ್, ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ, ಜಿಲ್ಲೆಯ ಮುಖಂಡರಾದ ಸತೀಶ ಜಾರಕಿಹೊಳಿ, ಲಕ್ಷ್ಮಿ ಹೆಬ್ಬಾಳಕರ, ಅಶೋಕ ಪಟ್ಟಣ ಮೊದಲಾದವರು ಪಕ್ಷಕ್ಕೆ ಬರುವಂತೆ ನನ್ನನ್ನು ಆಹ್ವಾನಿಸಿದ್ದರು. ಏ.2ರ ನಂತರ ಅಧಿಕೃತವಾಗಿ ಕಾಂಗ್ರೆಸ್ ಸೇರಲಿದ್ದೇನೆ' ಎಂದು ಹೇಳಿದರು.

ರೋಡ್‌ಶೋದಿಂದ ಹೊರನಡೆದ ನುಸ್ರತ್: ಟಿಎಂಸಿಗೆ ಇಕ್ಕಟ್ಟು

ಕೋಲ್ಕತ್ತ (ಪಿಟಿಐ): ಉತ್ತರ 24 ಪರಗಣ ಜಿಲ್ಲೆಯಲ್ಲಿ ಆಯೋಜಿಸಿದ್ದ ಟಿಎಂಸಿ ರೋಡ್‌ಶೋ ದಿಂದ ಹಠಾತ್ತನೆ ಹೊರನಡೆಯುವ ಮೂಲಕ, ಟಿಎಂಸಿ ಸಂಸದೆ, ನಟಿ ನುಸ್ರತ್ ಜಹಾನ್ ಅವರು ವಿವಾದ ಸೃಷ್ಟಿಸಿದ್ದಾರೆ.

ಮುಖ್ಯಮಂತ್ರಿಯ ರೋಡ್ ಶೋ ಆಗಿದ್ದರೂ ಸರಿ, ಒಂದು ಗಂಟೆಗೂ ಹೆಚ್ಚು ಕಾಲ ಯಾವುದೇ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವುದಿಲ್ಲ ಎಂದು ಹೇಳಿ ಅವರು ಹೊರನಡೆದಿದ್ದಾರೆ ಎನ್ನಲಾಗಿದೆ.

ಟಿಎಂಸಿ ಅಭ್ಯರ್ಥಿ ನಾರಾಯಣ ಗೋಸ್ವಾಮಿ ಅವರ ಪರ ಪ್ರಚಾರ ರ‍್ಯಾಲಿಯನ್ನು ಇತ್ತೀಚೆಗೆ ಆಯೋಜಿಸಲಾಗಿತ್ತು. ಇದರಲ್ಲಿ ನುಸ್ರತ್ ಅವರು ಪಾಲ್ಗೊಂಡಿದ್ದರು. ರ‍್ಯಾಲಿಯು ತುಂಬ ಹೊತ್ತು ನಡೆಯಿತು. ಇನ್ನೂ ಸ್ವಲ್ಪ ಹೊತ್ತು ಇರುವಂತೆ ಪಕ್ಷದ ಕಾರ್ಯಕರ್ತರು ನುಸ್ರತ್ ಅವರಲ್ಲಿ ಮನವಿ ಮಾಡುತ್ತಿದ್ದರು. ಆ ಸಂದರ್ಭದಲ್ಲಿ ಸಿಟ್ಟಿಗೆದ್ದ ಅವರು, 'ನೀವೇನು ತಮಾಷೆ ಮಾಡುತ್ತಿದ್ದೀರಾ? ಒಂದು ಗಂಟೆಗೂ ಹೆಚ್ಚು ಕಾಲದಿಂದ ನಾನಿಲ್ಲಿದ್ದೇನೆ, ಮುಖ್ಯಮಂತ್ರಿ ಕಾರ್ಯಕ್ರಮದಲ್ಲೂ ನಾನು ಇಷ್ಟು ಹೊತ್ತು ಪಾಲ್ಗೊಳ್ಳುವುದಿಲ್ಲ' ಎಂದು ಅವರು ಹೇಳಿರುವುದು ವಿಡಿಯೊದಲ್ಲಿ ದಾಖಲಾಗಿದೆ.

'ನುಸ್ರತ್ ಅವರಿಗೆ ಕಾಲಿನಲ್ಲಿ ಉಳುಕು ಕಾಣಿಸಿದ್ದರಿಂದ ಅವರು ರೋಡ್ ಶೋದಿಂದ ಹೋಗಿದ್ದರು' ಎಂದು ಗೋಸ್ವಾಮಿ ಅವರು ಆನಂತರ ಹೇಳಿದ್ದರು.

ಆದರೆ, ಈ ಸಂಭಾಷಣೆಯ ವಿಡಿಯೊವನ್ನು ಬಳಸಿ ಕೊಂಡಿರುವ ಬಿಜೆಪಿಯು ಟ್ವಿಟರ್‌ನಲ್ಲಿ #MamataLosing Nandigram ಹ್ಯಾಷ್‌ಟ್ಯಾಗ್ ಅಡಿಯಲ್ಲಿ ಪೋಸ್ಟ್ ಮಾಡಿದೆ.

ಮೆರವಣಿಗೆ ಇಲ್ಲ: ಡಿ.ಕೆ. ಶಿವಕುಮಾರ್, ಸಿದ್ದರಾಮಯ್ಯ ಸಾಥ್

ಸತೀಶ ಜಾರಕಿಹೊಳಿ ನಾಮಪತ್ರ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಬೆಳಗಾವಿ ಲೋಕಸಭಾ ಕ್ಷೇತ್ರದ ಉಪ ಚುನಾವಣೆಗೆ ಕಾಂಗ್ರೆಸ್ ಅಭ್ಯರ್ಥಿಯಾಗಿ ಸತೀಶ ಜಾರಕಿಹೊಳಿ ಸೋಮವಾರ ನಾಮಪತ್ರ ಸಲ್ಲಿಸಿದರು.

ಯಾವುದೇ ಮೆರವಣಿಗೆ ಇರಲಿಲ್ಲ. ಹಸಿರು ಶಾಲು ಹೊದ್ದಿದ್ದ ಅವರು, ಸಂಗೊಳ್ಳಿರಾಯಣ್ಣ ವೃತ್ತದಲ್ಲಿರುವ ಕಾಂಗ್ರೆಸ್ ಭವನದಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ವಾಹನಗಳಲ್ಲಿ ಮುಖಂಡರೊಂದಿಗೆ ಬಂದರು. ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಜೊತೆಗೆ ತೆರಳಿ ನಾಮಪತ್ರ ಸಲ್ಲಿಸಿದರು.

> **ಸತೀಶ ಜಾರಕಿಹೊಳಿ ಅವರಿಗೆ ಟಿಕೆಟ್ ನೀಡಿದ ಬಗ್ಗೆ ಎಲ್ಲೂ ಸಣ್ಣ ಅಪಸ್ವರವೂ ಬರಲಿಲ್ಲವಲ್ಲ? ಅದೇ ನಮ್ಮ ಶಕ್ತಿ**
> **ಡಿ.ಕೆ. ಶಿವಕುಮಾರ್,** ಕೆಪಿಸಿಸಿ ಅಧ್ಯಕ್ಷ

2ನೇ ಸೆಟ್ ಅನ್ನು ಶಾಸಕರಾದ ಎಂ.ಬಿ.ಪಾಟೀಲ ಹಾಗೂ ದೇಶಪಾಂಡೆ, ಇನ್ನೊಂದನ್ನು ಶಾಸಕಿ ಲಕ್ಷ್ಮಿ ಹೆಬ್ಬಾಳಕರ ಹಾಗೂ ಮುಖಂಡ ಫಿರೋಜ್ ಸೇಠ್, ಮತ್ತೊಂದು ಸೆಟ್ ಅನ್ನು ಶಾಸಕರಾದ ಡಾ.ಅಂಜಲಿ ನಿಂಬಾಳ್ಕರ್ ಮತ್ತು ಮಹಾಂತೇಶ ಕೌಜಲಗಿ ಅವರೊಂದಿಗೆ ಸಲ್ಲಿಸಿದರು. ಜಿಲ್ಲಾ ಚುನಾವಣಾಧಿಕಾರಿ ಡಾ.ಕೆ.ಹರೀಶ್‌ಕುಮಾರ್ ಸ್ವೀಕರಿಸಿದರು.

ನಾಮಪತ್ರ ಸಲ್ಲಿಕೆ ವೇಳೆ ಮುಖಂಡರು ಹೊರಗಡೆ ಶಕ್ತಿ ಪ್ರದರ್ಶಿಸಿದರು. ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಎಸ್.ಆರ್. ಪಾಟೀಲ, ಶಾಸಕರಾದ ಎಚ್.ಕೆ. ಪಾಟೀಲ, ಜಮೀರ್ ಅಹಮದ್ ಖಾನ್, ಗಣೇಶ ಹುಕ್ಕೇರಿ, ರಾಮಲಿಂಗಾರೆಡ್ಡಿ, ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹಮದ್, ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಡಾ.ಪುಷ್ಪಾ ಅಮರನಾಥ್, ಮುಖಂಡ ಅಶೋಕ ಪಟ್ಟಣ, ಗ್ರಾಮಾಂತರ ಜಿಲ್ಲಾ ಘಟಕದ ಅಧ್ಯಕ್ಷ ವಿನಯ ನಾವಲಗಟ್ಟಿ, ನಗರ ಘಟಕದ ಅಧ್ಯಕ್ಷ ರಾಜು ಸೇಠ್, ಗ್ರಾಮಾಂತರ ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷೆ ಜಯಶ್ರೀ ಮಾಳಗಿ, ಚಿಕ್ಕೋಡಿ ಜಿಲ್ಲಾ ಘಟಕದ ಅಧ್ಯಕ್ಷ ಲಕ್ಷ್ಮಣರಾವ ಚಿಂಗಳೆ ಇದ್ದರು.

ಶಾಸಕ ರಮೇಶ ಜಾರಕಿಹೊಳಿ ಬೆಂಬಲಿಗರು ಡಿಕೆಶಿ ವಿರುದ್ಧ ಭಾನುವಾರ ಕಪ್ಪು ಬಾವುಟ ಪ್ರದರ್ಶಿಸಿ ಪ್ರತಿಭಟಿಸಿದ್ದರು. ಹೀಗಾಗಿ, ಮುಂಜಾಗ್ರತೆಯಾಗಿ ಕಾಂಗ್ರೆಸ್ ಭವನ, ಜಿಲ್ಲಾಧಿಕಾರಿ ಕಚೇರಿ ಹಾಗೂ ಸಾಂಬ್ರಾ ವಿಮಾನನಿಲ್ದಾಣದಲ್ಲಿ ಬಿಗಿ ಭದ್ರತೆ ಇತ್ತು. ಡಿಕೆಶಿ ವಾಹನಕ್ಕೆ ಹೆಚ್ಚಿನ ಭದ್ರತೆ ಇತ್ತು. ಉತ್ತರ ವಲಯ ಐಜಿಪಿ ರಾಘವೇಂದ್ರ ಸುಹಾಸ್, ನಗರ ಪೊಲೀಸ್ ಆಯುಕ್ತ ಕೆ.ತ್ಯಾಗರಾಜನ್, ಡಿಸಿಪಿ ವಿಕ್ರಂ ಅಮಟೆ ಉಸ್ತುವಾರಿ ವಹಿಸಿದ್ದರು.

ನೂರು ಕೋಟಿ ಒಡೆಯ

ಬೆಳಗಾವಿ: ಬೆಳಗಾವಿ ಲೋಕಸಭಾ ಕ್ಷೇತ್ರದ ಉಪ ಚುನಾವಣೆಗೆ ಸ್ಪರ್ಧಿಸಿರುವ ಕಾಂಗ್ರೆಸ್ ಅಭ್ಯರ್ಥಿ ಸತೀಶ ಜಾರಕಿಹೊಳಿ ನೂರು ಕೋಟಿ ರೂಪಾಯಿಗೂ ಮಿಕ್ಕಿ ಆಸ್ತಿ ಹೊಂದಿದ್ದಾರೆ. ₹ 13.62 ಕೋಟಿ ಚರಾಸ್ತಿ ಹಾಗೂ ₹ 113 ಕೋಟಿ ಮಾರುಕಟ್ಟೆ ಮೌಲ್ಯದ ಸ್ಥಿರಾಸ್ತಿ ಹೊಂದಿದ್ದಾರೆ.

ಇದರಲ್ಲಿ ಸ್ವಯಾರ್ಜಿತ ಆಸ್ತಿಯ ಮೌಲ್ಯವೇ ₹ 121 ಕೋಟಿ ಆಗುತ್ತದೆ. ನಾಮಪತ್ರದೊಂದಿಗೆ ಚುನಾವಣಾ ಆಯೋಗಕ್ಕೆ ಸಲ್ಲಿಸುವ ಪ್ರಮಾಣಪತ್ರದಲ್ಲಿ ಅವರು ಕುಟುಂಬದ ಆಸ್ತಿ ವಿವರ ಘೋಷಿಸಿದ್ದಾರೆ.

ಪಿಯುಸಿ ವಿದ್ಯಾರ್ಹತೆಯ, 58 ವರ್ಷದ ಅವರು ತಮ್ಮದು ಹಾಗೂ ಪತ್ನಿಯದ್ದು ಕೃಷಿ ಮತ್ತು ವ್ಯವಹಾರ (ಬಿಸಿನೆಸ್) ವೃತ್ತಿ ಎಂದು ತಿಳಿಸಿದ್ದಾರೆ. ಸಾಮಾಜಿಕ ಜಾಲತಾಣವಾದ ಫೇಸ್‌ಬುಕ್, ಟ್ವಿಟರ್ ಹಾಗೂ ಇನ್‌ಸ್ಟಾಗ್ರಾಂನಲ್ಲಿ ಖಾತೆ ಹೊಂದಿದ್ದಾರೆ. ಕ್ರಿಮಿನಲ್ ಮೊಕದ್ದಮೆ ಬಗ್ಗೆ ಉಲ್ಲೇಖಿಸಿಲ್ಲ.

ಕೈಯಲ್ಲಿ ₹ 5.04 ಲಕ್ಷ ಇದೆ. ಪತ್ನಿ ಶಕುಂತಲಾ ಬಳಿ ₹90,889, ಪುತ್ರಿ ಪ್ರಿಯಾಂಕಾ ಅವರಲ್ಲಿ ₹ 9,465 ಮತ್ತು ಪುತ್ರ ರಾಹುಲ್ ಬಳಿ ₹18,350 ಇದೆ ಎಂದು ತಿಳಿಸಿದ್ದಾರೆ.

ಬ್ಯಾಂಕ್ ಖಾತೆಗಳಲ್ಲಿ ₹31.74 ಲಕ್ಷ, ಪತ್ನಿ– ₹ 36.47 ಲಕ್ಷ, ಪುತ್ರಿ ₹ 1.55 ಲಕ್ಷ, ಪುತ್ರ ₹ 2.30 ಲಕ್ಷ ಇದೆ.

ಮಸ್ಕಿ: ಬಸನಗೌಡ, ಪ್ರತಾಪಗೌಡ ಮತ್ತೊಮ್ಮೆ ನಾಮಪತ್ರ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಮಸ್ಕಿ (ರಾಯಚೂರು ಜಿಲ್ಲೆ): ಮಸ್ಕಿ ವಿಧಾನಸಭೆ ಉಪಚುನಾವಣೆಗೆ ಕಾಂಗ್ರೆಸ್ ಅಭ್ಯರ್ಥಿ ಬಸನಗೌಡ ತುರ್ವಿಹಾಳ ಮತ್ತು ಬಿಜೆಪಿ ಅಭ್ಯರ್ಥಿ ಪ್ರತಾಪಗೌಡ ಪಾಟೀಲ ಪಕ್ಷದ ರಾಜ್ಯ ಮುಖಂಡರೊಂದಿಗೆ ಸೋಮವಾರ ಮತ್ತೆ ನಾಮಪತ್ರ ಸಲ್ಲಿಸಿದರು.

ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಸಚಿವ ಬಿ.ಶ್ರೀರಾಮುಲು, 'ಸೋಲುವ ಭೀತಿಯಿಂದ ಕಾಂಗ್ರೆಸ್ ಚುನಾವಣಾ ಪ್ರಚಾರದ ವೇಳೆ ಗಲಾಟೆಎಬ್ಬಿಸುವ ಕೆಲಸ ಮಾಡುತ್ತಿದೆ. ಇದಕ್ಕೆ ಕಾರ್ಯಕರ್ತರು ಎದೆಗುಂದಬಾರದು' ಎಂದು ಹೇಳಿದರು.

ಚುನಾವಣಾ ಕಣದಲ್ಲಿ

- **ರಾಜಾ ಕ್ಷಮೆ:** ತಮಿಳುನಾಡು ಮುಖ್ಯಮಂತ್ರಿ ಕೆ.ಪಳನಿಸ್ವಾಮಿ ಅವರ ತಾಯಿಯ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದ್ದಾರೆ ಎಂಬ ಪ್ರಕರಣದಲ್ಲಿ ಡಿಎಂಕೆ ಸಂಸದ ಎ. ರಾಜಾ ಅವರು ಕ್ಷಮೆ ಯಾಚಿಸಿದ್ದಾರೆ. ಆದರೆ, ತಮ್ಮ ಮಾತುಗಳನ್ನು ತಪ್ಪಾಗಿ ಅರ್ಥ ಮಾಡಿಕೊಳ್ಳಲಾಗಿದೆ ಮತ್ತು ತಿರುಚಲಾಗಿದೆ ಎಂದೂ ಅವರು ಹೇಳಿದ್ದಾರೆ. ರಾಜಾ ಅವರ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಹೇಳಿಕೆಯ ಬಗ್ಗೆ ವಿವರವಾದ ವರದಿಯನ್ನು ಚುನಾವಣಾ ಆಯೋಗಕ್ಕೆ ಸಲ್ಲಿಸಲಾಗಿದೆ ಎಂದು ಮುಖ್ಯ ಚುನಾವಣಾಧಿಕಾರಿ ಸತ್ಯವ್ರತ ಸಾಹೂ ಹೇಳಿದ್ದಾರೆ.
- **ನಾಮಪತ್ರ ತಿರಸ್ಕೃತ:** ಕೇರಳದ ಕಣ್ಣೂರು ಜಿಲ್ಲೆಯ ತಲಶ್ಶೇರಿ ಮತ್ತು ತ್ರಿಶ್ಶೂರು ಜಿಲ್ಲೆಯ ಗುರುವಾಯೂರು ಕ್ಷೇತ್ರದ ಬಿಜೆಪಿ ಅಭ್ಯರ್ಥಿಗಳ ನಾಮಪತ್ರ ತಿರಸ್ಕೃತವಾಗಿದೆ. ಹಾಗಾಗಿ, ತಲಶ್ಶೇರಿಯಲ್ಲಿ ಸಿಪಿಎಂ ಬಂಡಾಯ ಅಭ್ಯರ್ಥಿಗೆ ಮತ್ತು ಗುರುವಾಯೂರು ಕ್ಷೇತ್ರದಲ್ಲಿ ಡಿಎಸ್‌ಜೆಪಿಯ ಅಭ್ಯರ್ಥಿ ದಿಲೀಪ್ ನಾಯರ್‌ಗೆ ಬೆಂಬಲ ನೀಡಲು ಬಿಜೆಪಿ ನಿರ್ಧರಿಸಿದೆ.
- **'ರಾಜ್ಯಸಭೆ ಚುನಾವಣೆ ನಿರ್ಧಾರ ಶೀಘ್ರ':** ಕೇರಳ ವಿಧಾನಸಭೆಯಿಂದ ರಾಜ್ಯಸಭೆಯ ಮೂರು ಸ್ಥಾನಗಳಿಗೆ ಚುನಾವಣೆ ನಡೆಸುವ ಬಗ್ಗೆ ಕಾನೂನು ಪ್ರಕಾರ ಶೀಘ್ರದಲ್ಲಿ ನಿರ್ಧಾರ ಕೈಗೊಳ್ಳಲಾಗುವುದು ಎಂದು ಚುನಾವಣಾ ಆಯೋಗವು ಕೇರಳ ಹೈಕೋರ್ಟ್‌ಗೆ ತಿಳಿಸಿದೆ. ರಾಜ್ಯಸಭೆ ಚುನಾವಣಾ ಪ್ರಕ್ರಿಯೆಯನ್ನು ಅಮಾನತಿನಲ್ಲಿರಿಸಿದ ನಿರ್ಧಾರ ಪ್ರಶ್ನಿಸಿ ಕೇರಳ ವಿಧಾನಸಭೆ ಮತ್ತು ಆಡಳಿತಾರೂಢ ಸಿಪಿಎಂ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು.
- **ಪುದುಚೇರಿಯಲ್ಲಿ ಮೋದಿ ಪ್ರಚಾರ:** ಪ್ರಧಾನಿ ನರೇಂದ್ರ ಮೋದಿ ಅವರು ಪುದುಚೇರಿಯಲ್ಲಿ ಮಂಗಳವಾರ ಚುನಾವಣೆ ಪ್ರಚಾರ ಮಾಡಲಿದ್ದಾರೆ. ಭದ್ರತೆಯ ಕಾರಣಕ್ಕೆ ಪುದುಚೇರಿಯಲ್ಲಿ ಡ್ರೋನ್ ಹಾರಾಟ ನಿಷೇಧಿಸಲಾಗಿದೆ.
- **ಸಿಪಿಎಂಗೆ ಮುಜುಗರ:** 'ಲವ್ ಜಿಹಾದ್' ಬಗ್ಗೆ ಇರುವ ಕಳವಳವನ್ನು ಪರಿಹರಿಸಬೇಕಿದೆ ಎಂದು ಕೇರಳ ಕಾಂಗ್ರೆಸ್ (ಎಂ) ಪಕ್ಷದ ಮುಖ್ಯಸ್ಥ ಜೋಸ್ ಕೆ. ಮಾಣಿ ಹೇಳಿದ್ದಾರೆ. ಸಿಪಿಎಂ ನೇತೃತ್ವದ ಎಲ್‌ಡಿಎಫ್‌ಗೆ ಮಾಣಿ ಅವರ ಪಕ್ಷವು ಇತ್ತೀಚೆಗೆ ಸೇರ್ಪಡೆಯಾಗಿದೆ. ಮಾಣಿ ಅವರ ಹೇಳಿಕೆಯು ಎಲ್‌ಡಿಎಫ್‌ಗೆ ಮುಜುಗರ ಉಂಟು ಮಾಡಿದೆ.

ಹಿಮಂತ್ ಬಿಸ್ವ ಶರ್ಮ ಚುನಾವಣಾ ಪ್ರಚಾರ

'ಅಸ್ಸಾಂನಲ್ಲಿ ಇರುವುದು ಸಿದ್ಧಾಂತಗಳ ಹೋರಾಟ'

ಪ್ರಜಾವಾಣಿ ವಾರ್ತೆ

ಗುವಾಹಟಿ: 'ಅಸ್ಸಾಂನಲ್ಲಿ ನಿಜವಾದ ಸ್ಪರ್ಧೆ ಇರುವುದು ನರೇಂದ್ರ ಮೋದಿ ಹಾಗೂ ಬದ್ರುದ್ದೀನ್ ಅಜ್ಮಲ್ ಅವರು ಪ್ರತಿಪಾದಿಸುವ ಸಿದ್ಧಾಂತಗಳ ಮಧ್ಯೆ' ಎಂದು ಅಸ್ಸಾಂನ ಸಚಿವ ಹಾಗೂ ಬಿಜೆಪಿಯ ಚುನಾವಣಾ ನೀತಿ ನಿರೂಪಕ ಹಿಮಂತ ಬಿಶ್ವ ಶರ್ಮಾ ಅವರು ಸೋಮವಾರ ಎರಡು ಚುನಾವಣಾ ರ‍್ಯಾಲಿಗಳಲ್ಲಿ ಹೇಳಿದ್ದಾರೆ.

ಚುನಾವಣೆಗೆ ಎರಡು ದಿನಗಳು ಉಳಿದಿರುವ ಸಂದರ್ಭದಲ್ಲಿ ಅಜ್ಮಲ್ ಅವರ ಮೇಲೆ ನಡೆಸಿರುವ ಈ ವಾಗ್ದಾಳಿಯನ್ನು, 'ಮತಗಳನ್ನು ಧ್ರುವೀಕರಿಸಲು ನಡೆಸಿದ ಪ್ರಯತ್ನ' ಎಂದು ವಿಶ್ಲೇಷಿಸಲಾಗುತ್ತಿದೆ. ರಾಜ್ಯದಲ್ಲಿ ಏ. 1ರಂದು ಎರಡನೇ ಹಾಗೂ ಏ. 6ರಂದು ಮೂರನೇ ಹಂತದ ಮತದಾನ ನಡೆಯಲಿದ್ದು, ಈ ಪ್ರದೇಶದ ಕೆಲವು ಕ್ಷೇತ್ರಗಳಲ್ಲಿ ಮುಸ್ಲಿಂ ಮತಗಳು ನಿರ್ಣಾಯಕವಾಗಿವೆ.

'ಇದು ಬಿಜೆಪಿ– ಕಾಂಗ್ರೆಸ್ ನೇತೃತ್ವದ ಮೈತ್ರಿಕೂಟಗಳ ನಡುವಿನ ಹೋರಾಟವಲ್ಲ. ಮೋದಿ ಮತ್ತು ಅಜ್ಮಲ್ ಅವರ ಸಿದ್ಧಾಂತಗಳ ನಡುವಣ ಹೋರಾಟ. ನಾವು ಅಧಿಕಾರಕ್ಕೆ ಬಂದರೆ ಮದರಸಾಗಳನ್ನು ತೆರೆಯುತ್ತೇವೆ ಎಂದು ಅಜ್ಮಲ್ ಹೇಳುತ್ತಾರೆ. ಆದರೆ, ನಮಗೆ ಹೆಚ್ಚು ಎಂಜಿನಿಯರಿಂಗ್ ಕಾಲೇಜುಗಳು ಬೇಕು ಎಂದು ಮೋದಿ ಹೇಳುತ್ತಾರೆ. ಅವರು ಮುಲ್ಲಾಗಳನ್ನು ಸೃಷ್ಟಿಸಲು ಪ್ರಯತ್ನಿಸುತ್ತಾರೆಯೇ ವಿನಾ ವೈದ್ಯರು, ಎಂಜಿನಿಯರ್‌ಗಳನ್ನಲ್ಲ. ನಮ್ಮ ಸರ್ಕಾರದ ಬಂದರೆ ಹೆಚ್ಚು ಹೆಚ್ಚು ಮಕ್ಕಳನ್ನು ಹೆರುವಂತೆ ಮಹಿಳೆಯರನ್ನು ಪ್ರೋತ್ಸಾಹಿಸಲಾಗುವುದು ಎಂದು ಅಜ್ಮಲ್ ಹೇಳುತ್ತಾರೆ. ಅವರು ಅಧಿಕಾರಕ್ಕೆ ಬಂದರೆ ನಮ್ಮ ಸಮಾಜ, ಯುವಕರು ಯಾವ ದಿಕ್ಕಿನಲ್ಲಿ ಸಾಗಬಹುದು ಎಂಬುದನ್ನು ನೀವೇ ಊಹಿಸಿ' ಎಂದು ಶರ್ಮಾ ಹೇಳಿದ್ದಾರೆ.

'ಸರ್ಕಾರದ ಹಣದಿಂದ ಧಾರ್ಮಿಕ ಶಿಕ್ಷಣ ನೀಡುವುದನ್ನು ನಾವು ವಿರೋಧಿಸುತ್ತೇವೆ' ಎಂದು ಬಿಜೆಪಿ ನೇತೃತ್ವದ ಸರ್ಕಾರವು ರಾಜ್ಯದಲ್ಲಿ ಎಲ್ಲಾ ಮದರಸಾಗಳನ್ನು ಮುಚ್ಚಲು ನಿರ್ಧರಿಸಿತ್ತು. 'ಬಿಜೆಪಿಗೆ ಮತ ನೀಡುವ ಮೂಲಕ ನಮ್ಮ ಸಿದ್ಧಾಂತವನ್ನು ಅಜ್ಮಲ್ ಅವರಿಂದ ರಕ್ಷಿಸಿಕೊಳ್ಳಬೇಕು' ಎಂದು ಶರ್ಮಾ ಮತದಾರರಲ್ಲಿ ಮನವಿ ಮಾಡಿದರು.

ಜಾಹೀರಾತು: ಬಿಜೆಪಿ ವಿರುದ್ಧ ದೂರು

ಗುವಾಹಟಿ (ಪಿಟಿಐ): 'ಮೊದಲ ಹಂತದಲ್ಲಿ ಮತದಾನ ನಡೆದ ಎಲ್ಲಾ ಕ್ಷೇತ್ರಗಳಲ್ಲೂ ಬಿಜೆಪಿ ಗೆಲುವು ಸಾಧಿಸಲಿದೆ' ಎಂಬ ಪಕ್ಷದ ಜಾಹೀರಾತನ್ನು ಸುದ್ದಿಯ ರೂಪದಲ್ಲಿ ಪ್ರಕಟಿಸಿದ ಆರೋಪ ಹೊರಿಸಿ ಕಾಂಗ್ರೆಸ್ ಸೋಮವಾರ ಅಸ್ಸಾಂನ ಮುಖ್ಯ ಚುನಾವಣಾ ಅಧಿಕಾರಿ ಹಾಗೂ ಕೇಂದ್ರ ಚುನಾವಣಾ ಆಯೋಗಕ್ಕೆ ದೂರು ನೀಡಿದೆ.

ಮುಖ್ಯಮಂತ್ರಿ ಸರ್ವಾನಂದ ಸೋನೊವಾಲ್, ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ, ರಾಜ್ಯ ಘಟಕದ ಅಧ್ಯಕ್ಷ ರಣಜಿತ್‌ಕುಮಾರ್ ದಾಸ್ ಹಾಗೂ ಎಂಟು ಪ್ರಮುಖ ಪತ್ರಿಕೆಗಳ ವಿರುದ್ಧ ದೂರು ನೀಡಲಾಗಿದ್ದು, 'ಸುದ್ದಿ ರೂಪದ ಜಾಹೀರಾತಿನ ಮೂಲಕ ಪಕ್ಷವು ಮಾದರಿ ನೀತಿ ಸಂಹಿತೆಯನ್ನು ಉಲ್ಲಂಘಿಸಿದೆ' ಎಂದು ಆರೋಪಿಸಲಾಗಿದೆ.

'ಮೊದಲ ಹಂತದ ಮತದಾನವು ಬಿಜೆಪಿಗೆ ಸೋಲಿನ ಮುನ್ಸೂಚನೆ ನೀಡಿದೆ. ಅದನ್ನು ಎಲ್ಲಾ ನಾಯಕರು ಒಪ್ಪಿಕೊಂಡಿದ್ದಾರೆ. ಈ ರೀತಿ ಜಾಹೀರಾತು ನೀಡುವ ಮೂಲಕ ತಮ್ಮ ವೈಫಲ್ಯವನ್ನು ಅವರು ಮುಚ್ಚಿಕೊಂಡಿದ್ದಾರೆ. ಹೆಚ್ಚಿನ ಕ್ಷೇತ್ರಗಳಲ್ಲಿ ಗೆಲ್ಲುವ ವಿಶ್ವಾಸ ಬಿಜೆಪಿಗೆ ಇರುವುದಾದರೆ, ಕೋಟ್ಯಂತರ ರೂಪಾಯಿ ವೆಚ್ಚ ಮಾಡಿ ಜಾಹೀರಾತು ನೀಡುವ ಅಗತ್ಯವೇನಿತ್ತು' ಎಂದು ಕಾಂಗ್ರೆಸ್ ಮುಖಂಡ ರಿಪುನ್ ಬೋರಾ ಪ್ರಶ್ನಿಸಿದ್ದಾರೆ.

ಗೆದ್ದರೆ ನಾನೇ ಪುದುಚೇರಿ ಸಿ.ಎಂ: ರಂಗಸ್ವಾಮಿ

ಪ್ರಜಾವಾಣಿ ಸಂದರ್ಶನ

ಪುದುಚೇರಿಯ ಜನರು ಈ ಬಾರಿ ತಮ್ಮ ನೇತೃತ್ವದ ಮೈತ್ರಿಕೂಟಕ್ಕೆ ಮತ ಹಾಕಲಿದ್ದಾರೆ ಎಂದು ಆಲ್ ಇಂಡಿಯಾ ಎನ್.ಆರ್. ಕಾಂಗ್ರೆಸ್ ಮುಖ್ಯಸ್ಥ ಎನ್. ರಂಗಸ್ವಾಮಿ 'ಪ್ರಜಾವಾಣಿ'ಯ **ಇ.ಟಿ.ಬಿ. ಶಿವಪ್ರಿಯನ್**‌ಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

- **ಪುದುಚೇರಿಯಲ್ಲಿ ವಿರೋಧ ಪಕ್ಷಗಳ ಮೈತ್ರಿಕೂಟಕ್ಕೆ ನಿಮ್ಮದೇ ನೇತೃತ್ವ. ನಿಮ್ಮ ಪ್ರಚಾರಕ್ಕೆ ಜನರ ಪ್ರತಿಕ್ರಿಯೆ ಹೇಗಿದೆ?**

ಜನರ ಪ್ರತಿಕ್ರಿಯೆ ಬಹಳ ಚೆನ್ನಾಗಿದೆ. ಪುದುಚೇರಿಗೆ ಪ್ರಬಲ ಸರ್ಕಾರ ಬೇಕು ಎಂಬುದು ಇದರಿಂದ ಅರಿವಾಗುತ್ತದೆ. ಏಪ್ರಿಲ್ 6ರಂದು ನಡೆಯಲಿರುವ ಚುನಾವಣೆಯಲ್ಲಿ ಎನ್.ಆರ್. ಕಾಂಗ್ರೆಸ್–ಬಿಜೆಪಿ–ಎಐಎಡಿಎಂಕೆ ಮೈತ್ರಿಕೂಟ ಗೆಲ್ಲುವುದನ್ನು ಜನರು ಬಯಸಿದ್ದಾರೆ.

- **ವಿ.ನಾರಾಯಣಸ್ವಾಮಿ ಅವರ ಸರ್ಕಾರವನ್ನು ಅಧಿಕಾರಾವಧಿಯ ಕೊನೆಯಲ್ಲಿ ಪುದುಚೇರಿ ವಿಧಾನಸಭೆಯ ನಾಮನಿರ್ದೇಶಿತ ಸದಸ್ಯರ ಬೆಂಬಲದಲ್ಲಿ ಉರುಳಿಸಲಾಯಿತು ಎಂದು ಕಾಂಗ್ರೆಸ್ ಆರೋಪಿಸುತ್ತಿದೆ. ನಿಮ್ಮ ಅಭಿಪ್ರಾಯ ಏನು?**

ಸರ್ಕಾರ ಬಿದ್ದದ್ದರಲ್ಲಿ ನಮ್ಮ ಪಾತ್ರ ಏನೂ ಇಲ್ಲ. ಇಬ್ಬರು ಸಚಿವರು ಕೆಲವು ಶಾಸಕರು ಕಾಂಗ್ರೆಸ್‌ಗೆ ರಾಜೀನಾಮೆ ನೀಡಿದ ಕಾರಣಕ್ಕೆ ಸರ್ಕಾರವು ಅಲ್ಪಮತಕ್ಕೆ ಕುಸಿಯಿತು. ಜವಾಬ್ದಾರಿಯುತ ವಿರೋಧ ಪಕ್ಷವಾಗಿದ್ದ ನಾವು ಈ ವಿಚಾರವನ್ನು ಲೆಫ್ಟಿನೆಂಟ್ ಗವರ್ನರ್ ಗಮನಕ್ಕೆ ತಂದೆವು. ಸ್ವಪಕ್ಷದ ಶಾಸಕರದ್ದೇ ಬೆಂಬಲ ಇಲ್ಲವಾದ್ದರಿಂದ ಸರ್ಕಾರ ಬಿತ್ತು. ಕಾಂಗ್ರೆಸ್‌ನ ಒಳಜಗಳಕ್ಕೆ ನಮ್ಮನ್ನು ದೂರಿ ಏನು ಪ್ರಯೋಜನ?



ಎನ್. ರಂಗಸ್ವಾಮಿ
ಆಲ್ ಇಂಡಿಯಾ ಎನ್.ಆರ್. ಕಾಂಗ್ರೆಸ್ ಮುಖ್ಯಸ್ಥ

- **ಚುನಾಯಿತ ಸರ್ಕಾರವು ಕೆಲಸ ಮಾಡದಂತೆ ಲೆಫ್ಟಿನೆಂಟ್ ಗವರ್ನರ್ ತಡೆದಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ನಾರಾಯಣ ಸ್ವಾಮಿ ಅವರು ಹಲವು ಬಾರಿ ಹೇಳಿದ್ದಾರೆ. ನಿಮ್ಮ ನೇತೃತ್ವದ ಮೈತ್ರಿಕೂಟವು ಅಧಿಕಾರಕ್ಕೆ ಬಂದರೆ ಜನರಿಗೆ ಕೊಟ್ಟ ಭರವಸೆ ಈಡೇರಿಸುವ ವಿಶ್ವಾಸ ಇದೆಯೇ?**

ನಾನು 12 ವರ್ಷ ಮುಖ್ಯಮಂತ್ರಿಯಾಗಿದ್ದೆ. ಎಂದೂ ಲೆಫ್ಟಿನೆಂಟ್ ಗವರ್ನರ್ ಜತೆಗೆ ಜಗಳ ಆಡಿಲ್ಲ. ಕಡತಗಳನ್ನು ಲೆಫ್ಟಿನೆಂಟ್ ಗವರ್ನರ್ ಅವರೇ ಅಂಗೀಕರಿಸಬೇಕು ಎಂದು ಕಾನೂನು ಹೇಳುತ್ತದೆ. ಹಾಗಿರುವಾಗ, ಕಡತಗಳಿಗೆ ಅವರ ಸಹಿ ಪಡೆಯುವುದು ಮುಖ್ಯಮಂತ್ರಿಯ ಕರ್ತವ್ಯ ಅಲ್ಲವೇ? ಆದರೆ, ಲೆಫ್ಟಿನೆಂಟ್ ಗವರ್ನರ್ ತಮಗೆ ತಡೆ ಒಡ್ಡಿದ್ದರು ಎಂದು ನಾರಾಯಣ ಸ್ವಾಮಿ ಹೇಳಿದ್ದಾರೆ. ಅವರಿಗೆ ಆಡಳಿತ ನಡೆಸಲು ಬಾರದಿದ್ದರೆ ಅದು ನಮ್ಮ ತಪ್ಪಲ್ಲ.

- **ಲೋಕಸಭೆ ಚುನಾವಣೆಯಲ್ಲಿಯೂ ಎನ್.ಆರ್. ಕಾಂಗ್ರೆಸ್ ಮೈತ್ರಿಕೂಟವು ಗೆದ್ದಿಲ್ಲ. ಪುದುಚೇರಿಯ ಜನರಿಗೆ ಬಿಜೆಪಿ ಸ್ವೀಕಾರಾರ್ಹವಲ್ಲ ಎಂಬ ಅಭಿಪ್ರಾಯ ಇದೆ. ಈ ಬಗ್ಗೆ ಏನಂತೀರಿ?**

ಲೋಕಸಭೆ ಚುನಾವಣೆಯ ಲೆಕ್ಕಾಚಾರ ಬೇರೆ. ಈಗಿನದ್ದು ವಿಧಾನಸಭೆ ಚುನಾವಣೆ. ನಾವಷ್ಟೇ ಉತ್ತಮ ಆಳ್ವಿಕೆ ನೀಡಲು ಸಾಧ್ಯವಾಗಿರುವುದರಿಂದ ಜನರು ಮತ ಹಾಕುತ್ತಾರೆ. ಕೇಂದ್ರದಲ್ಲಿ ಬಿಜೆಪಿ ಅಧಿಕಾರದಲ್ಲಿ ಇರುವುದು ಪುದುಚೇರಿಯ ಅಭಿವೃದ್ಧಿಗೆ ನೆರವಾಗಲಿದೆ.

- **ನಿಮ್ಮ ಮೈತ್ರಿಕೂಟವು ಗೆದ್ದರೆ ಮುಖ್ಯಮಂತ್ರಿ ಯಾರು? ಚುನಾವಣೆಯ ಬಳಿಕವೇ ಮುಖ್ಯಮಂತ್ರಿಯನ್ನು ಆರಿಸಲಾಗುವುದು ಎಂದು ಬಿಜೆಪಿ ಹೇಳಿದ್ದರಿಂದ ಸ್ವಲ್ಪ ಗೊಂದಲ ಉಂಟಾಗಿದೆಯಲ್ಲವೇ?**

ಈ ವಿಚಾರದಲ್ಲಿ ಏನಾದರೂ ಅನುಮಾನ ಇದೆಯೇ? ನನಗೆ ಹಾಗೆ ಅನಿಸುತ್ತಿಲ್ಲ. ನಮ್ಮ ಮೈತ್ರಿಕೂಟವು ಅಧಿಕಾರಕ್ಕೆ ಬಂದರೆ ಎನ್. ಆರ್. ಕಾಂಗ್ರೆಸ್‌ನವರೇ ಮುಖ್ಯಮಂತ್ರಿ ಆಗಲಿದ್ದಾರೆ. ಇದುವೇ ಮೈತ್ರಿಕೂಟದ ಅತಿದೊಡ್ಡ ಪಕ್ಷ. ಮೈತ್ರಿಕೂಟದ ಎಲ್ಲ ಪಕ್ಷಗಳೂ ಇದಕ್ಕೆ ಒಪ್ಪಿವೆ; ನನ್ನ ನೇತೃತ್ವದ ಮೈತ್ರಿಕೂಟವು ಅಧಿಕಾರಕ್ಕೆ ಬಂದರೆ ನಾನೇ ಮುಖ್ಯಮಂತ್ರಿ.

ತಮಿಳುನಾಡು ಮುಖ್ಯಮಂತ್ರಿ ಪಳನಿಸ್ವಾಮಿ ಆರೋಪ

'ಹಣೆಯ ಕುಂಕುಮ ಅಳಿಸಿದ ಸ್ಟಾಲಿನ್'

ಚೆನ್ನೈ (ಪಿಟಿಐ): ತಮಿಳುನಾಡು ಮುಖ್ಯಮಂತ್ರಿ ಕೆ. ಪಳನಿಸ್ವಾಮಿ ಅವರು ಧಾರ್ಮಿಕ ನಂಬಿಕೆ ವಿಚಾರದಲ್ಲಿ ಡಿಎಂಕೆ ಮುಖ್ಯಸ್ಥ ಎಂ.ಕೆ. ಸ್ಟಾಲಿನ್ ಅವರನ್ನು ಟೀಕಿಸಿದ್ದಾರೆ. ಎಐಎಡಿಎಂಕೆ ಸದಸ್ಯರು ನಿಜವಾದ ದೈವ ಭಕ್ತರು ಎಂದಿರುವ ಅವರು, ಸ್ಟಾಲಿನ್ ಅವರು ಹಣೆಗೆ ಇಟ್ಟ ಕುಂಕುಮ ಅಳಿಸಿದ್ದರು ಎನ್ನಲಾದ ಪ್ರಕರಣವನ್ನು ಉಲ್ಲೇಖಿಸಿದ್ದಾರೆ.

1989ರಲ್ಲಿ ಜಯಲಲಿತಾ ಅವರು ವಿರೋಧ ಪಕ್ಷದ ನಾಯಕಿಯಾಗಿದ್ದಾಗ ಅವರ ಮೇಲೆ ಡಿಎಂಕೆ ದಾಳಿ ನಡೆಸಿತ್ತು ಎಂಬ ಆರೋಪವನ್ನು ಮುಖ್ಯಮಂತ್ರಿ ನೆನಪು ಮಾಡಿಕೊಂಡಿದ್ದಾರೆ. 'ಜಯಲಲಿತಾ ಅವರ ಸ್ಥಿತಿಯೇ ಹೀಗಾಗಿದ್ದರೆ ಸಾಮಾನ್ಯ ಜನರ ಪಾಡೇನು' ಎಂದು ಡಿಎಂಕೆ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

'ನಾನು ದೇವರ ದಯದಿಂದ ಬದುಕಿದ್ದೇನೆ. ನಮಗೆ ದೇವರ ಮೇಲೆ ಭಕ್ತಿ ಇದೆ. ನಿಮ್ಮ ಹಾಗೆ ನಾವು ಹಣೆಗೆ ಹಚ್ಚಿದ ಕುಂಕುಮವನ್ನು ಅಳಿಸಿ ಹಾಕುವುದಿಲ್ಲ' ಎಂದು ಸ್ಟಾಲಿನ್ ಅವರನ್ನು ಪರೋಕ್ಷವಾಗಿ ಉಲ್ಲೇಖಿಸಿ ಪಳನಿಸ್ವಾಮಿ ಹೇಳಿದ್ದಾರೆ.

ಪಳನಿಸ್ವಾಮಿ



ಸ್ಟಾಲಿನ್

'ಥೇವರ್ ಸ್ಮಾರಕಕ್ಕೆ ಹೋಗಿದ್ದಾಗ ಅಲ್ಲಿನ ಪೂಜಾರಿಗಳು ಕೊಟ್ಟ ಭಸ್ಮವನ್ನು ಸ್ಟಾಲಿನ್ ಅವರು ಎಸೆದಿದ್ದಾರೆ' ಎಂದು ಆರೋಪಿಸಿದ್ದಾರೆ. ದೇವರಲ್ಲಿ ಭಕ್ತಿ ಇರುವವರಲ್ಲಿ ಮಾತ್ರ ಮಮತೆ ಮತ್ತು ಪ್ರೀತಿಯಂತಹ ಗುಣಗಳು ಇರುತ್ತವೆ ಎಂದೂ ಅವರು ಹೇಳಿದ್ದಾರೆ.

ಪ್ರತಿಸ್ಪರ್ಧಿಗಳು, ಅದರಲ್ಲೂ ಮುಖ್ಯವಾಗಿ ಬಿಜೆಪಿ ಮುಖಂಡರು ಸ್ಟಾಲಿನ್ ಅವರನ್ನು ಹಿಂದೂ ವಿರೋಧಿ ಎಂದು ಬಿಂಬಿಸುತ್ತಿದ್ದಾರೆ. ವಿಚಾರವಾದದ ಜತೆಗೆ ಗುರುತಿಸಿಕೊಂಡಿರುವ ತಮ್ಮ ಪಕ್ಷಕ್ಕೆ ಹಿಂದೂ ವಿರೋಧಿ ಎಂಬ ಹಣೆಪಟ್ಟಿ ಕಟ್ಟಲಾಗುತ್ತಿದೆ ಎಂದು ಸ್ಟಾಲಿನ್ ಪ್ರತ್ಯುತ್ತರ ನೀಡಿದ್ದಾರೆ.

'ಅಧಿಕಾರಕ್ಕೆ ಬಂದರೆ ಸಿಎಎ ಇಲ್ಲ'

ಜೋಲಾರ್‌ಪೇಟ್ (ತಮಿಳುನಾಡು) (ಪಿಟಿಐ): ತಮ್ಮ ಪಕ್ಷವು ಅಧಿಕಾರಕ್ಕೆ ಬಂದರೆ ತಮಿಳುನಾಡಿನಲ್ಲಿ ಪೌರತ್ವ (ತಿದ್ದುಪಡಿ) ಕಾಯ್ದೆ (ಸಿಎಎ) ಜಾರಿಗೆ ಅವಕಾಶ ಕೊಡುವುದಿಲ್ಲ ಎಂದು ಡಿಎಂಕೆ ಮುಖ್ಯಸ್ಥ ಎಂ.ಕೆ. ಸ್ಟಾಲಿನ್ ಹೇಳಿದ್ದಾರೆ. ಈ ಕಾಯ್ದೆಗೆ ಸಂಸತ್ತಿನಲ್ಲಿ ಬೆಂಬಲ ನೀಡಿದ್ದ ಎಐಎಡಿಎಂಕೆಯನ್ನು ಅವರು ಟೀಕಿಸಿದ್ದಾರೆ.

ಎಐಎಡಿಎಂಕೆ ಮತ್ತು ಪಿಎಂಕೆಯ ಸದಸ್ಯರು ರಾಜ್ಯಸಭೆಯಲ್ಲಿ ಮಸೂದೆಯ ವಿರುದ್ಧ ಮತ ಹಾಕಿದ್ದರೆ ಇದು ಅಂಗೀಕಾರವೇ ಆಗುತ್ತಿರಲಿಲ್ಲ. ಹಾಗಾಗಿ, ದೇಶದಲ್ಲಿ ಅಲ್ಪಸಂಖ್ಯಾತರ 'ವಿಧಿ'ಗೆ ಈ ಎರಡು ಪಕ್ಷಗಳನ್ನು ದೂಷಿಸಬೇಕಾಗುತ್ತದೆ ಎಂದು ಅವರು ಹೇಳಿದ್ದಾರೆ.

ಕೇಂದ್ರದ ಮೂರು ಕೃಷಿ ಕಾಯ್ದೆಗಳ ವಿರುದ್ಧ ನಿರ್ಣಯ ಅಂಗೀಕರಿಸದ್ದಕ್ಕೆ ಪಳನಿಸ್ವಾಮಿ ನೇತೃತ್ವದ ಸರ್ಕಾರವನ್ನು ಸ್ಟಾಲಿನ್ ತರಾಟೆಗೆ ತೆಗೆದುಕೊಂಡಿದ್ದಾರೆ. ಪಂಜಾಬ್, ಪಶ್ಚಿಮ ಬಂಗಾಳ ಮತ್ತು ಕೇರಳ ರಾಜ್ಯಗಳು ಇಂತಹ ನಿರ್ಣಯ ಅಂಗೀಕರಿಸಿವೆ ಎಂದು ಅವರು ಹೇಳಿದ್ದಾರೆ. ಏಪ್ರಿಲ್ 6ರಂದು ನಡೆಯಲಿರುವ ಚುನಾವಣೆಯಲ್ಲಿ ತಮ್ಮ ಪಕ್ಷವು ಅಧಿಕಾರಕ್ಕೆ ಬಂದರೆ, ಕೃಷಿ ಕಾಯ್ದೆಗಳ ವಿರುದ್ಧ ನಿರ್ಣಯ ಅಂಗೀಕರಿಸಲಾಗುವುದು ಎಂದಿದ್ದಾರೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಪ್ರಪಂಚದಲ್ಲಿರುವ ಅರ್ಧದಷ್ಟು ಜನರಿಗೆ, ಹೇಳಲು ಏನಾದರೂ ಇರುತ್ತದೆ ಆದರೆ ಹೇಳಲು ಸಾಧ್ಯವಾಗುವುದಿಲ್ಲ ಮತ್ತು ಉಳಿದ ಅರ್ಧದಷ್ಟು ಜನರಿಗೆ, ಹೇಳಲು ಏನೂ ಇರುವುದಿಲ್ಲ ಆದರೂ ಅವರು ಹೇಳುತ್ತಲೇ ಇರುತ್ತಾರೆ.

–ರಾಬರ್ಟ್ ಫ್ರಾಸ್ಟ್

ಹಳೆಯ ವಾಹನಗಳ ಗುಜರಿ ನೀತಿ ಗ್ರಾಹಕರಿಗೂ ಉದ್ಯಮಕ್ಕೂ ಪ್ರೋತ್ಸಾಹವಿರಲಿ

ಭಾರತದ ರಸ್ತೆಗಳಲ್ಲಿ ಸಂಚರಿಸುತ್ತಿರುವ ಹಳೆಯ ವಾಹನಗಳು ಎಷ್ಟು ಎಂಬ ಲೆಕ್ಕವನ್ನು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ಬಿಡುಗಡೆ ಮಾಡಿದೆ. ಒಟ್ಟು ನಾಲ್ಕು ಕೋಟಿ ವಾಹನಗಳು 'ಹಳೆಯವು' ಎಂಬ ಹಣೆಪಟ್ಟಿ ಹೊತ್ತುಕೊಳ್ಳಲು ಅರ್ಹವಾಗಿವೆ. ಇದರಲ್ಲಿ ಒಂದು ಗಮನಾರ್ಹ ಅಂಶವೆಂದರೆ, ಅತಿಹೆಚ್ಚಿನ ಸಂಖ್ಯೆಯ ಹಳೆಯ ವಾಹನಗಳು ಇರುವುದು ಕರ್ನಾಟಕದಲ್ಲಿ. ರಾಜ್ಯದಲ್ಲಿ 70 ಲಕ್ಷದಷ್ಟು ಇಂತಹ ವಾಹನಗಳು ಇವೆ ಎಂದು ಸಚಿವಾಲಯ ಕಲೆಹಾಕಿರುವ ಅಂಕಿ-ಅಂಶಗಳು ಹೇಳುತ್ತವೆ. ಹಳೆಯ ವಾಹನಗಳ ಸಂಖ್ಯೆಯ ಪಟ್ಟಿಯಲ್ಲಿ ಉತ್ತರ ಪ್ರದೇಶ ಹಾಗೂ ದೆಹಲಿ ಕ್ರಮವಾಗಿ ಎರಡು ಮತ್ತು ಮೂರನೆಯ ಸ್ಥಾನದಲ್ಲಿ ಇವೆ. ಆಂಧ್ರಪ್ರದೇಶ, ಮಧ್ಯಪ್ರದೇಶ, ತೆಲಂಗಾಣ ಮತ್ತು ಲಕ್ಷದ್ವೀಪದಲ್ಲಿ ಇರುವ ಇಂತಹ ವಾಹನಗಳ ವಿವರ ಕಲೆಹಾಕಲು ಸದ್ಯಕ್ಕೆ ಸಾಧ್ಯವಾಗಿಲ್ಲ. ಅಲ್ಲಿಂದಲೂ ಸಮಗ್ರ ವಿವರ ದೊರೆತ ನಂತರ, ಈ ಪಟ್ಟಿಯಲ್ಲಿ ತುಸು ಬದಲಾವಣೆಗಳು ಆಗಲೂಬಹುದು. ಅದೇನೇ ಇದ್ದರೂ, ಹಳೆಯ ವಾಹನಗಳ ಸಂಖ್ಯೆಯನ್ನು ಕೇಂದ್ರ ಸರ್ಕಾರವು ಈಚೆಗೆ ಪ್ರಕಟಿಸಿರುವ ಹಳೆಯ ವಾಹನಗಳ ಗುಜರಿ ನೀತಿಯ ಜೊತೆ ಇರಿಸಿ ಅರ್ಥ ಮಾಡಿಕೊಳ್ಳಬೇಕು. ಹದಿನೈದು ವರ್ಷಗಳಿಗಿಂತ ಹಳೆಯದಾದ ಪ್ರಯಾಣಿಕ ವಾಹನಗಳ ಮೇಲೆ, ಎಂಟು ವರ್ಷಗಳಿಗಿಂತ ಹಳೆಯದಾದ ಸರಕು ಸಾಗಣೆ ವಾಹನಗಳ ಮೇಲೆ 'ಹಸಿರು ತೆರಿಗೆ' ವಿಧಿಸುವ ಪ್ರಸ್ತಾವ ಇದೆ. ವಿದ್ಯುತ್ ಚಾಲಿತ ವಾಹನಗಳು, ಸಿಎನ್‌ಜಿ ಅಥವಾ ಎಲ್‌ಪಿಜಿ ಬಳಸುವ ವಾಹನಗಳು, ಹೈಬ್ರಿಡ್ ಎಂಜಿನ್ ಹೊಂದಿರುವ ವಾಹನಗಳು ಈ ತೆರಿಗೆಯ ವ್ಯಾಪ್ತಿಯಿಂದ ಹೊರಗೆ ಇರಲಿವೆ. ರೈತರು ಕೃಷಿ ಚಟುವಟಿಕೆಗಳಿಗೆ ಬಳಸುವ ಟ್ರ್ಯಾಕ್ಟರ್, ಟಿಲ್ಲರ್‌ಗಳು ಕೂಡ ಈ ತೆರಿಗೆಯಿಂದ ಹೊರಗೆ ಇರಲಿವೆ.

ಹೆಚ್ಚು ಪರಿಸರ ಮಾಲಿನ್ಯ ಉಂಟುಮಾಡದ ವಾಹನ ತಯಾರಿಕೆಗೆ ಪ್ರೋತ್ಸಾಹ ದೊರೆತಷ್ಟೂ ಉದ್ದೇಶಿತ ನೀತಿಯು ಹೆಚ್ಚು ಪರಿಣಾಮಕಾರಿ ಆಗಬಲ್ಲದು

'ಇಂಗಾಲದ ಡೈಆಕ್ಸೈಡ್ ಅನಿಲವನ್ನು ಅತಿಯಾಗಿ ಹೊರಸೂಸುವ ವಾಹನಗಳ ಬಳಕೆಯನ್ನು ನಿರುತ್ತೇಜಿಸುವುದು, ಪರಿಸರವನ್ನು ಮಲಿನಗೊಳಿಸದ ವಾಹನಗಳ ಬಳಕೆಗೆ ಹೆಚ್ಚಿನ ಪ್ರೋತ್ಸಾಹ ನೀಡುವುದು ಗುಜರಿ ನೀತಿಯ ಹಿಂದಿನ ಉದ್ದೇಶ. ಇದರ ಜೊತೆಯಲ್ಲೇ, ದೇಶದ ಒಟ್ಟು ಆಂತರಿಕ ಉತ್ಪಾದನೆಗೆ (ಜಿಡಿಪಿ) ಸರಿಸುಮಾರು ಶೇಕಡ 7.5ರಷ್ಟು ಕೊಡುಗೆ ನೀಡುವ ಆಟೊಮೊಬೈಲ್ ಉದ್ಯಮಕ್ಕೆ ಇನ್ನಷ್ಟು ಚೈತನ್ಯ ತಂದುಕೊಡುವ ಕೆಲಸ ಕೂಡ ವಾಹನಗಳ ಗುಜರಿ ನೀತಿಯಿಂದ ಸಾಧ್ಯವಾಗುವ ನಿರೀಕ್ಷೆ ಇದೆ. ಒಳ್ಳೆಯ ಉದ್ದೇಶ ಹೊಂದಿರುವಂತೆ ಕಾಣುವ ಈ ನೀತಿಯ ಅನುಷ್ಠಾನವು ನಿಂತಿರುವುದು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಎಷ್ಟರ ಮಟ್ಟಿಗೆ ಸಮನ್ವಯದಿಂದ ಕೆಲಸ ನಿಭಾಯಿಸುತ್ತವೆ ಎಂಬುದರ ಮೇಲೆ. ಈ ನೀತಿಯು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ಬರಬೇಕು ಎಂದಾದರೆ, ಕೇಂದ್ರದ ಜೊತೆ ರಾಜ್ಯಗಳು ಕೈಜೋಡಿಸಬೇಕಿರುವುದು ಅನಿವಾರ್ಯ. ಹಾಗೆಯೇ, ರಾಜ್ಯಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ನೀತಿಯನ್ನು ಅನುಷ್ಠಾನಕ್ಕೆ ತರಬೇಕಿರುವುದು ಕೇಂದ್ರದ ಹೊಣೆ. ಹಳೆಯ ವಾಹನಗಳನ್ನು ತಪಾಸಣೆಗೆ ಒಳಪಡಿಸಿ, ಅವು ಎಷ್ಟರಮಟ್ಟಿಗೆ ಸುಸ್ಥಿತಿಯಲ್ಲಿ ಇವೆ ಎಂಬ ಪ್ರಮಾಣಪತ್ರ ನೀಡುವ ವಿಚಾರದಲ್ಲಿ ರಾಜ್ಯಗಳ ಸಾರಿಗೆ ಇಲಾಖೆಗೆ ಬಹಳ ಒಳ್ಳೆಯ ಹೆಸರೇನೂ ಇಲ್ಲ. ವಾಹನಗಳ ಫೋಟೊ ತಂದರೆ ಸಾಕು, ಅವುಗಳ ಹೊಗೆ ತಪಾಸಣೆ ನಡೆಸಿ, ಪ್ರಮಾಣಪತ್ರ ಕೊಡುವ ಕೇಂದ್ರಗಳನ್ನು ಈಗಲೂ ಕಾಣಬಹುದು. ಹೊಸ ನೀತಿಯು ಪರಿಣಾಮಕಾರಿಯಾಗಿ ಜಾರಿಗೆ ಬರಬೇಕು, ಅದರಿಂದ ವಾಹನ ಉದ್ಯಮಕ್ಕೆ, ಪರಿಸರಕ್ಕೆ ಒಳ್ಳೆಯದಾಗಬೇಕು ಎಂದಾದರೆ ಇಂತಹ 'ಜಾಣ ವ್ಯವಹಾರ'ಗಳನ್ನು ನಿಗ್ರಹಿಸಲೇಬೇಕಾಗುತ್ತದೆ. ಹಳೆಯ ವಾಹನ ಗುಜರಿಗೆ ಹಾಕಿ ಹೊಸ ವಾಹನ ಖರೀದಿಸುವವರಿಗೆ, ಹೊಸ ವಾಹನದ ಬೆಲೆಯಲ್ಲಿ ಶೇಕಡ 5ರಷ್ಟು ರಿಯಾಯಿತಿ ಇರುತ್ತದೆ ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ಈಚೆಗೆ ಘೋಷಿಸಿದ್ದಾರೆ. ಇಂತಹ ಸ್ವಾಗತಾರ್ಹ ಕ್ರಮಗಳ ಜೊತೆಯಲ್ಲೇ, ಪರಿಸರ ಮಾಲಿನ್ಯ ಹೆಚ್ಚು ಉಂಟುಮಾಡದ ವಾಹನ ತಯಾರಿಕೆಯನ್ನು ಇನ್ನಷ್ಟು ಪ್ರೋತ್ಸಾಹಿಸಬೇಕು. ಆಗ, ಉದ್ದೇಶಿತ ನೀತಿಯು ಹೆಚ್ಚು ಪರಿಣಾಮಕಾರಿ ಆಗಬಲ್ಲದು.

ದಿನದ ಟ್ವೀಟ್

ಯೋಚನೆ ಮಾಡಿದ್ದಾರೆಯೇ?

ಬೆಂಗಳೂರಿನಲ್ಲಿ ದಿನೇದಿನೇ ಹೆಚ್ಚುತ್ತಿರುವ ಅಪಾರ್ಟ್‌ಮೆಂಟ್‌ಗಳಿಗೆ ಅನಾಮತ್ತಾಗಿ ಅನುಮತಿ ನೀಡುತ್ತಿರುವ ಬಿಬಿಎಂಪಿ, ಅವುಗಳಿಗೆ ಕೊಡಬೇಕಾದ ಕುಡಿಯುವ ನೀರಿನ ಬಗ್ಗೆ ಯೋಚಿಸಿದೆಯೇ? ಕೆಆರ್‌ಎಸ್‌ನ ಕಾವೇರಿ ನೀರಿನ ಪ್ರಮಾಣ ಹೆಚ್ಚಿಲ್ಲ, ಅಂತರ್ಜಲದ ಪ್ರಮಾಣ ಕೂಡ ಕಡಿಮೆ, ಇರುವ ಕೆರೆಗಳೆಲ್ಲಾ ಕೊಳಚೆನೀರಿನ ಗುಂಡಿಗಳಾಗಿವೆ. ಜೀವಕ್ಕೆ ಬೇಕಿರುವ ನೀರನ್ನು ಹೇಗೆ ಕೊಡುತ್ತಾರೆ?

ರೋಹಿತ್ ಸಿಂಹ, ಎಂಜಿನಿಯರ್

25 ವರ್ಷಗಳ ಹಿಂದೆ

ಶನಿವಾರ, 30-3-1996

• ಬೀದರ್‌ನಲ್ಲಿ ಕಲ್ಲು ತೂರಾಟ, ಲಾಠಿ ಪ್ರಹಾರ: 40 ಜನಕ್ಕೆ ಗಾಯ

ಬೀದರ್, ಮಾರ್ಚ್ 29– ಇಲ್ಲಿನ ಜಿಲ್ಲಾಧಿಕಾರಿ ಕಚೇರಿಯ ಆವರಣದೊಳಗೆ ಇಂದು ನುಗ್ಗಲು ಯತ್ನಿಸಿದ ಜನರನ್ನು ಚದುರಿಸಲು ಪೊಲೀಸರು ಲಘು ಲಾಠಿ ಪ್ರಹಾರ ನಡೆಸಿದಾಗ ಕೆಲವರು ಓಡಿದರೆ ಇನ್ನು ಕೆಲವರು ಕಲ್ಲು, ಚಪ್ಪಲಿ ತೂರಾಟದಲ್ಲಿ ತೊಡಗಿದರು. ಇದರಿಂದ 18 ಪೊಲೀಸರು ಸೇರಿ ಸುಮಾರು 40 ಜನರಿಗೆ ಗಾಯಗಳಾಗಿವೆ.

ಕಲ್ಲು ಮತ್ತು ಚಪ್ಪಲಿ ತೂರಾಟದ ಕಾಲಕ್ಕೆ ಸ್ಥಳದಲ್ಲೇ ಹಾಜರಿದ್ದ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿಗಳು ಲಾಠಿ ಪ್ರಹಾರಕ್ಕೆ ಆದೇಶ ನೀಡಲಿಲ್ಲ ಎಂದು ಸಿಟ್ಟಿಗೆದ್ದ ಪೊಲೀಸರು ನಂತರ ಜಿಲ್ಲಾಧಿಕಾರಿ ಕಚೇರಿಯೊಳಗೆ ನುಗ್ಗಿ ತಮಗೆ ರಕ್ಷಣೆ ನೀಡುವಂತೆ ಮನವಿ ಮಾಡಿಕೊಂಡ ಅಪರೂಪದ ಘಟನೆ ನಡೆಯಿತು.

ಈ ಘಟನೆಯಿಂದ ನಗರದಲ್ಲಿ ಉಂಟಾಗಿರುವ ಪ್ರಕ್ಷುಬ್ಧ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಇಂದಿನಿಂದ ಮೂರು ದಿನ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

• ಮಲ್ಲಿಕಾರ್ಜುನಯ್ಯ, ಆಳ್ವ, ಬಂಗಾರಪ್ಪ ನಾಮಪತ್ರ

ಬೆಂಗಳೂರು, ಮಾರ್ಚ್ 29– ಕೆಸಿಪಿ ಅಧ್ಯಕ್ಷ ಎಸ್.ಬಂಗಾರಪ್ಪ, ಜನತಾ ದಳದ ಬಾಗಿಲಲ್ಲಿ ನಿಂತಿರುವ ಡಾ. ಜೀವರಾಜ ಆಳ್ವ, ಲೋಕಸಭೆ ಉಪಾಧ್ಯಕ್ಷ ಎಸ್. ಮಲ್ಲಿಕಾರ್ಜುನಯ್ಯ, ಹಾಲಿ ಲೋಕಸಭಾ ಸದಸ್ಯರಾದ ವಿ.ಶ್ರೀನಿವಾಸ ಪ್ರಸಾದ್, ಚಂದ್ರಪ್ರಭಾ ಅರಸ್, ಕೆ.ಎಚ್.ಮುನಿಯಪ್ಪ, ಬಿಜೆಪಿ ರಾಷ್ಟ್ರೀಯ ಕಾರ್ಯದರ್ಶಿ ಅನಂತಕುಮಾರ್, ದಳ ಮುಖಂಡರಾದ ಬಿ.ಎ.ಜೀವಿಜಯ, ಬಿ.ಎಲ್.ಶಂಕರ್ ಇಂದು ಲೋಕಸಭಾ ಚುನಾವಣೆಗೆ ನಾಮಪತ್ರ ಸಲ್ಲಿಸಿದವರಲ್ಲಿ ಪ್ರಮುಖರು.

ಬಂಗಾರಪ್ಪ, ಅನಂತಕುಮಾರ್, ಜೀವಿಜಯ ಹಾಗೂ ಶಂಕರ್ ಅವರು ಕ್ರಮವಾಗಿ ಶಿವಮೊಗ್ಗ, ಬೆಂಗಳೂರು (ದಕ್ಷಿಣ), ಮಂಗಳೂರು ಮತ್ತು ಚಿಕ್ಕಮಗಳೂರು ಲೋಕಸಭಾ ಕ್ಷೇತ್ರಗಳಿಂದ ಚೊಚ್ಚಲ ಸ್ಪರ್ಧಿಗಳಾಗಿ ಕಣಕ್ಕೆ ಇಳಿದಿದ್ದಾರೆ.

50 ವರ್ಷಗಳ ಹಿಂದೆ

ಮಂಗಳವಾರ, 30-3-1971

• ಆಚಾರ ವಿಚಾರಗಳ ಅಜಗಜಾಂತರ

ಕಲ್ಕತ್ತ, ಮಾರ್ಚ್ 29– 'ಬಾಂಗ್ಲಾದೇಶ ಮತ್ತು ಪಾಕಿಸ್ತಾನದ ನಡುವೆ ಹೋಲುವ ಒಂದು ವಿಷಯವೂ ಇಲ್ಲ. ಇವೆರಡನ್ನೂ ಏಕ ರಾಷ್ಟ್ರವೆಂದು ಕರೆಯಲಾಗದು' ಎಂದು ಸ್ವತಂತ್ರ ಬಂಗಾಳ ರೇಡಿಯೊ ಹೇಳಿದೆ.

ಭಾಷೆಯಲ್ಲಿ, ಆಚಾರ ವಿಚಾರಗಳಲ್ಲಿ, ಸಂಸ್ಕೃತಿಯಲ್ಲಿ ಬಾಂಗ್ಲಾದೇಶವು ಪಶ್ಚಿಮ ಪಾಕಿಸ್ತಾನಕ್ಕಿಂತಲೂ ತೀರಾ ಭಿನ್ನ.

ಅನೇಕ ವರ್ಷಗಳಿಂದ ಪಶ್ಚಿಮ ಪಾಕಿಸ್ತಾನೀಯರು ಬಾಂಗ್ಲಾ ದೇಶವನ್ನು ಶೋಷಿಸುತ್ತಿದ್ದಾರೆ. ಆದರೀಗ ಈ ಶೋಷಣೆಯನ್ನು ತಡೆಯಲು ಬಾಂಗ್ಲಾ ದೇಶದ ಏಳೂವರೆ ಕೋಟಿ ಜನ ಏಕ ಪುರುಷನಂತೆ ಎದ್ದು ನಿಂತಿದ್ದಾರೆ.

• ಭಾರತಕ್ಕೆ ಸಹಸ್ರಾರು ನಿರಾಶ್ರಿತರ ಪ್ರವೇಶ

ನವದೆಹಲಿ, ಮಾರ್ಚ್ 29– ಬಾಂಗ್ಲಾ ದೇಶದಲ್ಲಿ ಪಶ್ಚಿಮ ಪಾಕಿಸ್ತಾನದ ಸೈನಿಕರು ನಡೆಸಿರುವ ಘೋರ ಕೃತ್ಯಗಳಿಂದ ನೊಂದಿರುವ ಸಾವಿರಾರು ಮಂದಿ ನಿರಾಶ್ರಿತರು ಭಾರತಕ್ಕೆ ಗಡಿ ದಾಟಿ ಬಂದಿದ್ದಾರೆಂದು ಅಧಿಕೃತ ಮೂಲಗಳು ಇಂದು ಇಲ್ಲಿ ತಿಳಿಸಿವೆ.

• ಆಡಳಿತಕ್ಕೆ 'ಚುರುಕು ಚಿಕಿತ್ಸೆ'– ರಾಜ್ಯಪಾಲರಿಂದ ಕಾರ್ಯಾರಂಭ

ಬೆಂಗಳೂರು, ಮಾರ್ಚ್ 29– ಆಡಳಿತಕ್ಕೆ 'ಚುರುಕು ಚಿಕಿತ್ಸೆ' ನೀಡುವುದರ ಮೂಲಕ ರಾಜ್ಯಪಾಲ ಶ್ರೀ ಧರ್ಮವೀರ ಅವರು ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತ ನಿರ್ವಹಣೆಯನ್ನು ಇಂದು ಆರಂಭಿಸಿದರು.

ಯುಗಾದಿ ಹಬ್ಬದ ದಿನ ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತ ಜಾರಿಗೆ ಬಂದು ಅಂದಿನಿಂದ ರಾಜ್ಯದ ಆಡಳಿತದ ಹೊಣೆಯನ್ನು ನೇರವಾಗಿ ವಹಿಸಿಕೊಂಡ ರಾಜ್ಯಪಾಲರು ಇಂದು ವಿಧಾನ ಸೌಧದಲ್ಲಿ ಹಾಜರಾದರು.

ಜ್ಞಾನ ಮತ್ತು ಕೌಶಲಗಳು ಅಭಿನ್ನವಾದ ಅರಿವನ್ನು ಇಂದಿನ ಶಿಕ್ಷಣವು ಕಟ್ಟಿಕೊಳ್ಳಬೇಕಿದೆ

ಜ್ಞಾನ ಅಧಿಕಾರ ಮತ್ತು ಅಹಂಕಾರ

ವಿಶ್ಲೇಷಣೆ

ಡಾ. ಗೀತಾ ವಸಂತ

ಶಿಕ್ಷಣದ ಗುರಿಯಿರುವುದು ವ್ಯಕ್ತಿತ್ವದ ಸಮಗ್ರ ವಿಕಸನದ ಕಡೆಗೋ ಅಥವಾ ವೃತ್ತಿಪರ ಮಾನವ ಸಂಪನ್ಮೂಲವನ್ನು ಒಗ್ಗೂಡಿಸುವ ಕಡೆಗೋ ಎಂಬುದು ಮೂಲಪ್ರಶ್ನೆ. ಇದು ಜ್ಞಾನ ಮತ್ತು ಕೌಶಲದ ಪ್ರಶ್ನೆಯೂ ಹೌದು. ಒಳಗಿನ ಅನ್ವೇಷಣೆಯಿಂದ ಆರಂಭವಾಗುವ ಸಹಜ ಕಲಿಕೆಯು ಉದ್ದೇಶವೊಂದರ ಪೂರೈಕೆಗಾಗಿ ರೂಪಿಸಲ್ಪಟ್ಟಾಗ ಅದು ವ್ಯವಸ್ಥೆಯಾಗಿ ಬದಲಾಗುತ್ತದೆ. 'ಜ್ಞಾನ ವ್ಯವಸ್ಥೆ'ಯು ತನಗೆ ಬೇಕಾದಂತಹ ವ್ಯಕ್ತಿಗಳನ್ನು ತಯಾರಿಸುವ ಕಾರ್ಖಾನೆಯಾಗುತ್ತದೆ. ಜ್ಞಾನಕ್ಕಿರಬೇಕಾದ ಚಲನಶೀಲ ಗುಣ ಕಣ್ಮರೆಯಾಗುತ್ತದೆ. ಸೃಜನಶೀಲತೆಯ ಅನಂತ ಮುಖಗಳು ಮಸುಕಾಗುತ್ತ ಹೋಗುತ್ತವೆ. ವ್ಯವಸ್ಥೆಯು ಬಲಗೊಳ್ಳುತ್ತ ವ್ಯಕ್ತಿತ್ವವು ದುರ್ಬಲಗೊಳ್ಳುವುದೇ ಹೀಗೆ.

ಜ್ಞಾನವನ್ನು 'ರೂಪಿಸು'ವಾಗ ನೇಪಥ್ಯದಲ್ಲಿ ಒಂದು ದೃಷ್ಟಿಕೋನವು ಕೆಲಸ ಮಾಡುತ್ತಿರುತ್ತದೆ. ಅದು ಅಧಿಕಾರ ಕೇಂದ್ರವನ್ನು ಅವಲಂಬಿಸಿರುತ್ತದೆ. ಈ ಅವ್ಯಕ್ತ ದೃಷ್ಟಿಕೋನವು ಸಾಮಾಜಿಕ ಬದುಕಿನಲ್ಲಿ ಬೇರೆ ಬೇರೆ ಪಾತ್ರಗಳ ಮೂಲಕ ಅಭಿನೀತವಾಗುತ್ತದೆ. ಇದರಿಂದಾಗಿ ಸಮಾಜವು ನಿರೀಕ್ಷಿಸುವ ವರ್ತನೆಗಳನ್ನೇ ವ್ಯಕ್ತಿಗಳು ಅನುಸರಿಸುತ್ತಿರುತ್ತಾರೆಯೇ ವಿನಾ ವ್ಯಕ್ತಿತ್ವದ ಸಹಜ ವಿಕಸನದ ಎಲ್ಲೆಗಳು ಹಿಗ್ಗುವುದಿಲ್ಲ. ಪುರುಷಕೇಂದ್ರಿತ ಅನುಭವ, ಅನುಭೂತಿಗಳಿಂದ ಕಟ್ಟಿದ ಜ್ಞಾನವು ಹೆಣ್ಣು ಅನುಭವ ಹಾಗೂ ಅವಳ ಅನುಭೂತಿಯ ನೆಲೆಗಳನ್ನು ಪ್ರಜ್ಞಾಪೂರ್ವಕವಾಗಿಯೋ ಕೆಲವೊಮ್ಮೆ ಅಪ್ರಜ್ಞಾಪೂರ್ವಕವಾಗಿಯೋ ಒಳಗೊಂಡಿರುವುದಿಲ್ಲ. ಚರಿತ್ರೆಯನ್ನು ಗಮನಿಸಿದಾಗ ಅಲ್ಲಿ ಪ್ರಬಲವಾಗಿ ಕೇಳುವುದು ಗಂಡುಧ್ವನಿ. ಅವನು ಕಟ್ಟಿದ ಜ್ಞಾನ ಮೀಮಾಂಸೆ ಹಾಗೂ ಸೌಂದರ್ಯ ಮೀಮಾಂಸೆಗಳೇ ಇಂದು ಜಗತ್ತನ್ನು ಆಳುತ್ತಿವೆ.

ಅಲೆಮಾರಿಯಾಗಿದ್ದ ಮನುಷ್ಯನು ಸಾಮ್ರಾಜ್ಯಗಳನ್ನು ಸ್ಥಾಪಿಸುತ್ತ ನಡೆದ ಬೆಳವಣಿಗೆಯಲ್ಲೇ ನಾಗರಿಕತೆಗಳು ಉದಿಸಿದವು. ಕೊಳ್ಳೆ ಹೊಡೆಯುವ ಯುದ್ಧೋನ್ಮಾದವು ಪೌರುಷ ಹಾಗೂ ಪರಾಕ್ರಮದ ವ್ಯಾಖ್ಯಾನಗಳನ್ನು ರೂಪಿಸಿತು. ಪ್ರಭುತ್ವ ಶಕ್ತಿಗಳು ಬಲಗೊಳ್ಳುತ್ತ ಹೋದಂತೆ ಅದನ್ನು ಸ್ಥಿರೀಕರಿಸುವ ಸಾಧನಗಳೂ ರೂಪುಗೊಂಡವು. ಧರ್ಮ ಮತ್ತು ಪ್ರಭುತ್ವಗಳ ಬೆಸುಗೆ ಹಾಗೆಯೇ ಗಟ್ಟಿಯಾಗತೊಡಗಿತು. ನಾಗರಿಕತೆಯನ್ನು ಭೌತಿಕವಾಗಿ ಕಟ್ಟಲು ಬೇಕಾದ ಎಲ್ಲ ಕೌಶಲಗಳು ಅಭಿವೃದ್ಧಿಗೊಂಡವು. ಕಸುಬುಗಳ ಆಧಾರದ ಮೇಲೆ ಸಾಮಾಜಿಕ ಶ್ರೇಣೀಕರಣವೂ ಬೆಳೆಯುತ್ತ ಹೋಯಿತು. ಕಣ್ಣಿಂದ, ಕೈಯಿಂದ, ಇಡೀ ದೇಹವನ್ನೇ ತೊಡಗಿಸುವ ಮೂಲಕ ಕಟ್ಟಿಕೊಂಡ ಕೌಶಲಗಳಿಗಿಂತ ಬುದ್ಧಿಮಾತ್ರದಿಂದ ಆಳುವ ಜ್ಞಾನ ದೊಡ್ಡದು ಎಂಬ ಪರಿಭಾವಿಸುವಿಕೆ ಜ್ಞಾನದ ಅಧಿಕಾರವನ್ನು ಸ್ಥಾಪಿಸಿತು. ಅಧಿಕಾರವೆಂಬುದು ಗೆಲ್ಲುವುದರಲ್ಲಿದೆ, ಆಳುವುದರಲ್ಲಿದೆ, ಭೋಗಿಸುವುದರಲ್ಲಿದೆ ಎಂಬ ಪುರುಷಪ್ರಧಾನವಾದ ತಿಳಿವಳಿಕೆಯು ಹೆಣ್ಣಿನ ಸಂಗೋಪನೆಯ ಗುಣವನ್ನು ಗೌಣವಾಗಿಸಿತು.

ಪ್ರಕೃತಿಯೊಂದಿಗೆ ತಾದಾತ್ಮ್ಯಗೊಂಡ ಅವಳ ಪ್ರಜ್ಞೆ ನಿಧಾನ ಲಯದ ಆದರೆ ನಿರಂತರವಾದ ವಿಕಸನವನ್ನು ಪ್ರತಿನಿಧಿಸುತ್ತಿತ್ತು. ಆದರೆ ಪ್ರಕೃತಿಯನ್ನು ಗೆದ್ದು, ಅದನ್ನು ತನ್ನ ಅಧೀನಗೊಳಿಸಿ ತನ್ನ ಉಪಭೋಗಕ್ಕೆ ಬಳಸುವ ಪುರುಷಪ್ರಜ್ಞೆ ಮುನ್ನೆಲೆಗೆ ಬಂತು. ಅದನ್ನೇ ಪರಾಕ್ರಮವೆಂದು ವರ್ಣಿಸುತ್ತಾ ಬಂದ ಅಕ್ಷರ ಜಗತ್ತು, ಚರಿತ್ರೆಯಲ್ಲಿ ಪೌರುಷವನ್ನೇ ವಿಜೃಂಭಿಸಿತು. ತಾಳ್ಮೆಯನ್ನು ಬೇಡುವ ಕೌಶಲಗಳ ಜಗತ್ತು ಅಪ್ರಧಾನವಾಯಿತು. ಬದುಕನ್ನು ಕಟ್ಟುವವರಿಗಿಂತ ಆಳುವವರು ಪ್ರಧಾನ ನೆಲೆಯಲ್ಲಿ ನಿಂತರು.

ಭೂಮಿ, ಹೆಣ್ಣು ಹಾಗೂ ಸಕಲ ಚರಾಚರಗಳನ್ನುಳ್ಳ ಸಾವಯವ ಜಗತ್ತನ್ನು ಸಂಪತ್ತಾಗಿಯೂ ಆ ಮೂಲಕ ಭೋಗವಸ್ತುವಾಗಿಯೂ ಪರಿಭಾವಿಸುತ್ತ ಬಂದ ದೃಷ್ಟಿಕೋನವು ಇಂದಿಗೂ ಮುನ್ನೆಲೆಯಲ್ಲಿದೆ. ಇದು ಪಿತೃಪ್ರಧಾನತೆಯ ದೃಷ್ಟಿಕೋನವೂ ಹೌದು. ಇಡೀ ಪ್ರಕೃತಿಯನ್ನು ಬೇಟೆಯಾಡುವ ಈ ಪ್ರವೃತ್ತಿ ಸೃಷ್ಟಿಸಿದ ಜ್ಞಾನವು ಜಗತ್ತನ್ನು ಇಂದು ವಿನಾಶದ ಅಂಚಿಗೆ ತಂದು ನಿಲ್ಲಿಸಿದೆ. ಕನ್ನಡದ ಕವಿ ಬೇಂದ್ರೆಯವರ 'ಚಿಗರಿಗಂಗಳ ಚೆಲುವಿ' ಎಂಬ ಕವಿತೆ ಅಧಿಕಾರದ ಗಂಡುಪ್ರಜ್ಞೆ ಉಂಟುಮಾಡುತ್ತಿರುವ ವಿನಾಶದ ತಲ್ಲಣವನ್ನು ಆಳವಾದ ಅನುಭವಸಾಂದ್ರತೆಯಲ್ಲಿ ಕಟ್ಟಿಕೊಟ್ಟಿದೆ.

ಭೂಮಿಯನ್ನು ಬರಿಯ ಸಂಪನ್ಮೂಲವಾಗಿ ಕಾಣದೆ, ಅದು ಉಸಿರಾಡುತ್ತಿರುವ ಜೀವಂತ ಜಗತ್ತು ಎಂದು ಭಾವಿಸಿದಾಗ ನಮ್ಮ ನೋಟಕ್ರಮಗಳು ಪಲ್ಲಟಿಸುತ್ತವೆ. ಕವಿತೆಯು 'ಬ್ಯಾಟಿ ನಾಯೊದರ್ಯಾವೋ ಹಸುಜೀವ ಬೆದರ್ಯಾವೋ' ಎಂಬ ಪ್ರತಿಮೆಯಲ್ಲಿ ಈ ಜೀವಜಗತ್ತಿನ ತಲ್ಲಣವನ್ನು ವ್ಯಕ್ತಗೊಳಿಸುತ್ತದೆ. ಅಲ್ಲಿ ಬರುವ ಹೆಣ್ಣು ಮತ್ತು ಪ್ರಕೃತಿ ಬೇರೆಯಲ್ಲ. ಅವಳು ಕೂಡ ಬೇಟೆಯ ತುತ್ತಾದವಳೇ. ಅವಳ ದೇಹ ಮತ್ತು ಮನಸ್ಸುಗಳ ಮೇಲೆ ನಡೆದ, ನಡೆಯುತ್ತಲೇ ಇರುವ ಆಕ್ರಮಣಗಳಿಗೆ ಕೊನೆಯೆಂಬುದೇ ಇಲ್ಲವೇನೋ ಎಂಬ ತಲ್ಲಣ ನಮ್ಮನ್ನು ಕಾಡುತ್ತದೆ. 'ಇದು ಎಂಥಾ ಜೀವದ ಬ್ಯಾಟಿ ಹಾಡೇ ಹಗಲs' ಎಂಬ ಉದ್ಗಾರದಲ್ಲಿ ಅದು ಹರಳುಗಟ್ಟಿದೆ. ಹಾಗೆಯೇ ಪ್ರಕೃತಿಯ ಮೇಲೆ ಆಗುತ್ತಿರುವ ಆಕ್ರಮಣಗಳೂ ಅವ್ಯಾಹತವಾಗಿವೆ. ಅದರ ಸೂಕ್ಷ್ಮ ಚೀತ್ಕಾರಗಳು ನಮಗೆ ಕೇಳದಾಗಿವೆ. ನಮ್ಮ ಸ್ವಾರ್ಥ ಹಾಗೂ ಲಾಭಕೋರತೆಯ ತೀರದ ಹಸಿವುಗಳು ನಿಜವನ್ನು ಕಾಣದಂತೆ ನಮ್ಮನ್ನು ಅಸೂಕ್ಷ್ಮಗೊಳಿಸಿವೆ.

ಅವಳು 'ಒಡವ್ಯಲ್ಲೋ ಮಗನೇ ಉಸಿರಿದ್ದೊಡಲಂ-ತಾಲೋ' ಎಂಬಲ್ಲಿ ಪ್ರಕೃತಿಯನ್ನು ಪರಿಭಾವಿಸಬೇಕಾದ ನೈಜ ನೋಟವಿದೆ. ಪ್ರಕೃತಿಯ ಭಾಗವೇ ಆದ ನಾವು ಭೂಪತಿಗಳಲ್ಲ, ಭೂತಾಯಿಯ ಮಕ್ಕಳು ಎಂಬ ಭಾವ ಬಲಿತಾಗ ತಾಯಿ– ಮಗುವಿನ ನಡುವಿನ ಸಾವಯವ ಸಂಬಂಧದ ಜ್ಞಾನ ನಮಗಾಗುತ್ತದೆ. ಉಸಿರಿದ್ದ ಒಡಲಿನ ಕಂಪನ ಅರಿವಾಗತೊಡಗುತ್ತದೆ.



ಇಂದು ನಾವು ಸೃಷ್ಟಿಸಬೇಕಾಗಿರುವ ಜ್ಞಾನವು ಸಕಲ ಜೀವರಾಶಿಯನ್ನೊಳಗೊಂಡ ಸಮಸ್ತ ಪ್ರಕೃತಿಯ ಉಳಿವಿಗಾಗಿ ಇರಬೇಕೋ ಅಥವಾ ತಾತ್ಕಾಲಿಕ ಸಮಸ್ಯೆಗಳ ಶಮನಕ್ಕಾಗಿ ಇರಬೇಕೋ ಎಂಬುದು ಯೋಚಿಸಬೇಕಾದ ವಿಷಯ. ತಂತ್ರಜ್ಞಾನವು ತಂದುಕೊಟ್ಟ ವೇಗ ಹಾಗೂ ಯಂತ್ರಗಳ ದೈತ್ಯಶಕ್ತಿ ತಂದುಕೊಟ್ಟ ಅಹಂಕಾರಗಳು ನಮ್ಮನ್ನು ಪ್ರಕೃತಿಯಿಂದ ಭಿನ್ನಗೊಳಿಸಿ ಅದನ್ನು ಆಳುವ ಉನ್ಮಾದವನ್ನು ಸೃಷ್ಟಿಸುತ್ತಲೇ ಇವೆ.

ಹೆಣ್ಣಿನ ವಿಷಯದಲ್ಲಿ ಬಂಡವಾಳಶಾಹಿ ಜಗತ್ತು ತೋರಿಸುತ್ತಿರುವ ತಣ್ಣನೆಯ ಕ್ರೌರ್ಯವೂ ಇದೇ ಬಗೆಯದು. ಇದೊಂದು ಬಗೆಯ ಆಂತರಿಕ ಪ್ರಳಯ. ನಮ್ಮ ಜ್ಞಾನಕ್ರಮಗಳು ಕಣ್ಣಿಗೆ ಕಾಣದಂತೆ ಇದನ್ನು ಉಂಟುಮಾಡುತ್ತಿವೆ. ಇದರಿಂದ ಉಳಿಯಬೇಕಾದರೆ ಈ ವಿನಾಶಕಾರಿ ಆಲೋಚನಾಕ್ರಮವು ಬದಲಾಗಲೇಬೇಕು. ಜ್ಞಾನವೆಂಬುದು ಸಮಗ್ರವಾಗಬೇಕಾದರೆ ಅಲ್ಲಿ ಹೆಣ್ಣು ಕಟ್ಟಿಕೊಂಡು ಬಂದ ಕೌಶಲಗಳ ಜಗತ್ತೂ ಮುಖ್ಯವಾಗಬೇಕಾಗುತ್ತದೆ. ವೈದೇಹಿ 'ತಿಳಿದವರೇ ಹೇಳಿ' ಎಂಬ ಪದ್ಯದಲ್ಲಿ ಹೀಗೆ ಪ್ರಶ್ನಿಸುತ್ತಾರೆ.

ತಿಳಿಸಾರು ಎಂದರೆ ಏನೆಂದುಕೊಂಡಿರಿ?
ಅದಕ್ಕೂ ಬೇಕು ಒಳಗೊಂದು
ಜಲತತ್ವ ಗಂಧತತ್ವ
ಕುದಿದು ಹದಗೊಂಡ ಸಾರತತ್ವ

ಒಂದು ಕಿಟಕಿಯೂ ಇರದ ಹೊಗೆ ಹಿಡಿದ ಅಡುಗೆ ಮನೆಯಲ್ಲಿ ಶತಮಾನಗಳನ್ನು ಕಳೆದ ಹೆಣ್ಣಿಗೂ ಒಂದು ಅಂತರ್‌ದೃಷ್ಟಿಯಿದೆ. ಬದುಕು ಹದಗೊಳ್ಳುವುದು ಹೇಗೆಂದು ತಿಳಿಯುವುದು ಪರಮಜ್ಞಾನ. ಅದೇ ಪಕ್ವತೆಯ ಪರಾಕಾಷ್ಠೆ. ಅದು ಕುದುಕುದಿದು ಹದಗೊಂಡವಳಲ್ಲಿದೆ. ಇನ್ನು ಲೌಕಿಕ ಜ್ಞಾನಕ್ಕೆ ಬಂದರೆ ಅದೂ ಅವಳಿಗೆ ತಿಳಿದಿದೆ. ಜಲತತ್ವ ಅಗ್ನಿತತ್ವ ಗಂಧತತ್ವ ಎಲ್ಲವೂ ಹೇಗೆ ಎಷ್ಟು ಯಾವಾಗ ಬೆರೆಯಬೇಕೆಂಬುದು ಅವಳಿಗೆ ಗೊತ್ತು. ಜ್ಞಾನವೆಂಬುದು ಮಾತಿನ ತುತ್ತಲ್ಲ. ಅಕ್ಷರದ ಅಹಂಕಾರವಲ್ಲ. ಅದು ಅನುದಿನದ ಬದುಕನ್ನು ಪೋಷಿಸುವ ಲೌಕಿಕ ಶಕ್ತಿಯೂ ಹೌದು. ಇದನ್ನೇ ಕಮ್ಮಾರಿಕೆ ಚಮ್ಮಾರಿಕೆ ಕೃಷಿ ಎಲ್ಲವುಗಳ ಬಗ್ಗೆಯೂ ಹೇಳಬಹುದು.

ತುಮಕೂರು ವಿಶ್ವವಿದ್ಯಾಲಯದಲ್ಲಿ ನಡೆದ ಸಂವಾದವೊಂದರಲ್ಲಿ ಯು.ಆರ್. ಅನಂತಮೂರ್ತಿಯವರು ಆಡಿದ್ದ ಮಾತು ಈ ಸಂದರ್ಭದಲ್ಲಿ ನೆನಪಾಗುತ್ತದೆ. 'ಜ್ಞಾನ ಅನ್ನೋದು ಬರೀ ತಲೆಯಲ್ಲಲ್ಲ, ಮೈಯಲ್ಲಿ ಇದೆ, ಕೈಯಲ್ಲಿ ಇದೆ, ಕಣ್ಣಲ್ಲಿ ಇದೆ, ಕಾಲಲ್ಲಿ ಇದೆ. ಈ ತಂತ್ರಜ್ಞಾನವೆಲ್ಲ ಬರೋದು ದೇಹದ ಒಳಗಿನ ಜ್ಞಾನದಿಂದ'. ಕುಶಲಕರ್ಮಿಗಳ ಜ್ಞಾನ ಬರಿಯ ಆಲೋಚನೆಗಳಿಂದ ಕಟ್ಟುವ ಜ್ಞಾನಕ್ಕಿಂತ ಕಡಿಮೆಯೇನಲ್ಲ. ಜ್ಞಾನ ಮತ್ತು ಕೌಶಲಗಳು ಅಭಿನ್ನವಾದ ಅರಿವನ್ನು ಇಂದಿನ ಶಿಕ್ಷಣವು ಕಟ್ಟಿಕೊಳ್ಳಬೇಕಿದೆ. ನಾವು ಸಂಗತಿಗಳನ್ನು 'ಕಾಣುವ' ನೋಟದಲ್ಲಾಗುವ ಪರಿವರ್ತನೆಯೇ ಜ್ಞಾನದ ಮೊದಲ ಮೆಟ್ಟಿಲಾಗಬೇಕು. ಆಗ ಜಗತ್ತು ಹೊಚ್ಚಹೊಸದಾಗಿ ಕಾಣತೊಡಗುತ್ತದೆ. ಜ್ಞಾನವು ಅಹಂಕಾರವಾಗದೇ ಅರಿವಾಗಿ ಪೊರೆಯುತ್ತದೆ.

ಚುರುಮುರಿ

ರಾಮನ್‌ಗಾಗಿ ಆಂದೋಲನ

• ಸುಧೀಂದ್ರ

'ಈ ಸಲಾನೂ ಪ್ರೊಮೋಷನ್ ಲಿಸ್ಟಲ್ಲಿ ನನ್ನ ಹೆಸ್ರು ಬರ್‍ಲಿಲ್ಲಾಂತ ಬೇಜಾರಾಗಿ ಆಫೀಸ್ಗೆ ಹೋಗ್ದೆ ಮನೇಲಿ ಕೂತಿದ್ದೆ. ಶಂಕ್ರ ಬಂದ. ವಿಷ್ಯ ತಿಳ್ದೋನೇ 'ಇದ್ಕೆಲ್ಲಾ ವರಿ ಮಾಡ್ಕೋಬೇಡ. ನನ್ನ ಹೆಂಡ್ತೀಗೂ ಅವಳಾಫೀಸ್ನಲ್ಲಿ ಪ್ರಮೋಷನ್ ಸಿಕ್ಕಿರ್ಲಿಲ್ಲ. ಕೊನೆಗೆ ಟೀವಿಯಲ್ಲಿ ಜನ್ಮಾಂತರ ರಹಸ್ಯಗಳನ್ನು ಬಿಡಿಸೋ ಗುರೂಜೀನ ಭೇಟಿ ಮಾಡಿದ್ವಿ. ಹಿಂದಿನ ಜನ್ಮದಲ್ಲಿ ಅವ್ಳು ಮಾಡಿದ್ದ ಯಾವ್ದೋ ಪಾಪಾನ ಅವ್ರು ಹುಡ್ಕಿ ತಕ್ಕ ಪ್ರಾಯಶ್ಚಿತ್ತ ಮಾಡ್ಸಿದ್ರು. ಅದಾದ ಆರು ತಿಂಗ್ಳಿಗೇ ಅವ್ಳಿಗೆ ಪ್ರಮೋಷನ್ ಬಂತು' ಎಂದ. ಸರಿ, ಒಂದು ಟ್ರಯಲ್ ಮಾಡ್ಬಿಡೋಣಾಂತ ಒಪ್ಕೊಂಡೆ.

ಅವ್ನೇ ಇನ್‌ಫ್ಲೂಯೆನ್ಸ್ ಮಾಡ್ಸಿ ಗುರೂಜಿಗಳ ಅಪಾಯಿಂಟ್‌ಮೆಂಟ್ ಕೊಡಿಸ್ದ. ಅವ್ರಿಗೆ ಪ್ರಾಬ್ಲಂ ಹೇಳ್ದೆ. ಫಸ್ಟ್ ರೌಂಡಲ್ಲಿ ನನ್ನ ಹಿಂದಿನ ಜನ್ಮಕ್ಕೆ ಅವ್ರು ಕರ್ಕೊಂಡೋದ್ರು. ಅಲ್ಲಿ ವಿಜ್ಞಾನಿ ಹೋಮಿ ಭಾಭಾ ಇದ್ರು. 'ನಿಮ್ಮ 'ಅಪ್ಸರಾ' ನೋಡಿ ಪಿ.ಎಂ. ಖುಷಿ ಪಟ್ರು. ಮುಂದಿನ ಅಟಾಮಿಕ್ ರಿಯಾಕ್ಟರ್‌ನೂ ಅವರಿಂದಲೇ ಬಿಲ್ಡ್ ಮಾಡ್ಸಿಂದ್ರು' ಅಂತ ಭಾಭಾ ನನ್ನ ಹೊಗಳಿದ್ರು.

'ಹೋದ ಜನ್ಮದಲ್ಲಿ ಯಾವ ಪಾಪಾನೂ ಸಿಕ್ಲಿಲ್ಲ' ಅಂದ್ರು ಗುರೂಜಿ. ನಿಮ್ಮ ಪಾಪಗಳನ್ನು ಹುಡುಕೋಕ್ಕೆ ಇನ್ನೂ ಒಂದು ಲೆವೆಲ್ ಹಿಂದೆ ಹೋಗಿ ನೋಡೋಣ' ಅಂದ್ರು. ಹ್ಞೂಂ ಅಂದ್ಕೊಡ್ಲೇ ನಾನು ಟಾಟಾ ಇನ್‌ಸ್ಟಿಟ್ಯೂಟಲ್ಲಿದ್ದೆ. ಅಲ್ಲಿ ಬ್ರಿಟಿಷ್ ಪ್ರೊಫೆಸರ್‌ಗಳ ಕಾಟದಿಂದ ಬೇಜಾರಾಗಿ ರಾಜೀನಾಮೆ ಕೊಡೋಕ್ಕೆ ಸಿ.ವಿ. ರಾಮನ್ ಸಿದ್ಧರಾಗಿದ್ರು. ರಾಮನ್ ಬಿಟ್ಹೋಗಬಾರದೂಂತ ನಂದೇ ನಾಯಕತ್ವದಲ್ಲಿ ಆಂದೋಲನ ಶುರುವಾಯ್ತು. ನನಗೆ ಜೈಲಾಯ್ತು. ರಾಮನ್ ಅಲ್ಲೇ ಉಳಿದ್ರು.

ಗುರೂಜಿಗೆ ನಿರಾಸೆಯಾಯ್ತು. ಅದಕ್ಕೂ ಹಿಂದಿನ ಜನ್ಮಕ್ಕೆ ಹೋಗೋಣಾಂದ್ರು. ಈಗ ಬೇಡಾಂತ ಕೈಕಾಲು ಒದರ್ಕೊಂಡು ವಾಪಸಾದೆ. 'ಹಿಂದಿನ ಜನ್ಮದಲ್ಲಿ ಕತ್ತೆಯಾಗಿದ್ರೀನ್ಸತ್ತೆ' ಅಂತ ಹೆಂಡತಿ ಬೈದ್ಕೊಡ್ಲೇ ಎಚ್ಚರವಾಯ್ತು. 'ನೆಮ್ಮದಿಯಾಗಿ ನಂಗೆ ನಿದ್ದೆ ಮಾಡೋಕ್ಕೂ ಬಿಡೋಲ್ವಲ್ರಿ. ಮುಂದಿನ ಜನ್ಮದಲ್ಲಿ ತಿಗಣೆಯಾಗಿ ಹುಟ್ತೀರಿ ನೀವು' ಅಂದ್ಲು ಸೀರಿಯಸ್ಸಾಗಿ.

ಸಂಗತ

ನೀರಿನ ಕಣಜ ಕಾಪಿಡೋಣ

ಇಚ್ಛಾಶಕ್ತಿಯಿದ್ದರೆ ಮನೆಮನೆಗಳಲ್ಲೂ ಬೇಸಿಗೆಯಲ್ಲಿ ಬಂಗಾರಕ್ಕಿಂತ ಅಮೂಲ್ಯವಾಗುವ ನೀರಿನ ಮರುಬಳಕೆ ಮಾಡಬಹುದು

• ಪ.ರಾಮಕೃಷ್ಣ ಶಾಸ್ತ್ರಿ

ಬೇಸಿಗೆ ಬಂದರೆ ನೆತ್ತಿ ಸುಡುವ ಬಿಸಿಲು ಎಲ್ಲ ಕಡೆ ಹಾಹಾಕಾರ ಉಂಟು ಮಾಡುತ್ತದೆ. ನದಿಗಳು ಬತ್ತಿಹೋಗುತ್ತವೆ. ಗ್ರಾಮ ಪಂಚಾಯಿತಿಗಳ ಕೊಳವೆ ಬಾವಿಗಳಿಂದ ನೀರೆತ್ತುವ ಕಾರ್ಯ ನಡೆಸಿದರೂ ಗ್ರಾಮಗಳ ನಿವಾಸಿಗಳಿಗೆ ಸಾಕೆನಿಸುವಷ್ಟು ನೀರು ಕೊಡಲಾಗದೆ ಸಿಬ್ಬಂದಿ ಪರಿತಪಿಸುತ್ತಾರೆ. ಇನ್ನೊಂದೆಡೆ, ಸರ್ಕಾರ ಉಚಿತವಾಗಿ ವಿದ್ಯುತ್ ಸೌಕರ್ಯ ನೀಡಿರುವ ಕಾರಣ, ಕೃಷಿಯ ಹೆಸರಿನಲ್ಲಿ ರಾತ್ರಿ ಹಗಲಿನ ಭೇದವರಿಯದೆ ನದಿಗಳು ಮತ್ತು ಕೊಳವೆಬಾವಿಗಳಿಂದ ನೀರು ಹರಿಸಿ ತೋಟಗಳನ್ನು ನೆನೆಸುವ ಕಾಯಕ ನಡೆಯುತ್ತದೆ.

ನೀರು ಸಿಗದವರು ಅನಿವಾರ್ಯವಾಗಿ ನೀರಿನ ಮಿತ ಬಳಕೆ ಮಾಡುತ್ತಿದ್ದರೆ ನೀರಿನ ಪೋಲು ಮಾಡುವವರಿಗೆ ಯಾವ ನೀತಿಪಾಠವೂ ಮನಃಪರಿವರ್ತನೆ ಮಾಡುವುದಿಲ್ಲ.

ಅಭಿವೃದ್ಧಿಶೀಲ ದೇಶಗಳ ಪಟ್ಟಣಗಳಲ್ಲಿ ಸ್ನಾನ, ಶೌಚ ಇತ್ಯಾದಿಗಳಿಗೆ ಉಪಯೋಗಿಸಿದ ನೀರು ಒಳಚರಂಡಿಗಳಲ್ಲಿ ಹರಿಯುತ್ತದೆ. ಶೇ 80ರಷ್ಟು ದೇಶಗಳು ಇದನ್ನು ನೇರವಾಗಿ ನೈಸರ್ಗಿಕ ಪರಿಸರಕ್ಕೆ ಹರಿಸಿಬಿಡುತ್ತವೆ ವಿನಾ ಇನ್ನೊಂದು ವಿಧದ ಸದ್ಬಳಕೆಯ ಕಡೆಗೆ ಚಿಂತನೆ ಮಾಡುವುದಿಲ್ಲ. ಆದರೆ ಎಷ್ಟೇ ನೀರಿನ ಅನುಕೂಲವಿದ್ದರೂ ನೀರಿನ ಮಿತ ಬಳಕೆ ಮಾಡುವುದು ಮಾತ್ರ ಭವಿಷ್ಯದ ದಿನಗಳಲ್ಲಿ ಅಂತರ್ಜಲದ ಸುರಕ್ಷಿತ ಠೇವಣಿಯನ್ನು ರಕ್ಷಿಸಬಹುದು ಎಂಬ ಕಾಳಜಿ ಇರುವವರಿಗೆ ಇಸ್ರೇಲ್ ಮತ್ತು ಕತಾರ್ ದೇಶಗಳು ಮಾದರಿಯಾಗುವ ಯೋಜನೆ ರೂಪಿಸಿವೆ.

ಕತಾರ್ ಪುಟ್ಟ ದೇಶವಾದರೂ ತನ್ನಲ್ಲಿರುವ ತೈಲ ಸಂಪತ್ತಿನ ಕಾರಣದಿಂದಾಗಿ ಸಿರಿವಂತಿಕೆಯಿಂದ ಮೆರೆಯುತ್ತಿದೆ. ಅಲ್ಲಿ ಕುಡಿಯುವ ನೀರು ಪೆಟ್ರೋಲಿಗಿಂತ ಹೆಚ್ಚು ಬೆಲೆ ಬಾಳುತ್ತದೆ. ಸಮುದ್ರದ ನೀರಿನಿಂದ ಲವಣಾಂಶವನ್ನು ಪ್ರತ್ಯೇಕಿಸಿ ಸಿಹಿನೀರನ್ನಾಗಿ ಬದಲಾಯಿಸಲು ಪ್ರತಿಯೊಂದು ಲೀಟರ್ ನೀರು ಕೂಡ ಗಮನಾರ್ಹ ಪ್ರಮಾಣದ ವಿದ್ಯುತ್ ಬಳಸಿಕೊಳ್ಳಬೇಕಾಗಿದೆ. ಒಬ್ಬ ಕತಾರ್ ಪ್ರಜೆ ದಿನವೊಂದರಲ್ಲಿ ಬಳಸುವ ಸರಾಸರಿ ನೀರಿನ ಪ್ರಮಾಣ 400 ಲೀಟರ್‌ಗಳಷ್ಟಿದೆ. ವರ್ಷದಲ್ಲಿ 24 ದಶಲಕ್ಷ ಕ್ಯೂಬಿಕ್ ಮೀಟರ್ ಪ್ರಮಾಣದ ನೀರು ಒಳಚರಂಡಿಗಳಲ್ಲಿ ಹರಿಯುತ್ತದೆ.

ಬಳಸಿದ ಈ ನೀರನ್ನು ಏನು ಮಾಡೋಣ? ಸಮುದ್ರಕ್ಕೆ ಹರಿಸಿದರೆ ಜಲಚರಗಳಿಗೆ ಅಹಿತಕರ, ದುರ್ಗಂಧಯುಕ್ತವಾಗಿರುತ್ತದೆ. ಜಪಾನಿನ ತಂತ್ರಜ್ಞರ ನೆರವಿನಿಂದ ಕತಾರ್ ಇಷ್ಟು ನೀರನ್ನೂ ತೊಟ್ಟಿಗಳಲ್ಲಿ ಸಂಗ್ರಹವಾಗುವಂತೆ ಮಾಡಿ ಯಾಂತ್ರೀಕೃತ ವ್ಯವಸ್ಥೆಯಲ್ಲಿ ಶುದ್ಧೀಕರಣಗೊಳಿಸುತ್ತದೆ. ಪರಿಶುದ್ಧಗೊಂಡ ಬಳಿಕ ಶೇ 47ರಷ್ಟು ಪ್ರಮಾಣದ ನೀರನ್ನು ಕೃಷಿಕ್ಷೇತ್ರಕ್ಕೆ ಉಪಯೋಗಿಸುತ್ತದೆ. ಉದ್ಯಾನಗಳು, ಅರಣ್ಯಗಳು ಮತ್ತು ಹಸಿರು ಮನೆಗಳಲ್ಲಿ ಕೃಷಿ ಸಂಪನ್ನವಾಗುವುದು ಇದೇ ನೀರಿನಿಂದ. ಖರ್ಜೂರ, ಕಲ್ಲಂಗಡಿ, ಟೊಮ್ಯಾಟೊ, ಬಿಳಿ ಬದನೆ ಮತ್ತು ಸ್ಕ್ವಾಷ್ ವ್ಯವಸಾಯ ಮಾಡಿ ದೇಶಕ್ಕೆ ಬೇಕಾದಷ್ಟು ಉಪಯೋಗಿಸಿ, ನೆರೆಯ ಕೊಲ್ಲಿ ರಾಷ್ಟ್ರಗಳಿಗೂ ರಫ್ತು ಮಾಡುವ ಮೂಲಕ ಶುದ್ಧೀಕರಣದ ವಿದ್ಯುತ್ ವೆಚ್ಚವನ್ನು ಪೂರ್ಣವಾಗಿ ಸಂಪಾದಿಸಿ ಲಾಭವನ್ನೂ ಪಡೆಯಲಾಗುತ್ತಿದೆ. ರಾಜಧಾನಿ ದೋಹಾದ ಒಳಚರಂಡಿಗಳು, ಕೈಗಾರಿಕಾ ಪ್ರದೇಶಗಳ ತ್ಯಾಜ್ಯನೀರು ಮರುಭೂಮಿಯಲ್ಲಿ ಹಸಿರಿನ ನಂದನ ಬೆಳೆಸಲು ಬಳಕೆಯಾಗುತ್ತಿದೆ.

ಮರುಭೂಮಿಯಲ್ಲಿ ಮಾಡುವ ಕೃಷಿಯ ಮೂಲಕ ದೇಶದ ಆದಾಯದಲ್ಲಿ ಬಹು ದೊಡ್ಡ ಪಾಲು ಗಳಿಸುತ್ತಿರುವ ಇಸ್ರೇಲ್ ಕೂಡ ನೀರಿನ ಮಿತ ಬಳಕೆಗೆ ಪ್ರಸಿದ್ಧಿ ಗಳಿಸಿದೆ. ಅಲ್ಲಿ ಸಾರ್ವಜನಿಕರಿಗೆ ನಗರ ಆಡಳಿತ ಒದಗಿಸುವ ನೀರಿನಲ್ಲಿ ಶೇ 80ರಷ್ಟನ್ನು ತ್ಯಾಜ್ಯನೀರಿನ ರೂಪದಲ್ಲಿ ಮರಳಿ ಕೊಡದಿದ್ದರೆ ದಂಡನಾರ್ಹವಾಗುತ್ತದೆ. ಈ ನೀರನ್ನು ಶುದ್ಧೀಕರಣಗೊಳಿಸಿ ಬೆಳೆಯುವ ಹಣ್ಣು ಮತ್ತು ತರಕಾರಿಗಳನ್ನು ಇಸ್ರೇಲ್ ವಿದೇಶಗಳಿಗೂ ರಫ್ತು ಮಾಡುವುದಲ್ಲದೆ ಬಳಸಿದ ನೀರಿನ ಮರುಬಳಕೆಯ ಮೂಲಕವೂ ಗಮನ ಸೆಳೆಯುತ್ತದೆ.

ಹೀಗೆಂದು ತ್ಯಾಜ್ಯ ನೀರನ್ನು ಸಂಸ್ಕರಿಸಿ ಮರುಬಳಕೆ ಮಾಡುವ ತಂತ್ರ ಭಾರತಕ್ಕೆ ಹೊಸದಂತೂ ಅಲ್ಲ. ಸ್ನಾನದ ನೀರನ್ನು ನೇರವಾಗಿ ತೆಂಗು ಮತ್ತು ತೊಂಡೆಕೃಷಿಯ ಹೊಂಡಕ್ಕೆ ಹರಿಸಿದರೆ ಯಾವ ಗೊಬ್ಬರವನ್ನೂ ಹಾಕದೆ ಧಾರಾಳವಾಗಿ ಕಾಯಿಗಳನ್ನು ಕೊಯ್ಯಬಹುದೆಂಬುದನ್ನು ಕರಾವಳಿಯ ರೈತರು ಬಹು ಹಿಂದಿನಿಂದಲೇ ಅರಿತವರು. ದಕ್ಷಿಣ ಕನ್ನಡದ ಅಡ್ಯನಡ್ಕದಂತಹ ಪುಟ್ಟ ಊರಲ್ಲಿರುವ ಸಾವಯವ ಕೃಷಿಕ ವಾರಾಣಸಿ ಕೃಷ್ಣಮೂರ್ತಿ ತ್ಯಾಜ್ಯ ನೀರಿನ ಸಂಸ್ಕರಣೆಗೊಂದು ಮಾದರಿಯಾದದ್ದು ಒಂದು ದಶಕಕ್ಕೂ ಹಿಂದೆ. ಹಾಗೆಯೇ ಧರ್ಮಸ್ಥಳ ಕ್ಷೇತ್ರದಲ್ಲಿ ದಿನಕ್ಕೆ 30 ಲಕ್ಷ ಲೀಟರ್ ಪ್ರಮಾಣದ ತ್ಯಾಜ್ಯ ನೀರು ಒಳಚರಂಡಿಗಳಲ್ಲಿ ಹರಿಯುತ್ತದೆ. ಯಾಂತ್ರಿಕ ವಿಧಾನದಿಂದ ಇದನ್ನು ಸ್ಫಟಿಕಸದೃಶ ಶುದ್ಧ ನೀರನ್ನಾಗಿ ಪರಿವರ್ತಿಸುವ ಕಾಯಕ ಹಗಲಿರುಳೂ ನಡೆಯುತ್ತದೆ. ಸುಮಾರು ಎಂಬತ್ತು ಎಕರೆ ವಿಸ್ತಾರದ ಅಡಿಕೆತೋಟಕ್ಕೆ ಹನಿ ನೀರಾವರಿಯಾಗಿ ಜೀವದಾಯಿಯಾಗಿ ಪೊರೆಯುತ್ತಿರುವುದು ಇದೇ ನೀರು.

ಶುದ್ಧೀಕರಣಕ್ಕೊಳಗಾದ ನೀರಿನಿಂದ ಬೇರ್ಪಡಿಸಿದ ತ್ಯಾಜ್ಯ ಒಂದು ಅತ್ಯುತ್ತಮ ಸಾವಯವ ಗೊಬ್ಬರವಾಗಿರುವುದರಿಂದ ಅದನ್ನು ಬಳಸಿ ಸಮೃದ್ಧವಾಗಿ ಬೆಳೆಯುವ ರಸಮೇವಿನ ಹುಲ್ಲು ಗೋಶಾಲೆಯ ಹಸುಗಳಿಗೆ ಆಹಾರವಾಗುತ್ತದೆ.

ಇಚ್ಛಾಶಕ್ತಿಯಿದ್ದರೆ ಮನೆಮನೆಗಳಲ್ಲೂ ಬೇಸಿಗೆಯಲ್ಲಿ ಬಂಗಾರಕ್ಕಿಂತ ಅಮೂಲ್ಯವಾಗುವ ನೀರಿನ ಮರುಬಳಕೆ ಮಾಡಬಹುದು. ಇಂದು ನಾವು ಮಿತವಾಗಿ ನೀರನ್ನು ಬಳಸಿ ಅದನ್ನು ಮತ್ತೊಮ್ಮೆ ಉಪಯೋಗಿಸುವ ಮೂಲಕ ಇತರರಿಗೂ ಪಾಠವಾಗಬಹುದು, ನೀರಿನ ಕಣಜವನ್ನು ಕಾಪಿಡಬಹುದು.

ವಾಚಕರ ವಾಣಿ

ಹಣ ದೋಚುವ ತಂತ್ರಗಾರಿಕೆಯೇ?

ರಾಜ್ಯದ 17 ನದಿಗಳು ಕಲುಷಿತವಾಗಿದ್ದು ದೇಶದಾದ್ಯಂತ ಇದೇ ಬಗೆಯಲ್ಲಿ 300ಕ್ಕೂ ಹೆಚ್ಚು ನದಿಗಳು ಕಲುಷಿತವಾಗಲು ಒಳಚರಂಡಿ ಮತ್ತು ಕೈಗಾರಿಕೆ ತ್ಯಾಜ್ಯ ಕಾರಣ ಎಂದು ಕೇಂದ್ರ ಜಲಶಕ್ತಿ ಸಚಿವಾಲಯ ತಿಳಿಸಿದೆ. ಸಾಹಿತಿ ಪೂರ್ಣಚಂದ್ರ ತೇಜಸ್ವಿ ಅವರು ಹೇಳಿರುವಂತೆ, ನಾವು ಎಂತಹ ಪ್ರಜಾಪ್ರಭುತ್ವ ಮತ್ತು ಅಧಿಕಾರಿಗಳನ್ನು ಸೃಷ್ಟಿಸಿದ್ದೇವೆ ಎಂದರೆ, ಎಂತಹ ಭೀಕರ ಅನಾಹುತವಾದರೂ (ನದಿ ಮಾಲಿನ್ಯ) ಅವರು ಅದರ ಲಾಭ ಪಡೆಯುತ್ತಾರೆ. ನದಿ ಮಾಲಿನ್ಯ ಮಾಡಲು ಒಳಚರಂಡಿ ಎಂಬ ರಾಕ್ಷಸನನ್ನು ಸೃಷ್ಟಿಸಿ ನಿರಂತರವಾಗಿ ಕೋಟ್ಯಂತರ ರೂಪಾಯಿ ದೋಚುತ್ತಾರೆ. ನದಿ ನೀರಿನ ಮಾಲಿನ್ಯ ತೊಳೆಯಲು ಇನ್ನೊಬ್ಬ ರಾಕ್ಷಸನಿಂದ ಕೋಟ್ಯಂತರ ರೂಪಾಯಿ ಲೂಟಿಯಾಗುತ್ತದೆ. ಕೋಟ್ಯಂತರ ಜನರ ಮಲ– ಮೂತ್ರ, ಕಾರ್ಖಾನೆ ತ್ಯಾಜ್ಯದಿಂದ ಮಲಿನವಾದ ನದಿಗಳ ನೀರನ್ನು ಜನರು ಬಳಕೆ ಮಾಡುತ್ತಿರುವುದು ಶೋಚನೀಯ. ದೇಶದಲ್ಲಿರುವ ಸಾವಿರಾರು ಬುದ್ಧಿಜೀವಿಗಳು ಹಾಗೂ ವಿಜ್ಞಾನಿಗಳಿಗೆ ನದಿ ಮಾಲಿನ್ಯಕ್ಕೆ ಪರಿಹಾರ ತಿಳಿದಿಲ್ಲವೇ? ಒಳಚರಂಡಿಗೆ ಪರ್ಯಾಯ ಸಂಶೋಧನೆ ಮಾಡಿಲ್ಲವೇ? ಉಚಿತ ಜಲಮೂಲಗಳನ್ನು ಮಲಿನ ಮಾಡಿ ನೀರಿಗೆ ಹಾಹಾಕಾರ ಸೃಷ್ಟಿಸಿ ಹಣ ದೋಚುವ ತಂತ್ರಗಾರಿಕೆಯೇ?

ಮಹಾತ್ಮ ಗಾಂಧಿ ಅವರ ಸಲಹೆಯಂತೆ, ಮನೆಗೆ ಎರಡು ಇಂಗು ಗುಂಡಿಗಳ ವ್ಯವಸ್ಥೆ ಮಾಡಿ, ಅದರಲ್ಲಿ ಬರುವ ಮಲ– ಮೂತ್ರವನ್ನು ಜೈವಿಕ ಅನಿಲ ಯಂತ್ರಕ್ಕೆ ಸೇರಿಸಿ ಉಚಿತ ಇಂಧನ ಪಡೆದು, ನಂತರ ಇಂಗು ಗುಂಡಿಗೆ ಸೇರಿಸಿದರೆ ಅಮೂಲ್ಯವಾದ ಸಾವಯವ ಗೊಬ್ಬರ ದೊರೆತು, ನದಿ ಮಾಲಿನ್ಯವನ್ನು ಅದು ತಡೆಯುತ್ತದೆ.

ಡಾ. ಎಚ್.ಆರ್.ಪ್ರಕಾಶ್, ಮಂಡ್ಯ

ಕನಕ ಕೇಂದ್ರ: ನಡೆಯಲಿ ಕಾರ್ಯಕ್ರಮ

ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಕೇಂದ್ರದಿಂದ ಕಾಗಿನೆಲೆಯನ್ನು ಕೇಂದ್ರವಾಗಿಟ್ಟು ಯಾವುದೇ ಕಾರ್ಯಕ್ರಮ ನಡೆದಂತಿಲ್ಲ. ಕಾಗಿನೆಲೆ ಸೇರಿದಂತೆ ರಾಜ್ಯದ ಯಾವುದೇ ಭಾಗದಲ್ಲಿ ರಾಜ್ಯ ಮಟ್ಟದಲ್ಲಿ ಕನಕದಾಸರ ಕೀರ್ತನೆ, ಕೃತಿಗಳ ಕುರಿತಂತೆ ಚರ್ಚೆಯಾಗಲೀ ಸಂವಾದಗಳಾಗಲೀ ಕಾವ್ಯ-ಕಮ್ಮಟಗಳಾಗಲೀ ಒಂದೆರಡು ವರ್ಷಗಳಿಂದ ನಡೆದಿಲ್ಲ. ಕನಕದಾಸರ ಕೃತಿಗಳ ಓದು, ಅರ್ಥೈಸುವಿಕೆಯಂತಹ ಕಾರ್ಯಕ್ರಮಗಳು ನಾಡಿನ ಯುವ ಬರಹಗಾರರು ಸೇರಿದಂತೆ, ಪದವಿ ವಿದ್ಯಾರ್ಥಿಗಳಿಗೆ ಬಹಳಷ್ಟು ಅವಶ್ಯಕ. ಈ ದಿಸೆಯಲ್ಲಿ 'ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಕೇಂದ್ರ'ದ ಸಮನ್ವಯಕಾರರು ಅಥವಾ ಅಧ್ಯಕ್ಷರು ಚಿಂತಿಸಿ ಕನಕದಾಸರ ಕೃತಿಗಳ ಕುರಿತು ಹೆಚ್ಚು ಹೆಚ್ಚು ಚರ್ಚಿಸುವ, ಮರು ಓದನ್ನು ಮಾಡುವ, ಅವರ ಕೃತಿಗಳಲ್ಲಿರುವ ಜೀವನ ಮೌಲ್ಯಗಳನ್ನು ಜನಸಾಮಾನ್ಯರಿಗೆ ತಿಳಿಸುವ ಕಾರ್ಯಕ್ರಮಗಳನ್ನು ಕನಕದಾಸ ಅಧ್ಯಯನ ಕೇಂದ್ರದಿಂದ ಮಾಡಬೇಕಾಗಿದೆ.

ಕೋವಿಡ್‌ನಂತಹ ದುರಿತ ಕಾಲದಲ್ಲಿಯೂ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕಾವ್ಯ-ಕಮ್ಮಟ, ಹಳೆಗನ್ನಡ ಓದು, ಕಥಾ ಕಮ್ಮಟ, ವಿಜ್ಞಾನ ಕಮ್ಮಟ, ಅಡಿಗರ ಜನ್ಮಶತಮಾನೋತ್ಸವ ವಿಚಾರ ಸಂಕಿರಣ... ಹೀಗೆ ಹತ್ತಾರು ಕಾರ್ಯಕ್ರಮಗಳನ್ನು ಏರ್ಪಡಿಸುವ ಮೂಲಕ ನಾಡಿನ ಯುವ ಬರಹಗಾರರನ್ನು ಮತ್ತಷ್ಟು ಕ್ರಿಯಾಶೀಲರಾಗಿರುವಂತೆ ಮಾಡಿದೆ. ಆದರೆ, ಮೌಢ್ಯಗಳು, ಕಂದಾಚಾರಗಳು, ಕುಲದ ತಾರತಮ್ಯದ ಕುರಿತಂತೆ ಸಾತ್ವಿಕ ಪ್ರತಿರೋಧ ಒಡ್ಡಿದ ಕನಕದಾಸರ ಅಧ್ಯಯನ ಕೇಂದ್ರದಿಂದ ಕಾರ್ಯಕ್ರಮಗಳು ನಡೆಯದಿರುವುದು ಬರಹಗಾರರು ಮತ್ತು ಓದುಗರಿಗೆ ನೋವನ್ನು ತಂದಿದೆ.

ಮಲ್ಲಪ್ಪ ಫ. ಕರೇಣ್ಣನವರ, ಮೋಟೆಬೆನ್ನೂರು, ಬ್ಯಾಡಗಿ

ತಲೆಬಾಗುವ ಧೋರಣೆಯಿಂದ ಅಸ್ಮಿತೆಗೆ ಸವಾಲು

ರಾಜ್ಯಗಳ ವಿಚಾರದಲ್ಲಿ ಕೇಂದ್ರ ಹಸ್ತಕ್ಷೇಪ ನಡೆಸುತ್ತಿದೆ ಎಂಬ ಕಾನೂನು ಸಚಿವ ಮಾಧುಸ್ವಾಮಿ ಅವರ ಹೇಳಿಕೆಗೆ ಸಂಸದ ತೇಜಸ್ವಿ ಸೂರ್ಯ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಒಂದು ವೇಳೆ ರಾಜ್ಯದಲ್ಲಿ ಬೇರೆ ಪಕ್ಷದ ನೇತೃತ್ವದ ಸರ್ಕಾರವಿದ್ದು ಅದರ ಸಚಿವರಾಗಿ ಮಾಧುಸ್ವಾಮಿಯವರು ಇದೇ ಮಾತುಗಳನ್ನು ಹೇಳಿದ್ದರೆ, ಅದರಲ್ಲಿ ಸತ್ಯಾಂಶ ಇದ್ದರೂ ತೇಜಸ್ವಿ ತಮ್ಮ ಪಕ್ಷದ (ಬಿಜೆಪಿ) ನೇತೃತ್ವದ ಕೇಂದ್ರ ಸರ್ಕಾರದ ಪರವಾಗಿಯೇ ಮಾತನಾಡುವುದನ್ನು ಅರ್ಥಮಾಡಿಕೊಳ್ಳಬಹುದಿತ್ತು! ಯಾಕೆಂದರೆ, ರಾಜಕೀಯ ಪಕ್ಷಗಳ ವಿದ್ಯಮಾನಗಳು ಇಂದು ಸೃಷ್ಟಿಸಿರುವುದು ಇಂಥ ವಾತಾವರಣವನ್ನೇ!

ನೀಟ್, ಉತ್ತರ ಭಾರತದವರಿಗೆ ಇಲ್ಲಿ ಪ್ರವೇಶಾವಕಾಶ, ಬಹುರಾಷ್ಟ್ರೀಯ ಕಂಪನಿಗಳಲ್ಲಿ ಕನ್ನಡಿಗರಿಗೆ ಉದ್ಯೋಗಾವಕಾಶ ಇಲ್ಲದಿರುವುದು, ಒರಾಕಲ್ ಕಂಪನಿಯಲ್ಲಿನ ಅನುಭವ, ತುಮಕೂರಿನಲ್ಲಿ ಕಾರಿಡಾರ್ ಸ್ಥಾಪನೆಯಾದರೂ ಕನ್ನಡಿಗರಿಗೆ ಉದ್ಯೋಗದಲ್ಲಿ ವಂಚನೆ, ಪ್ರಧಾನಿ ಉದ್ಘಾಟಿಸಿದ ಫುಡ್ ಪಾರ್ಕಿನಲ್ಲಿ ಸ್ಥಳೀಯರಿಗೆ ಕೆಲಸ ಕೊಟ್ಟಿಲ್ಲದಿರುವುದು ಈ ಸಂಗತಿಗಳನ್ನು ಪ್ರಸ್ತಾಪ ಮಾಡಿರುವವರು, ತಮ್ಮ ಪಕ್ಷದವರೇ ಆದ, ಹೊಣೆಗಾರಿಕೆ ಇರುವ ಕಾನೂನು ಸಚಿವರೇ, ಅದೂ ಸಾರ್ವಜನಿಕ ವೇದಿಕೆಯ ಮೇಲಿಂದ ಎನ್ನುವುದನ್ನು ತೇಜಸ್ವಿ ಅವರು ಮರೆಯಬಾರದಿತ್ತು. ಕೇಂದ್ರ ಸರ್ಕಾರ ಮಾಡುವುದೆಲ್ಲವೂ ಪ್ರಶ್ನಾತೀತ ಎಂದು ತಲೆಬಾಗುವ ಧೋರಣೆ ಸಂಸದರ ಅಸ್ಮಿತೆಗೇ ಸವಾಲಾಗುತ್ತದೆ. ವಿವಿಧ ರಾಜ್ಯಗಳಲ್ಲಿರುವ ಕೇಂದ್ರೀಯ ಶಿಕ್ಷಣ ಸಂಸ್ಥೆಗಳಲ್ಲಿ ಅರ್ಜಿ ಸಲ್ಲಿಸಬಹುದು ಎನ್ನುವ ಅವರ ಧೋರಣೆಯೇ ಅತಂತ್ರದ್ದು. ಕನ್ನಡಿಗರಿಗೆ ಕರ್ನಾಟಕದಲ್ಲೇ ನೆಲೆ ಬೇಡವೇ ಹಾಗಾದರೆ? ಖಾಸಗಿ ಉದ್ದಿಮೆದಾರರು ಬಂಡವಾಳ ಹಾಕಿ ದೇಶವನ್ನು ಸಂಪದ್ಭರಿತವನ್ನಾಗಿ ಮಾಡುತ್ತಾರೆ ಎನ್ನುವ ಮಾತುಗಳನ್ನಾಡುವಾಗ, ಸಂಪತ್ತು ಸೃಷ್ಟಿ ಮಾಡುವವರು ಸ್ಥಳೀಯರನ್ನು ನಿರಾಕರಿಸುವಂತಾದರೆ ಹೇಗೆ ಎನ್ನುವುದನ್ನೂ ಮರೆಯಬಾರದು. ಈಗ ಆಗಿರುವುದು ಇದೇ ತಾನೆ!

ಈ ಹಿಂದೆ ಗ್ರಾಮೀಣ ಬ್ಯಾಂಕುಗಳ ಹುದ್ದೆಗಳನ್ನು ಕರ್ನಾಟಕದವರಲ್ಲದವರೇ ಹೆಚ್ಚಿನ ಸಂಖ್ಯೆಯಲ್ಲಿ ಪಡೆದುಕೊಂಡದ್ದು ಮಾಧ್ಯಮಗಳಲ್ಲಿ ಪ್ರಕಟಗೊಂಡು ರಂಪವಾಯಿತು. ಈಗೇನಾದರೂ ಪರಿಸ್ಥಿತಿ ಸುಧಾರಿಸಿದೆಯೇ? ರಾಜ್ಯದ 28 ಸಂಸದರಲ್ಲಿ 25 ಮಂದಿ ಬಿಜೆಪಿಯವರು. ರಾಜ್ಯಸಭೆಗೆ ಕರ್ನಾಟಕದಿಂದ ಆಯ್ಕೆಯಾದವರು ಕೇಂದ್ರದಲ್ಲಿ ಹಣಕಾಸು ಸಚಿವೆಯಾಗಿದ್ದಾರೆ. ರಾಜ್ಯದ ಹಿತಾಸಕ್ತಿಗೆ, ಕನ್ನಡಿಗರ ಹಿತಾಸಕ್ತಿಗೆ ಈ ಮುಖಂಡರು ಮಾಡುತ್ತಿರುವುದೇನು, ಸಾಧಿಸಿರುವುದೇನು ಎನ್ನುವ ಬಗ್ಗೆ ವಿವರಗಳನ್ನು ರಾಜ್ಯದ ಜನರ ಮುಂದೆ ಇಡುವ ಔದಾರ್ಯವನ್ನಾದರೂ ಇವರು ತೋರುವರೇ?

ಸಾಮಗ ದತ್ತಾತ್ರಿ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಜಲವಿವಾದ

ಕಾನೂನು ನದಿಕಣಿವೆಯ ಕೆಳಭಾಗದ ರಾಜ್ಯಗಳ ಪರ

• ಸಿದ್ದಯ್ಯ ಹಿರೇಮಠ

ಕಾವೇರಿ ನದಿಯಲ್ಲಿ ಹೆಚ್ಚುವರಿ 92 ಟಿಎಂಸಿ ನೀರು ಲಭ್ಯವಿದೆ ಎಂದು ಅಂದಾಜಿಸಿ ಕರ್ನಾಟಕವು ಮೇಕೆದಾಟು ಯೋಜನೆ ಹಮ್ಮಿಕೊಂಡಿದೆ. ಇದೇ ನೀರನ್ನು ನೆಚ್ಚಿಕೊಂಡು ತಮಿಳುನಾಡು ಕೂಡ ನದಿ ಜೋಡಣೆ ಯೋಜನೆಗೆ ಮುಂದಾಗಿದೆ. ಇದು ಎರಡು ರಾಜ್ಯಗಳ ನಡುವೆ ವಿವಾದಕ್ಕೆ ಕಾರಣವಾಗಿದೆ ಎಂದು ಕಾವೇರಿ ನೀರು ಹಂಚಿಕೆ ವಿವಾದದಲ್ಲಿ ಕರ್ನಾಟಕದ ಪರವಾಗಿ ಸುಪ್ರೀಂ ಕೋರ್ಟ್‌ನಲ್ಲಿ ವಾದಿಸಿದ್ದ ವಕೀಲ ಮೋಹನ್ ಕಾತರಕಿ ಪ್ರಜಾವಾಣಿ ಸಂದರ್ಶನದಲ್ಲಿ ಹೇಳಿದ್ದಾರೆ

• ಕಾವೇರಿಯ ಹೆಚ್ಚುವರಿ ನೀರನ್ನು ಬಳಸಿಕೊಳ್ಳುವ ದಿಸೆಯಲ್ಲಿ ಇದೀಗ ಮತ್ತೆ ಕರ್ನಾಟಕ ಮತ್ತು ತಮಿಳುನಾಡು ನಡುವೆ ವಿವಾದ ಸೃಷ್ಟಿಯಾಗಿದೆಯಲ್ಲ?

ಬ್ರಿಟಿಷರು ಮತ್ತು ಮೈಸೂರು ಮಹಾರಾಜರ ನಡುವೆ 1892 ಮತ್ತು 1924ರಲ್ಲಿ ನಡೆದ ಐತಿಹಾಸಿಕ ಒಪ್ಪಂದದಿಂದಾಗಿ ಕಾವೇರಿ ನೀರಿನ ವಿವಾದ ಸಂಕೀರ್ಣವಾಗಿದೆ. ಕಾವೇರಿ ಕಣಿವೆಯು ನೈರುತ್ಯ ಮತ್ತು ಈಶಾನ್ಯ ಮಾರುತಗಳು ಸುರಿಸುವ ಮಳೆಯನ್ನೇ ಆಶ್ರಯಿಸಿದ್ದು, ತಮಿಳುನಾಡಿನ ವಿಭಿನ್ನ ಬೆಳೆ ವಿಧಾನ ಮತ್ತು ಕರ್ನಾಟಕದ ಬರಪೀಡಿತ ಪ್ರದೇಶಗಳ ಅಗತ್ಯಗಳನ್ನು ಪೂರೈಸುತ್ತಿದೆ. ಕಾವೇರಿ ಜಲವಿವಾದ ನ್ಯಾಯಮಂಡಳಿಯ ಐತೀರ್ಪನ್ನು ಭಾಗಶಃ ಸರಿಪಡಿಸಿರುವ ಸುಪ್ರೀಂ ಕೋರ್ಟ್, ಕಾವೇರಿ ಜಲಾನಯನ ಪ್ರದೇಶದಲ್ಲಿ ಲಭ್ಯವಿರುವ ಪೈಕಿ 483 ಟಿಎಂಸಿ ಅಡಿ ನೀರನ್ನು ಕಣಿವೆ ರಾಜ್ಯಗಳಿಗೆ ಹಂಚಿಕೆ ಮಾಡಿದೆ. ತಮಿಳುನಾಡಿನಲ್ಲಿ ನಿರ್ಮಿಸಲಾದ ಕಡೆಯ ಆಣೆಕಟ್ಟೆವರೆಗಿನ ಕಾವೇರಿ ಜಲಾನಯನ ಪ್ರದೇಶದಲ್ಲಿ ವಾರ್ಷಿಕ 740 ಟಿಎಂಸಿ ಅಡಿ ನೀರು ಲಭ್ಯವಿದೆ ಎಂದು ಅಂದಾಜಿಸಲಾಗಿದೆ. ತಮಿಳುನಾಡಿನ ಪಾಲಿನ ನೀರು ಹರಿದ ಬಳಿಕ ಒಟ್ಟು 92 ಟಿಎಂಸಿ ಅಡಿ ಹೆಚ್ಚುವರಿ ನೀರು ಲಭ್ಯವಿದೆ ಎಂದು ಅಂದಾಜಿಸಿರುವ ಕರ್ನಾಟಕ ಕೈಗೆತ್ತಿಕೊಂಡ ಯೋಜನೆಗಳು ಪೂರ್ಣಗೊಳ್ಳದ್ದರಿಂದ ಪ್ರಸ್ತುತ ತಮಿಳುನಾಡಿನ ಮೆಟ್ಟೂರು ಜಲಾಶಯದತ್ತ ಹೆಚ್ಚುವರಿ ನೀರು ಹರಿಯುತ್ತಿದೆ. ದಕ್ಷಿಣ ವೆಲ್ಲಾರು ಜಲಾನಯನ ಪ್ರದೇಶದವರೆಗೆ ಕಾಲುವೆ ನಿರ್ಮಿಸಿ ವಾರ್ಷಿಕ 45 ಟಿಎಂಸಿ ಅಡಿ ನೀರು ಬಳಸಲು ಪ್ರಯತ್ನಿಸುತ್ತಿರುವ ತಮಿಳುನಾಡು ಆರಂಭಿಸಿರುವ ₹ 6,500 ಕೋಟಿ ವೆಚ್ಚದ ನದಿ ಜೋಡಣೆ ಯೋಜನೆ ಸಾಕಾರಗೊಂಡಲ್ಲಿ ಈ ನೀರನ್ನೇ ನೆಚ್ಚಿ ಕರ್ನಾಟಕ ಕೈಗೆತ್ತಿಕೊಂಡ ಯೋಜನೆಗಳಿಗೆ ತಮಿಳುನಾಡು ಸಹಜವಾಗಿಯೇ ಅಡ್ಡಿ ಉಂಟುಮಾಡಲಿದೆ. ಕರ್ನಾಟಕವೂ ನದಿ ಜೋಡಣೆ ವಿರೋಧಿಸುತ್ತಿದ್ದು, ವಿವಾದ ಮತ್ತೆ ಸೃಷ್ಟಿಯಾಗಿದೆ.

ಪ್ರಜಾವಾಣಿ ಸಂದರ್ಶನ

ಮೋಹನ ಕಾತರಕಿ

• ಕಾವೇರಿ ನೀರು ಹಂಚಿಕೆ ಹೋರಾಟದಲ್ಲಿ ಭಾಗಶಃ ಯಶಸ್ಸನ್ನು ಕಂಡಿರುವ ಕರ್ನಾಟಕ, ನೀರನ್ನು ಸಮರ್ಪಕವಾಗಿ ಬಳಸಿಕೊಳ್ಳಲು ವಿಳಂಬ ಮಾಡಿತೇ?

ಹೌದು. ಕಾವೇರಿ ಜಲವಿವಾದದಲ್ಲಿ ನಮಗೆ ಖಂಡಿತ ಯಶಸ್ಸು ದೊರೆತಿದೆ. ತಾಂತ್ರಿಕ ತಂಡ ಮತ್ತು ಸರ್ಕಾರದ ಬೆಂಬಲದೊಂದಿಗೆ ಕಾನೂನು ತಂಡ ಯಶಸ್ಸನ್ನು ಪಡೆದಿದೆ. ನೈಲ್‌ನಿಂದ ಮೆಕಾಂಗ್‌ವರೆಗೆ ಪ್ರಪಂಚದಾದ್ಯಂತದ ಮಹತ್ವದ ಜಲಾನಯನ ಪ್ರದೇಶಗಳಿಗೆ ಸಂಬಂಧಿಸಿದ, ಸುದೀರ್ಘ 50,000 ಪುಟಗಳಷ್ಟು ದಾಖಲೆಗಳ ಅಧ್ಯಯನ ನಡೆಸಿ ವಾದ ಮಂಡಿಸಲಾಯಿತು. ಇಂಥ ಅಮೋಘ ಪ್ರಯತ್ನವನ್ನು ದಾಖಲಿಸುವ ಅಗತ್ಯವಿದೆ. ಹಂಚಿಕೆಯಾದ ಹಾಗೂ ಹೆಚ್ಚುವರಿ ಕಾವೇರಿ ನೀರನ್ನು ಬಳಸುವ ನಿಟ್ಟಿನಲ್ಲಿ ಸರ್ಕಾರ ಯೋಜನೆ ರೂಪಿಸಿದೆ. ಆದರೆ ಕೊರೊನಾ ಕಾರಣದಿಂದಾಗಿ ಪ್ರಗತಿಗೆ ಅಡ್ಡಿಯಾಗಿದೆ.



• ನದಿ ಜೋಡಣೆ ಯೋಜನೆ ಕೈಗೆತ್ತಿಕೊಂಡಿರುವ ತಮಿಳುನಾಡು ಅದೇ ನೆಪ ಮುಂದಿರಿಸಿ ಕರ್ನಾಟಕದ ಯೋಜನೆಗೆ ಅಡ್ಡಗಾಲು ಹಾಕಬಹುದೇ?

ಹಿಮಾಲಯದಲ್ಲಿ ಲಭ್ಯವಿರುವ ಹೆಚ್ಚುವರಿ ನೀರನ್ನು ಗಂಗಾ, ಮಹಾನದಿ, ಗೋದಾವರಿ ಮೂಲಕ ಕಾವೇರಿವರೆಗೆ ಹರಿಸುವ ಯೋಜನೆಯನ್ನು ಕೇಂದ್ರ ಸಾಕಷ್ಟು ಮೊದಲೇ ರೂಪಿಸಿದೆ. ಈ ಮೂಲಕ ತಮಿಳುನಾಡಿನ ದಕ್ಷಿಣ ವೆಲ್ಲಾರು ಜಲಾನಯನ ಪ್ರದೇಶಕ್ಕೆ ಮತ್ತು ಅಂತಿಮವಾಗಿ ಗುಂಡಾರ್ ನದಿವರೆಗೆ ನೀರು ಹರಿಸುವ ರೂಪುರೇಷೆ ಸಿದ್ಧವಾಗಿದೆ. ಆದರೆ, ಬಿಹಾರ, ಜಾರ್ಖಂಡ್, ಒಡಿಶಾ, ತೆಲಂಗಾಣ ಮತ್ತು ಆಂಧ್ರಪ್ರದೇಶ ರಾಜ್ಯಗಳು ಒಪ್ಪುವವರೆಗೆ ಕಾವೇರಿಗೆ ಹಿಮಾಲಯದ ನೀರು ಹರಿಯುವ ಯೋಜನೆ ಸಾಕಾರಗೊಳ್ಳುವುದು ಅಸಾಧ್ಯ ಹಾಗೂ ಅನಿಶ್ಚಿತ. ಕರ್ನಾಟಕವು ಬಳಸದ ಕಾವೇರಿಯ ಹೆಚ್ಚುವರಿ ನೀರನ್ನು ಇತರ ನದಿಗಳಿಗೆ ಹರಿಸಲು ಮುಂದಾಗಿರುವ ತಮಿಳುನಾಡು, ಹಿಮಾಲಯದ ನೀರಿನ ಪಾಲು ಪಡೆದಲ್ಲಿ ನಮ್ಮ ಆಕ್ಷೇಪವೇನೂ ಇಲ್ಲ. ಆದರೆ, ನಮ್ಮ ಪಾಲಿನ ನೀರನ್ನು ಬಳಸಿಕೊಳ್ಳಲು ಮುಂದಾಗಿರುವ ತಮಿಳುನಾಡು ನಾವು ಕೈಗೆತ್ತಿಕೊಳ್ಳುವ ಯೋಜನೆಗಳಿಗೆ ಖಂಡಿತ ಆಕ್ಷೇಪ ವ್ಯಕ್ತಪಡಿಸಲಿದೆ.

• ಕಾನೂನು ಹೋರಾಟ ಮಾಡಿ ಯಶಸ್ವಿಯಾದರೂ, ನೀರನ್ನು ಬಳಸಿಕೊಳ್ಳಲು ರಾಜಕೀಯ ಇಚ್ಛಾಶಕ್ತಿ ಬೇಕೇ?

ಯಾವುದೇ ರಾಜ್ಯಕ್ಕೆ ಹಂಚಿಕೆಯಾದ ನದಿ ನೀರಿನ ಬಳಕೆಗೆ ಸಾಕಷ್ಟು ಸಮಯದ ಅಗತ್ಯವಿದೆ. ಈ ಹಿಂದೆ ಜಾರಿಯಲ್ಲಿದ್ದ ಒಪ್ಪಂದಗಳು ಮತ್ತು ಹಣಕಾಸಿನ ಕೊರತೆಯಿಂದಾಗಿ ಕರ್ನಾಟಕವು ಕೃಷ್ಣರಾಜಸಾಗರ ಹೊರತುಪಡಿಸಿ ಬೇರೆ ಯೋಜನೆ ಅಭಿವೃದ್ಧಿಪಡಿಸಿಲ್ಲ. 1974ರ ನಂತರ ಸರ್ಕಾರವು ಈ ದಿಸೆಯಲ್ಲಿ ಗಂಭೀರ ಹೆಜ್ಜೆ ಇರಿಸಿದೆ. ರಾಜ್ಯದ ಸರ್ಕಾರಗಳು ರಾಜಕೀಯ ಇಚ್ಛಾಶಕ್ತಿಯನ್ನು ಪ್ರದರ್ಶಿಸಿದ ಪರಿಣಾಮ ಕಾವೇರಿಯ ಹೆಚ್ಚುವರಿ ನೀರಿನ ಬಳಕೆಗಾಗಿ ಯೋಜನೆ ರೂಪಿಸಲಾಗಿದೆ.

• ಮೇಕೆದಾಟು ಯೋಜನೆಗೆ ಇದುವರೆಗೂ ಹಸಿರು ನಿಶಾನೆ ದೊರೆಯದಿರಲು ಕಾರಣ?

ಜಲವಿದ್ಯುತ್ ಹಾಗೂ ಬೆಂಗಳೂರಿಗೆ ನೀರು ಪೂರೈಸಲು ಕರ್ನಾಟಕವು ಮೇಕೆದಾಟು ಯೋಜನೆ ರೂಪಿಸಿದೆ. ಈ ಯೋಜನೆಗಾಗಿ ನಾವು ಹೆಚ್ಚುವರಿ ನೀರು ಬಳಸಿಕೊಳ್ಳುತ್ತಿಲ್ಲ. ಬದಲಿಗೆ, ತಮಿಳುನಾಡಿಗೆ 177.25 ಟಿಎಂಸಿ ಅಡಿ ನೀರನ್ನು ಬಿಳಿಗುಂಡ್ಲು ಮೂಲಕ ಹರಿಸುವ ಮುನ್ನ ವಿದ್ಯುತ್ ಉತ್ಪಾದಿಸಲು ಉದ್ದೇಶಿಸಲಾಗಿದೆ. ನಮಗೆ ಹಂಚಿಕೆಯಾದ ನೀರಿನಲ್ಲೇ ಬೆಂಗಳೂರಿಗೆ ಕುಡಿಯಲು ಪೂರೈಸಲಾಗುತ್ತದೆ. ಆದರೂ ತಮಿಳುನಾಡು ಸುಪ್ರೀಂ ಕೋರ್ಟ್‌ನಲ್ಲಿ ಆಕ್ಷೇಪಣೆ ಸಲ್ಲಿಸಿದ್ದರಿಂದ ಪರಿಸರ ಅನುಮತಿ ದೊರೆಯದೇ ಯೋಜನೆ ವಿಳಂಬವಾಗಿದೆ.

• ಅಂತರರಾಜ್ಯ ಜಲವಿವಾದ ಕಾನೂನು ನದಿ ಕಣಿವೆಯ ಕೆಳಭಾಗದ (ಲೋವರ್ ರೈಪೇರಿಯನ್ ಸ್ಟೇಟ್ಸ್) ರಾಜ್ಯಗಳ ಪರವಾಗಿಯೇ ಇದೆಯೇ?

ಅಂತರರಾಜ್ಯ ಜಲವಿವಾದ ಕಾನೂನು ಆಯಾ ರಾಜ್ಯಗಳ ನೀರಿನ ಹಂಚಿಕೆಗಾಗಿ ಇರುವ ಚೌಕಟ್ಟಾಗಿದೆ. ಅಮೆರಿಕದಲ್ಲಿ ಪ್ರಸ್ತಾಪಿಸಲಾದ ಹಾರ್ಮನ್ ಸಿದ್ಧಾಂತವು, ನದಿ ಕಣಿವೆಯ ಕೆಳಭಾಗದ ರಾಜ್ಯವನ್ನು ಲೆಕ್ಕಿಸದೆ ಯಾವುದೇ ಪ್ರಮಾಣದ ನೀರನ್ನು ಬಳಸಲು ಮೇಲ್ಭಾಗದ ರಾಜ್ಯಕ್ಕೆ ಅವಕಾಶ ನೀಡುತ್ತಿತ್ತು. ನಂತರದ, ನೈಸರ್ಗಿಕ ಹರಿವಿನ ಸಿದ್ಧಾಂತವು ನದಿಯ ನೈಸರ್ಗಿಕ ಹರಿವನ್ನು ತಡೆಯದಂತೆ ಮೇಲ್ಭಾಗದ ರಾಜ್ಯಕ್ಕೆ ಸೂಚಿಸಿ, ಕೆಳಭಾಗದ ರಾಜ್ಯಗಳ ಪರ ನಿಂತಿತು. ಅಂತಿಮವಾಗಿ, ಕಾನ್ಸಾಸ್ ಮತ್ತು ಕೊಲೊರಾಡೊ ಪ್ರಕರಣದಲ್ಲಿ ಮೇಲ್ಭಾಗ ಮತ್ತು ಕೆಳಭಾಗದ ರಾಜ್ಯಗಳ ಅಗತ್ಯವನ್ನು ಮನಗಂಡ ಅಮೆರಿಕದ ಸುಪ್ರೀಂ ಕೋರ್ಟ್, ಸಮಾನ ಹಂಚಿಕೆ ಸಿದ್ಧಾಂತವನ್ನು ಅಭಿವೃದ್ಧಿಪಡಿಸಿತು. ಭಾರತವು 1942ರಲ್ಲಿ ಸಿಂಧೂ ಆಯೋಗದ ಮೂಲಕ ಸಮಾನ ಹಂಚಿಕೆ ಸಿದ್ಧಾಂತ ಅಳವಡಿಸಿಕೊಂಡಿದೆ. ಸಮಾನ ಹಂಚಿಕೆಯ ಹೊರತಾಗಿಯೂ ಪ್ರಸ್ತುತ ಜಲವಿವಾದ ಕಾನೂನು ಕೆಳಭಾಗದ ರಾಜ್ಯದ ಪರವಾಗಿಯೇ ಇದೆ ಎನ್ನಬಹುದು.

• ಬರಪೀಡಿತ ಪ್ರದೇಶಗಳಿಗೆ ಕುಡಿಯುವ ನೀರು ಒದಗಿಸುವುದಕ್ಕೆ ಸೂಕ್ತ ಕಾನೂನು ರಚನೆಯಾಗುವ ಅಗತ್ಯವಿದೆಯೇ?

ಸಮಾನ ಹಂಚಿಕೆ ಸಿದ್ಧಾಂತದ ಪ್ರಕಾರ ಕುಡಿಯುವ ನೀರಿಗೇ ಆದ್ಯತೆ ನೀಡಲಾಗುತ್ತದೆ. ಅಂತೆಯೇ, ಬರಪೀಡಿತ ಪ್ರದೇಶಗಳ ಅಗತ್ಯವು ಮಾನ್ಯತೆ ಪಡೆದುಕೊಂಡಿದೆ. ಆದರೂ, ಇದು ಸತ್ಯಾಸತ್ಯತೆ ಮತ್ತು ವೈಶಿಷ್ಟ್ಯವನ್ನು ಅವಲಂಬಿಸಿದ್ದು, ಆಯಾ ಪ್ರಕರಣಗಳಲ್ಲಿ ಭಿನ್ನವಾಗಿದೆ.

• ಹೆಚ್ಚುವರಿ ನೀರಿನ ಲಭ್ಯತೆ ಮತ್ತು ಬಳಕೆ ಕುರಿತು ಗೊಂದಲ ಇದೆಯೇ? ಈ ಕುರಿತು ಕರ್ನಾಟಕ ಮತ್ತೆ ಕಾನೂನು ಹೋರಾಟದ ಮೊರೆ ಹೋಗಬೇಕೇ?

ಕಾವೇರಿಯ ಹೆಚ್ಚುವರಿ ನೀರಿನ ಲಭ್ಯತೆಯ ಕುರಿತು ಗೊಂದಲ ಇಲ್ಲ. ಆದರೂ ತಮಿಳುನಾಡು ಈಗಾಗಲೇ ನದಿ ಜೋಡಣೆ ಯೋಜನೆ ಆರಂಭಿಸಿದ್ದನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸುವ ಮೂಲಕ ಕಾನೂನು ಹೋರಾಟ ನಡೆಸಲು ಕರ್ನಾಟಕ ಆಲೋಚಿಸಿದೆ.

• ಹೆಚ್ಚುವರಿ ನೀರು ಹಂಚಿಕೆಯ ಹೊಣೆಯನ್ನೂ ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರಕ್ಕೇ ವಹಿಸಬೇಕೇ?

ನೀರು ಹಂಚಿಕೆ ಮಾಡಿ ಸುಪ್ರೀಂ ಕೋರ್ಟ್ ನೀಡಿದ ತೀರ್ಪಿನ ಜಾರಿಗಾಗಿಯೇ 1956ರ ಅಂತರರಾಜ್ಯ ಜಲವಿವಾದ ಕಾಯ್ದೆಯ ಸೆಕ್ಷನ್– 6 'ಎ' ಅಡಿ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ರಚಿಸಲಾಗಿದೆ. ಆದರೆ, ಈಗ ಉದ್ಭವಿಸಿರುವ ವಿವಾದವನ್ನು ಪರಿಹರಿಸುವ ಅಧಿಕಾರ ಈ ಪ್ರಾಧಿಕಾರಕ್ಕಿಲ್ಲ. ಪ್ರಸ್ತುತ ವಿವಾದವು ಬಗೆಹರಿದ ನಂತರವಷ್ಟೇ ಸುಪ್ರೀಂ ಕೋರ್ಟ್ ಹೆಚ್ಚುವರಿ ನೀರನ್ನು ಅಂದಾಜಿಸುವ ಜವಾಬ್ದಾರಿಯನ್ನು ಪ್ರಾಧಿಕಾರಕ್ಕೆ ವಹಿಸಿಕೊಡಬಹುದು.

ಕಾವೇರಿ ಮತ್ತು ಅದರ ಉಪನದಿಗಳು ಕರ್ನಾಟಕ ಮತ್ತು ತಮಿಳುನಾಡಿನ ಹಲವು ಪ್ರದೇಶಗಳಲ್ಲಿ ಕೃಷಿ ಮತ್ತು ಕುಡಿಯುವ ನೀರಿನ ಅಗತ್ಯಗಳನ್ನು ಪೂರೈಸುತ್ತಿವೆ. ಕಾವೇರಿ ನದಿ ಕಣಿವೆಯ ಒಟ್ಟು ಜಲಾನಯನ ಮತ್ತು ಅಚ್ಚುಕಟ್ಟು ಪ್ರದೇಶವು 87 ಸಾವಿರ ಚದರ ಕಿ.ಮೀ.ಗಿಂತಲೂ ಹೆಚ್ಚು. ಕಾವೇರಿ ಕಣಿವೆಯ ನದಿಗಳು, ಜಲಾಶಯಗಳು ಮತ್ತು ಅವುಗಳ ಉಪಯುಕ್ತತೆಯ ವಿವರ ಇಲ್ಲಿದೆ

ಕಾವೇರಿ ಕಣಿವೆಯ ಯೋಜನೆಗಳು

ಗೊರೂರು ಜಲಾಶಯ

- ಉಗಮ ಸ್ಥಾನ: ಬಲ್ಲಾಳರಾಯನದುರ್ಗ ಹೇಮಾವತಿ ನದಿ
- **ಜಲಾಶಯ:** ಹಾಸನ ಜಿಲ್ಲೆಯ ಗೊರೂರು
- ನೀರಿನ ಲಭ್ಯತೆ ಪ್ರಮಾಣ;**56.67** ಟಿಎಂಸಿ ಅಡಿ
- ಉದ್ದೇಶ: ನೀರಾವರಿ
- ನೀರಾವರಿ ಸೌಲಭ್ಯ: ಹಾಸನ ಜಿಲ್ಲೆಯ ಹಾಸನ, ಅರಕಲಗೂಡು, ಹೊಳೆನರಸೀಪುರ, ಚನ್ನರಾಯಪಟ್ಟಣ, ಮಂಡ್ಯ ಜಿಲ್ಲೆಯ ಮಂಡ್ಯ, ಕೆ.ಆರ್.ಪೇಟೆ, ಪಾಂಡವಪುರ, ನಾಗಮಂಗಲ, ಮೈಸೂರು ಜಿಲ್ಲೆಯ ಕೆ.ಆರ್.ನಗರ, ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕುಗಳು
- ಜಲಾನಯನ ಪ್ರದೇಶ: **5,410** ಚ.ಕಿ.ಮೀ.
- ಅಚ್ಚುಕಟ್ಟು ಪ್ರದೇಶ: **2.91** ಲಕ್ಷ ಹೆಕ್ಟೇರ್

ಹಾರಂಗಿ ಜಲಾಶಯ

ಕೊಡಗು ಜಿಲ್ಲೆ ಸೋಮವಾರಪೇಟೆ ತಾಲ್ಲೂಕು ಹುಲುಗುಂದದಲ್ಲಿ ಜಲಾಶಯ

- ನೀರಿನ ಲಭ್ಯತೆ ಪ್ರಮಾಣ: **18** ಟಿಎಂಸಿ ಅಡಿ
- ಉದ್ದೇಶ: ನೀರಾವರಿ
- ನೀರಾವರಿ ಸೌಲಭ್ಯ: ಮೈಸೂರು ಜಿಲ್ಲೆಯ ಹುಣಸೂರು, ಕೆ.ಆರ್.ನಗರ, ಪಿರಿಯಾಪಟ್ಟಣ ಹಾಗೂ ಹಾಸನ ಜಿಲ್ಲೆಯ ಅರಕಲಗೂಡು, ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕುಗಳು
- ಜಲಾನಯನ ಪ್ರದೇಶ: **717** ಚ.ಕಿ.ಮೀ.
- ಅಚ್ಚುಕಟ್ಟು ಪ್ರದೇಶ: **54,591** ಹೆಕ್ಟೇರ್

ಕೃಷ್ಣರಾಜಸಾಗರ(ಕೆಆರ್‌ಎಸ್)

ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಕನ್ನಂಬಾಡಿಯಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ಕಟ್ಟಲಾಗಿದೆ

- ನೀರಿನ ಲಭ್ಯತೆ ಪ್ರಮಾಣ: **45.05** ಟಿಎಂಸಿ ಅಡಿ
- ಉದ್ದೇಶ: ನೀರಾವರಿ, ವಿದ್ಯುತ್, ಕುಡಿಯುವ ನೀರು
- ಜಲಾನಯನ ಪ್ರದೇಶ: **10,619** ಚ.ಕಿ.ಮೀ.
- ಅಚ್ಚುಕಟ್ಟು ಪ್ರದೇಶ: **79,312** ಹೆಕ್ಟೇರ್



ನಕ್ಷೆ: ಕೇಂದ್ರ ಜಲ ಆಯೋಗ

ಕಬಿನಿ ಜಲಾಶಯ

ಮೈಸೂರು ಜಿಲ್ಲೆ ಹೆಗ್ಗಡದೇವನಕೋಟೆ ತಾಲ್ಲೂಕು ಬೀಚನಹಳ್ಳಿಯಲ್ಲಿ ಕಬಿನಿ ನದಿಗೆ ಅಡ್ಡವಾಗಿ ನಿರ್ಮಿಸಲಾಗಿದೆ

- ನೀರಿನ ಲಭ್ಯತೆ ಪ್ರಮಾಣ: **59.65** ಟಿಎಂಸಿ ಅಡಿ
- ಉದ್ದೇಶ: ನೀರಾವರಿ
- ನೀರಾವರಿ ಸೌಲಭ್ಯ: ಮೈಸೂರು ಜಿಲ್ಲೆಯ ಎಚ್.ಡಿ.ಕೋಟೆ, ನಂಜನಗೂಡು, ಟಿ.ನರಸೀಪುರ ಮತ್ತು ಚಾಮರಾಜನಗರ ಜಿಲ್ಲೆಯ ಚಾಮರಾಜನಗರ, ಗುಂಡ್ಲುಪೇಟೆ, ಯಳಂದೂರು, ಕೊಳ್ಳೇಗಾಲ ತಾಲ್ಲೂಕುಗಳು
- ಜಲಾನಯನ ಪ್ರದೇಶ: **7,040** ಚ.ಕಿ.ಮೀ.
- ಅಚ್ಚುಕಟ್ಟು ಪ್ರದೇಶ: **94,434** ಹೆಕ್ಟೇರ್

ಇತರ ನೀರಾವರಿ ಯೋಜನೆಗಳು

ತಾರಕ ಯೋಜನೆ, ಅರ್ಕಾವತಿ ಯೋಜನೆ, ತಿಪ್ಪಗೊಂಡನಹಳ್ಳಿ ಯೋಜನೆ, ಚಿಕ್ಲಿಹೊಳೆ ಯೋಜನೆ, ಉಡುತೊರೆಹಳ್ಳಿ ಯೋಜನೆ, ಇಗ್ಗಲೂರು ಬ್ಯಾರೇಜ್ ಯೋಜನೆ, ಮಂಚನಬೆಲೆ ಯೋಜನೆ, ಹುಲಿಕೆರೆ ಸುರಂಗ ಯೋಜನೆ, ನಂಜಾಪುರ ಏತ ನೀರಾವರಿ ಯೋಜನೆ, ಬನ್ನಹಳ್ಳಿಹುಂಡಿ ಏತ ನೀರಾವರಿ ಯೋಜನೆ, ಯಗಚಿ ಯೋಜನೆ, ವಾಟೆಹೊಳೆ ಯೋಜನೆ ಇತ್ಯಾದಿ.

ತಮಿಳುನಾಡಿನಲ್ಲಿರುವ ಕಾವೇರಿ ಜಲಾನಯನದ ಪ್ರದೇಶದ ಯೋಜನೆಗಳು

ಭವಾನಿಸಾಗರ ಜಲಾಶಯ

- ಸ್ಥಳ: ಈರೋಡು ಜಿಲ್ಲೆ (ಭವಾನಿ ನದಿ)
- ನೀರಿನ ಲಭ್ಯತೆ ಪ್ರಮಾಣ: **32.800** ಟಿಎಂಸಿ ಅಡಿ
- ಉದ್ದೇಶ: ನೀರಾವರಿ, ವಿದ್ಯುತ್
- ಜಲಾನಯನ ಪ್ರದೇಶ: **992** ಚ.ಕಿ.ಮೀ.
- ಅಚ್ಚುಕಟ್ಟು ಪ್ರದೇಶ: **830** ಚ.ಕಿ.ಮೀ

ಕಲನ್ನೈ ಅಣೆಕಟ್ಟು (ಗ್ರಾಂಡ್)

- ಸ್ಥಳ: ತಂಜಾವೂರು ಜಿಲ್ಲೆ (ಕಾವೇರಿ ನದಿ)
- ಉದ್ದೇಶ: ನೀರಾವರಿ
- ಅಚ್ಚುಕಟ್ಟು ಪ್ರದೇಶ: **4** ಲಕ್ಷ ಹೆಕ್ಟೇರ್

ಮೆಟ್ಟೂರು ಜಲಾಶಯ

- ಸ್ಥಳ: ಸೇಲಂ ಜಿಲ್ಲೆಯ ಮೆಟ್ಟೂರು (ಕಾವೇರಿ ನದಿ)
- ನೀರಿನ ಲಭ್ಯತೆ ಪ್ರಮಾಣ: **93.47** ಟಿಎಂಸಿ ಅಡಿ
- ಉದ್ದೇಶ: ನೀರಾವರಿ, ವಿದ್ಯುತ್, ಕುಡಿಯುವ ನೀರು
- ಜಲಾನಯನ ಪ್ರದೇಶ: **15,700** ಚದರ ಮೈಲಿ
- ಅಚ್ಚುಕಟ್ಟು ಪ್ರದೇಶ: **13** ಲಕ್ಷ ಎಕರೆ

ಕಾವೇರಿ ಕಣಿವೆಯ ಜಲಾನಯನ-ಅಚ್ಚುಕಟ್ಟು ಪ್ರದೇಶದ ವಿಸ್ತೀರ್ಣ

2.7% ದೇಶದ ಒಟ್ಟು ಭೌಗೋಳಿಕ ವಿಸ್ತೀರ್ಣದಲ್ಲಿ ಕಾವೇರಿ ಕಣಿವೆಯ ಜಲಾನಯನ–ಅಚ್ಚುಕಟ್ಟು ಪ್ರದೇಶದ ವಿಸ್ತೀರ್ಣ

1,341 ಮೀಟರ್ ಸಮುದ್ರಮಟ್ಟದಿಂದ ಕಾವೇರಿ ಉಗಮಸ್ಥಾನದ ಎತ್ತರ

805 ಕಿ.ಮೀ. ಉಗಮಸ್ಥಾನದಿಂದ ಸಮುದ್ರ ಸೇರುವವರೆಗೆ ಕಾವೇರಿ ನದಿ ಪಾತ್ರದ ಉದ್ದ

ಜಲವಿದ್ಯುತ್ ಯೋಜನೆಗಳು...

30 ಕಾವೇರಿ ಕಣಿವೆಯಲ್ಲಿ ಸಂಭಾವ್ಯ ಜಲವಿದ್ಯುತ್ ಯೋಜನೆಗಳಿಗಾಗಿ ಗುರುತಿಸಲಾಗಿರುವ ಸ್ಥಳಗಳು

1350 ಮೆ.ವಾ. ಸಾಮರ್ಥ್ಯದ ಜಲವಿದ್ಯುತ್ ಯೋಜನೆಗಳನ್ನು ಆರಂಭಿಸಬಹುದು



ನೀರಿನ ಲಭ್ಯತೆ



ಆಧಾರ: ಕಾವೇರಿ ನೀರಾವರಿ ನಿಗಮ, ಜಲಸಂಪನ್ಮೂಲ ಇಲಾಖೆಯ ವಾರ್ಷಿಕ ವರದಿ

ಪ್ರಜಾವಾಣಿ ಗ್ರಾಫಿಕ್ಸ್ | ಮಂಜುನಾಥ ಹುಲಕೊಪ್ಪದ

ವರದಿ: ಜಯಸಿಂಹ ಆರ್./ಅಮೃತಕಿರಣ ಬಿ.ಎಂ.

ಗುಂಡಣ್ಣ

ದಿನ ಭವಿಷ್ಯ

ಮಂಗಳವಾರ 30 ಮಾರ್ಚ್ 2021

ಶಾರ್ವರಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ಫಾಲ್ಗುಣ ಮಾಸ ಕೃಷ್ಣಪಕ್ಷ ಮಳೆ ನಕ್ಷತ್ರ ಉತ್ತರಭಾದ್ರ ದ್ವಿತೀಯ ಗಂ. 35-29 (ರಾ. 8-35) ಮಂಗಳವಾರ ನಿತ್ಯ ನಕ್ಷತ್ರ ಚಿತ್ತೆ ಗಂ. 21-53 (ಹ. 3-09) ವ್ಯಾಘಾ ನಾಮ ಯೋಗ ಗಂ 25-45 ತೈತಲ ಕರಣ ಗಂ. 8-16 ವಿಷ ಗಂ. 34-57 ಅಮೃತ ಗಂ. 6-34 ಪುನರಮೃತ ಗಂ. 57-21 ರಾಹುಕಾಲ: ಮ. ಗಂ. 3-00 ರಿಂದ 4-30 ಗುಳಿಕ ಕಾಲ ಮ. ಗಂ 12-00 ರಿಂದ 1-30 ಯಮಗಂಡ ಕಾಲ ಬೆ. ಗಂ 9-00 ರಿಂದ 10-30 ಸೂರ್ಯೋದಯ: 6-24 ಸೂರ್ಯಾಸ್ತ: 6-27 ಅದೃಷ್ಟ ಸಂಖ್ಯೆ 17

ಮೇಷ: ವ್ಯವಹಾರಗಳಲ್ಲಿ ಉತ್ತಮ ಲಾಭವನ್ನು ನಿರೀಕ್ಷಿಸಬಹುದು. ಮುಂದಿನ ಕಾರ್ಯಯೋಜನೆಗಳ ವಿಚಾರವಾಗಿ ಚಿಂತನೆ. ಶುಭ ಕಾರ್ಯ ನಡೆಸಲು ತಯಾರಿ. ಮನೆಯಲ್ಲಿ ಹಬ್ಬದ ವಾತಾವರಣ.

ವೃಷಭ: ಅನಾವಶ್ಯಕ ಮಾತುಗಳಿಂದಾಗಿ ಉದ್ವೇಗಕ್ಕೊಳಗಾಗುವ ಸಾಧ್ಯತೆ. ವಿಪರೀತ ಖರ್ಚು ಭರಿಸಬೇಕಾದ ಅನಿವಾರ್ಯತೆ ಇದ್ದರೂ, ಆರ್ಥಿಕ ಅನುಕೂಲತೆ. ಧನವನ್ನು ಕೂಡಿಡಲಿದ್ದೀರಿ.

ಮಿಥುನ: ಕಾರ್ಯ ನಿಮಿತ್ತ ಕೈಗೊಂಡ ದೂರದ ಪ್ರಯಾಣದಿಂದಾಗಿ ಅಧಿಕ ಆದಾಯ. ವೆಚ್ಚದ ಮೇಲೆ ಹಿಡಿತದಿಂದಾಗಿ ಉಳಿತಾಯ ಸಾಧಿಸಲಿದ್ದೀರಿ. ವಿದ್ಯಾರ್ಥಿಗಳಿಗೆ ಬಿಡುವಿನ ದಿನ.

ಕರ್ಕಾಟಕ: ಕಚೇರಿಯಲ್ಲಿ ಕೆಲಸ ನಿರ್ವಹಿಸುವವರಿಗೆ ಸ್ಥಾನ ಭದ್ರತೆ. ಕೆಲಸ ಕಾರ್ಯಗಳನ್ನು ಪೂರ್ಣಗೊಳಿಸಿ ನಿರಾಳರಾಗುವಿರಿ. ವೈದ್ಯಕೀಯ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುವವರಿಗೆ ಬಡ್ತಿ ಸಾಧ್ಯತೆ.

ಸಿಂಹ: ಅಪೂರ್ವ ವಸ್ತುಗಳನ್ನು ಸಂಗ್ರಹಿಸುವ ಸಾಧ್ಯತೆ. ಮನೆಯ ಅಲಂಕಾರಕ್ಕಾಗಿ ವೆಚ್ಚ. ವಾಹನಗಳ ವ್ಯವಹಾರದಲ್ಲಿ ಉತ್ತಮ ಲಾಭ. ಕೈಗೆತ್ತಿಕೊಂಡ ಕಾರ್ಯಗಳಲ್ಲಿ ಯಶಸ್ಸು.

ಕನ್ಯಾ: ಕ್ರೀಡಾಪಟುಗಳು, ಸಾಹಸ ಕ್ರೀಡೆಗಳಲ್ಲಿ ಭಾಗವಹಿಸುವವರಿಗೆ ಸಾಮರ್ಥ್ಯ ಪ್ರದರ್ಶಿಸುವ ಪ್ರೋತ್ಸಾಹದ ದಿನವಾಗಲಿದೆ. ಮನೆಯ ವ್ಯವಹಾರಗಳಲ್ಲಿ ತೊಂದರೆಗಳು ದೂರವಾಗಿ ನೆಮ್ಮದಿ ಮೂಡಲಿದೆ.

ತುಲಾ: ಸಮಯವನ್ನು ವ್ಯರ್ಥಮಾಡದೇ ಕೆಲಸ ಕಾರ್ಯಗಳನ್ನು ನಿರ್ವಹಿಸಿ ಉತ್ತಮ ಫಲ ಪಡೆಯಲಿದ್ದೀರಿ. ರೇಷ್ಮೆ ಬೆಳೆಗಾರರು ಹಾಗೂ ಉದ್ಯಮದಲ್ಲಿ ತೊಡಗಿರುವವರಿಗೆ ಬಿಡುವಿಲ್ಲದ ದಿನವಾಗುವುದು.

ವೃಶ್ಚಿಕ: ನೂತನ ವ್ಯವಹಾರವನ್ನು ಪ್ರಾರಂಭಿಸುವ ಸಲುವಾಗಿ ಚಿಂತನೆ ನಡೆಸುವಿರಿ. ಮಕ್ಕಳಿಗೆ ಓದಿನಲ್ಲಿ ಆಸಕ್ತಿಯನ್ನು ಪೋಷಿಸುವ ಸಲುವಾಗಿ ಹೆಚ್ಚಿನ ವ್ಯಯ. ಆರೋಗ್ಯ ಉತ್ತಮಗೊಳ್ಳಲಿದೆ.

ಧನು: ಕೃಷಿ ಚಟುವಟಿಕೆಗಳು ಭರದಿಂದ ಸಾಗಲಿವೆ. ಮಕ್ಕಳ ನೆಮ್ಮದಿಗಾಗಿ ಬೊಂಬೆಗಳ ಖರೀದಿ ಸಾಧ್ಯತೆ. ಯುವಕರಿಗೆ ಸಂಶೋಧನಾ ಕ್ಷೇತ್ರದಲ್ಲಿ ನೌಕರಿ ಮಾಡುವ ಅವಕಾಶ ಲಭ್ಯ.

ಮಕರ: ಹೊಸ ವಾಹನ ಖರೀದಿ ಮಾಡಲಿದ್ದೀರಿ. ಮಕ್ಕಳೊಂದಿಗೆ ಆನಂದದಿಂದ ಕಾಲ ಕಳೆಯುವಿರಿ. ಪ್ರಯಾಣದಲ್ಲಿ ಗಣ್ಯ ವ್ಯಕ್ತಿಗಳೊಂದಿಗೆ ಸಮಾಲೋಚನೆ ನಡೆಸಲಿದ್ದೀರಿ.

ಕುಂಭ: ಹಿರಿಯರ ಮಾತಿನಂತೆ ನಡೆದಲ್ಲಿ ಹೆಚ್ಚಿನ ಸಂಪಾದನೆ. ಪ್ರೀತಿಪಾತ್ರರೊಂದಿಗೆ ವಿಹಾರಾರ್ಥ ಕಾಲ ಕಳೆಯುವ ಸಾಧ್ಯತೆ. ಮನೆಯಲ್ಲಿ ಹಬ್ಬದ ವಾತಾವರಣ. ಸ್ತ್ರೀಯರಿಗೆ ಗೌರವ ಪ್ರಾಪ್ತಿ.

ಮೀನ: ಕಾರ್ಯಕ್ಷೇತ್ರದಲ್ಲಿನ ಸನ್ನಿವೇಶಗಳನ್ನು ನಿಮ್ಮ ಅನುಕೂಲಕ್ಕೆ ತಕ್ಕಂತೆ ಬದಲಾಯಿಸಿಕೊಳ್ಳುವಿರಿ. ಉದಾರ ಮನೋಭಾವದಿಂದ ಸಹಾಯ ಮಾಡಲಿದ್ದೀರಿ. ಸ್ತ್ರೀಯರಿಗೆ ಮನೋಭಿಲಾಷೆ ಈಡೇರಿಲಿದೆ.

ನಿಮ್ಮ ಜನ್ಮದಿನ 30-ಮಾರ್ಚ್: ಈ ದಿನವು ಅತ್ಯಂತ ಶುಭಕರವಾಗಿದ್ದು, ವ್ಯಾಪಾರ ವ್ಯವಹಾರಗಳನ್ನು ಅಭಿವೃದ್ಧಿಗೊಳಿಸಲಿದ್ದೀರಿ. ಉದ್ಯೋಗಾಕಾಂಕ್ಷಿಗಳಿಗೆ ಉತ್ತಮ ಆದಾಯ ತರುವ ಉದ್ಯೋಗ ದೊರಕಲಿದೆ. ಕೆಲಸ ಕಾರ್ಯಗಳಲ್ಲಿ ಅಚ್ಚುಕಟ್ಟುತನ ಪ್ರದರ್ಶಿಸಲಿದ್ದೀರಿ. ಆರೋಗ್ಯ ಸುಧಾರಣೆಗಾಗಿ ಯೋಗದ ಮೊರೆ ಹೋಗುವ ಸಾಧ್ಯತೆ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಸೇವಕನ ಕರ್ತವ್ಯ

ಮರಣಶಯ್ಯೆಯದೆಂದು ತಿಳಿದೊಡಂ ರೋಗಿಯನು|
ಹರಣಮಿರುವನ್ನೆಗಂ ಪರಿಚರಿಸುವಂತೆ ||
ಸ್ಥಿರವಲ್ಲವೀ ಲೋಕವಾದೊಡಮದುಳ್ಳನಕ |
ಚರಿಸು ನೀನಾಳಾಗಿ – ಮಂಕುತಿಮ್ಮ || 401 ||

ಪದ-ಅರ್ಥ: ಮರಣಶಯ್ಯೆಯದೆಂದು = ಮರಣಶಯ್ಯೆ + ಅದು + ಎಂದು, ಹರಣಮಿರುವನ್ನೆಗಂ = ಹರಣ (ಪ್ರಾಣ) + ಇರುವ + ಅನ್ನೆಗಂ (ಅಲ್ಲಿಯವರೆಗೆ), ಪರಿಚರಿಸು = ಉಪಚಾರಮಾಡು, ಲೋಕವಾದೊಡಮದುಳ್ಳನಕ = ಲೋಕ + ಆದೊಡೆ + ಅದು + ಉಳ್ಳನಕ (ಇರುವವರೆಗೆ), ಚರಿಸು = ತೊಡಗಿಕೊ, ನಡೆಸು.

ವಾಚ್ಯಾರ್ಥ: ರೋಗಿ ಮೃತ್ಯುಮುಖದಲ್ಲಿರುವನೆಂಬುದನ್ನು ತಿಳಿದರೂ, ಪ್ರಾಣ ಇರುವವರೆಗೆ ಅವನನ್ನು ಉಪಚರಿಸುವಂತೆ, ಈ ಲೋಕ ಸ್ಥಿರವಲ್ಲವಾದರೂ, ಅದು ಇರುವತನಕ ಅದರ ಆಳಾಗಿ ನೀನು ತೊಡಗಿಕೊ.

ವಿವರಣೆ: ಅವರೊಬ್ಬ ನೇತಾರರು, ಅತ್ಯಂತ ಜನಪ್ರಿಯ ನೇತಾರರು. ಅವರಿಗೆ ಅನಾರೋಗ್ಯವಾಯಿತು. ಅವರನ್ನು ಅತ್ಯಂತ ಪ್ರತಿಷ್ಠಿತವಾದ ಆಸ್ಪತ್ರೆಗೆ ಸೇರಿದರು. ತೀವ್ರನಿಗಾ ಘಟಕದಲ್ಲಿ ಅವರ ಚಿಕಿತ್ಸೆ ನಡೆಯಿತು. ಆದರೂ ಆರೋಗ್ಯ ಸುಧಾರಿಸಿದಂತೆ ಕಾಣಲಿಲ್ಲ. ಭಾರತದ ಮೂಲೆ ಮೂಲೆಗಳಿಂದ ಅತ್ಯಂತ ಪರಿಣಿತರಾದ ವೈದ್ಯರು ಬಂದರು, ದೊರೆಯಬಹುದಾದ ಸರ್ವಪ್ರಯತ್ನಗಳನ್ನು ಮಾಡಿದರು. ಎರಡು ತಿಂಗಳುಗಳವರೆಗೆ ಆ ನೇತಾರರಿಗೆ ಎಚ್ಚರ ಬರಲೇ ಇಲ್ಲ. ಅವರು ಉಸಿರಾಡುತ್ತಿದ್ದುದು ಯಂತ್ರಗಳ ಮೂಲಕವೇ. ಆದರೂ ಅವರನ್ನು ಉಳಿಸಿಕೊಳ್ಳುವ ಯತ್ನ ನಡೆದೇ ಇತ್ತು. ವಿಧಿಯಪಾಶ ಯಂತ್ರಗಳ ಶಕ್ತಿಯನ್ನು ಮೀರಿದಾಗ ಬಾಹ್ಯ ಪ್ರಯತ್ನ ನಿಂತಿತು. ಆದರೆ ಕೊನೆಯ ಕ್ಷಣದವರೆಗೆ ಅವರನ್ನು ಬದುಕಿಸಿಕೊಳ್ಳುವ ಉಜ್ಜುಗ ನಿಲ್ಲಲಿಲ್ಲ. ಇದು ಬರೀ ನೇತಾರರಿಗೆ ಮಾತ್ರವಲ್ಲ. ಅಂತ:ಕರಣವಿರುವ ಪ್ರತಿಯೊಬ್ಬ ವ್ಯಕ್ತಿಗೂ ಅವರ ಪ್ರೀತಿಪಾತ್ರರು ಮಾಡುವ ಪ್ರಯತ್ನ.

ಜೀವವಿರುವವರೆಗೆ ಅದನ್ನು ಉಳಿಸಿಕೊಳ್ಳಲು ಹೆಣಗುವುದೇ ಸರಿಯಾದ ದಾರಿ. ಮನುಷ್ಯ ದೇಹದಂತೆಯೇ ಈ ಲೋಕವೂ ಸ್ಥಿರವಲ್ಲ. ಅದು ಸದಾಕಾಲದ ವಿಕಾರಕ್ಕೆ, ನಾಶಕ್ಕೆ ಒಳಪಡುವಂತಹದು. ಒಂದು ದೇಹವನ್ನೇ ಉಳಿಸಿಕೊಳ್ಳಲು ಸಕಲ ಪ್ರಯತ್ನಮಾಡುವ ನಾವು ಈ ಅಸ್ಥಿರವಾದ ಲೋಕದಲ್ಲಿ ಹೇಗಿರಬೇಕು, ಏನು ಮಾಡಬೇಕು? ನಾವು ಇರುವವರೆಗೆ ಈ ಲೋಕ ಇದ್ದೇ ಇದೆ. ಆದ್ದರಿಂದ ಲೋಕ ನಶ್ವರವೆಂದು ತಿಳಿದವರು ಹೇಳಿದರೂ, ನನ್ನ ಮಟ್ಟಿಗೆ, ನಾನಿರುವ ಕ್ಷಣದವರೆಗೆ ಅದು ಸತ್ಯವೇ. ಈ ಪ್ರಪಂಚದಲ್ಲಿ ಕೊಳಕಿದೆ, ಕೆಡಕಿದೆ. ಅದೆಲ್ಲ ಸರಿ. ಆದರೆ ನಮಗಿರುವುದು ಇದೊಂದೇ ತಾನೇ? ಅದನ್ನು ಬಿಟ್ಟು ಬೇರೆ ಪ್ರಪಂಚವಿಲ್ಲ. ಆದ್ದರಿಂದ ನಾವು ಪ್ರಪಂಚದ ಒಬ್ಬ ಪ್ರಾಮಾಣಿಕ ಸೇವಕ ಎಂದುಕೊಂಡು, ನಮ್ಮ ಸಮಸ್ತ ಶಕ್ತಿ, ಜ್ಞಾನ, ಯುಕ್ತಿಗಳನ್ನು ಹಾಕಿ ಅದರ ಏಳ್ಗೆಗೆ ಶ್ರಮಿಸುವುದೇ ನಮಗೆ ಸರಿಯಾದ ಮಾರ್ಗ. ❖

ಪದಬಂಧ 4552

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

3.ಅಮೋನಿಯಾ ಮತ್ತು ಕ್ಲೋರಿನ್ ಸಂಯೋಗದಿಂದಾದ ಕ್ಷಾರ (5)
4.ಸರೀಕರೆದುರು ಧರಿಸಿಕೊಂಡಿರುವ ಕಂಠಾಭರಣ! (3)
6.ಏರುತಗ್ಗಿಲ್ಲದಿರುವುದು (3)
8.ಜೂಜಿನಲ್ಲಿ ಒಡ್ಡುವ ಪಣ (3)
9.ಆನೆ ನಡೆಸುವವ (3)
10.ಅಂತರಂಗದಲ್ಲಿರುವ ಅಲೆ (3)
11.ಮರದೊಳಗೆ ಸವಿಯಾದುದು ಬಂದಿದೆ (3)
13.ಪ್ರಾಧಿಕಾರದ ಸುತ್ತವಿರುವ ಪೌಳಿ (3)
14.ರಜದಲ್ಲಿ ಆಚರಿಸಿದ ಬೆಳ್ಳಿ ಹಬ್ಬ (5)

ಮೇಲಿಂದ ಕೆಳಕ್ಕೆ

1.ಅದೇ ತಾನೆ ಬಿರಿದ ಹೂವು (4)
2.ಪಣ ಹೂಡಿ ತೋರಿದ ಅಳತೆ (4)
5.ತಮ್ಮನಿಗೆ ಈ ತರಹ ಬೇಧಭಾವವೇ? (4)
7.ಗಮ ಗಮ ಎನ್ನುತ್ತಲೇ ಸೇರುವಿಕೆ (4)
10.ತರತರದ ಕಾಯಿಪಲ್ಲೆ (4)
12.ದೇವರನ್ನು ರಥದಲ್ಲಿಟ್ಟು ಮಾಡುವ ಮೆರವಣಿಗೆ (4)



4551ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಮುತ್ತು 2.ಕಾಯಕ 4.ಕಡಿವಾಣ 6.ರುದ್ರಭೂಮಿ 8.ರಾವು 9. ಜ್ಞಾನಿ 10.ಸಮಂಜಸ 12.ಮಧುಕರ 14.ಹಲಗೆ 15.ಗಣಿ

ಮೇಲಿಂದ ಕೆಳಕ್ಕೆ: 1.ಮುದುಕ 2.ಕಾರಣ 3.ಕರಾರು 5.ಡಿಕಾವು 7.ಮಿಸುನಿ 8.ರಾಯಸ 9.ಜ್ಞಾಪಕ 11.ಸನಿಹ 12.ಮಲ್ಲಿಗೆ 13.ರಮಣಿ

ಸುಡೊಕು 4938

8		2		4		1		5
			8		9		6	
9		6			7	2		4
			1	6			2	
	2			7	3	8		6
				8				
		8		9	2	5		1
1		5	7					
2		3		5	1	9		8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4937 ಸುಡೊಕು

2	8	3	5	7	9	1	4	6
5	1	4	6	2	8	7	3	9
7	6	9	4	1	3	8	5	2
3	2	8	1	9	4	6	7	5
6	5	1	7	3	2	9	8	4
4	9	7	8	5	6	3	2	1
9	4	2	3	6	7	5	1	8
1	3	6	2	8	5	4	9	7
8	7	5	9	4	1	2	6	3

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ

12ನೇ ವರ್ಷದ ಚಿರಸ್ಮರಣೆ

ಶ್ರೀಮತಿ ಎನ್. ಲಕ್ಷ್ಮಮ್ಮನವರು
ಕೆ.ನಾರಾಯಣಪುರ, ಎಂ.ನಂಜಪ್ಪನವರ ವೃತ್ತ, ಬೆಂ-77.
ನೀವು ನಮ್ಮನಗಲಿ ಇಂದಿಗೆ 12ವರ್ಷಗಳಾದರು, ನಿಮ್ಮ ಆಶೀರ್ವಾದವೇ ನಮಗೆ ದಾರಿದೀಪ. ನಿಮ್ಮ ನೆನಪುಗಳೇ ನಮಗೆ ಸದಾ ಸ್ಮರಣೀಯ..
ದುಃಖತಪ್ತರು: ಮಗ-ಸೊಸೆ, ಮೊಮ್ಮಕ್ಕಳು ಮತ್ತು ಎಂ. ನಂಜಪ್ಪನವರ ಕುಟುಂಬವರ್ಗದವರು

8ನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ಲಕ್ಷ್ಮೀದೇವಿ
ನಿಧನ : 30.03.2013
ನೀವು ನಮ್ಮನ್ನಗಲಿ ಎಂಟು ವರ್ಷವಾಯಿತು. ನಿಮ್ಮ ಸವಿನೆನಪು ಸದಾ ಹಸಿರಾಗಿ ನಮ್ಮ ಮನದಲ್ಲಿದೆ. ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ನೀಡಲಿ ಎಂದು ಪ್ರಾರ್ಥಿಸುವ,
ಇಂತಿ ಪತಿ - ವಿ. ಕೃಷ್ಣಪ್ಪ, ಮಕ್ಕಳು, ಕುಟುಂಬವರ್ಗ ಹಾಗೂ ಬಂಧು-ಮಿತ್ರರು
ತ್ಯಾಗರಾಜನಗರ, ಬೆಂ-28.
9341373739, 9900444777
ದಿನಾಂಕ 30.03.2021

ಪ್ರಜಾವಾಣಿ
FOR ADVERTISEMENT QUERIES
• OBITUARY
• REMEMBRANCES
Contact:
Santhosh : 9880856233
Vishal : 9845114560
Ravi : 9606912256
Office: 080-45557160 /163 /164

ವಿಶ್ವ ಆರೋಗ್ಯ ಸಂಸ್ಥೆ ಹಾಗೂ ಚೀನಾ ಕೈಗೊಂಡ ಜಂಟಿ ಅಧ್ಯಯನ ಪ್ರತಿಪಾದನೆ

ಪ್ರಾಣಿಗಳೇ ಕೋವಿಡ್‌ನ ಮೂಲ ಸಾಧ್ಯತೆ

ಬೀಜಿಂಗ್ (ಎಪಿ): ಬಾವಲಿಯಿಂದ ಮತ್ತೊಂದು ಪ್ರಾಣಿಗೆ ಹಾಗೂ ಪ್ರಾಣಿ ಮೂಲಕ ಮಾನವನಿಗೆ ಕೋವಿಡ್–19 ಹರಡಿರುವ ಸಾಧ್ಯತೆಯೇ ಹೆಚ್ಚು ಎಂದು ವಿಶ್ವ ಆರೋಗ್ಯ ಸಂಸ್ಥೆ ಹಾಗೂ ಚೀನಾ ಕೈಗೊಂಡಿದ್ದ ಜಂಟಿ ಅಧ್ಯಯನ ಹೇಳಿದೆ.

ಜಗತ್ತನ್ನೇ ತಲ್ಲಣಗೊಳಿಸಿರುವ ಕೋವಿಡ್‌ಗೆ ಕಾರಣವಾದ ಕೊರೊನಾ ವೈರಸ್ ಪ್ರಯೋಗಾಲಯದಿಂದ ಸೋರಿಕೆ ಆಗಿರುವ ಸಾಧ್ಯತೆ ತೀರಾ ಕಡಿಮೆ ಎಂದೂ ಈ ಅಧ್ಯಯನ ಹೇಳಿದೆ.

‘ಅಸೋಸಿಯೇಟೆಡ್ ಪ್ರೆಸ್’ ಸುದ್ದಿ ಸಂಸ್ಥೆ ಈ ಅಧ್ಯಯನ ವರದಿಯ ಕರಡನ್ನುಆಧರಿಸಿ ವರದಿ ಮಾಡಿದೆ.

ಈ ವೈರಸ್ ಹೇಗೆ ವಿಶ್ವದೆಲ್ಲೆಡೆ ಪ್ರಸರಣವಾಯಿತು ಎಂಬ ಬಗ್ಗೆ ಈ ವರದಿಯಲ್ಲಿ ಅಲ್ಪ ಮಾಹಿತಿ ಸಿಗಬಹುದಷ್ಟೆ. ಪ್ರಮುಖ ಪ್ರಶ್ನೆಗಳಿಗೆ ಅಧ್ಯಯನ ವರದಿಯಲ್ಲಿ ಉತ್ತರ ಸಿಗುವುದಿಲ್ಲ. ಪ್ರಯೋಗಾಲಯದಿಂದಲೇ ಈ ವೈರಸ್‌ನ ಸೋರಿಕೆಯಾಗಿದೆ ಎಂಬ ವಾದವನ್ನು ಬದಿಗಿಟ್ಟು, ಉಳಿದ ಆಯಾಮದಲ್ಲಿ ಹೆಚ್ಚಿನ ಸಂಶೋಧನೆ ಅಗತ್ಯ ಇದೆ ಎಂಬುದನ್ನು ಅಧ್ಯಯನ ಕೈಗೊಂಡಿದ್ದ ತಂಡ ಪ್ರತಿಪಾದಿಸುತ್ತದೆ ಎಂದು ಸುದ್ದಿಸಂಸ್ಥೆ ಹೇಳಿದೆ.

ಕೋವಿಡ್–19ಗೆ ಕಾರಣವಾಗುವ ‘ಸಾರ್ಸ್–ಕೋವ್–2’ ವೈರಸ್ ಪ್ರಸರಣ ಕುರಿತಂತೆ ನಾಲ್ಕು ಸಾಧ್ಯತೆಗಳನ್ನು ಸಂಶೋಧಕರು ಮುಂದಿಟ್ಟಿದ್ದಾರೆ.

ಮೊದಲನೇ ಸಾಧ್ಯತೆ ಎಂದರೆ, ಬಾವಲಿಗಳಿಂದ ಪ್ರಾಣಿಯೊಂದರ ಮೂಲಕ ಮನುಷ್ಯನಿಗೆ ವೈರಸ್‌ನ ಪ್ರಸರಣ. ಈ ರೀತಿಯ ಪ್ರಸರಣದ ಸಾಧ್ಯತೆಯೇ ಅಧಿಕ ಎಂಬುದು ಸಂಶೋಧಕರ ಪ್ರತಿಪಾದನೆಯಾಗಿದೆ.

ಬಾವಲಿಗಳಿಂದ ನೇರವಾಗಿ ಮನುಷ್ಯರಿಗೆ ಪ್ರಸರಣವಾಗಿರುವ ಸಾಧ್ಯತೆ ಇದೆ ಎಂಬುದು ಎರಡನೇ ವಾದ. ಶೀತಲೀಕರಿಸಿದ ಆಹಾರ ಉತ್ಪನ್ನಗಳ ಮೂಲಕ ಹರಡಿರಬಹುದು ಎಂಬುದು ಮೂರನೇ ವಾದ. ಈ ರೀತಿಯ ಪ್ರಸರಣದ ಸಾಧ್ಯತೆ ಬಹಳ ಕಡಿಮೆ ಎಂಬುದು ಸಂಶೋಧಕರ ಪ್ರತಿಪಾದನೆಯಾಗಿದೆ.

ಪ್ಯಾಂಗೋಲಿನ್‌ಗಳಲ್ಲಿ ಸಹ ಕೊರೊನಾ ವೈರಸ್‌ಗಳ ವಾಹಕಗಳಾಗಿವೆ. ಮಿಂಕ್ ಹಾಗೂ ಬೆಕ್ಕುಗಳು ಕೋವಿಡ್–19 ಸೋಂಕಿಗೆ ಹೆಚ್ಚು ಒಳಗಾಗುತ್ತವೆ. ಈ ಪ್ರಾಣಿಗಳು ಸಹ ಕೊರೊನಾ ವೈರಸ್ ವಾಹಕಗಳಂತೆ ಕಾರ್ಯ ಮಾಡುತ್ತವೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಜಂಟಿ ಅಧ್ಯಯನ ತಂಡದ ನೇತೃತ್ವವನ್ನು ವಿಶ್ವ ಆರೋಗ್ಯ ಸಂಸ್ಥೆಯ ತಜ್ಞ ಪೀಟರ್ ಬೆನ್ ಎಂಬರೇಕ್ ವಹಿಸಿದ್ದರು. ಈ ತಂಡ, ಮೊದಲ ಬಾರಿಗೆ ಕೋವಿಡ್–19 ವರದಿಯಾದ ವುಹಾನ್ ನಗರಕ್ಕೆ ಭೇಟಿ ನೀಡಿ, ಅಧ್ಯಯನ ಕೈಗೊಂಡಿದೆ.

ಜಂಟಿ ಅಧ್ಯಯನ ತಂಡ ಸಿದ್ಧಪಡಿಸಿರುವ ಈ ವರದಿಯೇ ಅಂತಿಮ ಎಂಬುದರ ಬಗ್ಗೆಯೂ ಸ್ಪಷ್ಟತೆ ಇಲ್ಲ ಎಂದು ಸುದ್ದಿಸಂಸ್ಥೆ ಹೇಳಿದೆ.

ಕರ್ನಾಟಕ ಸೇರಿದಂತೆ 8 ರಾಜ್ಯಗಳಲ್ಲಿ ಕೋವಿಡ್ ಪ್ರಕರಣ ಹೆಚ್ಚಳ

ನವದೆಹಲಿ (ಪಿಟಿಐ): ಮಹಾರಾಷ್ಟ್ರ, ಕರ್ನಾಟಕ ಮತ್ತು ಪಂಜಾಬ್ ಸೇರಿದಂತೆ ದೇಶದ 8 ರಾಜ್ಯಗಳಲ್ಲಿ ದೈನಂದಿನ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಾಗಿದ್ದು, ಸೋಮವಾರ ದೇಶದಲ್ಲಿ ಒಟ್ಟು 68,020 ಹೊಸ ಪ್ರಕರಣಗಳು (ಶೇ 84.5) ದಾಖಲಾಗಿವೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಮತ್ತೊಂದೆಡೆ ದೇಶದಲ್ಲಿ ಕೋವಿಡ್–19 ಲಸಿಕೆ ಪಡೆದವರ ಸಂಖ್ಯೆ 6 ಕೋಟಿ ದಾಟಿದೆ ಎಂದೂ ಸಚಿವಾಲಯವು ಮಾಹಿತಿ ನೀಡಿದೆ.

ಮಹಾರಾಷ್ಟ್ರದಲ್ಲಿ ಅತಿಹೆಚ್ಚು ದೈನಂದಿನ ಪ್ರಕರಣಗಳು ಅಂದರೆ ಒಟ್ಟು 40,414 ಪ್ರಕರಣಗಳು ದಾಖಲಾಗಿದ್ದರೆ, ಕರ್ನಾಟಕದಲ್ಲಿ 3,082, ಪಂಜಾಬ್‌ನಲ್ಲಿ 2,870, ಮಧ್ಯಪ್ರದೇಶದಲ್ಲಿ 2,276, ಗುಜರಾತ್‌ನಲ್ಲಿ 2,270, ಕೇರಳದಲ್ಲಿ 2,216, ತಮಿಳುನಾಡಿನಲ್ಲಿ 2,194 ಹಾಗೂ ಛತ್ತೀಸಗಡದಲ್ಲಿ 2,153 ಪ್ರಕರಣಗಳು ದಾಖಲಾಗಿವೆ ಎಂದು ಸಚಿವಾಲಯದ ಅಂಕಿ–ಅಂಶಗಳು ತಿಳಿಸಿವೆ.

ಭಾರತದಲ್ಲಿ ಸಕ್ರಿಯ ಕೋವಿಡ್ ಪ್ರಕರಣಗಳ ಸಂಖ್ಯೆ 5,21,808ಕ್ಕೆ ಏರಿಕೆಯಾಗಿದೆ. ಮಹಾರಾಷ್ಟ್ರ, ಕೇರಳ, ಪಂಜಾಬ್, ಕರ್ನಾಟಕ ಮತ್ತು ಛತ್ತೀಸ್‌ಗಡದಲ್ಲಿ ಒಟ್ಟು ಸಕ್ರಿಯ ಪ್ರಕರಣಗಳ ಸಂಖ್ಯೆಯು ಶೇ 80.17ರಷ್ಟಿದೆ. 17 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಕಡಿಮೆ ಪ್ರಕರಣಗಳು ವರದಿಯಾಗಿವೆ.

ಮಹಾರಾಷ್ಟ್ರ, ಗುಜರಾತ್, ಪಂಜಾಬ್, ಮಧ್ಯಪ್ರದೇಶ, ದೆಹಲಿ, ತಮಿಳುನಾಡು, ಛತ್ತೀಸಗಡ, ಕರ್ನಾಟಕ, ಹರಿಯಾಣ ಮತ್ತು ರಾಜಸ್ಥಾನಗಳಲ್ಲಿ ದೈನಂದಿನ ಕೋವಿಡ್ ಪ್ರಕರಣಗಳ ಸಂಖ್ಯೆಯಲ್ಲಿ ಏರುಗತಿಯಾಗುತ್ತಿದೆ ಎಂದು ಆರೋಗ್ಯ ಸಚಿವಾಲಯವು ಹೇಳಿದೆ.



ಸ್ಪುಟ್ನಿಕ್–ವಿ ಲಸಿಕೆ: ಭಾರತದಲ್ಲಿ ಅನುಮೋದನೆಯ ನಿರೀಕ್ಷೆ

ಸ್ಪುಟ್ನಿಕ್–ವಿ ಲಸಿಕೆ

ಹೈದರಾಬಾದ್ (ಪಿಟಿಐ): ಕೋವಿಡ್ ನಿಯಂತ್ರಿಸುವ ಸಲುವಾಗಿ ರಷ್ಯಾ ಅಭಿವೃದ್ಧಿಪಡಿಸಿರುವ ಸ್ಪುಟ್ನಿಕ್–ವಿ ಲಸಿಕೆಗೆ ಭಾರತದ ಔಷಧ ಮಹಾನಿಯಂತ್ರಕರಿಂದ (ಡಿಸಿಜಿಐ) ಕೆಲ ವಾರಗಳಲ್ಲಿಯೇ ಅನುಮೋದನೆ ದೊರೆಯಬಹುದು ಎಂಬ ನಿರೀಕ್ಷೆ ಇದೆ ಎಂದು ಡಾ. ರೆಡ್ಡೀಸ್ ಲ್ಯಾಬ್‌ನ ಮುಖ್ಯಸ್ಥರು ತಿಳಿಸಿದ್ದಾರೆ.

‘ಇದು ಎರಡು ಡೋಸ್‌ನ ಲಸಿಕೆಯಾಗಿದ್ದು, ಮೊದಲ ಡೋಸ್ ಪಡೆದ 21ನೇ ದಿನಕ್ಕೆ ಇನ್ನೊಂದು ಡೋಸ್ ಪಡೆಯಬೇಕು. ಇದರಿಂದ 28ರಿಂದ 42 ದಿನಗಳಲ್ಲಿ ಗರಿಷ್ಠ ರೋಗ ನಿರೋಧಕ ಶಕ್ತಿ ವೃದ್ಧಿಯಾಗುತ್ತದೆ. ಕೆಲವೇ ವಾರಗಳಲ್ಲಿ ಇದು ಲಭ್ಯವಾಗುತ್ತದೆ ಎಂಬ ನಿರೀಕ್ಷೆಯಿದೆ’ ಎಂದು ಕಂಪನಿಯ ಸಿಇಒ ದೀಪಕ್ ಸಪ್ರಾ ಹೇಳಿದರು.

ಸಪ್ರಾ ಅವರು ಭಾನುವಾರ ಸಂಜೆ ನಡೆದ ವೆಬಿನಾರ್‌ನಲ್ಲಿ ಮಾತನಾಡುವಾಗ, ಸ್ಪುಟ್ನಿಕ್–ವಿ ಲಸಿಕೆ ಯಾವಾಗ ಲಭ್ಯವಾಗುತ್ತದೆ ಮತ್ತು ಇದು ಎಷ್ಟು ಡೋಸ್‌ನ ಲಸಿಕೆ ಎಂಬ ಪ್ರಶ್ನೆಗಳು ಕೇಳಿಬಂದವು. ಅದಕ್ಕೆ ಅವರು ಪ್ರತಿಕ್ರಿಯಿಸಿದರು.

ಸ್ಪುಟ್ನಿಕ್–ವಿ ಲಸಿಕೆಯನ್ನು ಭಾರತ ಮತ್ತು ಇತರ ದೇಶಗಳಿಗೆ ತರಲು ಡಾ. ರೆಡ್ಡೀಸ್ ಲ್ಯಾಬ್ ರಷ್ಯಾದ ನೇರ ಹೂಡಿಕೆ ನಿಧಿಯೊಂದಿಗೆ (ಆರ್‌ಡಿಐಎಫ್) ಸಹಭಾಗಿತ್ವವಹಿಸಿದೆ ಎಂದು ಅವರು ಹೇಳಿದರು.

ಲಸಿಕೆಯ ಪ್ರಯೋಗಗಳನ್ನು ರಷ್ಯಾ, ಭಾರತ, ಯುಎಇ ಮತ್ತು ಇತರ ದೇಶಗಳಲ್ಲಿ ನಡೆಸಲಾಗಿದೆ. ಪ್ರತಿಷ್ಠಿತ ಜರ್ನಲ್ ಲ್ಯಾನ್ಸೆಟ್‌ನಲ್ಲಿ ಪ್ರಕಟವಾದಂತೆ ಲಸಿಕೆಯು ಶೇ 91.6 ರಷ್ಟು ಪರಿಣಾಮಕಾರಿ ಆಗಿದೆ ಎಂದರು.

ಭಾರತದಲ್ಲಿನ ಪ್ರಯೋಗಗಳ ಮಾಹಿತಿಯು ಪ್ರಸ್ತುತ ಭಾರತೀಯ ಔಷಧ ನಿಯಂತ್ರಕರ ಬಳಿ ಇದೆ ಎಂದ ಅವರು, ಮುಂದಿನ ಕೆಲವು ವಾರಗಳಲ್ಲಿ ಇದಕ್ಕೆ ಅನುಮೋದನೆ ಸಿಗಬಹುದು ಎಂದರು.

‘ಭಾರತದಲ್ಲಿ ಲಸಿಕೆ ಅಭಿಯಾನ ಮತ್ತು ಕೋವಿಡ್–19ರ ಎರಡನೇ ಅಲೆ’ ಕುರಿತ ವೆಬಿನಾರ್ ಅನ್ನು ತೆಲಂಗಾಣದ ಅಖಿಲ ಭಾರತ ವೃತ್ತಿಪರ ಕಾಂಗ್ರೆಸ್ (ಎಐಪಿಸಿ) ಆಯೋಜಿಸಿತ್ತು.

ಬ್ಲಾಕ್ ಅಭಿವೃದ್ಧಿ ಸಮಿತಿ ಸದಸ್ಯನ ಹತ್ಯೆ

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಬಾರಾಮುಲ್ಲಾ ಜಿಲ್ಲೆಯ ಸೊಪೋರ್ ಪ್ರದೇಶದಲ್ಲಿ ಸೋಮವಾರ ಉಗ್ರರು ನಡೆಸಿದ ದಾಳಿಯಲ್ಲಿ ಬ್ಲಾಕ್ ಅಭಿವೃದ್ಧಿ ಸಮಿತಿ (ಬಿಡಿಸಿ) ಸದಸ್ಯ ಮತ್ತು ಅವರ ಭದ್ರತಾ ಸಿಬ್ಬಂದಿ ಕೊಲೆಯಾಗಿದ್ದಾರೆ. ದಾಳಿಯಲ್ಲಿ ನಾಗರಿಕರಿಬ್ಬರಿಗೂ ಗಾಯಗಳಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಸೊಪೋರ್‌ನ ಪುರಸಭೆ ಕಚೇರಿ ಹೊರಭಾಗ ಬಿಡಿಸಿ ಸದಸ್ಯ ರಿಯಾಜ್ ಅಹ್ಮದ್ ಮತ್ತು ಅವರ ಭದ್ರತಾ ಸಿಬ್ಬಂದಿ ಶಫಾತ್ ಅಹ್ಮದ್ ಅವರ ಮೇಲೆ ಉಗ್ರರು ಗುಂಡಿನ ದಾಳಿ ನಡೆಸಿದರು. ಇಬ್ಬರೂ ಸ್ಥಳದಲ್ಲಿಯೇ ಮೃತಪಟ್ಟರು ಎಂದು ಪೊಲೀಸರು ಹೇಳಿದ್ದಾರೆ.

ಪೊಲೀಸರು ಘಟನಾ ಪ್ರದೇಶದಲ್ಲಿ ಸುತ್ತುವರಿದಿದ್ದು, ಉಗ್ರರ ಪತ್ತೆಗೆ ಶೋಧ ಕೈಗೊಂಡಿದ್ದಾರೆ.

ಹೊಟ್ಟೆ ನೋವು: ಶರದ್ ಪವಾರ್‌ಗೆ ನಾಳೆ ಶಸ್ತ್ರಚಿಕಿತ್ಸೆ

ಶರದ್ ಪವಾರ್

ಮುಂಬೈ (ಪಿಟಿಐ): ಪಿತ್ತಕೋಶದ ಸಮಸ್ಯೆ ಎದುರಿಸುತ್ತಿರುವ ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರು ಇಲ್ಲಿನ ಆಸ್ಪತ್ರೆಯೊಂದರಲ್ಲಿ ಬುಧವಾರ ಶಸ್ತ್ರಚಿಕಿತ್ಸೆಗೆ ಒಳಗಾಗಲಿದ್ದಾರೆ ಎಂದು ಮಹಾರಾಷ್ಟ್ರದ ಸಚಿವ ನವಾಬ್ ಮಲಿಕ್ ಸೋಮವಾರ ಇಲ್ಲಿ ಹೇಳಿದ್ದಾರೆ.

‘ನಮ್ಮ ಪಕ್ಷದ ಅಧ್ಯಕ್ಷ ಶರದ್ ಪವಾರ್ ಅವರಿಗೆ ಭಾನುವಾರ ಸಂಜೆ ಹೊಟ್ಟೆ ನೋವು ಕಾಣಿಸಿಕೊಂಡಿತ್ತು. ನಂತರ ಅವರನ್ನು ತಪಾಸಣೆಗಾಗಿ ಇಲ್ಲಿನ ಕ್ಯಾಂಡಿ ಆಸ್ಪತ್ರೆಗೆ ಕರೆದೊಯ್ಯಲಾಯಿತು. ತಪಾಸಣೆ ಬಳಿಕ, ಪಿತ್ತಕೋಶದಲ್ಲಿ ಸಮಸ್ಯೆ ಇದೆ ಎಂಬುದು ಗೊತ್ತಾಯಿತು’ ಎಂದು ಮಲಿಕ್ ಟ್ವೀಟ್ ಮಾಡಿದ್ದಾರೆ.

‘ನಿಗದಿಯಾಗಿದ್ದ ಅವರ ಎಲ್ಲ ಕಾರ್ಯಕ್ರಮಗಳನ್ನು ರದ್ದುಪಡಿಸಲಾಗಿದೆ’ ಎಂದು ಅವರು ಹೇಳಿದ್ದಾರೆ.

ಮೈತ್ರಿ ಸರ್ಕಾರ ಸುಭದ್ರ: ಶಿವಸೇನಾ, ಎನ್‌ಸಿಪಿ ಪ್ರತಿಪಾದನೆ

ಪ್ರಜಾವಾಣಿ ವಾರ್ತೆ

ಮುಂಬೈ: ಎನ್‌ಸಿಪಿ ಮುಖ್ಯಸ್ಥ ಶರದ್‌ಪವಾರ್ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿಯಾಗಿದ್ದಾರೆ ಎಂಬ ಸುದ್ದಿ ಚರ್ಚೆ ಹುಟ್ಟು ಹಾಕಿರುವ ನಡುವೆಯೇ, ‘ಮಹಾ ವಿಕಾಸ್ ಆಘಾಡಿ ಸರ್ಕಾರ ಸುಭದ್ರವಾಗಿದೆ’ ಎಂದು ಶಿವಸೇನಾ ಹಾಗೂ ಎನ್‌ಸಿಪಿ ಸೋಮವಾರ ಸ್ಪಷ್ಟಪಡಿಸಿವೆ.

ಪವಾರ್ ಮತ್ತು ಶಾ ನಡುವೆ ಯಾವ ಸಭೆಯೂ ನಡೆದಿಲ್ಲ ಎಂದು ಎನ್‌ಸಿಪಿ ಹಾಗೂ ಶಿವಸೇನಾ ಬಲವಾಗಿ ಪ್ರತಿಪಾದಿಸುತ್ತಲೇ ಇವೆ. ಈ ವಿಷಯದ ಬಗ್ಗೆ ತುಟಿ ಬಿಚ್ಚದ ಬಿಜೆಪಿ ನಡೆ ಮಾತ್ರ ಊಹಾಪೋಹಕ್ಕೆಡೆ ಮಾಡಿದೆ.

ಮಹಾವಿಕಾಸ್ ಆಘಾಡಿಯ (ಎಂವಿಎ) ಮತ್ತೊಂದು ಅಂಗ ಪಕ್ಷವಾದ ಕಾಂಗ್ರೆಸ್ ಈ ವರೆಗೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಕೊಚ್ಚಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಎನ್‌ಸಿಪಿ ಪ್ರಧಾನ ಕಾರ್ಯದರ್ಶಿ ಪ್ರಫುಲ್ ಪಟೇಲ್, ‘ಪವಾರ್ ಅವರೇ ಮಹಾ ವಿಕಾಸ್ ಆಘಾಡಿಯನ್ನು ರಚಿಸಿದ್ದಾರೆ. ಹೀಗಾಗಿ ಅಮಿತ್ ಶಾ ಅವರನ್ನು ಪವಾರ್ ಅವರು ಭೇಟಿಯಾಗಿದ್ದಾರೆ ಎಂಬಂಥ ಅನಗತ್ಯ ವಿಷಯಗಳ ಬಗ್ಗೆ ವಿಚಾರ ಮಾಡುವ ಅಗತ್ಯ ಇಲ್ಲ’ ಎಂದು ಹೇಳಿದರು.

ಖಜುರಾಹೊದಲ್ಲಿರುವ ಕಂದಾರಿಯಾ ಮಹಾದೇವ ದೇವಸ್ಥಾನ (ಸಂಗ್ರಹ ಚಿತ್ರ)

ಅಂತರರಾಷ್ಟ್ರೀಯ ಸಮಾವೇಶ ಸ್ಥಳವಾಗಿ ಖಜುರಾಹೊ ಅಭಿವೃದ್ಧಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಲೆಯ ಖಜಾನೆ ಎಂದೇ ಖ್ಯಾತಿಯಾದ, ಮಧ್ಯಪ್ರದೇಶದಲ್ಲಿರುವ ಖಜುರಾಹೊ ಪಟ್ಟಣವನ್ನು ಅಂತರರಾಷ್ಟ್ರೀಯ ಸಮಾವೇಶ ಹಾಗೂ ಪ್ರದರ್ಶನ ಸ್ಥಳವಾಗಿ ಅಭಿವೃದ್ಧಿಪಡಿಸಲು ಕೇಂದ್ರ ಸರ್ಕಾರ ಚಿಂತನೆ ನಡೆಸಿದೆ.

ಸಭೆಗಳು, ಸಮಾವೇಶಗಳು ಹಾಗೂ ಪ್ರದರ್ಶನಗಳನ್ನು ನಡೆಸಲು ಬೇಕಾದ ಮೂಲಸೌಕರ್ಯಗಳನ್ನು ಒಳಗೊಂಡ ಕೇಂದ್ರಗಳು ದೆಹಲಿ, ಮುಂಬೈ, ಚೆನ್ನೈ, ಹೈದರಾಬಾದ್, ಗೋವಾ, ಬೆಂಗಳೂರು ನಗರಗಳಲ್ಲಿ ಇವೆ.

ಇನ್ನೂ ಕೆಲವು ಸ್ಥಳಗಳಲ್ಲಿ ಇಂಥ ಕೇಂದ್ರಗಳನ್ನು ಸ್ಥಾಪಿಸುವ ಸಲುವಾಗಿ ಕೇಂದ್ರ ಸರ್ಕಾರ ಕೆಲವು ಸ್ಥಳಗಳನ್ನು ಗುರುತಿಸಿದೆ. ಆಗ್ರಾ, ಪುಣೆ, ಅಹಮದಾಬಾದ್ ನಗರಗಳನ್ನು ಒಳಗೊಂಡ ಪಟ್ಟಿಯಲ್ಲಿ ಖಜುರಾಹೊ ಅಗ್ರ ಸ್ಥಾನದಲ್ಲಿದೆ.

‘ಅಂತರರಾಷ್ಟ್ರೀಯ ಸಮಾವೇಶ, ಪ್ರದರ್ಶನಗಳ ಆಯೋಜನೆಗೆ ಉತ್ತಮ ಕೇಂದ್ರವನ್ನು ಅಭಿವೃದ್ಧಿಪಡಿಸಲು ಅನುಕೂಲವಾದ ಸ್ಥಳವನ್ನು ಹುಡುಕುತ್ತಿದ್ದೇವೆ. ಈ ಕೇಂದ್ರಕ್ಕೆ ಸಮೀಪದಲ್ಲಿ ಪ್ರವಾಸಿ ತಾಣಗಳೂ ಇರಬೇಕು. ಸಮಾವೇಶಗಳಲ್ಲಿ ಪಾಲ್ಗೊಂಡ ಗಣ್ಯರು ಈ ತಾಣಗಳನ್ನು ಕಣ್ತುಂಬಿಕೊಂಡು ಸವಿನೆನಪುಗಳೊಂದಿಗೆ ತಮ್ಮ ದೇಶಕ್ಕೆ ತೆರಳಬೇಕು ಎಂಬುದೇ ನಮ್ಮ ಉದ್ದೇಶ’ ಎಂದು ಮಧ್ಯಪ್ರದೇಶದ ಪ್ರವಾಸೋದ್ಯಮ ಇಲಾಖೆಯ ಪ್ರಧಾನ ಕಾರ್ಯದರ್ಶಿ ಶಿವಶೇಖರ್ ಶುಕ್ಲಾ ಹೇಳಿದರು.

‘ಸಮಾವೇಶ, ಪ್ರದರ್ಶನಗಳು ಪ್ರವಾಸೋದ್ಯಮ ಅಭಿವೃದ್ಧಿಗೆ ಪೂರಕ. ಹೀಗಾಗಿ ಎಲ್ಲ ದೃಷ್ಟಿಯಿಂದಲೂ ಖಜುರಾಹೊ ಉತ್ತಮವಾದ ಸ್ಥಳವಾಗಿದೆ’ ಎಂದೂ ಅವರು ಹೇಳಿದರು.

ಕಳೆದ ವಾರ ಕೇಂದ್ರ ಪ್ರವಾಸೋದ್ಯಮ ಸಚಿವ ಪ್ರಹ್ಲಾದ್‌ಸಿಂಗ್ ಪಟೇಲ್ ಅವರು ಖಜುರಾಹೊದಲ್ಲಿ ಮಹಾರಾಜಾ ಛತ್ರಸಾಲ್ ಕನ್ವೆನ್ಷನ್ ಸೆಂಟರ್ ಅನ್ನು ಉದ್ಘಾಟಿಸಿದರು. 14,880 ಚದರಡಿ ವಿಸ್ತೀರ್ಣ ಇರುವ ಈ ಸೆಂಟರ್‌ನಲ್ಲಿ ಬೃಹತ್ ಪ್ರಮಾಣದ ಸಮಾವೇಶ, ಕಾರ್ಪೊರೇಟ್ ಸಭೆಗಳನ್ನು ಆಯೋಜಿಸಬಹುದಾಗಿದೆ.

ಎನ್‌ಜಿಒಗಳಿಗೆ ₹ 50,000 ಕೋಟಿ ವಿದೇಶಿ ದೇಣಿಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದ ಎನ್‌ಜಿಒಗಳಿಗೆ 2016–17 ರಿಂದ 2019–20 ಅವಧಿಯಲ್ಲಿ ₹ 50,000 ಕೋಟಿಗೂ ಅಧಿಕ ವಿದೇಶಿ ದೇಣಿಗೆ ಹರಿದು ಬಂದಿದೆ. ಅದರಲ್ಲೂ, ಕರ್ನಾಟಕ, ದೆಹಲಿ, ತಮಿಳುನಾಡು, ಮಹಾರಾಷ್ಟ್ರ ಹಾಗೂ ಕೇರಳದಲ್ಲಿರುವ ಎನ್‌ಜಿಒಗಳಿಗೆ ಹೆಚ್ಚು ದೇಣಿಗೆ ಸಂದಾಯವಾಗಿದೆ ಎಂದು ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವ ಅಂಕಿ–ಅಂಶಗಳು ಹೇಳುತ್ತವೆ.

130 ದೇಶಗಳ ದಾನಿಗಳು ದೇಣಿಗೆ ನೀಡಿದ್ದು, ಈ ಪೈಕಿ ಅಮೆರಿಕ ಮೊದಲ ಸ್ಥಾನದಲ್ಲಿದೆ. ಈ ನಾಲ್ಕು ವರ್ಷಗಳ ಅವಧಿಯಲ್ಲಿ ದೇಶದ ವಿವಿಧ ಎನ್‌ಜಿಒಗಳಿಗೆ ಅಮೆರಿಕ ₹ 19,942.22 ಕೋಟಿ ದೇಣಿಗೆ ನೀಡಿದೆ. ಇದು ಈ ಅವಧಿಯಲ್ಲಿ ಹರಿದು ಬಂದ ಒಟ್ಟು ದೇಣಿಗೆ ಶೇ 39.11ರಷ್ಟಾಗುವುದು.

ಈ ಅವಧಿಯಲ್ಲಿ ದೆಹಲಿಯಲ್ಲಿನ ಎನ್‌ಜಿಒಗಳಿಗೆ ಗರಿಷ್ಠ ದೇಣಿಗೆ ₹ 12,861.64 ಕೋಟಿ ಹರಿದು ಬಂದಿದೆ. ನಂತರದ ಸ್ಥಾನದಲ್ಲಿ ತಮಿಳುನಾಡು (₹ 6,395.26 ಕೋಟಿ), ಮಹಾರಾಷ್ಟ್ರ (₹ 5,367 ಕೋಟಿ) ಹಾಗೂ ಕರ್ನಾಟಕದ (₹5,246.72 ಕೋಟಿ) ಎನ್‌ಜಿಒಗಳಿವೆ. ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆ (ಎಫ್‌ಸಿಆರ್‌ಎ) ಅಡಿ ನೋಂದಾಯಿಸಿಕೊಂಡಿರುವ ಎನ್‌ಜಿಒಗಳು, ಸ್ವಯಂ ಸೇವಾ ಸಂಸ್ಥೆಗಳು ವಿದೇಶಿಗಳಿಂದ ದೇಣಿಗೆ ಪಡೆಯಲು ಅವಕಾಶ ಇದೆ.

ಮಿಜೋರಾಂನಲ್ಲಿ ಮ್ಯಾನ್ಮಾರ್ ನಿರಾಶ್ರಿತರು

ಐಜ್ವಾಲ್ (ಪಿಟಿಐ): ಮಿಲಿಟರಿ ದಂಗೆಯಿಂದ ನಲುಗಿರುವ ಮ್ಯಾನ್ಮಾರ್‌ನಿಂದ 1000ಕ್ಕೂ ಅಧಿಕ ಜನರು ಮಿಜೋರಾಂನಲ್ಲಿ ಆಶ್ರಯ ಪಡೆದಿದ್ದಾರೆ. ಮರಳಿ ಅವರ ದೇಶಕ್ಕೆ ಕಳಿಸಿದ್ದರೂ, ಅವರು ಪುನಃ ರಾಜ್ಯದೊಳಗೆ ನುಸುಳಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಹೋಳಿ ಸಂಭ್ರಮ

ಗುವಾಹಟಿಯ ಫ್ಯಾನ್ಸಿ ಬಜಾರ್‌ನಲ್ಲಿ ಜನರು ಪರಸ್ಪರ ಬಣ್ಣ ಎರಚಿ ಸೋಮವಾರ ಹೋಳಿ ಆಚರಿಸಿ ಸಂಭ್ರಮಿಸಿದರು. ಕೋವಿಡ್–19 ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಜಾರಿಗೊಳಿಸಿರುವ ನಿರ್ಬಂಧಗಳನ್ನು ಲೆಕ್ಕಿಸದೇ ಜನರು ಬಣ್ಣಗಳಲ್ಲಿ ಮಿಂದೆದ್ದರು -ಪಿಟಿಐ ಚಿತ್ರ

ಸುಯೆಜ್ ಕಾಲುವೆಯಲ್ಲಿ ನಡೆದಿದ್ದ ಘಟನೆ

ಸಿಲುಕಿದ್ದ ಬೃಹತ್ ಹಡಗು ತೆರವು

ಸುಯೆಜ್ ಕಾಲುವೆಯಲ್ಲಿ ಸಿಲುಕಿದ್ದ ಬೃಹತ್ ಹಡಗನ್ನು ಸೋಮವಾರ ತೆರವುಗೊಳಿಸಲಾಯಿತು –ಎಎಫ್‌ಪಿಚಿತ್ರ

ಸುಯೆಜ್, ಈಜಿಪ್ಟ್ (ಎಪಿ): ಸುಯೆಜ್ ಕಾಲುವೆಯಲ್ಲಿ ಕಳೆದ ಒಂದು ವಾರದಿಂದ ಸಿಲುಕಿದ್ದ ಎವರ್ ಗಿವನ್ ಬೃಹತ್ ಹಡಗನ್ನು ಸೋಮವಾರ ಮುಕ್ತಗೊಳಿಸಲಾಯಿತು.

10 ಶಕ್ತಿಶಾಲಿ ನಾವೆಗಳನ್ನು ಬಳಸಿಕೊಂಡು ಹಡಗನ್ನು ಹಿಂದು–ಮುಂದು ಚಲಿಸುವಂತೆ ಮಾಡಲಾಯಿತು. ಹುಣ್ಣಿಮೆಯ ದಿನವಾದ್ದರಿಂದ ಉಬ್ಬರ ಹೆಚ್ಚಾಗಿತ್ತು.ಇದೂ ಸಹ ಹಡಗನ್ನು ಆ ಜಾಗದಿಂದ ತೆರವುಗೊಳಿಸಲು ನೆರವಾಯಿತು ಎಂದು ಮೂಲಗಳು ಹೇಳಿವೆ.

ಹಡಗನ್ನು ಮುಕ್ತಗೊಳಿಸುವ ಪ್ರಯತ್ನದಲ್ಲಿನ ಯಶಸ್ಸನ್ನು ನಾವೆಗಳ ಸಿಬ್ಬಂದಿ ಸಂಭ್ರಮಿಸುತ್ತಿರುವ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ.

2,20,000 ಟನ್‌ನಷ್ಟು ಸರಕು ಹೊತ್ತಿದ್ದ ಈ ಹಡಗು ಸುಯೆಜ್ ಕಾಲುವೆಯಲ್ಲಿ ಸಿಲುಕಿದ ಪರಿಣಾಮ ಅಂತರರಾಷ್ಟ್ರೀಯ ವ್ಯಾಪಾರಕ್ಕೆ ತೀವ್ರ ಹಿನ್ನಡೆ ಉಂಟಾಗಿತ್ತು.

ಕಚ್ಚಾ ತೈಲದಿಂದ ಹಿಡಿದು ದನಕರುಗಳವರೆಗೆ ಎಲ್ಲವನ್ನೂ ಸಾಗಿಸುವ ಕನಿಷ್ಠ 367 ಹಡಗುಗಳು ಇನ್ನೂ ಕಾಲುವೆಯ ಮೂಲಕ ಹಾದುಹೋಗಲು ಕಾಯುತ್ತಿವೆ. 12ಕ್ಕೂ ಹೆಚ್ಚು ಹಡಗುಗಳು ದಕ್ಷಿಣ ಆಫ್ರಿಕಾದ ತುದಿಯಲ್ಲಿರುವ ಕೇಪ್ ಆಫ್ ಗುಡ್ ಹೋಪ್ ಸುತ್ತಲೂ ಪರ್ಯಾಯ ಮಾರ್ಗದಲ್ಲಿ ತೆರಳಿವೆ. ಈ ಪ್ರಯಾಣಕ್ಕೆ ಎರಡು ವಾರಗಳು ಹೆಚ್ಚುವರಿಯಾಗಿ ಬೇಕಾಗಲಿದ್ದು, ಸಾಮಗ್ರಿಗಳ ವಿತರಣೆ ವಿಳಂಬವಾಗುತ್ತದೆ ಎಂಬ ಆತಂಕವೂ ಎದುರಾಗಿದೆ.

ಈ ಮಾರ್ಗದಲ್ಲಿ ಕಳೆದ ವರ್ಷ 19 ಸಾವಿರ ಹಡಗುಗಳು ಸಂಚರಿಸಿದ್ದವು. ವಿಶ್ವದ ಶೇ 7ರಷ್ಟು ತೈಲ ಸೇರಿದಂತೆ ಜಾಗತಿಕ ವ್ಯಾಪಾರದ ಶೇ 10ರಷ್ಟು ಸರಕುಗಳ ಸಾಗಣೆ ಈ ಮಾರ್ಗದ ಮೂಲಕ ನಡೆಯುತ್ತದೆ ಎಂದು ಕಾಲುವೆಯ ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600-60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ:7760014526, 9739544856

ತಕ್ಷಣ ಬೇಕಾಗಿದ್ದಾರೆ ಹೊಸದಾದ ಕಂಪನಿಗಳಿಗೆ ಆಫೀಸ್‌ಗಳಿಗೆ MNC ಕಂಪನಿಗಳಿಗೆ ಹಾಗೂ ಎಲ್ಲಾಜಿಲ್ಲೆಗಳಿಗೆ ಯುವಕಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ 7th,SSLC, PUC, ITI Degree Pass/Fail ಆದವರಿಗೆ, ಉಚಿತ ವಸತಿಯೂಟದೊಂದಿಗೆ ESI/PF ನೊಂದಿಗೆ ಸಂಬಳ 16,800/- ರಿಂದ 45000/- ದವರೆಗೆ. 9538606888, 9916016092

ಬೇಕಾಗಿದ್ದಾರೆ ನೇರನೇಮಕಾತಿ TOYOTA, ಟಾಟಾ ಮೋಟಾರ್ಸ್, TVS, ಬ್ರಿಟಾನಿಯಾಗಳಿಗೆ SSLC, PUC, ITI ನವರು.ಡಿಗ್ರಿಯವರುಗಳು 16,800-56,000/- ವಸತಿಯೂಟವಿದೆ. 7795049766, 7795048129

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8884875553/ 8884875554

Part-Time Jobs

ಮನೆಯಿಂದಲೇ ಕುಳಿತು ಆಫ್‌ಲೈನ್ ಡೇಟಾ ಎಂಟ್ರಿ, ಕನ್ನಡ,ಇಂಗ್ಲೀಷ್ ಬುಕ್ ರೈಟಿಂಗ್ ಫಾರಂ ಫಿಲ್ಲಿಂಗ್ ಕೆಲಸ ಗಳಿಸಿ 15,000-18,000/-. ಕೊರಿಯರ್,ಬುಕ್,ಪೆನ್ ಚಾರ್ಜಸ್ ನಾವೇ ಕೊಡುತ್ತೇವೆ. 9611625051, 9741133555

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ, ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆ ಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು, ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ . ಅನುಭವ ಇರಬಹುದು ಅಥವಾ ಇಲ್ಲದಿರಬಹುದು ಉಚಿತ ಊಟ ವಸತಿ ಸಂಬಳ 10, 000 ರಿಂದ 15,000/- ESI & PF ಸೌಲಭ್ಯವಿರುತ್ತದೆ. ಬೆಂಗಳೂರು - 56. ಸಂಪರ್ಕಿಸಿ : 9606385001, 9606523337 .

ಕೆಲಸಕ್ಕೆ ಬೇಕಾಗಿದ್ದಾರೆ. ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿರುವ MNC ಕಂಪನಿಗಳಿಗೆ,ಆಫೀಸ್ ಗಳಿಗೆ ಕನ್ನಡಬಲ್ಲಂತಹ ಯುವಕರು, ಯುವತಿಯರಿಗೆ ವಸತಿಯೊಂದಿಗೆ + OT 15,800-86,000 8884054160, 9739544856 .

ಮಹಿಳೆಯರಿಗೆ ಮಹಿಳೆಯರಿಗೆ ಮಹಿಳೆಯರಿಗೆ ಮನೆಯಿಂದಲೇ ಕಾಲ್ ಸೆಂಟರ್ ಮಾಡುವಂತಹ ಕೆಲಸ. ಹೆಚ್ಚಿನ ಮಾಹಿತಿಗೆ ನಿಮ್ಮ ಹೆಸರು ಊರಿನ ಹೆಸರು ವಾಟ್ಸಾಪ್ ಮಾಡಿ. ವಾಟ್ಸಾಪ್ ಮಾಡಿ ವಾಟ್ಸಪ್ಪ್ ಮಾಡಿ 9916766429

ಬೇಕಾಗಿದ್ದಾರೆ: 25000ಮಂತ್ಲಿ, ಆಫೀಸ್,ಶಾಪ್ಸ್, ಮಾಲ್ಗಳು, ಮೆಡಿಕಲ್ಸ್, ಗಳಲ್ಲಿ ಕಂಪನಿಯ ವಾಹನಗಳೊಂದಿಗೆ ಅಡ್ವಟೈಸ್ ಮಾಡಲು. ಊಟ,ವಸತಿಉಚಿತ, ಬೆಂಗಳೂರು (ಷರತ್ತುಗಳಿವೆ). 8904379634, 9513670249

ವ್ಯಾಪಾರ

Business to Business

Financial Services

ಮುದ್ರಾ, ಯೋಜನೆಯ ಮೂಲಕ ಕೃಷಿ ಸ್ತಿರಾಸ್ತಿ ವೈಯಕ್ತಿಕ ಬಿಸಿನೆಸ್ ವಿದ್ಯಾ, ವಾಹನ ಸಾಲ 4% ವಾರ್ಷಿಕ ಬಡ್ಡಿಯಲ್ಲಿ ಸಾಲಲಭ್ಯ 8095868219, 7057624634

ಭವಿಷ್ಯ

Astrology

★॥ಶ್ರೀಚಾಮುಂಡೇಶ್ವರಿದೇವಿ ಆರಾಧಕರು॥★ ಕೇರಳದ ಅಘೋರಿ ನಾಗಸಾಧು ಮೋಡಿಮಾಂತ್ರಿಕರು ಮಾಟಮಂತ್ರ, ಸ್ತ್ರೀ-ಪುರುಷ ವಶೀಕರಣ ಇನ್ನಾವುದೇ ಕಠಿಣಸಮಸ್ಯೆಗಳಿದ್ದರೂ ತಕ್ಷಣ ಪರಿಹಾರ.ಶ್ರೀರಾಘವೇಂದ್ರ ಆಚಾರ್ಯರು. 8050061378

★॥ಶ್ರೀಪ್ರಸಿದ್ಧ ರಕ್ತಕಾಂಡೇಶ್ವರಿಯ॥★ ಮಾಟಮಂತ್ರ, ಪ್ರೀತಿಪ್ರೇಮ, ಸ್ತ್ರೀಪುರುಷ ವಶೀಕರಣ ಹಣಕಾಸಿನ ತೊಂದರೆ ಕೊಳ್ಳೆಗಾಲದ ಮೋಡಿ ಪೂಜಾಶಕ್ತಿಯಿಂದ ಶಾಶ್ವತ ಪರಿಹಾರ. ಪಂಡಿತ್.ಕಾಶಿನಾಥಭಟ್ 8050018724

★॥(ಉಚಿತ ಭವಿಷ್ಯ)॥★ ದುರ್ಗಾಅಂಜನಂ ಜ್ಯೋತಿಷ್ಯಾಲಯ ಸಂತಾನಭಾಗ್ಯ, ದಾಂಪತ್ಯ,ಪ್ರೀತಿಯಲ್ಲಿ ಮೋಸ, (ಸ್ತ್ರೀ ಪುರುಷ ವಶೀಕರಣ) ಸಮಸ್ಯೆ ಏನೇಯಿರಲಿ ಕ್ಷಣಮಾತ್ರದಲ್ಲಿ ಪರಿಹಾರ. 8197357241

★॥ಸಿಗಂದೂರು ಚೌಡೇಶ್ವರಿ॥★ ವಶೀಕರಣ ಆಗಬೇಕಾದವರಿಗೆ ಹಚ್ಚುವುದಾಗಲಿ,ತಿನ್ನಿಸುವುದಾಗಲಿ, ಬಟ್ಟೆ,ಫೋಟೋ,ಕೂದಲು ಇಲ್ಲದಿದ್ದರೂ ಸ್ತ್ರೀಪುರುಷ ಲೈಂಗಿಕ ವಶೀಕರಣ, ಸ್ತ್ರೀಯರಿಗೆ 7ಗಂಟೆಗಳಲ್ಲಿ ಉಚಿತ ಪರಿಹಾರ.9845153558

ನಂ.1 ವಶೀಕರಣ ಸ್ಪೆಷಲಿಸ್ಟ್: ಪ್ರೀತಿಯಲ್ಲಿ ನಂಬಿ ಮೋಸ, ಇಷ್ಟಪಟ್ಟವರು ನಿಮ್ಮಂತಾಗಲು, ಸ್ತ್ರೀಪುರುಷ ವಶೀಕರಣ, ದಾಂಪತ್ಯ ಕಲಹ 2ದಿನಗಳಲ್ಲಿ ಪರಿಹಾರ. 8792564467

ರಾವಣ ತಂತ್ರ ಜ್ಯೋತಿಷ್ಯಂ ಪಂಡಿತ್ ಶ್ರೀ ಗಣೇಶ್ ಭಟ್ಟಾಚಾರ್ಯ ಕಠಿಣ ನಿಗೂಢ ಗುಪ್ತ ಸಮಸ್ಯೆಗಳಿಗೆ ಬೇಟಿ ಕೊಡಿ ಯಾವುದೇ ವಶೀಕರಣಗಳಿಗೆ ಕೇವಲ 1665/-. 9845899127.

★ಕೆಲಸಆದ ನಂತರಕಾಣಿಕೆ★ ಎಲ್ಲಿಯೂ ಪರಿಹಾರವಾಗದ ಕಠಿಣ, ನಿಗೂಢ ಗುಪ್ತಸಮಸ್ಯೆಗಳಿಗೆ ಶ್ರೀಸಾಯಿರಾಮ್ ದೀಕ್ಷಿತ್‌ರವರಿಂದ 2ದಿನದಲ್ಲಿ ಗ್ಯಾರಂಟಿ ಪರಿಹಾರ. ಹನುಮಂತನಗರ,ಬೆಂಗಳೂರು. 9880382711

ವೈವಾಹಿಕ

Matrimonial Bureaus

ಎಲ್ಲಾ ಜಾತಿಗಳ ಮೊದಲನೆ ಮತ್ತು ಮರು ಮದುವೆಯ ವೈವಾಹಿಕ ಮಾಹಿತಿಗಾಗಿ ಸಂಪರ್ಕಿಸಿ. ವಧು ವರರ ಫೋಟೋ ವಿವರವನ್ನು 9019566555ಗೆ ವ್ಯಾಟ್ಸಪ್ ಮಾಡಿ

ಪ್ರವಾಸ

Travel

02.05.2021, 14.05.2021, 04.06.2021,04.07.2021 ರಿಂದ 14/20/27 ದಿನಗಳ ಕಾಶಿ,ಗಯಾ, ಪೂರಿಜಗನ್ನಾಥ್, ಪ್ರಯಾಗ, ಅಯೋಧ್ಯ, ಬದರಿನಾಥ್, ಕೇದಾರನಾಥ್, ಗಂಗೋತ್ರಿ, ಯುಮುನೋತ್ರಿ, ವೈಷ್ಣೋದೇವಿ, ದೆಹಲಿ/14 ದಿನಗಳ ಮುಕ್ತಿನಾಥ್, ನೇಪಾಳ, ಪೊಖ್ರಾ,ಜನಕಪುರಿ, ನೈಮಿಶಾರಣ್ಯ, ಘೋರಕ್-ಪುರ್. 'ಶ್ರೀಸುಧಾ ಟ್ರಾವಲ್ಸ್' 080-22429289, 9448119290, 9019301300

21.05.2021, 18ದಿನಗಳು ಚಾರ್ ಧಾಮ್‌ಯಾತ್ರೆ. 24.06.2021, 18ದಿನಗಳು ಅಮರನಾಥ್‌ಯಾತ್ರೆ, ದೆಹಲಿ,ವೈಷ್ಣೋದೇವಿ, ಕಾಶ್ಮೀರ್, ಹಿಮಲಿಂಗ, ಅಮೃತ್‌ಸರ್ ಇತ್ಯಾದಿ. ಜೈರಾಮ್ ಟೂರ್ಸ್ ವಿ.ವಿ.ಪುರಂ,ಬೆಂಗಳೂರು.04. 9342514289, 9686721196

19-4-2021 ಮಧ್ಯ ಪ್ರದೇಶ, ಗುಜರಾತ್, ರಾಜಸ್ತಾನ 17 ದಿನಗಳ ಪ್ರವಾಸ NGS Package Tours, Bangalore +91 7975488469

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH ಪ್ರಜಾವಾಣಿ
Classifieds
EFFECTIVE FROM JUNE 3rd, 2020
DECCAN HERALD & PRAJAVANI CLASSIFIEDS PACKAGE RATES

PUBLICATION	TEXT AD RATE PER INS FOR 15 WORDS	CLASSIFIEDS DISPLAY RATE PER SQCM
DH ALL KARNATAKA+ PV BENGALURU	1020/-	480/-
PV ALL KARNATAKA	900/-	430/-

*GST applicable

SPECIAL SCHEMES ALL CATEGORY

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details
Contact: 9880856233 | 9731810277
9901641752 | 9845114560 | 9886213331

ಸಂಕ್ಷಿಪ್ತ ಸುದ್ದಿ

₹ 1,441 ಕೋಟಿ ಮೊತ್ತದ ಕಚೇರಿ ಸ್ಥಳ ಖರೀದಿ

ನವದೆಹಲಿ (ಪಿಟಿಐ): ಅಸೆಂಡಾಸ್ ಇಂಡಿಯಾ ಟ್ರಸ್ಟ್ (ಎ–ಐಟ್ರಸ್ಟ್) ಕಂಪನಿಯು ಬೆಂಗಳೂರಿನಲ್ಲಿ ಒಟ್ಟು 16.5 ಲಕ್ಷ ಚದರ ಅಡಿ (ಅಂದಾಜು 37 ಎಕರೆ) ಸ್ಥಳಾವಕಾಶ ಇರುವ ಎರಡು ಕಟ್ಟಡಗಳನ್ನು ಖರೀದಿಸಲಿದೆ. ಇದರ ಅಂದಾಜು ಮೌಲ್ಯವು ₹ 1,441 ಕೋಟಿ ಎಂದು ಪ್ರಕಟಣೆ ತಿಳಿಸಿದೆ.

ಬೆಂಗಳೂರಿನ ಹೆಬ್ಬಾಳದ ಐ.ಟಿ. ಪಾರ್ಕ್‌ನಲ್ಲಿನ ಕಟ್ಟಡಗಳ ಖರೀದಿಗೆ ಗಾರ್ಡನ್ ಸಿಟಿ ರಿಯಾಲ್ಟಿ ಪ್ರೈವೇಟ್ ಲಿಮಿಟೆಡ್ ಜೊತೆ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು ಎ–ಐಟ್ರಸ್ಟ್‌ನ ಟ್ರಸ್ಟೀ ಮ್ಯಾನೇಜರ್ ಅಸೆಂಡಾಸ್ ಪ್ರಾಪರ್ಟಿ ಫಂಡ್ ಟ್ರಸ್ಟೀ ಪ್ರೈವೇಟ್ ಲಿಮಿಟೆಡ್ ತಿಳಿಸಿದೆ.

ಒಪ್ಪಂದದಂತೆ ಯೋಜನೆಯ ಅಭಿವೃದ್ಧಿಗೆ ಎ–ಐಟ್ರಸ್ಟ್ ₹ 828 ಕೋಟಿ ನೀಡಲಿದೆ.

ಪಾಕ್: ಹಳೆಯ ದೇವಾಲಯದ ಮೇಲೆ ದಾಳಿ

ಇಸ್ಲಾಮಾಬಾದ್: ರಾವಲ್ಪಿಂಡಿಯಲ್ಲಿ ನವೀಕರಣಗೊಳ್ಳುತ್ತಿರುವ 100 ವರ್ಷಗಳಷ್ಟು ಹಳೆಯ ಹಿಂದೂ ದೇವಾಲಯದ ಮೇಲೆ ಅಪರಿಚಿತರ ಗುಂಪೊಂದು ದಾಳಿ ನಡೆಸಿದ್ದು, ಈ ಸಂಬಂಧ ದೂರು ದಾಖಲಾಗಿದೆ.

ಶನಿವಾರ ರಾತ್ರಿ ನಗರದ ಪುರಾಣ ಕಿಲ ಪ್ರದೇಶದಲ್ಲಿರುವ ದೇವಾಲಯಕ್ಕೆ ನುಗ್ಗಿದ 10 ರಿಂದ 15 ಜನರಿದ್ದ ಗುಂಪು ದೇವಾಲಯದ ಮುಖ್ಯ ಬಾಗಿಲು ಮತ್ತು ಮೇಲಿನ ಮಹಡಿಯಲ್ಲಿರುವ ಮತ್ತೊಂದು ಬಾಗಿಲು ಮತ್ತು ಮೆಟ್ಟಿಲುಗಳಿಗೆ ಹಾನಿ ಮಾಡಿದೆ ಎಂದು ಉತ್ತರ ವಲಯದ ಇವಾಕ್ಯೂ ಟ್ರಸ್ಟ್ ಪ್ರಾಪರ್ಟಿ ಬೋರ್ಡ್ (ಇಟಿಪಿಬಿ) ನ ಭದ್ರತಾ ಅಧಿಕಾರಿ ಸೈಯದ್ ರಾಜಾ ಅಬ್ಬಾಸ್ ಜೈದಿ ಅವರು ರಾವಲ್ಪಿಂಡಿಯ ಬನ್ನಿ ಪೊಲೀಸ್ ಠಾಣೆಯಲ್ಲಿ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ ಎಂದು ಡಾನ್ ಪತ್ರಿಕೆ ವರದಿ ಮಾಡಿದೆ.

ಮಾರ್ಚ್ 24 ರಂದು ದೇವಾಲಯದ ಮುಂಭಾಗದಲ್ಲಿ ಒತ್ತುವರಿ ತೆರವು ಮಾಡಲಾಗಿತ್ತು. ಈ ದಾಳಿಯಲ್ಲಿ ಆ ಅತಿಕ್ರಮಣಕಾರರ ಕೈವಾಡವಿರಬಹುದು ಎಂದು ಶಂಕೆ ವ್ಯಕ್ತಪಡಿಸಿದ್ದಾರೆ.

ದುಶಾಂಬೆ ಸಮಾವೇಶಕ್ಕೆ ಜೈಶಂಕರ್

ದುಶಾಂಬೆ (ಪಿಟಿಐ): ಭಾರತದ ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರು ತಜಕಿಸ್ತಾನದ ರಾಜಧಾನಿ ದುಶಾಂಬೆಗೆ ಬಂದಿಳಿದಿದ್ದು, ಅಫ್ಗಾನಿಸ್ತಾನದಲ್ಲಿ ಶಾಂತಿ ನೆಲೆಸುವ ಕುರಿತು ಚರ್ಚಿಸುವ ಸಂಬಂಧ ನಡೆಯಲಿರುವ ಅಂತರರಾಷ್ಟ್ರೀಯ ಸಮಾವೇಶದಲ್ಲಿ ಪಾಲ್ಗೊಳ್ಳುವರು.

50 ರಾಷ್ಟ್ರಗಳ ಸಚಿವರು, ರಾಜತಾಂತ್ರಿಕರು ಹಾಗೂ ಅಂತರರಾಷ್ಟ್ರೀಯ ಸಂಘಟನೆಗಳ ಪ್ರತಿನಿಧಿಗಳು ಈ ಸಮಾವೇಶದಲ್ಲಿ ಪಾಲ್ಗೊಳ್ಳುವರು.

‘ಹಾರ್ಟ್ ಆಫ್ ಏಷ್ಯಾ–ಇಸ್ತಾಂಬುಲ್ ಪ್ರೊಸೆಸ್’ (ಎಚ್‌ಒಎ–ಐಪಿ) ಎಂದು ಕರೆಯಲಾಗುವ ಈ ಸಮಾವೇಶ ಮೊದಲ ಬಾರಿಗೆ 2011ರ ನವೆಂಬರ್ 2ರಂದು ನಡೆದಿತ್ತು. ದುಶಾಂಬೆಯಲ್ಲಿ ನಡೆಯುತ್ತಿರುವುದು 9ನೇ ಸಮಾವೇಶವಾಗಿದೆ.

‘ದುಶಾಂಬೆ–ಚಾರ್ತುತ್ ಹೆದ್ದಾರಿ ಸ್ಥಳಕ್ಕೆ ಭೇಟಿ ನೀಡಿದೆ. ಭಾರತದ ನೆರವಿನಲ್ಲಿ ಅಭಿವೃದ್ಧಿಪಡಿಸಲಾಗುತ್ತಿರುವ ಈ ಹೆದ್ದಾರಿ ಕಾಮಗಾರಿಯನ್ನು ಬಾರ್ಡರ್ ರೋಡ್ ಆರ್ಗನೈಜೇಷನ್ ಅತ್ಯುತ್ತಮವಾಗಿ ನಿರ್ವಹಿಸಿದೆ. ಅಷ್ಟಪಥ ಹೆದ್ದಾರಿಯಿಂದ ದುಶಾಂಬೆಯಲ್ಲಿ ವಾಹನ ದಟ್ಟಣೆ ಕಡಿಮೆಯಾಗಲಿದೆ’ ಎಂದು ಜೈಶಂಕರ್ ಟ್ವೀಟ್ ಮಾಡಿದ್ದಾರೆ.

ಪಾಕ್ ಜೊತೆ ಮಾತುಕತೆ ಇಲ್ಲ: ‘ಎಚ್‌ಒಎ–ಐಪಿ’ ಸಮಾವೇಶದಲ್ಲಿ ಪಾಕಿಸ್ತಾನದ ವಿದೇಶಾಂಗ ಸಚಿವ ಶಾ ಮಹಮೂದ್ ಖುರೇಶಿ ಪಾಲ್ಗೊಳ್ಳಲಿದ್ದಾರೆ. ಜೈಶಂಕರ್ ಹಾಗೂ ಖುರೇಶಿ ನಡುವೆ ದ್ವಿಪಕ್ಷೀಯ ಸಭೆ ನಡೆಯುವ ಕುರಿತು ಉಭಯ ದೇಶಗಳು ನಿರ್ಧರಿಸಿಲ್ಲ ಎಂದು ಮೂಲಗಳು ಹೇಳಿವೆ.

ಜೈಶಂಕರ್ ಜೊತೆ ಮಾತುಕತೆಗೆ ಪಾಕಿಸ್ತಾನ, ತೆರೆಮರೆಯಲ್ಲಿ ಪ್ರಯತ್ನ ನಡೆಸಿದೆ. ಆದರೆ, ಈ ವಿಷಯವಾಗಿ ಎಚ್ಚರಿಕೆ ಹೆಜ್ಜೆ ಇಡಲು ತೀರ್ಮಾನಿಸಿರುವ ಭಾರತ, ದ್ವಿಪಕ್ಷೀಯ ಸಭೆ ನಡೆಸುವ ಕುರಿತು ಯಾವುದೇ ನಿರ್ಧಾರ ಕೈಗೊಂಡಿಲ್ಲ ಎಂದು ಇವೇ ಮೂಲಗಳು ಹೇಳಿವೆ.

ಮುಂಬೈ ಧಾರಣೆ

ಶೇಂಗಾ

29-3-2021

ಜಾವಾ 70/80(ಹೊಸ)	10900-10950
ಜಾವಾ 80/90(ಹೊಸ)	10400-10450
ದಪ್ಪ ಮಧ್ಯಪ್ರದೇಶ(ಹೊಸ)	9700-9800
ದಪ್ಪ ಗುಜರಾತ್(ಹೊಸ)	9000-9100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1560 (1560)
ಒಂದು ವಾರದ ಡೆಲಿವರಿ	1555 (1555)
ಸೋಯಾ ಕಚ್ಚಾ	1240 (1235)
ಪಾಮ್ ವಾರದ ಡೆಲಿವರಿ	1208 (1200)
ಸೂರ್ಯಕಾಂತಿ ಎಣ್ಣೆ ಕಚ್ಚಾ	1660 (1650)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
44,250 (44,725)
ಬೆಳ್ಳಿ ಕೆ.ಜಿ 64,450 (64,700)

ಆವರಣದಲ್ಲಿ ಶನಿವಾರದ ಧಾರಣೆ

ವೈಯಕ್ತಿಕ ಹಣಕಾಸಿನ ಪಂಚ ಪಾಂಡವರು

● ನರಸಿಂಹ ಬಿ.

ನಮ್ಮಲ್ಲಿ ಹೆಚ್ಚಿನವರಿಗೆ ಸ್ವಂತ ಮನೆ ಮಾಡಬೇಕು, ಸೈಟ್ ಖರೀದಿಸಬೇಕು, ಚಿನ್ನಾಭರಣ ಬೇಕು ಮುಂತಾದ ದುಬಾರಿ ಹಾಗೂ ದೀರ್ಘಕಾಲೀನ ಗುರಿಗಳು ಇರುತ್ತವೆ. ಇವೆಲ್ಲ ನಮ್ಮ ಜೀವನದ ಮುಖ್ಯ ಗುರಿಗಳು ಎಂಬುದರಲ್ಲಿ ಎರಡು ಮಾತಿಲ್ಲ. ಗಮನಿಸಬೇಕಾದ ಸಂಗತಿ ಎಂದರೆ ಇವುಗಳನ್ನು ಈಡೇರಿಸಿಕೊಳ್ಳುವಲ್ಲಿ ಸಾಮಾನ್ಯವಾಗಿ ನಾವು ಇಡೀ ಜೀವನ ಸವೆಸಿ ಆಗಿರುತ್ತದೆ. ಅಂದಹಾಗೆ, ಇವು ನಮ್ಮ ಮೊದಲ ಆದ್ಯತೆಗಳಾಗಬೇಕೋ ಅಥವಾ ಬೇರೆ ಯಾವುದಾದರೂ ಮಧ್ಯಂತರ ಗುರಿಗಳನ್ನು ಹೊಂದುವುದು ಉತ್ತಮವೋ?

ಜೀವನವು ಅನಿಶ್ಚಿತತೆಗಳ ಆಗರ ಎಂಬುದು ಗೊತ್ತಿದ್ದರೂ ನಾವು ಹತ್ತು ಹಲವು ಆಸೆಗಳನ್ನು ಬೆಳೆಸಿಕೊಳ್ಳುತ್ತೇವೆ. ಈ ಆಸೆಗಳೇ ನಮ್ಮನ್ನು ಒಳ್ಳೆಯ ಕೆಲಸ ಮಾಡಲು ಉತ್ತೇಜಿಸುತ್ತವೆ ಕೂಡ. ಈ ಆಸೆಗಳನ್ನು ಹೊಂದುವುದರ ಜೊತೆಗೆ ಸ್ವಲ್ಪ ಪ್ರಾಯೋಗಿಕವಾಗಿ ವಿಚಾರಮಾಡಿ, ಅನಿಶ್ಚಿತತೆಗಳನ್ನು ತರ್ಕಬದ್ಧವಾಗಿ ನಿಭಾಯಿಸಲು ಯೋಜನೆ ರೂಪಿಸುವುದು ಜಾಣ ನಡೆ.

ಸಾಮಾನ್ಯವಾಗಿ ಎದುರಾಗುವ ಐದು ಅನಿಶ್ಚಿತ ಸಂದರ್ಭಗಳು ಹಾಗೂ ಅವನ್ನು ಎದುರಿಸಲು ಯಾವ ಯೋಜನೆ ಹೊಂದಿರಬೇಕು ಎನ್ನುವುದರ ಬಗ್ಗೆ ಗಮನಹರಿಸೋಣ.

1. ಸಾವು ಹಾಗೂ ಅವಧಿ ವಿಮೆ: ಮನೆಯ ಯಜಮಾನ ಕಷ್ಟಪಟ್ಟು ದುಡಿಯುವುದು ಹಾಗೂ ಉಳಿತಾಯ ಮಾಡಿ, ಹೂಡಿಕೆ ಮಾಡುವುದು ತಾನು ಹಾಗೂ ತನ್ನನ್ನು ನಂಬಿದವರು ಸುಖವಾಗಿ, ನೆಮ್ಮದಿಯಿಂದ ಇರಲಿ ಎಂದು. ಆದರೆ ಮನೆ ಯಜಮಾನ ಸಾವನ್ನಪ್ಪಿದರೆ ಅದರಿಂದ ಆಗುವ ಅನಾಹುತ ವರ್ಣಿಸಲು ಅಸಾಧ್ಯ. ಇಂತಹ ವಿಷಮ ಪರಿಸ್ಥಿತಿಯಲ್ಲಿ ಮನೆಯವರನ್ನು ಕಾಪಾಡುವುದು ಆರ್ಥಿಕ ಸುಭದ್ರತೆ. ಈ ಆರ್ಥಿಕ ಸುಭದ್ರತೆಯನ್ನು ತಂದುಕೊಡುವುದೇ ಟರ್ಮ್ ಇನ್ಸುರನ್ಸ್ ಅರ್ಥಾತ್ ಅವಧಿ ವಿಮೆ. ಜವಾಬ್ದಾರಿಯುತ ವ್ಯಕ್ತಿಗಳೆಲ್ಲ ಹೊಂದಿರಲೇಬೇಕಾದ ಹಣಕಾಸಿನ ಉತ್ಪನ್ನ ಇದು.

2. ಆರೋಗ್ಯ ಹಾಗೂ ಆರೋಗ್ಯ ವಿಮೆ: ಬದಲಾದ ಜೀವನ ಶೈಲಿ, ಕಲುಷಿತ ವಾತಾವರಣ ಮತ್ತು ಆಹಾರ ಮುಂತಾದ ಕಾರಣಗಳಿಂದ ಆರೋಗ್ಯ ಎಂಬುದು ಈಚಿನ ವರ್ಷಗಳಲ್ಲಿ ತುಸು ದುಬಾರಿ ಆಗಿದೆ. ಕಾಯಿಲೆಗಳಿಗೆ ತುತ್ತಾಗಿ ಆಸ್ಪತ್ರೆ ಸೇರಿದಾಗ ಜನಸಾಮಾನ್ಯರಿಗೆ ಎದುರಾಗುವ ಆರ್ಥಿಕ ಆಘಾತ ಅಷ್ಟಿಷ್ಟಲ್ಲ. ಜೀವಮಾನವೆಲ್ಲ ದುಡಿದು ಕೂಡಿಟ್ಟ ಹಣ ಮಂಜಿನಂತೆ ಕರಗಿ, ಸಾಲ ಮಾಡುವಂತಹ ಪರಿಸ್ಥಿತಿ ಎದುರಾಗುತ್ತದೆ. ಕೋವಿಡ್‌ಗೆ ತುತ್ತಾಗಿ, ಆರೋಗ್ಯ ವಿಮೆ ಇಲ್ಲದೆ, ಆಸ್ಪತ್ರೆ ಖರ್ಚು ನಿಭಾಯಿಸುವಲ್ಲಿ ಹಣ ಕಳೆದುಕೊಂಡ ಬಹಳಷ್ಟು ಉದಾಹರಣೆಗಳು ನಮ್ಮ ಮುಂದಿವೆ. ಇಂತಹ ಪರಿಸ್ಥಿತಿಗಳಲ್ಲಿ ನಮ್ಮ ಕೈ ಹಿಡಿಯುವುದು ಆರೋಗ್ಯ ವಿಮೆ.

3. ದುರ್ಘಟನೆ ಹಾಗೂ ವೈಯಕ್ತಿಕ ಅಪಘಾತ ಪಾಲಿಸಿ: ನಮ್ಮ ಯಾಂತ್ರಿಕ ಜೀವನದಲ್ಲಿ ವಾಹನಗಳು ಹಾಗೂ ಇತರ ಯಂತ್ರಗಳ ಮೇಲೆ ಅತಿಯಾದ ಅವಲಂಬನೆ ಅನಿವಾರ್ಯ ಆಗಿವೆ. ವಾಹನ, ಯಂತ್ರಗಳ ಜೊತೆ ಒಡನಾಡುವಾಗ ದುರ್ಘಟನೆಗಳು ತೀರಾ ಸಹಜ ಎನ್ನುವ ಪರಿಸ್ಥಿತಿಗೆ ನಾವು ಬಂದಿದ್ದೇವೆ. ಇಂತಹ ದುರ್ಘಟನೆಗಳಿಗೆ ತುತ್ತಾಗಿ ಎಷ್ಟೋ ಜನ ತಿಂಗಳಾನುಗಟ್ಟಲೆ ಕೆಲಸ ಮಾಡಲು ಸಾಧ್ಯವಾಗದ ಸ್ಥಿತಿಗೆ ಬಂದಿರಬಹುದು. ಇನ್ನು ಕೆಲವರು ಅಂಗಾಂಗಗಳನ್ನು ಕಳೆದುಕೊಂಡಿರಬಹುದು. ಇಂತಹ ಪರಿಸ್ಥಿತಿಯಲ್ಲಿ ನಮ್ಮ ಕೈಹಿಡಿಯುವುದು ವೈಯಕ್ತಿಕ ಅಪಘಾತ ವಿಮೆ.

4. ನಿವೃತ್ತಿ ಯೋಜನೆ: ವಯಸ್ಸಾದಂತೆ ದೇಹದ ಶಕ್ತಿ ಕ್ಷೀಣಿಸುವುದು ಸಹಜ. 60 ವರ್ಷ ಅಥವಾ 70 ವರ್ಷ ಕಳೆದ ನಂತರ ದುಡಿಮೆ ಮಾಡಿ ಜೀವನ ಸಾಗಿಸುವುದು ಸುಲಭದ ಮಾತಲ್ಲ. ‘ಆತ್ಮನಿರ್ಭರ’ರಾಗಿ ಜೀವನ ಸಾಗಿಸಲು, ನಿವೃತ್ತಿಯ ನಂತರದ ಬದುಕಿನ ಬಗ್ಗೆ ಯೋಜನೆ ರೂಪಿಸುವುದು ಅತಿ ಅಗತ್ಯ. ಪಿ.ಎಫ್., ಪಿಪಿಎಫ್, ಮ್ಯೂಚುವಲ್ ಫಂಡ್, ಷೇರುಗಳು, ಎಫ್.ಡಿ. ಮುಂತಾದವುಗಳಲ್ಲಿ ನಿಗದಿತವಾಗಿ ಹೂಡಿಕೆ ಮಾಡಿ ನಮ್ಮ ನಿವೃತ್ತ ಜೀವನಕ್ಕೆ ಬೇಕಾಗುವ ಹಣವನ್ನು ಒಗ್ಗೂಡಿಸಿಕೊಳ್ಳಬೇಕು. ಇದು ಇಂದಿನ ಜೀವನ ಶೈಲಿಯ ದೃಷ್ಟಿಯಿಂದ ಅನಿವಾರ್ಯ. ನಿವೃತ್ತಿ ನಂತರದ ಬದುಕಿಗೆ ಅಗತ್ಯವಾದ ಯೋಜನೆಗಳ ಬಗ್ಗೆ ಕೆಲಸ ಶುರು ಮಾಡಿದ ದಿನದಿಂದಲೇ ಆಲೋಚಿಸಬೇಕು.

5. ಆಪದ್ಧನ: ಕೊರೊನಾ ಬಿಕ್ಕಟ್ಟು ನಮಗೆ ಅನಿಶ್ಚಿತತೆ ಎಂದರೆ ಏನು ಎಂಬುದರ ಪಾಠ ಕಲಿಸಿಕೊಟ್ಟಿದೆ. ಜನ ಕೆಲಸ ಕಳೆದುಕೊಂಡರು, ಆದಾಯದಲ್ಲಿ ಕಡಿತವನ್ನು ಅನುಭವಿಸಿದರು. ಇಂತಹ ವಿಷಮ ಪರಿಸ್ಥಿತಿಯಲ್ಲಿ ನಮ್ಮ ಬಳಿ ಆರು ತಿಂಗಳು ಅಥವಾ ಒಂದು ವರ್ಷದ ಖರ್ಚುಗಳಿಗೆ ಸಾಕಾಗುವಷ್ಟು ಹಣ ಇದ್ದರೆ ಅದರಿಂದ ಸಿಗುವ ಆತ್ಮವಿಶ್ವಾಸ ಹಾಗೂ ಸಮಸ್ಯೆಯನ್ನು ಎದುರಿಸಲು ಸಿಗುವ ಧೈರ್ಯ ಅಗಾಧ.

ಸಾರಾಂಶ- ದೊಡ್ಡ ಆರ್ಥಿಕ ಗುರಿಗಳನ್ನು ಈಡೇರಿಸಿಕೊಳ್ಳುವ ಮುನ್ನ ಈ ಐದು ವಿಚಾರಗಳ ಬಗ್ಗೆ ಗಮನಹರಿಸಿ ಸರಿಯಾದ ನಿರ್ಧಾರ ತೆಗೆದುಕೊಳ್ಳಿ. ವೈಯಕ್ತಿಕ ಹಣಕಾಸಿನ ವಿಚಾರದಲ್ಲಿ ಆತ್ಮನಿರ್ಭರರಾಗಿ.

ಐ.ಟಿ: ಈ ವರ್ಷ ನೇಮಕಾತಿ ಹೆಚ್ಚು

● ಮಹೇಶ ಕುಲಕರ್ಣಿ

ಬೆಂಗಳೂರು: ಭಾರತದ ಐ.ಟಿ. ಸೇವಾ ಕಂಪನಿಗಳು 2021ರಲ್ಲಿ ಉದ್ಯೋಗಿಗಳನ್ನು ದೊಡ್ಡ ಪ್ರಮಾಣದಲ್ಲಿ ನೇಮಕ ಮಾಡಿಕೊಳ್ಳಲಿವೆ.

‘ಎಲ್ಲ ಐ.ಟಿ. ಕಂಪನಿಗಳು ಹೆಚ್ಚಿನ ಸಂಖ್ಯೆಯಲ್ಲಿ ನೌಕರರನ್ನು ನೇಮಕ ಮಾಡಿಕೊಳ್ಳಲು ಆರಂಭಿಸಿವೆ’ ಎಂದು ಸಿಐಇಎಲ್ ಎಚ್‌ಆರ್ ಸರ್ವಿಸಸ್‌ನ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಆದಿತ್ಯ ನಾರಾಯಣ ಮಿಶ್ರ ‘ಪ್ರಜಾವಾಣಿ’ಗೆ ತಿಳಿಸಿದರು.

ಐ.ಟಿ. ಕಂಪನಿಗಳು ಈ ವರ್ಷ ಒಟ್ಟು 1.8 ಲಕ್ಷ ಜನರನ್ನು ನೇಮಕ ಮಾಡಿಕೊಳ್ಳುವ ಸಾಧ್ಯತೆ ಇದೆ ಎಂದು ಅವರು ಹೇಳಿದರು. ಹಲವು ಐ.ಟಿ. ಕಂಪನಿಗಳು ಹಿಂದಿನ ವರ್ಷ ನೇಮಕಾತಿ ಪ್ರಕ್ರಿಯೆಗಳನ್ನು ತಡೆಹಿಡಿದಿದ್ದವು.

ಸೈಬರ್ ಭದ್ರತೆ, ವರ್ಚುವಲ್ ರಿಯಾಲಿಟಿ, ಕ್ಲೌಡ್ ಸೇವೆಗಳು, ರೊಬೊಟಿಕ್ಸ್, 5ಜಿ ವಲಯಗಳಲ್ಲಿ ಹೆಚ್ಚಿನ ನೇಮಕಾತಿ ನಡೆಯುವ ಸಾಧ್ಯತೆ ಇದೆ ಎಂದು ಎಎಸ್‌ಎಂ ಟೆಕ್ನಾಲಜೀಸ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ರವೀಂದ್ರ ಶ್ರೀಕಂಠನ್ ಹೇಳಿದರು.

ಐ.ಟಿ. ಕಂಪನಿಗಳು ಡಿಸೆಂಬರ್‌ಗೆ ಕೊನೆಗೊಂಡ ತ್ರೈಮಾಸಿಕದಲ್ಲಿಯೇ ದೊಡ್ಡ ಪ್ರಮಾಣದಲ್ಲಿ ನೇಮಕಾತಿ ನಡೆಸಿದ್ದು, ಒಟ್ಟು 39 ಸಾವಿರ ಜನರನ್ನು ನೇಮಕ ಮಾಡಿವೆ ಎಂದು ಮೋತಿಲಾಲ್ ಓಸ್ವಾಲ್ ಹಣಕಾಸು ಸೇವೆಗಳ ವರದಿಯಲ್ಲಿ ಹೇಳಲಾಗಿದೆ.

ಕಳೆದ ವರ್ಷದ ನೇಮಕಾತಿ ಪ್ರಮಾಣಕ್ಕೆ ಹೋಲಿಸಿದರೆ ಈ ವರ್ಷದಲ್ಲಿ ಶೇಕಡ 30ರಿಂದ ಶೇ 40ರಷ್ಟು ಹೆಚ್ಚು ನೇಮಕಾತಿ ನಡೆಯುವ ನಿರೀಕ್ಷೆ ಇದೆ ಎಂದು ಮಿಶ್ರ ತಿಳಿಸಿದರು.

ಕಚ್ಚಾ ತೈಲ ಬೆಲೆ ಇಳಿಕೆ

ಲಂಡನ್ (ಎಎಫ್‌ಪಿ): ಸೂಯಜ್ ಕಾಲುವೆಯಲ್ಲಿ ಸರಕು ಸಾಗಣೆಯು ಮತ್ತೆ ಆರಂಭವಾದ ನಂತರ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ತುಸು ಇಳಿಕೆ ಆಗಿದೆ.

ಬ್ರೆಂಟ್ ಕಚ್ಚಾ ತೈಲದ ಬೆಲೆಯಲ್ಲಿ ಶೇಕಡ 0.8ರಷ್ಟು ಇಳಿಕೆ ಆಗಿ, ಪ್ರತಿ ಬ್ಯಾರಲ್‌ಗೆ 64.04 ಅಮೆರಿಕನ್ ಡಾಲರ್‌ನಂತೆ ಮಾರಾಟವಾಗಿದೆ.

ಕೋವಿಡ್ ಬಿಕ್ಕಟ್ಟಿನ ನಡುವೆಯೂ ಸೆನ್ಸೆಕ್ಸ್ ಶೇಕಡ 66ರಷ್ಟು ಏರಿಕೆ

ನವದೆಹಲಿ (ಪಿಟಿಐ): ಕೋವಿಡ್–19 ಸಾಂಕ್ರಾಮಿಕ ಸೃಷ್ಟಿಸಿದ ಆರ್ಥಿಕ ಬಿಕ್ಕಟ್ಟಿನ ನಡುವೆಯೂ ದೇಶದ ಷೇರುಪೇಟೆಗಳು ಹೂಡಿಕೆದಾರರಿಗೆ ಉತ್ತಮ ಗಳಿಕೆ ತಂದುಕೊಟ್ಟಿವೆ. 2020–21ರಲ್ಲಿ ಇದುವರೆಗೆ ಮುಂಬೈ ಷೇರುಪೇಟೆಯು ಶೇಕಡ 66ರಷ್ಟು ಏರಿಕೆ ದಾಖಲಿಸಿದೆ ಎಂದು ಮಾರುಕಟ್ಟೆ ವಿಶ್ಲೇಷಕರು ಹೇಳಿದ್ದಾರೆ.

ಕೋವಿಡ್–19 ಸಾಂಕ್ರಾಮಿಕ ಒಂದೆಡೆ ವೇಗವಾಗಿ ಹರಡುತ್ತಿದ್ದರೂ, ಚೇತರಿಕೆಯ ಹಾದಿಗೆ ಮರಳಿದ ಸೆನ್ಸೆಕ್ಸ್ ಪ್ರಸಕ್ತ ಹಣಕಾಸು ವರ್ಷದಲ್ಲಿ 19,540 ಅಂಶಗಳಷ್ಟು (ಶೇ 66.30ರಷ್ಟು) ಏರಿಕೆ ಕಂಡಿದೆ. ಮಾರುಕಟ್ಟೆಯ ಚಲನೆಯು ಚಂಚಲವಾಗಿದ್ದ ಹೊತ್ತಿನಲ್ಲಿ ಕಂಡುಬಂದ ಈ ಪರಿಯ ಏರಿಕೆಯು ಹೆಚ್ಚು ಮಹತ್ವದ್ದು ಎಂದು ಮಾರುಕಟ್ಟೆ ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

2020ರ ಏಪ್ರಿಲ್ 3ರಂದು ಬಿಎಸ್‌ಇ ಒಂದು ವರ್ಷದ ಕನಿಷ್ಠ ಮಟ್ಟವಾದ 27,500.79ಕ್ಕೆ ಕುಸಿದಿತ್ತು. ಆದರೆ, 2021ರ ಫೆಬ್ರುವರಿ 16ರ ವಹಿವಾಟಿನಲ್ಲಿ ಸಾರ್ವಕಾಲಿಕ ಗರಿಷ್ಠ ಮಟ್ಟವಾದ 52,516.76ಕ್ಕೆ ಏರಿಕೆ ಕಂಡಿತು.

ಲಾಕ್‌ಡೌನ್ ನಿರ್ಬಂಧ ತೆರವು ಹಾಗೂ ಆರ್ಥಿಕ ಚೇತರಿಕೆಯು ಷೇರುಪೇಟೆಗೆ ಮತ್ತಷ್ಟು ಬಲ ನೀಡಿದವು. ಕೋವಿಡ್‌ಗೆ ಲಸಿಕೆ ಕಂಡುಕೊಂಡಿದ್ದರಿಂದ ಮೂಡಿದ ಆಶಾವಾದವು ಗೂಳಿ ಓಟಕ್ಕೆ ವೇಗ ನೀಡಿತು. ಜಾಗತಿಕ ಷೇರುಪೇಟೆಗಳು ನವೆಂಬರ್‌ನಲ್ಲಿ ಉತ್ತಮ ಏರಿಕೆ ಕಂಡವು. ಪ್ರವರ್ಧಮಾನಕ್ಕೆ ಬರುತ್ತಿರುವ ಮಾರುಕಟ್ಟೆಗಳಿಗೆ ವಿದೇಶಿ ಬಂಡವಾಳ ಒಳಹರಿವು (ಎಫ್‌ಪಿಐ) ಮುಂದುವರಿಯಿತು ಎಂದು ಜಿಯೋಜಿತ್ ಹಣಕಾಸು ಸೇವೆಗಳ ಹೂಡಿಕೆ ಯೋಜನೆಗಳ ಮುಖ್ಯಸ್ಥ ವಿ.ಕೆ. ವಿಜಯಕುಮಾರ್ ತಿಳಿಸಿದ್ದಾರೆ.

ಕೇಂದ್ರ ಬಜೆಟ್‌ನಲ್ಲಿ ಪ್ರಸ್ತಾಪಿಸಲಾದ ಖಾಸಗೀಕರಣದಂತಹ ನಿರ್ಧಾರಗಳು ಷೇರುಪೇಟೆಯಲ್ಲಿ ಹೆಚ್ಚಿನ ಉತ್ಸಾಹ ಮೂಡಿಸಿದವು ಎಂದೂ ಹೇಳಿದ್ದಾರೆ.

ಕೋವಿಡ್‌ನ ಎರಡನೆಯ ಮತ್ತು ಮೂರನೆಯ ಅಲೆಯ ಬಗ್ಗೆ ಹೆಚ್ಚು ಆತಂಕ ಇದೆ. ಹೀಗಿದ್ದರೂ ಲಸಿಕೆ ನೀಡುವ ಕಾರ್ಯಕ್ರಮ ಆರಂಭವಾಗಿರುವುದರಿಂದ ಮಾರುಕಟ್ಟೆಯ ಮೇಲೆ ಹೆಚ್ಚಿನ ದುಷ್ಪರಿಣಾಮ ಆಗಲಾರದು. ಕೋವಿಡ್‌ನ ಎರಡನೇ ಅಲೆಯು ಲಾಕ್‌ಡೌನ್‌ಗೆ ದಾರಿ ಮಾಡಿಕೊಟ್ಟಿಲ್ಲ. ಆರ್ಥಿಕ ಚಟುವಟಿಕೆಗಳ ಮೇಲೆ ಸೀಮಿತ ನಿರ್ಬಂಧ ಮಾತ್ರ ಇದೆ ಎಂದು ಹೇಳಿದ್ದಾರೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ಸೆನ್ಸೆಕ್ಸ್ ಹಲವು ಬಾರಿ ದಾಖಲೆ ಮಟ್ಟವನ್ನು ತಲುಪಿದೆ. ಫೆಬ್ರುವರಿ 3ರಂದು ಸೆನ್ಸೆಕ್ಸ್ 50,000ದ ಗಡಿ ದಾಟಿತು. ಫೆಬ್ರುವರಿ 8ರಂದು 51,000 ದಾಟಿ ವಹಿವಾಟು ನಡೆಸಿತು. ಫೆಬ್ರುವರಿ 15ರಂದು ಮೊದಲ ಬಾರಿಗೆ ದಾಖಲೆಯ 52,000ದ ಗಡಿ ದಾಟಿತು.

ಕೆಎಎಸ್ ಅಧಿಕಾರಿಗಳ ಸಂಘಕ್ಕೆ ಆಂಡ್ರೂಸ್ ಅಧ್ಯಕ್ಷ

ಪ್ರಜಾವಾಣಿ ವಾರ್ತೆ

ಎಲಿಷ ಆಂಡ್ರೂಸ್

ಬೆಂಗಳೂರು: ಕರ್ನಾಟಕ ಆಡಳಿತ ಸೇವೆ (ಕೆಎಎಸ್) ಅಧಿಕಾರಿಗಳ ಸಂಘದ ನೂತನ ಅಧ್ಯಕ್ಷರಾಗಿ ಎಲಿಷ ಆಂಡ್ರೂಸ್ ಆಯ್ಕೆಯಾಗಿದ್ದಾರೆ.

ಭಾನುವಾರ ನಡೆದ ಸಂಘದ ವಾರ್ಷಿಕ ಸರ್ವ ಸದಸ್ಯರ ಸಭೆಯಲ್ಲಿ ಚುನಾವಣಾ ಪ್ರಕ್ರಿಯೆ ಜರುಗಿದ್ದು, ಉಪಾಧ್ಯಕ್ಷರಾಗಿ ಅನಿತಾಲಕ್ಷ್ಮಿ, ಕಾರ್ಯದರ್ಶಿಯಾಗಿ ಸಿ.ಎಲ್. ಶಿವಕುಮಾರ್, ಜಂಟಿ ಕಾರ್ಯದರ್ಶಿಯಾಗಿ ಬಿ.ಸಿ. ಶಿವಾನಂದಮೂರ್ತಿ ಮತ್ತು ಖಜಾಂಚಿಯಾಗಿ ಬಿ.ಎಸ್. ರಾಜೀವ್ ಅವರನ್ನು ಆಯ್ಕೆ ಮಾಡಲಾಗಿದೆ.

ಕಾರ್ಯಕಾರಿ ಸಮಿತಿ ಸದಸ್ಯರಾಗಿ ಬಿ.ಎನ್. ವರಪ್ರಸಾದ್ ರೆಡ್ಡಿ, ಎ. ದೇವರಾಜ್, ನಾಗೇಂದ್ರ ಎಫ್. ಹೊನ್ನಳ್ಳಿ, ಎಚ್. ಕೊಟ್ರೇಶ್, ಡಾ.ಬಿ. ಆರ್. ಹರೀಶ್, ಬಸವರಾಜು, ಎಂ.ಕೆ. ಜಗದೀಶ್, ಸಂತೋಷ್ ಬಿರಾದಾರ, ಬಸವರೆಡ್ಡೆಪ್ಪ ರೋಣದ, ಡಾ.ರವಿ. ಎಂ. ತಿರ್ಲಾಪೂರ, ಸಿ.ಎನ್. ಮಂಜುನಾಥ್, ಎಂ.ಎಸ್.ಎನ್. ಬಾಬು, ಡಾ.ಕೆ. ದಾಕ್ಷಾಯಣಿ, ಬಿ. ಅಭಿಜಿನ್, ಶಾಂತಾ ಎಲ್. ಹುಲ್ಮನಿ, ಮೊಹಮ್ಮದ್ ನಹೀಮ್ ಮೊಮಿನ್, ಪ್ರಭು ರೆಡ್ಡಿ ಮತ್ತು ಎನ್. ರಮೇಶ್ ಆಯ್ಕೆಯಾಗಿದ್ದಾರೆ ಎಂದು ಸಂಘದ ಪ್ರಕಟಣೆ ತಿಳಿಸಿದೆ.

‘ವಾಜೆ ವರ್ತನೆ: ಕೆಲವರಿಗೆ ಮೊದಲೇ ಎಚ್ಚರಿಸಿದ್ದೆ’

ಮುಂಬೈ (ಪಿಟಿಐ): ‘ಸದ್ಯ ಅಮಾನತುಗೊಂಡಿರುವ ಪೊಲೀಸ್ ಅಧಿಕಾರಿ ಸಚಿನ್ ವಾಜೆ ಮಹಾರಾಷ್ಟ್ರ ಸರ್ಕಾರಕ್ಕೆ ಸಂಕಷ್ಟ ತರಬಹುದು ಎಂದು ಮೊದಲೇ ಎಚ್ಚರಿಸಿದ್ದೆ’ ಎಂದು ಶಿವಸೇನಾ ಸಂಸದ ಸಂಜಯ ರಾವುತ್ ತಿಳಿಸಿದ್ದಾರೆ.

ಸೋಮವಾರ ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, ಸಚಿನ್ ವಾಜೆ ಪ್ರಕರಣವು ರಾಜ್ಯದ ಮಹಾವಿಕಾಸ ಆಘಾಡಿ ಮೈತ್ರಿ ಸರ್ಕಾರಕ್ಕೆ ಕೆಲವೊಂದು ಪಾಠವನ್ನು ಕಲಿಸಿದೆ ಎಂದು ಹೇಳಿದ್ದಾರೆ.

ಉದ್ಯಮಿ ಮುಖೇಶ್ ಅಂಬಾನಿ ನಿವಾಸದ ಬಳಿ ಪತ್ತೆಯಾಗಿದ್ದ ಸ್ಫೋಟಕ ವಿದ್ದ ವಾಹನ ಪ್ರಕರಣ ಕುರಿತು ರಾಷ್ಟ್ರೀಯ ತನಿಖಾ ಸಂಸ್ಥೆಯ ಅಧಿಕಾರಿಗಳು ವಾಜೆ ಅವರನ್ನು ತಿಂಗಳಾರಂಭದಲ್ಲಿ ಬಂಧಿಸಿದ್ದರು.

ವಾಜೆ ಈ ಹಿಂದೆಯೂ 2004ರಲ್ಲಿ ಲಾಕಪ್ ಡೆತ್ ಪ್ರಕರಣದ ಸಂಬಂಧ ಅಮಾನತುಗೊಂಡಿದ್ದರು. ‘ಅವರನ್ನು ಸೇವೆಗೆ ಮರುಸೇರ್ಪಡೆಗೊಳಿಸುವಾಗ ಕೆಲ ಮುಖಂಡರಿಗೆ ವಾಜೆ ವರ್ತನೆ ಕುರಿತು ಎಚ್ಚರಿಕೆ ನೀಡಿದ್ದೆ. ಅವರ ಕಾರ್ಯಶೈಲಿ ಸರ್ಕಾರಕ್ಕೆ ತೊಡಕುಂಟು ಮಾಡಬಹುದು ಎಂದು ತಿಳಿಸಿದ್ದೆ’ ಎಂದು ಹೇಳಿದರು.

ಯಾವ ಮುಖಂಡರಿಗೆ ಈ ಎಚ್ಚರಿಕೆಯ ಸೂಚನೆ ನೀಡಿದ್ದೆ ಎಂದು ಹೆಸರು ಹೇಳಲಾಗದು. ನಾನು ದಶಕಗಳ ಕಾಲ ಪತ್ರಕರ್ತನಾಗಿದ್ದೆ. ನನಗೆ ವಾಜೆ ಚೆನ್ನಾಗಿ ಗೊತ್ತಿದ್ದಾರೆ. ಆತ ಕೆಟ್ಟ ವ್ಯಕ್ತಿಯಲ್ಲ. ಕೆಲವು ಸಂದರ್ಭಗಳು ಆತನನ್ನು ಕೆಟ್ಟವನನ್ನಾಗಿಸಿವೆ ಎಂದರು.

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1550 (1550)
ಸೋಯಾ (ರಿಫೈನ್ಡ್)	₹1255 (1250)
ಸೂರ್ಯಕಾಂತಿ (ರಿಫೈನ್ಡ್)	₹1710 (1700)
ಪಾಮೋಲಿನ್	₹1210 (1205)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹405
12 ಮೊಟ್ಟೆಗೆ	₹54
ಮೈಸೂರು	
100 ಮೊಟ್ಟೆಗೆ	₹410

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ		ರಾಶಿ	39899-43500	**ಮೂಡಿಗೆರೆ ಕಾಫಿ (50 ಕೆ.ಜಿಗೆ)**	
ಶಿವಮೊಗ್ಗ ಎಪಿಎಂಸಿ				ಎಪಿ	10000
ಗೊರಬಲು	15009-30009	**ರಾಮನಗರ ರೇಷ್ಮೆ**		ಎಸಿ	4060
ರಾಶಿ	41000-41500	ಮಿಶ್ರತಳಿ (ಸಿ.ಬಿ)	233-381	ಆರ್‌ಪಿ	5150
ಚನ್ನಗಿರಿ (ತುಮ್ಕೋಸ್)		ದ್ವಿತಳಿ (ಬಿ.ವಿ)	252-476	ಆರ್‌ಸಿ	3000

ಎನ್‌ಐಎನ್‌ಎಲ್: ಖರೀದಿಗೆ ಆಸಕ್ತಿ

ನವದೆಹಲಿ (ಪಿಟಿಐ): ನೀಲಾಚಲ್ ಇಸ್ಪತ್ ನಿಗಮ ನಿಯಮಿತದ (ಎನ್‌ಐಎನ್‌ಎಲ್) ಖಾಸಗೀಕರಣಕ್ಕೆ ಕೇಂದ್ರ ಸರ್ಕಾರವು ಹಲವು ಬಿಡ್‌ದಾರರಿಂದ ಖರೀದಿ ಆಸಕ್ತಿಯನ್ನು ಸ್ವೀಕರಿಸಿದೆ ಎಂದು ಹೂಡಿಕೆ ಮತ್ತು ಸಾರ್ವಜನಿಕ ಆಸ್ತಿ ನಿರ್ವಹಣಾ (ಡಿಐಪಿಎಎಂ) ಇಲಾಖೆಯ ಕಾರ್ಯದರ್ಶಿ ತುಹಿನ್ ಕಾಂತ ಪಾಂಡೆ ಅವರು ಸೋಮವಾರ ಹೇಳಿದ್ದಾರೆ.

‘ಧೋನಿ ನಾಯಕತ್ವ ಬೌಲರ್‌ಗಳಿಗೆ ಇಷ್ಟ’

ಚೆನ್ನೈ (ಪಿಟಿಐ): ಮಹೇಂದ್ರ ಸಿಂಗ್ ಧೋನಿ ನಾಯಕತ್ವದಲ್ಲಿ ಆಡುವುದನ್ನು ಬೌಲರ್‌ಗಳು ಇಷ್ಟಪಡುತ್ತಾರೆ. ಏಕೆಂದರೆ ಬೌಲರ್‌ಗಳಿಂದ ಉತ್ತಮ ಸಾಮರ್ಥ್ಯ ಹೊರಹೊಮ್ಮಿಸುವ ಕಲೆ ಅವರಿಗೆ ತಿಳಿದಿದೆ ಎಂದು ಐಪಿಎಲ್ ಫ್ರಾಂಚೈಸ್ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಆಲ್‌ರೌಂಡರ್, ಕನ್ನಡಿಗ ಕೆ.ಗೌತಮ್ ಅಭಿಪ್ರಾಯಪಟ್ಟಿದ್ದಾರೆ.

ಕೆ.ಗೌತಮ್

‘ಮಹಿ ಭಾಯ್ (ಧೋನಿ) ಸಾರಥ್ಯದಲ್ಲಿ ಆಡುವುದು ಬೌಲರ್‌ಗಳಿಗೆ ಇಷ್ಟ. ಏಕೆಂದರೆ ಅವರ ಶಕ್ತಿ, ಸಾಮರ್ಥ್ಯ ಅರಿತುಕೊಳ್ಳುವ ಧೋನಿ, ಶ್ರೇಷ್ಠ ಆಟ ಹೊಮ್ಮುವಂತೆ ಮಾಡುತ್ತಾರೆ’ ಎಂದು ಗೌತಮ್ ಹೇಳಿದ್ದಾಗಿ ಚೆನ್ನೈ ಸೂಪರ್ ಕಿಂಗ್ಸ್ (ಸಿಎಸ್‌ಕೆ) ವೆಬ್‌ಸೈಟ್ ಉಲ್ಲೇಖಿಸಿದೆ.

‘ಧೋನಿ ನಾಯಕತ್ವದಲ್ಲಿ ಆಡುವುದು ನನ್ನ ಕನಸಾಗಿತ್ತು. ಅದು ಈಗ ನನಸಾಗಿದೆ. ಟೂರ್ನಿಯ ಪ್ರಮುಖ ತಂಡವಾಗಿರುವ ಸಿಎಸ್‌ಕೆ ಪರ ಆಡಲಿದ್ದೇನೆ ಎಂಬ ಯಾವುದೇ ಒತ್ತಡಗಳು ನನ್ನ ಮೇಲೆ ಇಲ್ಲ’ ಎಂದು ಈ ಹಿಂದೆ ಪಂಜಾಬ್ ಕಿಂಗ್ಸ್ ತಂಡದ ಪರ ಆಡಿದ್ದ ಗೌತಮ್ ಹೇಳಿದ್ದಾರೆ.

ಇರ್ಫಾನ್‌ಗೆ ಕೋವಿಡ್–19

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಮಾಜಿ ಆಟಗಾರ ಇರ್ಫಾನ್ ಪಠಾಣ್ ಅವರಿಗೆ ಕೋವಿಡ್–19 ದೃಢಪಟ್ಟಿದೆ. ಈ ಬಗ್ಗೆ ಟ್ವೀಟ್ ಮಾಡಿರುವ ಅವರು ‘ನನಗೆ ಕೋವಿಡ್ ದೃಢಪಟ್ಟಿದೆ. ಆದರೆ ಯಾವುದೇ ಗುಣಲಕ್ಷಣಗಳಿಲ್ಲ. ಸದ್ಯ ಮನೆಯಲ್ಲಿ ಪ್ರತ್ಯೇಕವಾಸದಲ್ಲಿದ್ದೇನೆ. ಇತ್ತೀಚೆಗೆ ನನ್ನೊಂದಿಗೆ ಯಾರು ಸಂಪರ್ಕದಲ್ಲಿದ್ದಾರೋ ಅವರು ಪರೀಕ್ಷೆ ಮಾಡಿಸಿಕೊಳ್ಳಿ’ ಎಂದಿದ್ದಾರೆ.

ರಾಷ್ಟ್ರೀಯ ಆಹ್ವಾನಿತ, ರಾಜ್ಯ ಸಬ್ ಜೂನಿಯರ್ ಈಜು ಸ್ಪರ್ಧೆ: ಲಿಖಿತ್, ಆದಿತ್ಯಗೆ ಚಿನ್ನದ ಪದಕ

ಮೋನ್ಯಾ ಕೌಸುಮಿಗೆ ಮೂರು ಚಿನ್ನ

ಪ್ರಜಾವಾಣಿ ವಾರ್ತೆ

ಮೋನ್ಯಾ ಕೌಸುಮಿ ಅವರ ಈಜಿನ ಭಂಗಿ –ಪ್ರಜಾವಾಣಿ ಸಂಗ್ರಹ ಚಿತ್ರ

ಮುಖ್ಯಾಂಶಗಳು
- ಪಡುಕೋಣೆ–ದ್ರಾವಿಡ್ ಸ್ಪೋರ್ಟ್ಸ್ ಎಕ್ಸಲೆನ್ಸ್‌ನಲ್ಲಿ ನಡೆಯುತ್ತಿರುವ ಕೂಟ
- ಬೆಂಗಳೂರಿನ ಬಸವನಗುಡಿ ಈಜು ಕೇಂದ್ರದ ಪಾರಮ್ಯ

ಬೆಂಗಳೂರು: ನೆಟ್ಟಕಲ್ಲಪ್ಪ ಈಜು ಕೇಂದ್ರದ ಮೋನ್ಯಾ ಕೌಸುಮಿ ಕೆ ಅವರು ಸೋಮವಾರ ಇಲ್ಲಿ ಆರಂಭಗೊಂಡ ರಾಜ್ಯ ಸಬ್ ಜೂನಿಯರ್ ಈಜು ಕೂಟದಲ್ಲಿ ಮೂರು ಚಿನ್ನ ಗೆದ್ದು ಸಂಭ್ರಮಿಸಿದರು.

ಪಡುಕೋಣೆ–ದ್ರಾವಿಡ್ ಸೆಂಟರ್ ಆಫ್ ಸ್ಪೋರ್ಟ್ಸ್ ಎಕ್ಸಲೆನ್ಸ್‌ನಲ್ಲಿ ನಡೆಯುತ್ತಿರುವ ಕೂಟದ ಬಾಲಕಿಯರ ಗುಂಪು 3ರ 50 ಮೀಟರ್ಸ್ ಬ್ರೆಸ್ಟ್ ಸ್ಟ್ರೋಕ್, 50 ಮೀ ಬಟರ್‌ಫ್ಲೈ ಮತ್ತು 100 ಮೀ. ಫ್ರೀಸ್ಟೈಲ್‌ನಲ್ಲಿ ಅವರು ಮೊದಲಿಗರಾದರು.

ರಾಷ್ಟ್ರೀಯ ಆಹ್ವಾನಿತ ಈಜು ಕೂಟವೂ ಸೋಮವಾರ ಆರಂಭಗೊಂಡಿದ್ದು ಬೆಂಗಳೂರಿನ ಬಸವನಗುಡಿ ಈಜು ಕೇಂದ್ರ ಪಾರಮ್ಯ ಮೆರೆಯಿತು.

ಫಲಿತಾಂಶಗಳು: ರಾಜ್ಯ ಸಬ್ ಜೂನಿಯರ್ ಕೂಟ: ಬಾಲಕರ ಗುಂಪು3ರ 200 ಮೀ ಫ್ರೀಸ್ಟೈಲ್: ಮೋನಿಷ್ ಪಿ.ವಿ (ಪೂಜಾ ಅಕ್ವಾಟಿಕ್ಸ್ ಕೇಂದ್ರ)–1. ಕಾಲ. 2:21.52 ನಿ, ಸಾತ್ವಿಕ್ ಸುಜಿರ್ (ಡಾಲ್ಫಿನ್ ಈಜುಕೇಂದ್ರ)–2, ಅಬ್ದುಲ್ ಹಕೀಂ (ಜೈ ಹಿಂದ್ ಕ್ಲಬ್ ಮಂಗಳೂರು)–3. ಶಾಲ್ವಿ ಮುಲಾಯ್ (ಅತಿಥಿ ಈಜುಪಟು)–3; 100 ಮೀ ಬ್ರೆಸ್ಟ್ ಸ್ಟ್ರೋಕ್: ದಕ್ಷ್ (ಬಸವನಗುಡಿ ಈಜುಕೇಂದ್ರ)–1. ಕಾಲ: 1:24.2 ನಿ, ಡ್ಯಾನಿಯಲ್ ಪೌಲ್ (ಡಾಲ್ಫಿನ್)–2, ಪೃಥ್ವಿರಾಜ್ (ಬಸವನಗುಡಿ)–3; 50 ಮೀ ಬ್ರೆಸ್ಟ್ ಸ್ಟ್ರೋಕ್: ಅಬ್ದುಲ್ ಹಕೀಂ (ಜೈ ಹಿಂದ್)–1. ಕಾಲ: 34.24 ಸೆ, ವೇದಾಂತ್ (ಬಸವನಗುಡಿ)–2, ಸಾತ್ವಿಕ್ ಸುಜಿರ್ (ಡಾಲ್ಫಿನ್ ಅಕ್ವಾಟಿಕ್ಸ್)–3; 100 ಮೀ ಬಟರ್‌ಫ್ಲೈ: ಹರಿಕಾರ್ತಿಕ್ ವೇಲು (ಗೋಲ್ಡನ್ ಫಿನ್ಸ್ ಸ್ಪೋರ್ಟ್ಸ್ ಕ್ಲಬ್)–1. ಕಾಲ: 1:9.52 ನಿ, ಯಶ್‌ರಾಜ್ (ದಾವಣಗೆರೆ ಈಜು ಕೇಂದ್ರ)–2, ಆರ್ಯನ್ ಮನೀಷ್ (ಬಸವನಗುಡಿ ಈಜುಕೇಂದ್ರ)–3; 4x50 ಮೀ ಮೆಡ್ಲೆ: ಬಸವನಗುಡಿ ಈಜುಕೇಂದ್ರ–1. ಕಾಲ: 2:22.92, ಡಾಲ್ಫಿನ್ ಎ–2, ಡಾಲ್ಫಿನ್ ಬಿ–3; 200 ಮೀ ಮೆಡ್ಲೆ: ಹರಿಕಾರ್ತಿಕ್ ವೇಲು (ಗೋಲ್ಡನ್)–1. ಕಾಲ:2:37.58 ನಿ, ದಕ್ಷ್ (ಬಸವನಗುಡಿ)–2, ಮೋನಿಷ್ ಪಿ.ವಿ (ಪೂಜಾ ಈಜುಕೇಂದ್ರ)–3; 50 ಮೀ ಫ್ರೀಸ್ಟೈಲ್: ಯಶ್ ರಾಜ್ (ದಾವಣಗೆರೆ)–1, ಕಾಲ: 29.42 ಸೆ, ಸಾತ್ವಿಕ್ ಸುಜಿರ್ (ಡಾಲ್ಫಿನ್)–2, ಮೋನಿಷ್ (ಪೂಜಾ)–3; 50 ಮೀ ಬ್ರೆಸ್ಟ್ ಸ್ಟ್ರೋಕ್: ಹರಿಕಾರ್ತಿಕ್ ವೇಲು (ಗೋಲ್ಡನ್)–1. ಕಾಲ: 37.94 ಸೆ, ದಕ್ಷ್ (ಬಸವನಗುಡಿ)–2, ಯಶ್‌ರಾಜ್ (ದಾವಣಗೆರೆ)–3; 100 ಮೀ ಬ್ರೆಸ್ಟ್‌ಸ್ಟ್ರೋಕ್: ಅಬ್ದುಲ್ ಹಕೀಂ (ಜೈ ಹಿಂದ್)–1. ಕಾಲ: 1:.15.81 ನಿ, ವೇದಾಂತ್ (ಬಸವನಗುಡಿ)–2, ಅಭಿಮನ್ಯು ನಂಬಿಯಾರ್ (ಡಾಲ್ಫಿನ್)–3; 100 ಮೀ ಫ್ರೀಸ್ಟೈಲ್: ಮೋನಿಷ್ (ಪೂಜಾ)–1. ಕಾಲ: 1:3.80 ನಿ, ಸಾತ್ವಿಕ್ ಸುಜಿರ್ (ಡಾಲ್ಫಿನ್)–2, ಅಬ್ದುಲ್ ಹಕೀಂ (ಜೈ ಹಿಂದ್)–3; 50 ಮೀ ಬಟರ್‌ಫ್ಲೈ: ಹರಿಕಾರ್ತಿಕ್ ವೇಲು (ಗೋಲ್ಡನ್)–1. ಕಾಲ: 30.89 ಸೆ, ದಕ್ಷ್ (ಬಸವನಗುಡಿ)–2, ಯುವಾನ್ ಆದಿತ್ಯ (ಸ್ವಿಮ್‌ಲೈಫ್ ಈಜು ಅಕಾಡೆಮಿ)–3; ಬಾಲಕಿಯರ ಗುಂಪು3ರ 200 ಮೀ ಫ್ರೀಸ್ಟೈಲ್: ಮೀನಾಕ್ಷಿ ಮೆನನ್ (ಬಸವನಗುಡಿ)–1. ಕಾಲ: 2:31.74 ನಿ, ಸುಹಾಸಿನಿ ಘೋಷ್ (ಡಾಲ್ಫಿನ್)–2, ಕೆ.ಜನನಿ (ಜೈ ಹಿಂದ್)–3; 100 ಮೀ ಬ್ರೆಸ್ಟ್ ಸ್ಟ್ರೋಕ್: ರಿಯಾನಾ ದೃತಿ (ಡಾಲ್ಫಿನ್)–1. ಕಾಲ: 1:23.78 ನಿ, ತಾನ್ಯ (ಡಾಲ್ಫಿನ್)–2, ಶ್ರೀಚರಣಿ (ಬಿಎಸ್‌ಆರ್‌ಸಿ)–3; 50 ಮೀ ಬ್ರೆಸ್ಟ್ ಸ್ಟ್ರೋಕ್: ಪ್ರಿಯಾಂಶಿ ಮಿಶ್ರಾ (ಜಿಎಫ್‌ಆರ್‌ಎವೈ)–1. ಕಾಲ: 35.73 ಸೆ, ಪ್ರತಿಷ್ಠಾ ಕಮಲೇಶ್ (ನೆಟ್ಟಕಲ್ಲಪ್ಪ ಈಜು ಕೇಂದ್ರ)–2, ತನ್ಮಯಿ (ಡಿಕೆವಿ ಈಜುಕೇಂದ್ರ)–3; 100 ಮೀ ಬಟರ್‌ಫ್ಲೈ: ತನಿಶಾ ವಿನಯ್ (ಪೂಜಾ)–1. ಕಾಲ: 1:14.34 ನಿ, ರಿಧಿಮಾ ಸಿಂಗ್ (ಜಿಎಫ್‌ಆರ್‌ಎವೈ)–2, ಸುಹಾಸಿನಿ ಘೋಷ್ (ಡಾಲ್ಫಿನ್)–3; 4x50 ಮೀ ಮೆಡ್ಲೆ: ಡಾಲ್ಫಿನ್ ಅಕ್ವಾಟಿಕ್ಸ್–1. ಕಾಲ: 2:22.92 ನಿ, ಪೂಜಾ ಅಕ್ವಾಟಿಕ್ಸ್–2, ಬಸವನಗುಡಿ ಈಜುಕೇಂದ್ರ–3; 200 ಮೀ ಮೆಡ್ಲೆ; ರಿಯಾನಾ (ಡಾಲ್ಫಿನ್)–1. ಕಾಲ: 2:44.84 ನಿ, ತನಿಷಾ (ಪೂಜಾ)–2, ಮೀನಾಕ್ಷಿ (ಬಸವನಗುಡಿ)–3; 50 ಮೀ ಫ್ರೀಸ್ಟೈಲ್: ಅರಿಯಾನ (ಅತಿಥಿ)–1. ಕಾಲ: 30.7 ಸೆ, ಮೋನ್ಯಾ ಕೌಸುಮಿ (ನೆಟ್ಟಕಲ್ಲಪ್ಪ ಈಜುಕೇಂದ್ರ)–2, ರಿಯಾನಾ ಫರ್ನಾಂಡಿಸ್ (ಡಾಲ್ಫಿನ್)–3; 50 ಮೀ ಬ್ರೆಸ್ಟ್‌ಸ್ಟ್ರೋಕ್: ಮೋನ್ಯಾ ಕೌಸುಮಿ (ನೆಟ್ಟಕಲ್ಲಪ್ಪ ಈಜುಕೇಂದ್ರ)–1. ಕಾಲ: 38.67 ಸೆ, ರಿಯಾನಾ (ಡಾಲ್ಫಿನ್)–2, ಶ್ರೀಚರಣಿ (ಬಿಎಸ್‌ಆರ್‌ಸಿ)–3; 100 ಮೀ ಬ್ಯಾಕ್‌ಸ್ಟ್ರೋಕ್: ಪ್ರಿಯಾಂಶಿ (ಜಿಎಫ್‌ಆರ್‌ಎವೈ)–1. ಕಾಲ: 1:16.78 ನಿ, ಸುಹಾಸಿನಿ ಘೋಷ್ (ಡಾಲ್ಫಿನ್)–2, ತನ್ಮಯಿ (ಡಿಕೆವಿ)–3; 100 ಮೀ ಫ್ರೀಸ್ಟೈಲ್: ಮೋನ್ಯಾ ಕೌಸುಮಿ (ನೆಟ್ಟಕಲ್ಲಪ್ಪ ಈಜುಕೇಂದ್ರ)–1. ಕಾಲ: 1:7.74 ನಿ, ತನಿಷಾ (ಪೂಜಾ)–2, ಶ್ರೀಚರಣಿ (ಬಿಎಸ್‌ಆರ್‌ಸಿ)–3; 50 ಮೀ ಬಟರ್‌ಫ್ಲೈ: ಮೋನ್ಯಾ ಕೌಸುಮಿ (ನೆಟ್ಟಕಲ್ಲಪ್ಪ ಈಜುಕೇಂದ್ರ)–1. ಕಾಲ: 31.81 ಸೆ, ತನಿಶಾ (ಪೂಜಾ)–2, ಸುಹಾಸಿನಿ ಘೋಷ್ (ಡಾಲ್ಫಿನ್)–3; 4x50 ಮೀ ಫ್ರೀಸ್ಟೈಲ್: ಡಾಲ್ಫಿನ್ ಅಕ್ವಾಟಿಕ್ಸ್–1. ಕಾಲ: 2:8.33 ನಿ, ಬಿಎಸಿ–ಎ–2, ಪೂಜಾ ಅಕ್ವಾಟಿಕ್ ಕೇಂದ್ರ–3.

ರಾಷ್ಟ್ರೀಯ ಆಹ್ವಾನಿತ ಕೂಟ (ಕರ್ನಾಟಕದ ಫಲಿತಾಂಶ ಮಾತ್ರ): ಪುರುಷರ 200 ಮೀ ಫ್ರೀಸ್ಟೈಲ್: ವಿಶಾಲ್ ಅನೀಷ್ ಗೌಡ (ಪೂಜಾ)–3; 100 ಮೀ ಬ್ರೆಸ್ಟ್‌ಸ್ಟ್ರೋಕ್: ಲಿಖಿತ್ ಎಸ್.ಪಿ (ವಿಜಯನಗರ ಈಜುಕೇಂದ್ರ)–1, ಧನುಷ್ ಎಸ್ (ಡಾಲ್ಫಿನ್)–2; 100 ಮೀ ಬಟರ್‌ಫ್ಲೈ: ಪ್ರಥಮ್ ಶರ್ಮಾ (ಡಾಲ್ಫಿನ್)–3; 400 ಮೀ ಮೆಡ್ಲೆ: ಅನೀಶ್ ಗೌಡ (ಪೂಜಾ)–3; 200 ಮೀ ಬ್ಯಾಕ್‌ಸ್ಟ್ರೋಕ್: ಉತ್ಕರ್ಷ್ ಪಾಟೀಲ (ಡಾಲ್ಫಿನ್)–2; 100 ಮೀ ಫ್ರೀಸ್ಟೈಲ್: ಆದಿತ್ಯ ಡಿ (ಡಾಲ್ಫಿನ್)–1; ಮಹಿಳೆಯರ 200 ಮೀ ಫ್ರೀಸ್ಟೈಲ್: ಶಿರೀನ್ (ಪೂಜಾ)–2; 100 ಮೀ ಬಟರ್‌ಫ್ಲೈ: ನೀನಾ ವೆಂಕಟೇಶ್ (ಡಾಲ್ಫಿನ್)–3; 400 ಮೀ ಮೆಡ್ಲೆ: ಖುತಿಕಾ ಬಿ.ಎಂ (ಪೂಜಾ)–3.

ಸುದ್ದಿ 2 ನಿಮಿಷ

ಐಪಿಎಲ್: ತಂಡ ಸೇರಿದ ಅಶ್ವಿನ್, ರೋಹಿತ್, ಪಾಂಡ್ಯ ಸಹೋದರರು

ಮುಂಬೈ (ಪಿಟಿಐ): ಆಫ್ ಸ್ಪಿನ್ನರ್ ರವಿಚಂದ್ರನ್ ಅಶ್ವಿನ್, ಆಲ್‌ರೌಂಡರ್ ಅಕ್ಷರ್ ಪಟೇಲ್ ಮತ್ತು ವೇಗಿ ಕ್ರಿಸ್ ವೋಕ್ಸ್ ಅವರು ಐಪಿಎಲ್‌ನಲ್ಲಿ ಆಡುವ ಡೆಲ್ಲಿ ಕ್ಯಾಪಿಟಲ್ಸ್ ತಂಡ ತಂಗಿರುವ ಹೋಟೆಲ್ ಸೇರಿದ್ದು ಕ್ವಾರಂಟೈನ್‌ಗೆ ತಯಾರಾಗಿದ್ದಾರೆ. ಮುಂಬೈ ಇಂಡಿಯನ್ಸ್‌ನ ರೋಹಿತ್ ಶರ್ಮಾ, ಸೂರ್ಯಕುಮಾರ್ ಯಾದವ್, ಪಾಂಡ್ಯ ಸಹೋದರರಾದ ಹಾರ್ದಿಕ್ ಮತ್ತು ಕೃಣಾಲ್ ಕೂಡ ಕ್ವಾರಂಟೈನ್‌ಗೆ ಸಿದ್ಧರಾಗಿದ್ದಾರೆ.

ಇಂಗ್ಲೆಂಡ್ ಎದುರಿನ ಟೆಸ್ಟ್ ಸರಣಿಯಲ್ಲಿ ಅಮೋಘ ಸಾಧನೆ ಮಾಡಿರುವ ಅಶ್ವಿನ್ ಮತ್ತು ಅಕ್ಷರ್ ಪಟೇಲ್ ಇಂಗ್ಲೆಂಡ್ ತಂಡದ ಬ್ಯಾಟಿಂಗ್ ಬಳಗವನ್ನು ಕಂಗೆಡಿಸಿದ್ದರು. ಗಾಯದ ಸಮಸ್ಯೆಯಿಂದ ಡೆಲ್ಲಿ ಕ್ಯಾಪಿಟಲ್ಸ್ ತಂಡದ ನಾಯಕ ಶ್ರೇಯಸ್ ಅಯ್ಯರ್ ಐಪಿಎಲ್‌ಗೆ ಅಲಭ್ಯರಾಗಿದ್ದಾರೆ. ಆಟಗಾರರು ಒಂದು ವಾರ ಕ್ವಾರಂಟೈನ್‌ಗೆ ಒಳಗಾಗಲಿದ್ದಾರೆ. ಏಪ್ರಿಲ್ ಒಂಬತ್ತರಂದು ಆರಂಭವಾಗುವ ಐಪಿಎಲ್ ಟೂರ್ನಿಯಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತನ್ನ ಮೊದಲ ಪಂದ್ಯವನ್ನು 10ರಂದು ಆಡಲಿದೆ. ವಾಂಖೆಡೆ ಕ್ರೀಡಾಂಗಣದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಈ ಪಂದ್ಯ ನಡೆಯಲಿದೆ.

ಸೂರ್ಯಕುಮಾರ್ ಯಾದವ್ ಮತ್ತು ಪಾಂಡ್ಯ ಸಹೋದರರು ಮುಂಬೈ ಇಂಡಿಯನ್ಸ್ ತಂಡವನ್ನು ಸೇರಿಕೊಂಡರು. ಪುಣೆಯಲ್ಲಿ ನಡೆದಿದ್ದ ಇಂಗ್ಲೆಂಡ್ ಎದುರಿನ ಏಕದಿನ ಸರಣಿಯಲ್ಲಿ ಆಡಿದ ತಂಡದಲ್ಲಿ ಈ ಮೂವರು ಇದ್ದರು. ಕೃಣಾಲ್ ಪಾಂಡ್ಯ ಸರಣಿಯಲ್ಲಿ ಏಕದಿನ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದರು.

ಕರ್ನಾಟಕ ಮಹಿಳಾ ತಂಡಕ್ಕೆ ಸೋಲು

ಬೆಂಗಳೂರು: ಕರ್ನಾಟಕ ಮಹಿಳಾ ತಂಡವು ಬಿಸಿಸಿಐ ಏಕದಿನ ಟ್ರೋಫಿ ಕ್ರಿಕೆಟ್ ಟೂರ್ನಿಯ ಕ್ವಾರ್ಟರ್‌ಫೈನಲ್‌ನಲ್ಲಿ ಸೋಲು ಅನುಭವಿಸಿತು. ರಾಜ್‌ಕೋಟ್‌ನ ಸೌರಾಷ್ಟ್ರ ಕ್ರಿಕೆಟ್ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ 20 ರನ್‌ಗಳಿಂದ ಗೆದ್ದ ಜಾರ್ಖಂಡ್ ಸೆಮಿಫೈನಲ್ ಪ್ರವೇಶಿಸಿತು.

ಸಂಕ್ಷಿಪ್ತ ಸ್ಕೋರು: ಜಾರ್ಖಂಡ್: 50 ಓವರ್‌ಗಳಲ್ಲಿ 6 ವಿಕೆಟ್‌ಗೆ 254 (ರಷ್ಮಿ 76, ಇಂದ್ರಾಣಿ ರಾಯ್ 86, ರಿತು 30, ನಿಹಾರಿಕಾ 37; ಆಕಾಂಕ್ಷಾ ಕೊಹ್ಲಿ 52ಕ್ಕೆ 2). ಕರ್ನಾಟಕ: 46 ಓವರ್‌ಗಳಲ್ಲಿ 234ಕ್ಕೆ ಆಲೌಟ್ (ಶುಭಾ ಸತೀಶ್ 68, ದಿವ್ಯಾ ಜಿ. 48, ವೇದಾ ಕೃಷ್ಣಮೂರ್ತಿ 41, ಮೋನಿಕಾ ಸಿ. ಪಟೇಲ್ 26; ಅಶ್ವಿನಿ 26ಕ್ಕೆ 4, ನಿಹಾರಿಕಾ 40ಕ್ಕೆ 3). ಫಲಿತಾಂಶ: ಜಾರ್ಖಂಡ್ ತಂಡಕ್ಕೆ 20 ರನ್‌ಗಳ ಜಯ; ಸೆಮಿಫೈನಲ್ ಪ್ರವೇಶ.

ಸತತ ಬಯೊಬಬಲ್‌ನಿಂದ ಒತ್ತಡ: ಕೊಹ್ಲಿ

ಪುಣೆ (ಎಎಫ್‌ಪಿ): ಕೋವಿಡ್–19ರಿಂದಾಗಿ ತಿಂಗಳುಗಳ ಕಾಲ ಬಯೊಬಬಲ್‌ನಲ್ಲಿ ಇದ್ದ ಆಟಗಾರರು ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ಒತ್ತಡಕ್ಕೆ ಒಳಗಾಗುವ ಸಾಧ್ಯತೆ ಇದೆ ಎಂದು ಭಾರತ ಕ್ರಿಕೆಟ್ ತಂಡದ ನಾಯಕ ವಿರಾಟ್ ಕೊಹ್ಲಿ ಅಭಿಪ್ರಾಯಪಟ್ಟಿದ್ದಾರೆ.

ಭಾನುವಾರ ಇಂಗ್ಲೆಂಡ್ ವಿರುದ್ಧ ನಡೆದ ಏಕದಿನ ಸರಣಿಯ ಕೊನೆಯ ಪಂದ್ಯದಲ್ಲಿ ಜಯ ಗಳಿಸಿ ಸರಣಿಯನ್ನು 2–1ರಲ್ಲಿ ಗೆದ್ದುಕೊಂಡ ನಂತರ ಮಾತನಾಡಿದ ಕೊಹ್ಲಿ ‘ಎರಡು–ಮೂರು ತಿಂಗಳ ಕಾಲ ಬಯೊಬಬಲ್‌ನಲ್ಲಿದ್ದು ಆಡುವುದು ಅತ್ಯಂತ ಕಠಿಣವಾಗಿದ್ದು ಮುಂದಿನ ದಿನಗಳಲ್ಲಿ ಕ್ರಿಕೆಟ್ ಸರಣಿಗಳನ್ನು ಆಯೋಜಿಸುವಾಗ ಈ ಸಮಸ್ಯೆಯನ್ನೂ ಗಮನದಲ್ಲಿಟ್ಟುಕೊಳ್ಳಬೇಕು’ ಎಂದರು.

ವಿರಾಟ್ ಕೊಹ್ಲಿ ಮತ್ತು ರವಿಶಾಸ್ತ್ರಿ –ಎಎಫ್‌ಪಿ ಚಿತ್ರ

ಪಂದ್ಯಶ್ರೇಷ್ಠ ಪ್ರಶಸ್ತಿ; ಕೊಹ್ಲಿ ಅಚ್ಚರಿ: ಇಂಗ್ಲೆಂಡ್ ವಿರುದ್ಧದ ಮೂರನೇ ಏಕದಿನ ಪಂದ್ಯದಲ್ಲಿ ಶಾರ್ದೂಲ್ ಠಾಕೂರ್ ಪಂದ್ಯಶ್ರೇಷ್ಠ ಹಾಗೂ ಭುವನೇಶ್ವರ್ ಕುಮಾರ್ ಅವರಿಗೆ ಸರಣಿಶ್ರೇಷ್ಠ ಪ್ರಶಸ್ತಿಗೆ ಅರ್ಹರಾಗಿಲ್ಲ ಎಂಬುದು ಆಶ್ಚರ್ಯಕರವಾಗಿದೆ ಎಂದು ಭಾರತ ತಂಡದ ನಾಯಕ ವಿರಾಟ್ ಕೊಹ್ಲಿ ಅಭಿಪ್ರಾಯಪಟ್ಟಿದ್ದಾರೆ.

ಪಂದ್ಯದಲ್ಲಿ ಏಳು ರನ್ ಅಂತರದ ರೋಚಕ ಗೆಲುವು ದಾಖಲಿಸಿದ್ದ ಭಾರತ, ಸರಣಿಯನ್ನು 2-1ರ ಅಂತರದಲ್ಲಿ ವಶಪಡಿಸಿಕೊಂಡಿತ್ತು.

ಪಂದ್ಯದ ಬಳಿಕ ಪ್ರಶಸ್ತಿ ವಿತರಣಾ ಸಮಾರಂಭದಲ್ಲಿ ಮಾತನಾಡಿದ್ದ ಕೊಹ್ಲಿ, ‘ಶಾರ್ದೂಲ್ ಪಂದ್ಯಶ್ರೇಷ್ಠ ಮತ್ತು ಭುವಿ ಸರಣಿಶ್ರೇಷ್ಠ ಪ್ರಶಸ್ತಿಗೆ ಆಯ್ಕೆಯಾಗದಿರುವುದು ನನ್ನಲ್ಲಿ ಅಚ್ಚರಿಯನ್ನುಂಟು ಮಾಡಿದೆ. ವ್ಯತಿರಿಕ್ತ ಪರಿಸ್ಥಿತಿಯಲ್ಲೂ ಪರಿಣಾಮಕಾರಿ ದಾಳಿ ಸಂಘಟಿಸಿದ ಅವರಿಗೆ ಮನ್ನಣೆ ಸಲ್ಲಬೇಕಿತ್ತು’ ಎಂದು ಹೇಳಿದ್ದಾರೆ.

ರವಿಶಾಸ್ತ್ರಿ ಅಭಿನಂದನೆ: ಮೂರೂ ಮಾದರಿಯ ಕ್ರಿಕೆಟ್‌ನ ಸರಣಿಗಳಲ್ಲಿ ಮೇಲುಗೈ ಸಾಧಿಸಿ ಜೀವನದಲ್ಲಿ ಅಪರೂಪದ ಗೆಲುವು ತಂದುಕೊಟ್ಟ ತಂಡಕ್ಕೆ ಅಭಿನಂದನೆಗಳು ಸಲ್ಲಲೇಬೇಕು ಎಂದು ಭಾರತ ತಂಡದ ಕೋಚ್ ರವಿಶಾಸ್ತ್ರಿ ಹೇಳಿದ್ದಾರೆ.

ಭಾನುವಾರ ನಡೆದ ಏಕದಿನ ಪಂದ್ಯದ ನಂತರ ಟ್ವೀಟ್ ಮಾಡಿರುವ ಅವರು ‘ಕೋವಿಡ್‌ನಿಂದಾಗಿ ಉಂಟಾಗಿರುವ ವಿಷಮ ಪರಿಸ್ಥಿತಿಯಲ್ಲೂ ಕೆಚ್ಚೆದೆಯಿಂದ ಆಡಿ ಸರಣಿಗಳನ್ನು ಗೆದ್ದಿರುವುದು ಸಂತಸದ ವಿಷಯ’ ಎಂದಿದ್ದಾರೆ.

‘ಟೆಸ್ಟ್ ಕ್ರಿಕೆಟ್‌ಗೆ ಆದ್ಯತೆ’

ಐಪಿಎಲ್‌ನ ಕಾರ್ಯಭಾರದಿಂದಾಗಿ ಇಂಗ್ಲೆಂಡ್ ಎದುರಿನ ಟೆಸ್ಟ್ ಸರಣಿಯಿಂದ ದೂರ ಉಳಿಯುವುದು ಅನಿವಾರ್ಯವಾಗಲಿದೆ ಎಂದು ಹೇಳಿರುವ ಭಾರತದ ಮಧ್ಯಮ ವೇಗಿ ಭುವನೇಶ್ವರ್ ಕುಮಾರ್ ಟೆಸ್ಟ್ ಕ್ರಿಕೆಟ್‌ಗೆ ನನ್ನ ಮೊದಲ ಆದ್ಯತೆ ಎಂದಿದ್ದಾರೆ.

ಎರಡು ವರ್ಷಗಳಿಂದ ಗಾಯದ ಸಮಸ್ಯೆಗಳಿಂದ ಬಳಲುತ್ತಿರುವ ಭುವನೇಶ್ವರ್ ಇಂಗ್ಲೆಂಡ್ ಎದುರಿನ ಮೂರು ಏಕದಿನ ಪಂದ್ಯಗಳಲ್ಲಿ ಆರು ವಿಕೆಟ್ ಕಬಳಿಸಿ ಸರಣಿಯಲ್ಲಿ ಅತಿಹೆಚ್ಚು ವಿಕೆಟ್ ಪಡೆದವರ ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದ್ದಾರೆ. ಟೆಸ್ಟ್ ಪಂದ್ಯಗಳನ್ನು ಗಮನದಲ್ಲಿರಿಸಿಕೊಂಡೇ ಐಪಿಎಲ್‌ನಲ್ಲಿ ಒತ್ತಡ ನಿಭಾಯಿಸಿಕೊಳ್ಳಲು ಪ್ರಯತ್ನಿಸುವೆ’ ಎಂದು ಅವರು ಹೇಳಿದರು.

ಹ್ಯಾಂಡ್‌ಬಾಲ್: ಪಲ್ಲವಿ ನಾಯಕಿ

ಹೊನ್ನಾಳಿ: ಉತ್ತರಪ್ರದೇಶದಲ್ಲಿ ಇದೇ 31ರಿಂದ ಏಪ್ರಿಲ್ 4ರ ವರೆಗೆ ನಡೆಯಲಿರುವ 20 ವರ್ಷದೊಳಗಿನ ಬಾಲಕಿಯರ ರಾಷ್ಟ್ರೀಯ ಹ್ಯಾಂಡ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಕರ್ನಾಟಕ ರಾಜ್ಯ ತಂಡವನ್ನು ಬೆಳಗಾವಿಯ ಪಲ್ಲವಿ ಮುನ್ನಡೆಸುವರು.

ಪಟ್ಟಣದ ಮೃತ್ಯುಂಜಯ ಶಿವಾಚಾರ್ಯ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಾರ್ಚ್ 14ರಿಂದ 27ರ ವರೆಗೆ ನಡೆದ ಶಿಬಿರದಲ್ಲಿ ತಂಡವನ್ನು ಆಯ್ಕೆ ಮಾಡಲಾಯಿತು ಎಂದು ರಾಜ್ಯ ಹ್ಯಾಂಡ್‌ಬಾಲ್ ಸಂಸ್ಥೆಯ ಖಜಾಂಚಿ ಹಾಗೂ ಕೋಚ್ ಪ್ರಕಾಶ್ ನರಗಟ್ಟಿ ತಿಳಿಸಿದರು.

ತಂಡ: ಪಲ್ಲವಿ (ನಾಯಕಿ), ಸಾನಿಯಾ ಜಂಬಗಿ, ವೈಷ್ಣವಿ ಚಿಂತಾಮಣಿ, ಡಿ.ಎನ್. ನಕ್ಷತ್ರಾರ, ನಿಕಿತಾ ಮಾನೆ, ಮಮತಾ ಜಿ. ಆರಿಫ್, ತ್ರೀಷ್ಣ ದಿನೇಶ್, ಬಿಂದು ಪೂಜಾರಿ, ಶ್ರಾವ್ಯ ಗುರುರಾಜ್, ಬಿ.ಎಚ್.ಅನುಶ್ರೀ, ಫಿಜಾ ಕೌಸರ್, ಸಾನಿಯಾ, ಪ್ರಗತಿ ಕುಡಪ್ಲಿ, ಎನ್.ಸೌಮ್ಯಶ್ರೀ, ಬಿ.ರಶ್ಮಿ, ಎಚ್.ಬಿ.ರೂಪಾ. ಮ್ಯಾನೇಜರ್: ಎಂ. ಸೌಮ್ಯಾ.

ಓವರ್‌ನಲ್ಲಿ ಆರು ಸಿಕ್ಸರ್ ಸಿಡಿಸಿದ ತಿಸಾರ ಪೆರೇರ

ಕೊಲಂಬೊ (ಪಿಟಿಐ): ಆಲ್‌ರೌಂಡರ್ ತಿಸಾರ ಪೆರೇರ, ಓವರ್‌ವೊಂದರಲ್ಲಿ ಆರು ಸಿಕ್ಸರ್ ಸಿಡಿಸುವ ಮೂಲಕ ಕ್ರಿಕೆಟ್‌ನ ಯಾವುದೇ ಮಾದರಿಯಲ್ಲಿ ಈ ಸಾಧನೆ ಮಾಡಿದ ಶ್ರೀಲಂಕಾದ ಮೊದಲ ಆಟಗಾರ ಎನಿಸಿಕೊಂಡಿದ್ದಾರೆ.

ಶ್ರೀಲಂಕಾದ ದೇಶಿ ಲಿಸ್ಟ್ ‘ಎ’ ನಿಗದಿತ ಓವರ್‌ಗಳ ಟೂರ್ನಿಯೊಂದರ ಪಂದ್ಯದಲ್ಲಿ ಪೆರೇರ 13 ಎಸೆತಗಳಲ್ಲಿ 52 ರನ್ ಗಳಿಸಿದರು. ಪನಗೊಡದ ಆರ್ಮಿ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಶ್ರೀಲಂಕಾ ಆರ್ಮಿ ತಂಡದ ನಾಯಕತ್ವ ವಹಿಸಿದ್ದ ಅವರು ಬ್ಲೂಮ್‌ಫೀಲ್ಡ್ ಕ್ರಿಕೆಟ್ ಆ್ಯಂಡ್ ಅಥ್ಲೆಟಿಕ್ ಕ್ಲಬ್ ತಂಡದ ಎದುರು ಸ್ಫೋಟಕ ಇನಿಂಗ್ಸ್ ಆಡಿದರು. 50 ಓವರ್‌ಗಳ ಈ ಪಂದ್ಯವನ್ನು 41 ಓವರ್‌ಗಳಿಗೆ ಮೊಟಕುಗೊಳಿಸಲಾಗಿತ್ತು. ಸ್ಪಿನ್ನರ್ ದಿಲ್ಹಾನ್ ಕೂರೆ ಅವರ ಓವರ್‌ನಲ್ಲಿ ಪೆರೇರ ಸಿಕ್ಸರ್‌ಗಳ ಮಳೆಗರೆದರು.

ಭಾರತಕ್ಕೆ ಸೋಲು

ದುಬೈ (ಪಿಟಿಐ): ಭಾರತ ಫುಟ್‌ಬಾಲ್ ತಂಡ ಸೋಮವಾರ ಇಲ್ಲಿ ನಡೆದ ಎರಡನೇ ಸ್ನೇಹಪರ ಪಂದ್ಯದಲ್ಲಿ ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ಎದುರು 0–6ರಿಂದ ಸೋಲು ಅನುಭವಿಸಿತು.

ಇಗೊರ್ ಸ್ಟಿಮ್ಯಾಚ್ ತರಬೇತಿಯಲ್ಲಿರುವ ಭಾರತ, ಒಂದೂ ಬಾರಿ ಚೆಂಡನ್ನು ಗೋಲುಪೆಟ್ಟಿಗೆಯತ್ತ ಸಾಗಿಸಲಿಲ್ಲ. ಯುಎಇ ತಂಡದ ಅಲಿ ಮಾಬ್‌ಕೌಟ್ (12, 32 ಹಾಗೂ 60ನೇ ನಿಮಿಷ) ಹ್ಯಾಟ್ರಿಕ್ ಗೋಲು ದಾಖಲಿಸಿದರೆ, ಫ್ಯಾಬಿಯೊ ಲಿಮಾ (71 ಹಾಗೂ 84ನೇ ನಿಮಿಷ) ಹಾಗೂ ಖಲೀಲ್ ಇಬ್ರಾಹಿಂ (64ನೇ ನಿಮಿಷ) ಕಾಲ್ಚಳಕ ತೋರಿದರು.

ಬಿಸಿಎಲ್ ಟೂರ್ನಿ : ಬಿಸಿಎ ಮೇಲೆ ಬಿಸಿಸಿಐ ಕೆಂಗಣ್ಣು

ನವದೆಹಲಿ (ಪಿಟಿಐ): ಅನುಮತಿ ಇಲ್ಲದೇ ಬಿಹಾರ ಕ್ರಿಕೆಟ್ ಲೀಗ್ (ಬಿಸಿಎಲ್) ಆಯೋಜಿಸಿದ ಬಿಹಾರ ಕ್ರಿಕೆಟ್ ಸಂಸ್ಥೆ (ಬಿಸಿಎ) ಮತ್ತು ಲೀಗ್‌ನಲ್ಲಿ ಆಡಿದ ಆಟಗಾರರ ಮೇಲೆ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಕೆಂಗಣ್ಣು ಬೀರಿದ್ದು ಕ್ರಮಕ್ಕೆ ಮುಂದಾಗಿದೆ.

ಇದೇ ತಿಂಗಳ 20ರಿಂದ 26ರ ವರೆಗೆ ಊರ್ಜ ಕ್ರೀಡಾಂಗಣದಲ್ಲಿ ಬಿಸಿಎಲ್ ಆಯೋಜಿಸಲಾಗಿತ್ತು. ಆಂಗಿಕ ಅವೆಂಜರ್ಸ್, ಭಗಲ್‌ಪುರ್ ಬುಲ್ಸ್, ಧರ್ಭಾಂಗ ಡೈಮಂಡ್ಸ್, ಗಯಾ ಗ್ಲೇಡಿಯೇಟರ್ಸ್ ಮತ್ತು ಪಟ್ನಾ ಪೈಲಟ್ಸ್ ತಂಡಗಳು ಪಾಲ್ಗೊಂಡಿದ್ದ ಟೂರ್ನಿಯ ಪಂದ್ಯಗಳನ್ನು ಯೂರೊಸ್ಪೋರ್ಟ್ ಚಾನಲ್ ಪ್ರಸಾರ ಮಾಡಿತ್ತು. ಲೀಗ್‌ನಲ್ಲಿ ಧರ್ಭಾಂಗ ಡೈಮಂಡ್ಸ್ ಚಾಂಪಿಯನ್ ಆಗಿತ್ತು.

ಅನುಮತಿ ಇಲ್ಲದೇ ನಡೆಸುತ್ತಿರುವ ಟೂರ್ನಿಯನ್ನು ರದ್ದುಪಡಿಸಬೇಕು ಎಂದು ಸೂಚಿಸಿ ಬಿಸಿಸಿಐ 23ರಂದು ಬಿಸಿಎಗೆ ನೋಟಿಸ್ ನೀಡಿತ್ತು. ಅದಕ್ಕೆ ಸೊಪ್ಪು ಹಾಕದ ಬಿಸಿಎ ಟೂರ್ನಿಯನ್ನು ಮುಂದುವರಿಸಿತ್ತು. ಹೀಗಾಗಿ ಕ್ರಮ ಕೈಗೊಳ್ಳಲು ಮುಂದಾಗಿರುವುದಾಗಿ ಬಿಸಿಸಿಐ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹೇಮಂಗ್ ಅಮೀನ್ ಬಿಸಿಎಗೆ ತಿಳಿಸಿದ್ದಾರೆ.

ಕೀರ್ತಿಗೆ ಬೆಳ್ಳಿ ಪದಕ

ಬೆಂಗಳೂರು: ನಗರದ ಕೀರ್ತಿ ರಂಗಸ್ವಾಮಿ, ಹೈದರಾಬಾದ್‌ನಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಟ್ರ್ಯಾಕ್ ಸೈಕ್ಲಿಂಗ್ ಚಾಂಪಿಯನ್‌ಷಿಪ್‌ನ 18 ವರ್ಷದೊಳಗಿನ ಜೂನಿಯರ್ ಬಾಲಕಿಯರ ವಿಭಾಗದಲ್ಲಿ ಸೋಮವಾರ ಬೆಳ್ಳಿ ಪದಕ ಗಳಿಸಿದರು. ಮೂರು ಕಿಲೋಮೀಟರ್ ವೈಯಕ್ತಿಕ ಪರ್ಸ್ಯೂಟ್‌ನಲ್ಲಿ ಅವರು ಮೊದಲಿಗರಾದರು.

ಕೀರ್ತಿ ರಂಗಸ್ವಾಮಿ

2 ನಿಮಿಷ 48.163 ಸೆಕೆಂಡುಗಳಲ್ಲಿ ಅವರು ಗುರಿ ಮುಟ್ಟಿದರು. ಭಾನುವಾರ ತಲಾ ಒಂದು ಚಿನ್ನ, ಒಂದು ಬೆಳ್ಳಿ ಮತ್ತು ಐದು ಕಂಚಿನ ಪದಕ ಗಳಿಸಿದ್ದ ಕರ್ನಾಟಕ 3ನೇ ದಿನವಾದ ಸೋಮವಾರ ಏಕೈಕ ಪದಕಕ್ಕೆ ಸಮಾಧಾನಪಟ್ಟುಕೊಂಡಿತು.

ಕೆಎಸ್‌ಎಲ್‌ಟಿಎ–ಎಐಟಿಎ ಟ್ಯಾಲೆಂಟ್ ಸಿರೀಸ್ ಟೆನಿಸ್ ಟೂರ್ನಿ

ಅನೂಪ್‌ಗೆ ಸೋಲುಣಿಸಿದ ಆರ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್ಯ ಗಣಪತಿ ಅವರು ಎರಡನೇ ಶ್ರೇಯಾಂಕದ ಅನೂಪ್ ಕೇಶವಮೂರ್ತಿ ಅವರಿಗೆ ಸೋಲುಣಿಸುವ ಮೂಲಕ ಕೆಎಲ್‌ಎಲ್‌ಟಿಎ–ಎಐಟಿಎ 16 ವರ್ಷದೊಳಗಿನವರ ಟ್ಯಾಲೆಂಟ್ ಸಿರೀಸ್ ಜೂನಿಯರ್ ಟೆನಿಸ್ ಟೂರ್ನಿಯಲ್ಲಿ ಪ್ರೀ-ಕ್ವಾರ್ಟರ್‌ಫೈನಲ್‌ಗೆ ಕಾಲಿಟ್ಟರು.

ಸೋಮವಾರ ಇಲ್ಲಿ ನಡೆದ ಮೊದಲ ಸುತ್ತಿನ ಹಣಾಹಣಿಯಲ್ಲಿ ಆರ್ಯ 6–3, 3–6, 7–6ರಿಂದ ಅನೂಪ್ ಅವರನ್ನು ಮಣಿಸಿದರು.

ಬಾಲಕರ ಹಾಗೂ ಬಾಲಕಿಯರ ಸಿಂಗಲ್ಸ್ ವಿಭಾಗಗಳಲ್ಲಿ ಅಗ್ರಶ್ರೇಯಾಂಕ ಪಡೆದಿರುವ ಕ್ರಮವಾಗಿ ಜೇಸನ್ ಮೈಕೆಲ್ ಡೇವಿಡ್ ಹಾಗೂ ಗಗನಾ ಮೋಹನ್ ಕುಮಾರ್ ಪ್ರೀಕ್ವಾರ್ಟರ್‌ಫೈನಲ್‌ಗೆ ಮುನ್ನಡೆದರು.

ಜೇಸನ್ 6–1, 6–1ರಿಂದ ಹವಿಷ್ ಕುಮಾರ್ ಬಡ್ಡಿರೆಡ್ಡಿ ಎದುರು ಗೆದ್ದರೆ, ಗಗನಾ ಮೋಹನ್ ಕುಮಾರ್ 6-2, 6-2ರಿಂದ ಸಂಗೀತಾ ರಾಮನ್ ಅವರನ್ನು ಸೋಲಿಸಿದರು.

ಬಾಲಕರ ವಿಭಾಗದ ಮೊದಲ ಸುತ್ತಿನ ಇನ್ನುಳಿದ ಪಂದ್ಯಗಳಲ್ಲಿ ದೇವ್ ಶಿವಶಂಕರ್ 6-1, 6-3ರಿಂದ ಹನುಷ್ ಆನಂದ್ ಗಂದಿಕೋಟೆ ಎದುರು, ಆರಾಧ್ಯ ದ್ವಿವೇದಿ 6-1, 6-1ರಿಂದ ಅಕ್ಷತ್ ಜೆನಿಷ್ ವಿರುದ್ಧ, ಶ್ರೀನಿಕೇತ್ ಕಣ್ಣನ್ 7-5, 5-7, 7-6ರಿಂದ ಯುವರಾಜ್ ಸಂತೋಷ್ ಎದುರು ಗೆದ್ದರು.

ಬಾಲಕಿಯರ ಸಿಂಗಲ್ಸ್ ವಿಭಾಗದಲ್ಲಿ ಧರಣಿ ಶ್ರೀನಿವಾಸ್ 6-1, 6-0ರಿಂದ ಪೂರ್ವಿ ಭದ್ರಾವತಿ ಎದುರು, ಉಮಾಮ್ ಅಹಮ್ಮದ್ 6-1, 7-5ರಿಂದ ತನು ವಿಶ್ವಾಸ್ ವಿರುದ್ಧ, ಹೃದಯೇಶಿ ಪೈ 6-2, 7-6ರಿಂದ ತನಿಷ್ಕಾ ರಂಗನಾಥನ್ ಎದುರು ಜಯಿಸಿ ಮುನ್ನಡೆದರು.

ಆರ್ಯ ಗಣಪತಿ ಆಟದ ವೈಖರಿ